ಕರ್ನಾಟಕ ಸರ್ಕಾರ

ರಾಮನಗರ ಜಿಲ್ಲಾ ಪಂಚಾಯತ್

**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

ರಾಮನಗರ ಜಿಲ್ಲೆ, ರಾಮನಗರ.

**2019–20 ನೆಯ ಸಾಲಿನ ರಾಮನಗರ ಜಿಲ್ಲೆಯ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗಾಗಿ,**
**ಪರಿಪೂರ್ಣ ಫಲಿತಾಂಶದೆಡೆ ನಮ್ಮ ನಡೆ**

# ಯಶಸ್ಸು

ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ ಪ್ರಶ್ನೋತ್ತರ ಮಾಲಿಕೆ ಕೈಪಿಡಿ

## ಸಿರಿ ಕನ್ನಡ –10 – ಪ್ರಥಮ ಭಾಷೆ ಕನ್ನಡ

ಪ್ರಕಟಣೆ

**ಶ್ರೀ ಸೋಮಶೇಖರಯ್ಯ ರವರು**

ಉಪನಿರ್ದೇಶಕರು (ಆಡಳಿತ),

ಸಾರ್ವಜನಿಕ ಶಿಕ್ಷಣ ಇಲಾಖೆ,

ರಾಮನಗರ ಜಿಲ್ಲೆ., ರಾಮನಗರ.

## ಪರಿಕಲ್ಪನೆ

**ಶ್ರೀ ಸೋಮಶೇಖರಯ್ಯರವರು**
ಉಪನಿರ್ದೇಶಕರು (ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ,
ರಾಮನಗರ ಜಿಲ್ಲೆ., ರಾಮನಗರ.

**ಶ್ರೀ ಎಂ.ಹೆಚ್. ಗಂಗಮಾರೇಗೌಡರವರು**
ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ರಾಮನಗರ ಜಿಲ್ಲೆ., ರಾಮನಗರ.

## ಮಾರ್ಗದರ್ಶಕರು

**ಶ್ರೀ ಎಂ.ಚಿನ್ನಸ್ವಾಮಿ ರವರು**
ಕನ್ನಡ ಭಾಷಾ ವಿಷಯ ಪರಿವೀಕ್ಷಕರು
ಸಾರ್ವಜನಿಕ ಶಿಕ್ಷಣ ಇಲಾಖೆ,
ರಾಮನಗರ ಜಿಲ್ಲೆ., ರಾಮನಗರ.

## ಸಂಪನ್ಮೂಲ ಶಿಕ್ಷಕರ ತಂಡ

**ಶ್ರೀ ಜಿ ಶಿವಶಂಕರ್**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಜಾಲಮಂಗಲ,
ರಾಮನಗರ ತಾಲ್ಲೂಕು & ಜಿಲ್ಲೆ
ಮೊಬೈಲ್ :9663499922

**ಶ್ರೀ ತಾಯಣ್ಣ ಎಂ**
ಕನ್ನಡ ಭಾಷಾ ಶಿಕ್ಷಕರು
ಶ್ರೀ ರಂಗನಾಥಸ್ವಾಮಿ ಗ್ರಾಮಾಂತರ ಪ್ರೌಢ ಶಾಲೆ
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
ಮೊಬೈಲ್ :9986270203

**ಶ್ರೀ. ಈರಪ್ಪ ಮಹಾಲಿಂಗಪೂರ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಹೆಬ್ಬಗೋಡಿ,
ರಾಮನಗರ ತಾಲೂಕು & ಜಿಲ್ಲೆ.
ಮೊಬೈಲ್ ನಂ:9686185155

**ಶ್ರೀ ಜಿ ಮಲ್ಲಿಕಾರ್ಜುನ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಎಕ್ಸ್ ಮುನ್ಸಿಪಲ್ ಪ್ರೌಢಶಾಲೆ
ಕನಕಪುರ ತಾಲ್ಲೂಕು & ರಾಮನಗರ ಜಿಲ್ಲೆ
ಮೊಬೈಲ್ :9741512725

**ಶ್ರೀ ದುಂಡಪ್ಪ ಮುದಡಗಿ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಬಾಲಕರ ಪ.ಪೂ.ಕಾಲೇಜು
ರಾಮನಗರ ಟೌನ್, ರಾಮನಗರ ಜಿಲ್ಲೆ
ಮೊಬೈಲ್ :9986269034

# ವಿಷಯಾನುಸಾರ ಪ್ರಾಮುಖ್ಯತೆ

| 2018–19 | | | | 2019–20 | | | |
|---|---|---|---|---|---|---|---|
| ವಿಷಯ / ಉಪ ಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು | ವಿಷಯ / ಉಪ ಘಟಕ | ಪ್ರತಿಶತ | ದತ್ತ ಅಂಕಗಳ ು | ಪ್ರಶ್ನೆಗಳು |
| ಗದ್ಯ | 26 | 26 | 13 | ಗದ್ಯ | 28 | 28 | 13 |
| ಪದ್ಯ | 28 | 28 | 11 | ಪದ್ಯ | 30 | 30 | 11 |
| ಪಠ್ಯಪೋಷಕ ಅಧ್ಯಯನ | 09 | 09 | 05 | ಪಠ್ಯಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 01 | ಅಪಠಿತ ಗದ್ಯ | 04 | 04 | 01 |
| ವ್ಯಾಕರಣಾಂಶಗಳು, ಛಂದಸ್ಸು ಅಲಂಕಾರ ಮತ್ತು ವಾಕ್ಯರಚನೆ | 33 | 33 | 19 | ವ್ಯಾಕರಣಾಂಶಗಳು, ಛಂದಸ್ಸು ಅಲಂಕಾರ ಮತ್ತು ವಾಕ್ಯರಚನೆ | 29 | 29 | 15 |
| ಒಟ್ಟು | 100 | 100 | 49 | ಒಟ್ಟು | 100 | 100 | 45 |

ಗದ್ಯ ಭಾಗದಲ್ಲಿ 26 ಅಂಕಗಳಿಂದ 28 ಅಂಕಗಳಿಗೆ, ಪದ್ಯ ಭಾಗದಲ್ಲಿ 28 ಅಂಕಗಳಿಂದ 30 ಅಂಕಗಳಿಗೆ ಹೆಚ್ಚಿಗೆ ಮಾಡಿದೆ ಹಾಗೂ ವ್ಯಾಕರಣ–ವಾಕ್ಯರಚನೆಯ ಭಾಗದಲ್ಲಿ 33 ಅಂಕಗಳಿಂದ 29 ಅಂಕಗಳಿಗೆ ಇಳಿಕೆ ಮಾಡಲಾಗಿದ್ದು, ಉಳಿದ ವಿಭಾಗಗಳು ಯಥಾ ಸ್ಥಿತಿ ಮುಂದುವರೆಯುತ್ತವೆ. ಪತ್ರಿಕೆಯ ಒಟ್ಟಾರೆ ಪ್ರಶ್ನೆಗಳ ಸಂಖ್ಯೆ 49 ರಿಂದ 45 ಕ್ಕೆ ಇಳಿಕೆಯಾಗಿದೆ. ಪರೀಕ್ಷಾ ತಯಾರಿಗೆ ಎಲ್ಲಾ ಘಟಕಗಳ ಎಲ್ಲಾ ಅಂಶಗಳನ್ನು ಅಭ್ಯಾಸ ಮಾಡಿಕೊಳ್ಳುವ ಅಗತ್ಯವಿದೆ.

| ಕ್ರ.ಸಂ | ವ್ಯಾಕರಣಾಂಶಗಳು |
|---|---|
| 1 | ವರ್ಣಮಾಲೆ |
| 2 | ನಾಮಪದಗಳು |
| 3 | ಸರ್ವನಾಮಗಳು |
| 4 | ವಿಭಕ್ತಿ ಪ್ರತ್ಯಯಗಳು (ಹಳಗನ್ನಡ ಮತ್ತು ಹೊಸಗನ್ನಡ) |
| 5 | ಕ್ರಿಯಾಪದಗಳು (ಕಾಲರೂಪ ಮತ್ತು ಅರ್ಥರೂಪ) |
| 6 | ಸಂಧಿಗಳು (ಕನ್ನಡ ಮತ್ತು ಸಂಸ್ಕೃತ) |
| 7 | ಸಮಾಸಗಳು |
| 8 | ಅನ್ಯದೇಶ್ಯ / ದೇಶ್ಯ ಪದಗಳು |
| 9 | ತತಮ – ತದ್ಭವಗಳು |
| 10 | ಗ್ರಾಂಥಿಕರೂಪಗಳು |
| 11 | ದ್ವಿರುಕ್ತಿ – ಜೋಡುನುಡಿಗಳು |
| 12 | ಅವ್ಯಯಗಳು |
| 13 | ಕೃದಂತಗಳು |
| 14 | ತದ್ಧಿತಾಂತಗಳು |
| 15 | ವಾಕ್ಯಪ್ರಭೇಧಗಳು |
| 16 | ಲೇಖನ ಚಿಹ್ನೆಗಳು |
| 17 | ಪದಗಳ ಅರ್ಥ |
| 18 | ಹೊಸಗನ್ನಡರೂಪ |
| 19 | ಛಂದಸ್ಸು |
| 20 | ಅಲಂಕಾರ |

ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ವಾಕ್ಯರಚನೆಗೆ ಒಟ್ಟಾರೆ 29 ಅಂಕಗಳನ್ನು ಮೀಸಲಿಟ್ಟಿದೆ. ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಲಾಗುವುದು.

## 2. ಪ್ರಶ್ನಾನುಸಾರ ಪ್ರಾಮುಖ್ಯತೆ : ಶಾಲಾ ಅಭ್ಯರ್ಥಿಗಳಿಗೆ

| 2018–19 | | | | | 2019–20 | | | | |
|---|---|---|---|---|---|---|---|---|---|
| ಪ್ರಶ್ನೆಗಳ ವಿಧಗಳು | ಪ್ರತಿ ಶತ | ದತ್ತ ಅಂಕ ಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ | ಪ್ರಶ್ನೆಗಳ ವಿಧಗಳು | ಪ್ರತಿ ಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
| ವಸ್ತುನಿಷ್ಠ | 14 | 14 | 14 | 25 ನಿಮಿಷ ಗಳು | ವಸ್ತುನಿಷ್ಠ | 10 | 10 | 10 | 15 ನಿಮಿಷಗಳು |
| ಅತಿ ಕಿರು ಉತ್ತರಗಳ (1) ಒಂದು ಅಂಕದ ಪ್ರಶ್ನೆಗಳು | 09 | 09 | 09 | 15 ನಿ. | ಅತಿ ಕಿರು ಉತ್ತರಗಳು (1) ಒಂದು ಅಂಕದ ಪ್ರಶ್ನೆಗಳು | 07 | 07 | 07 | 15 ನಿ. |
| ಕಿರು ಉತ್ತರಗಳು (2) ಎರಡು ಅಂಕಗಳ ಪ್ರಶ್ನೆಗಳು | 20 | 20 | 10 | 38 ನಿ. | ಕಿರು ಉತ್ತರಗಳು (2) ಎರಡು ಅಂಕಗಳ ಪ್ರಶ್ನೆಗಳು | 20 | 20 | 10 | 35 ನಿ. |
| ದೀರ್ಘ ಉತ್ತರಗಳು (1) ಮೂರು ಅಂಕಗಳ ಪ್ರಶ್ನೆಗಳು | 27 | 27 | 09 | 40 ನಿ. | ದೀರ್ಘ ಉತ್ತರಗಳು (1) ಮೂರು ಅಂಕಗಳ ಪ್ರಶ್ನೆಗಳು | 33 | 33 | 11 | 45 ನಿ. |
| ದೀರ್ಘ ಉತ್ತರಗಳು (2) ನಾಲ್ಕು ಅಂಕಗಳ ಪ್ರಶ್ನೆಗಳು | 20 | 20 | 05 | 22 ನಿ. | ದೀರ್ಘ ಉತ್ತರಗಳು (2) ನಾಲ್ಕು ಅಂಕಗಳ ಪ್ರಶ್ನೆಗಳು | 20 | 20 | 05 | 30 ನಿ. |
| ದೀರ್ಘ ಉತ್ತರಗಳು (3) ಐದು ಅಂಕಗಳ ಪ್ರಶ್ನೆಗಳು | 10 | 10 | 02 | 20 ನಿ. | ದೀರ್ಘ ಉತ್ತರಗಳು (3) ಐದು ಅಂಕಗಳ ಪ್ರಶ್ನೆಗಳು | 10 | 10 | 02 | 25 ನಿ. |
| ಒಟ್ಟು | 100 | 100 | 49 | 160+20 ನಿಮಿಷ ಗಳು | ಒಟ್ಟು | 100 | 100 | 45 | 165+15 ನಿಮಿಷ ಗಳು |

ನೀಲ ನಕಾಶೆಯಲ್ಲಿ ಪ್ರಶ್ನೆಗಳ ವಿಧಗಳನ್ನು ಈ ಮೇಲಿನಂತೆ ವಸ್ತುನಿಷ್ಠ, ಅತಿ ಕಿರು ಉತ್ತರ 1, ಕಿರು ಉತ್ತರ 2 ಮತ್ತು ದೀರ್ಘ ಉತ್ತರ 1,2,3 ಎಂದು ಆರು ವಿಧಗಳಲ್ಲಿ ತೋರಿಸುವ ರೂಢಿಯಿದ್ದು, ವಸ್ತುನಿಷ್ಠ ಪ್ರಶ್ನೆಗಳು ಬಹುಆಯ್ಕೆ ಹಾಗೂ ಸಂಬಂಧೀ ಪದಗಳ ಒಂದು ಪದದ ಉತ್ತರಗಳದ್ದಾಗಿದ್ದು, ಅ.ಕಿ.ಉ.1 : ಒಂದು ಅಂಕದ ಒಂದು ವಾಕ್ಯದ ಉತ್ತರ, ಕಿ.ಉ.2: ಎರಡು ಅಂಕಗಳ ಎರಡು–ಮೂರು ವಾಕ್ಯಗಳ ಉತ್ತರ, ದೀ.ಉ.1: ಮೂರು ಅಂಕಗಳ ಪ್ರಶ್ನೆಗಳು, ದೀ.ಉ.2: ನಾಲ್ಕು ಅಂಕಗಳ ಪ್ರಶ್ನೆ ಮತ್ತು ದೀ.ಉ. 3: ಐದು ಅಂಕಗಳ ಪ್ರಶ್ನೆಗಳದ್ದಾಗಿವೆ. ಪ್ರಶ್ನಾ ವಿಧಗಳಲ್ಲಾದ ಬದಲಾವಣೆ ಈ ಮೇಲಿನ ಕೋಷ್ಟಕದಲ್ಲಿ ಕಾಣಸಿಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು 2 ಗಂಟೆ 45 ನಿಮಿಷಗಳ ಕಾಲಾವಕಾಶವಿದ್ದು, ಪ್ರಾರಂಭದಲ್ಲಿ ಪ್ರಶ್ನೆ ಪತ್ರಿಕೆ ಓದಿಕೊಳ್ಳಲು 15 ನಿಮಿಷಗಳ ಸಮಯವನ್ನು ಮೀಸಲಿಟ್ಟಿದೆ.

# ಗದ್ಯಪಾಠ – 1 ಯುದ್ಧ

## ಲೇಖಕರ ಪರಿಚಯ: ಸಾರಾ ಅಬೂಬಕರ್(ಮಾರ್ಚ್ 2018 ಜೂನ್ 2019)

ಸಾರಾ ಅಬೂಬಕರ್ ರವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲ್ಲಿ ಮೊದಲಾದ ಪ್ರಮುಖ ಕಾದಂಬರಿಗಳನ್ನು, ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಮೊದಲಾದ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಅಲ್ಲದೇ ಇನ್ನೂ ಅನೇಕ ಪ್ರಶಸ್ತಿ ಲಭಿಸಿವೆ.

## ಒಂದು ಅಂಕದ ಪ್ರಶ್ನೆಗಳು:

1. ರಾಹಿಲನು ಯಾರು?

ರಾಹಿಲನು ಓರ್ವ ಡಾಕ್ಟರ್.

2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ? (ಮಾರ್ಚ್ 2018)

ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಔಷಧ ಮತ್ತು ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

3. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್'ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?

ಗಡಿ ಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು "ಬ್ಲಾಕ್ ಔಟ್'' ನಿಯಮ ಪಾಲಿಸಲಾಗುತ್ತಿದೆ.

4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು? (ಜೂನ್ 2019)

ರಾಹಿಲನು ಮುದುಕಿಯ ಎದುರಿಗೆ " ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.

5. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು?

ಯುದ್ದದ ಕುರಿತು ಮುದುಕಿ " ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲವಲ್ಲ? ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ? ಅದನ್ನಾದರೂ ಹೇಳಿರಿ " ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾಳೆ.

## ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

ಡಾಕ್ಟರನ್ನು ಕುರಿತು ವಿಮಾನದ ಪೈಲಟ್ " ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತಿಲ್ಲ, ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ " ಎಂದು ನುಡಿದನು.

2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?(ಮಾರ್ಚ್ 2018 ಜೂನ್ 2019)

ಮಹಿಳೆಯ ಆರ್ತನಾದ ಕೇಳಿದಾಗ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಗಡಿಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

2. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

"ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ.ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು, ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ? ಯುದ್ಧವಂತೆ, ಯುದ್ಧ!" ತಿರಸ್ಕಾರದಿಂದ ನುಡಿದಳು ಮುದುಕಿ.

4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?

ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ " ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿ ಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?"ಎಂದು ಹೇಳಿದಳು.

## ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ:

1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ?"

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್'' ಅವರು ರಚಿಸಿರುವ'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಯುದ್ಧದ ಸಂಬರ್ಭದಲ್ಲಿ ವಿಮಾದ ಸ್ಫೋಟದಿಂದ ಒಂದು ಕಾಲು ಗಾಯಗೊಂಡು ನೀರಿನಲ್ಲಿ ಈಜುವಾಗ ಮಿಂಚಿನ ಬೆಳಕಿನಿಂದ ದಡ ಸೇರಿದನು . ನಂತರ ನಡೆಯಲು ಬಾರದೆ ಇರುವಾಗ ಮತ್ತೊಂದು ಮಿಂಚಿನ ಬೆಳಕಿನಿಂದ ಒಂದು ಒಂಟಿ ಮನೆ ಕಾಣಿಸಿತು . ಆಗ ತೆವಳುತ್ತ ಆ ಮನೆಯ ಬಾಗಿಲ ಹತ್ತಿರ ಹೋಗಿ ಆ ಮನೆಯಲ್ಲಿನ ಹಿರಿಯ ಮಹಿಳೆಗೆ "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ" ಎಂದು ಡಾಕ್ಟರ್ ರಾಹಿಲ್ ಹೇಳಿದನು.

ಸ್ವಾರಸ್ಯ :– ಯುದ್ಧದ ಸಂದರ್ಭದಲ್ಲಿ ಗಾಯಗೊಂಡಿರುವ ವ್ಯಕ್ತಿಯು ಜಾತಿ ,ಧರ್ಮ , ದೇಶ , ಜನಾಂಗ , ವೈರಿ–ಮಿತ್ರ ವೆಂಬ ಭೇದವನ್ನು ಮರೆತು ರಕ್ಷಣೆಗಾಗಿ ಇನ್ನೊಬ್ಬರಸಹಾಯವನ್ನು ಕೇಳುವ ದಯನೀಯ ಸ್ಥಿತಿಯೇ ಇಲ್ಲಿನ ಸ್ವಾರಸ್ಯವಾಗಿದೆ.

2. “ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ.”

ಆಯ್ಕೆ :– ಈ ವಾಕ್ಯವನ್ನು ‘ಶ್ರೀಮತಿ ಸಾರಾ ಅಬೂಬಕ್ಕರ್’ ಅವರು ರಚಿಸಿರುವ ‘ಚಪ್ಪಲಿಗಳು’ ಕಥಾ ಸಂಕಲನದಿಂದ ಆಯ್ದ ‘ಯುದ್ಧ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:–ಮುದುಕಿಯ ಸೊಸೆಗೆ ಹೆರಿಗೆಯ ನೋವುಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗುತ್ತಿರಲಿಲ್ಲ . ರಾಹಿಲನು ತಾನು ಡಾಕ್ಟರ್ ಎಂದು ಹೇಳಿದಾಗ ಅವಳು ಆತನನ್ನು ತನ್ನ ಸೊಸೆಯ ಹತ್ತಿ ಕರೆದು ಕೊಂಡು ಹೋದಳು . ಆಗ ರಾಹಿಲನು “ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ.” ಎಂದು ಮುದುಕಿಗೆ ಹೇಳಿದನು.

ಸ್ವಾರಸ್ಯ :– ಯುದ್ಧದ ಸಂದರ್ಭದಲ್ಲಿ ವೈರಿ–ಮಿತ್ರ ವೆಂಬ ಭೇದವನ್ನು ಮರೆತು ಹೆರಿಗೆಗೆ ಸಿದ್ದಗೊಂಡಿರುವ ಮಹಿಳೆಯನ್ನು ಪರೀಕಿಸಿ ಹೆರಿಗೆಯನ್ನು ಮಾಡಿಸುವ ಮನವೀಯತೆ ಹಾಗೂ ಹೆರಿಗೆಯ ನಂತರದ ಆರೈಕೆಯನ್ನು ಮಾಡಲು ಬೇಕಾದ ಪೂರ್ವ ತಯಾರಿಯೇ ಇಲ್ಲಿನ ಸ್ವಾರಸ್ಯವಾಗಿದೆ .

3. “ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?”

ಆಯ್ಕೆ :– ಈ ವಾಕ್ಯವನ್ನು ‘ಶ್ರೀಮತಿ ಸಾರಾ ಅಬೂಬಕ್ಕರ್’ ಅವರು ರಚಿಸಿರುವ “ಚಪ್ಪಲಿಗಳು” ಕಥಾಸಂಕಲನದಿಂದ ಆಯ್ದ‘ಯುದ್ಧ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:–ಮುದುಕಿಯ ಸೊಸೆಗೆ ಹೆರಿಗೆಯನ್ನು ಮಾಡಿಸಿ ಅವಳ ಸೊಸೆಯನ್ನುಉಳಿಸಿನಂತರ ತನ್ನ ಕಾಲಿಗೆ ಆದ ಗಾಯಕ್ಕೆ ಆರೈಕೆ ಮಾಡಿಕೊಂಡು ವಿಶ್ರಾಂತಿಗಾಗಿ ಮಲಗಲು ಜಾಗ ಕೇಳುವಾಗ ಆ ಮದುಕಿಗೆ ಆತನ ಬಗ್ಗೆ ಸಂಶಯ ಮೂಡುವಾಗಲೇ ಹೊರಗಡೆ ಸೈನಿಕರು ಬಾಗಿಲು ತೆಗೆಯಲು ಬಡೆಯಿತ್ತಿರುವಾಗ ಮುದುಕಿಯು ರಾಹಿಲನನ್ನು ನೋಡಿ ಈ ಮೇಲಿನಂತೆ ತನ್ನ ಮನದಲ್ಲಿ ಅಂದುಕೊಳ್ಳುತ್ತಾಳೆ.

ಸ್ವಾರಸ್ಯ :– ಯುದ್ಧದ ಸಂದರ್ಭದಲ್ಲಿ ವೈರಿ–ಮಿತ್ರ ವೆಂಬ ಭೇದವನ್ನು ಮರೆತು ತಮಗೆ ಸಹಾಯಮಾಡಿದವನು ವೈರಿ ಕಡೆಯವನು ಎಂದು ತಿಳಿದೂ ಸಹ ಆತನು ತನ್ನ ಮಗನಂತೆ ಅಪಾಯದಲ್ಲಿದ್ದಾನೆಂದು ಬಗೆದು ಆತನನ್ನು ರಕ್ಷಿಸುವುದೇ ಇಲ್ಲಿನ ಸ್ವಾರಸ್ಯವಾಗಿದೆ.

4. “ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!”

ಆಯ್ಕೆ :–ಈ ವಾಕ್ಯವನ್ನು ‘ಶ್ರೀಮತಿ ಸಾರಾ ಅಬೂಬಕ್ಕರ್’ ಅವರು ರಚಿಸಿರುವ ‘ಚಪ್ಪಲಿಗಳು’ ಕಥಾಸಂಕಲನದಿಂದ ಆಯ್ದ‘ಯುದ್ಧ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಯುದ್ಧದಸಂದರ್ಭದಲ್ಲಿ ಒಂದು ವಿಮಾನವನ್ನು ಹೊಡೆದುರುಳಿಸಿದಾಗ ಅದರಲ್ಲಿನ ವೈರಿ ಪಡೆಯವರು ಬದುಕಿ ಉಳಿದಿರುವರೇ ಎಂದುಸೈನಿಕರು ಮನೆಯಲ್ಲಿ ಪರಿಶೀಲಿಸುವಾಗ ಮುದುಕಿಯು ಸೈನಿಕರಿಗೆ “ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!” ಎಂದು ಹೇಳಿದಳು.

ಸ್ವಾರಸ್ಯ :– ಎರಡು ದೇಶಗಳ ನಡುವಿನ ಯುದ್ಧ ಅನೇಕ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತದೆ . ಯುದ್ಧದಿಂದಸಾಮಾನ್ಯ ಜನರು ಮತ್ತು ಅವರ ಕುಟುಂಬದವರು ಬಲಿಯಾಗುತ್ತಾರೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಮುದುಕಿಯು ತನ್ನ ಮಗನು ಯುದ್ದಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

ಮುದುಕಿಯು ತನ್ನ ಮಗನು ಯುದ್ದಕ್ಕೆ ಹೋದ ಸಂದರ್ಭವನ್ನು ಕುರಿತು” ಮಗನು ಯುದ್ದಕ್ಕೆ ಹೋಗಿದ್ದಾನೆ.ಎಳೆದುಕೊಂಡು ಹೋಗುವಾಗ ಹೋಗದಿರಲಾಗುತ್ತದೆಯೆ? ಮಾತೃ ಭೂಮಿಯ ರಕ್ಷಣೆಗೆ ನನ್ನ ಮಗನ್ನಿನ್ನು ಚಿಕ್ಕ ಹುಡುಗನಾಗಿದ್ದಾಗ ಯುದ್ದಕ್ಕೆ ಹೋದ ಅವನ ತಂದೆ ಹಿಂದಿರುಗಲಿಲ್ಲ. ಎದೆತುಂಬಾ ಬೀದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ,ನೋಡು. ಎಲ್ಲಾ ದು:ಖ ನುಂಗಿಕೊಂಡು ಮಗನನ್ನು ಸಾಕಿಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು.ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ದ ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈವಿಷಯ ತಿಳಿದ ಅವನೆಷ್ಟು ಸಂಕಟ ಪಡುತ್ತಾನೋ” ಎಂದು ಕೊನೆಯ ಮಾತನ್ನು ಹೇಳುವಾಗ ಮುದುಕಿಯ ಕಂಠ ಗದ್ಗದವಾಗಿ ಮುಂದೆ ಮಾತೇ ಹೊರಡಲಿಲ್ಲ.

2) ಯುದ್ದದಿಂದಾಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

‘ಯುದ್ದ’ ಇತಿಹಾಸದ ಉದ್ದಕ್ಕೂ ಇರುವಂತಹುದ್ದೇ ಆಗಿದೆ. ಸಾಮ್ರಾಜ್ಯ ವಿಸ್ತರಣೆ, ಲೋಭ, ಶಕ್ತಿಯ ಪ್ರದರ್ಶನ, ಕೌಟುಂಬಿಕ ಕಲಹಗಳು, ದ್ವೇಷ ಸಾಧನೆ ಮುಂತಾದವು ಯುದ್ದಕ್ಕೆ ಕಾರಣಗಳಾಗುತ್ತವೆ.ಈ ಯುದ್ದದ ಭೀಕರತೆಯು ಧರ್ಮ,ದೇಶಗಳ ಭೇಧವಿಲ್ಲದೆ ಭಾಗಿಯಾದ ಸೈನಿಕರಿಗೂ ಅವರ ಕುಟುಂಬವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ.ಎಲ್ಲರಿಗೂ,ದೇಹಕ್ಕೂ ಮತ್ತು ಮನಸ್ಸಿಗೂ ಗಾಯ ಮಾಡುವುದೇ ಯುದ್ದದ ಪರಿ.ಯುದ್ದದ ಸಮಯದಲ್ಲಿ ರೋಗಿಗಳು ಹಾಗೂ ಗರ್ಭಿಣಿಯರಿಗೆ ಸೂಕ್ತವಾದ ಚಿಕಿತ್ಸೆಯು ದೊರೆಯದೆ ಸಾವಿಗೀಡಾಗುವ ಸಂದರ್ಭಗಳು ಹೆಚ್ಚಾಗಿರುತ್ತವೆ. ಈ ಕತೆಯಲ್ಲಿ ಮುದುಕಿಯು ತನ್ನ ಸತ್ತ ಮೊಮ್ಮಗುವಿನ ಮುಂದೆ ಕುಳಿತು, “ಈ ಯುದ್ದ ನನ್ನ ಮೊಮ್ಮಗನನ್ನು ಉಳಿಸಲಿಲ್ಲವಲ್ಲ? ಯಾರಿಗಾಗಿ ಯುದ್ದ ?ಏತಕ್ಕಾಗಿ ಈ ಯುದ್ದ ? ಎಂದು ರೋದಿಸುವುದನ್ನು ಕಂಡಾಗ ಯುದ್ದದ ಪರಿಣಾಮ ಎಂತಹ ಘೋರ ಎಂಬುದು ಅರಿವಿಗೆ ಬರುತ್ತದೆ. ಯುದ್ದಕ್ಕೆ ಹೋದ ಮಗನು ಹಿಂದಿರುಗಲಿಲ್ಲ. ಯುದ್ದದಲ್ಲಿ ವಿನಾ ಕಾರಣ ಮುದುಕಿಯು

ಗಂಡನನ್ನು ,ಹಾಗೂ ಮೊಮ್ಮಗನನ್ನು ಕಳೆದುಕೊಂಡು ಅನಾಥೆಯಾಗುವ ದಾರುಣ ಸನ್ನಿವೇಶವು ಮನವನ್ನು ಕಲಕುತ್ತದೆ. ಆದ್ದರಿಂದ ಯುದ್ದ ಎಂದಿಗೂ ಒಳ್ಳೆಯದಲ್ಲ"ಎಂಬುದು ನನ್ನ ಅಭಿಪ್ರಾಯವಾಗಿದೆ.

# ಗದ್ಯ ಪಾಠ–2 'ಶಬರಿ'

## ಲೇಖಕರ ಪರಿಚಯ:

**ಪು.ತಿ.ನರಸಿಂಹಾಚಾರ್**(ಮಾರ್ಚ್ 2017 2018 2019)

ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು. ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

## ಒಂದು ವಾಕ್ಯದಲ್ಲಿ ಉತ್ತರಿಸಿ.

1. ಶ್ರೀ ರಾಮನ ತಂದೆಯ ಹೆಸರೇನು?

ಶ್ರೀ ರಾಮನ ತಂದೆಯ ಹೆಸರು ದಶರಥ.

2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

ಶಬರಿ ಶ್ರೀರಾಮನಿಗೆ ಸಮರ್ಪಿಸಲು ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣು–ಹಂಪಲುಗಳನ್ನು ಸಂಗ್ರಹಿಸಿದ್ದಳು.

3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?(ಮಾರ್ಚ್, ಜೂನ್ 2019)

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

4.ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು.

5. 'ಶಬರಿ' ಗೀತನಾಟಕದ ಕರ್ತೃ ಯಾರು?

'ಶಬರಿ' ಗೀತನಾಟಕದ ಕರ್ತೃ ಪು.ತಿ.ನರಸಿಂಹಾಚಾರ್

## ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ?ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?

ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?"ಎಂದು ಹೇಳಿ ಸಂತೈಸಿದನು.

3.ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

## ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ.

1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ'' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ದನುಪುತ್ರರ ಸೂಚನೆಯಂತೆ ಮಾತಂಗಾ ಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು(ಶಬರಿಯನ್ನು) ಕಂಡು ರಾಮನು ಈ ಮಾತನ್ನುಲಕ್ಷ್ಮಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಶ್ರೀರಾಮನ ಬರುವಿಕೆಗಾಗಿ ಕಾದು, ಕಾತರಿಸಿ, ಮರುಳೆಯಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ'' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ

ದೃಶ್ಯವನ್ನು ನೋಡಿರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"

ಆಯ್ಕೆ :-ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ಮಾತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದುಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನ ಹಾಗೆ "ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವುದೆ?"ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"

ಆಯ್ಕೆ :-ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗ ದಿಂದ ಆರಿಸಲಾಗಿದೆ.

ಸಂದರ್ಭ :- ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

ಸ್ವಾರಸ್ಯ :- "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯ ಪೂರ್ಣವಾಗಿ ವರ್ಣಿಸುತ್ತಾಳೆ.

5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."(ಮಾರ್ಚ್ 2019)

ಆಯ್ಕೆ :-ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :-ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿರಾಮನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

## ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1) ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿರಿ.

ಶಬರಿಯು ರಾಮ ಲಕ್ಷ್ಮಣರನ್ನು ಕಂಡು ಹಿಗ್ಗಿ, ಸಂತಸದಿಂದ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನ್ನು ಕಂಡ ತಾನು ಪರಮ ಸುಖಿಯಂದು ನರ್ತಿಸುತ್ತಾಳೆ. ರಾಮನೂ ಕೂಡಾ "ನಿನ್ನ ಆದರದಿಂದ ನಾವೂ ಸುಖಿ,ನಿನಗೆ ನಾವೂ ಋಣಿ"ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿಯ ತೃಷೆ ಹಿಂಗಿದೆ ? ನಾನೊಬ್ಬಳು ಬಡವಿ,ನನ್ನ ಮೇಲೆ ಮರುಕ ತೋರಿದಿರಾ ?"ಎನ್ನುತ್ತಾಳೆ. ಶ್ರೀರಾಮನು "ಆಥಿತ್ಯದಲ್ಲಿ ಸ್ವಲ್ಪವೂ ಕೊರೆತೆಯಿಲ್ಲ., ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ,ನೀನೆ ತಾಯಿಯಂತೆ"ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದೆ. ಸಿದ್ದರ ವರ ನನಗೆ ಫಲಿಸಿತು. ಗುರು ಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯಲ್ಲಾ ಹಿಂಗಿ ಹೋಯಿತು" ಎನ್ನುತ್ತಾಳೆ. ಶ್ರೀ ರಾಮನು "ದು:ಖವನ್ನು ಮರೆಸಿ ಶಾಂತಿ ನೀಡುವ ಈ ವನದಲ್ಲಿ ಶುದ್ಧ ಪ್ರೇಮಮೂರ್ತಿ ನೀನು " ಎಂದು ಶಬರಿಯನ್ನು ಬಾಯಿತುಂಬಾ ಹೊಗಳುತ್ತಾನೆ.

2) ಶಬರಿಯ ಸಡಗರ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

ರಾಮನು ಬಂದದ್ದನ್ನು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯ ಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ ,ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು.ಗದ್ಗದ ಸ್ವರದಿಂದ 'ಬನ್ನಿರಿ ಎಂದು ಆಹ್ವಾನಿಸಿದಳು..' ಸಿದ್ದತೆಯೇ ಇಲ್ಲವಲ್ಲಾ' ಎಂದು ಹಂಬಲಿಸಿದಳು. ಮನಸ್ಸಿನ ಬಯಕೆಯಂತೆ ಬಗೆ ಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತಾ ,ನಿಮಗಾಗಿ ತಂದಿದ್ದೇನೆಂದು ತಿನಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು. ರಾಮ ಲಕ್ಷ್ಮಣರು ಧನ್ಯತಾ ಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿಯ ಸಂತಸ, ಸಡಗರ ಹಾಡಿನಲ್ಲಿ ವರ್ಣಿತವಾಗಿದೆ.

# ಗದ್ಯ ಪಾಠ-3 ಲಂಡನ್ ನಗರ - ವಿ.ಕೃ.ಗೋಕಾಕ್

## ಲೇಖಕರ ಪರಿಚಯ - ವಿ.ಕೃ.ಗೋಕಾಕ್

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರು ಕ್ರಿ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯದಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ವಿ.ಕೃ.ಗೋಕಾಕ ಅವರು ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್, ಡಿ.ಲಿಟ್. ಪದವಿ ಲಭಿಸಿವೆ. ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ.

## ಒಂದು ವಾಕ್ಯದಲ್ಲಿ ಉತ್ತರಿಸಿ:

1. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?

ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಯನ್ನು ಒಯ್ದಿದ್ದಾರೆ.

2. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?(ಮಾರ್ಚ್ 2019)

ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರು – ಟ್ರಾಫಲ್ಗಾರ್ ಸ್ಕ್ವೇರ್ [Trafalgar Square].

3. “ವೆಸ್ಟ್ ಮಿನ್‌ಸ್ಟರ್ ಅಬೆ” ಯಾರಸ್ಮಾರಕವಾಗಿದೆ?(ಜೂನ್ 2019)

“ವೆಸ್ಟ್‌ಮಿನ್‌ಸ್ಟರ್ ಅಬೆ’’ ಸತ್ತುಹೋಗಿರುವ ಸಂತ, ಸಾರ್ವಭೌಮರ, ಕವಿಪುಂಗವರ ಸ್ಮಾರಕವಾಗಿದೆ.

4. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?

“ಚೇರಿಂಗ್ ಕ್ರಾಸ್’’ ಎಂಬ ಓಣಿಯಲ್ಲಿ ಆಂಗ್ಲರ ಸಾಮ್ರಾಜ್ಯ ವೈಭವವು ಕಂಡುಬರುವುದು.

## ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:

1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?(ಮಾರ್ಚ್ 2019)

ವೂಲವರ್ಥ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧಸಾಮಗ್ರಿ ಎಲ್ಲವೂ ಇಲ್ಲಿ ಸಿಗುವ ವಸ್ತುಗಳಾಗಿವೆ.

2. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

ಲಂಡನ್ನಿನ ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ, ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ನಮ್ಮ ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ!

3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

ಲಂಡನ್ನಿನಲ್ಲಿ ಹೆಣ್ಣುಮಕ್ಕಳು ಧರಿಸುವ ಟೊಪ್ಪಿಗೆಯ ವಿಶೇಷತೆಯನ್ನು ತಿಳಿಸುತ್ತಾ ಲೇಖಕರು ‘‘ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ” ಎಂದು ದಾಖಲಿಸಿದ್ದಾರೆ.

4. ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳಸಮಾಧಿಗಳಿವೆ?

ಪೊಯೆಟ್ ಕಾರ್ನರ್‌ನಲ್ಲಿ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್‌ಸ್ಮಿತ್, ಡ್ರಾಯ್‌ಡನ್, ಬೆನ್ ಜಾನ್ಸನ್,ವರ್ಡ್ಸ್‌ವರ್ತ ಮೊದಲಾದ ಕವಿಗಳ ಸಮಾಧಿಗಳಿವೆ.

5. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?(ಜೂನ್ 2019)

ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲು ಪಾಟಿಯನ್ನು ಹಾಕುತ್ತಾರೆ. ಅದರ ವಿಶೇಷತೆ ಏನೆಂದರೆ ಪಟ್ಟಾಭಿಷೇಕ ಆಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. “ಸ್ಟೋನ್ ಆಫ್ ಸ್ಕೋನ್’’ ಎಂದುಇದರಹೆಸರು. 3ನೇ ಎಡ್ವರ್ಡನುಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. “ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ”

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ “ಸಮುದ್ರದಾಚೆಯಿಂದ’’ ಎಂಬ ಪ್ರವಾಸ ಕಥನದಿಂದ ಆಯ್ದ “ಲಂಡನ್‌ನಗರ’’ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಲೇಖಕರು ಲಂಡನ್ ನಗರದ ಬೀದಿ ಬೀದಿಯಲ್ಲೂ ಇತಿಹಾಸ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನೋಡಿ ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ “ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ” ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸ್ವಾರಸ್ಯ :– ರಾಷ್ಟ್ರಕ್ಕಾಗಿ ದುಡಿದ ಮಹನೀಯರಿಗೆ ಲಂಡನ್ ನಗರದಲ್ಲಿ ಅಲ್ಲಿನ ಜನ ತೋರಿಸಿರುವ ಗೌರವ ಭಾವನೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. “ಹೊತ್ತು ! ಹೊತ್ತು ! ಹೊತ್ತೇ ಹಣ.”

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ “ಸಮುದ್ರದಾಚೆಯಿಂದ’’ ಎಂಬಪ್ರವಾಸ ಕಥನದಿಂದ ಆಯ್ದ “ಲಂಡನ್‌ನಗರ’’ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಲಂಡನ್‌ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ಅವಸರದಿಂದ ಓಡಾಡುತ್ತಿರುವುದನ್ನು ನೋಡಿ time! time! time is money (ಹೊತ್ತು! ಹೊತ್ತು! ಹೊತ್ತೇ ಹಣ) ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸ್ವಾರಸ್ಯ :– ಸಮಯಕ್ಕೆ ಬಹಳ ಪ್ರಾಮುಖ್ಯತೆ ಇದೆ. ಅದರಲ್ಲೂ ವಿದೇಶಗಳಲ್ಲೂ ಸಮಯವೇ ಹಣ ಎಂಬ ಮಾತು ಅಕ್ಷರಶಃ ನಿಜವಾಗಿದೆ. ಎಂಬ ಮಾತು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

3. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"

ಆಯ್ಕೆ :- ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ'' ಎಂಬಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ'' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ವೆಸ್ಟಮಿನ್‌ಸ್ಟರ್ ಅಬೆ ಎಂಬ ಪ್ರಾರ್ಥನಾ ಮಂದಿರದ ಆವರಣದಲ್ಲಿ ಸ್ಥಾಪಿಸಲಾಗಿದ್ದ ಕವಿಗಳ, ಸಾರ್ವಭೌಮರ ನೆನಪಿಗಾಗಿ ಕಲ್ಲುಹಾಸುಗಳನ್ನು ಇಟ್ಟಿದ್ದು ಅವುಗಳ ಮೇಲೆ ನಡೆದು ಹೋಗಬೇಕಾಗಿತ್ತು. ಅವುಗಳ ಬಳಿ ನಡೆದು ಹೋಗುತ್ತಿದ್ದ ಸಂದರ್ಭದಲ್ಲಿ ಲೇಖಕರು ''ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು ? ಎಲ್ಲವೂ ಅಷ್ಟೆ! ಮಣ್ಣು ಮಣ್ಣು! ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ'' ಎಂದುಹೇಳಿದ್ದಾರೆ.

ಸ್ವಾರಸ್ಯ :-ಸಾಧಕರ ಮಾರ್ಗದರ್ಶನದಲ್ಲಿ ನಡೆವಾಗ ಮಾನವನು ದಿಕ್ಕು ತಪ್ಪಿದಂತಾದಾಗ "ಎಲ್ಲವೂ ಅಷ್ಟೇ! ಬರಿಯಮಣ್ಣು" ಎಂದು ಮನಸ್ಸಿನಲ್ಲಿ ಮೂಡುತ್ತದೆ. ನಶ್ವರವಾಗಿ ಕಾಣುತ್ತದೆ.ಎಂಬುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

4. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."(ಮಾರ್ಚ್ 2018)

ಆಯ್ಕೆ :- ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ'' ಎಂಬಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ'' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :-ಲಂಡನ್‌ನಗರ ಪ್ರವಾಸ ಕಥನದ ಕೊನೆಯಲ್ಲಿ ಪ್ರವಾಸದ ಶೈಕ್ಷಣಿಕ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಪ್ರವಾಸದಿಂದ ತಮ್ಮ ಮನಸ್ಸು ವಿಕಾಸ ಹೊಂದಿ, ದೃಷ್ಟಿಕೋನ ವಿಶಾಲವಾದ ಬಗ್ಗೆ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ ಎಂದು ಬೇಕನ್ ಹೇಳಿದ ಮಾತನ್ನು ಇಲ್ಲಿ ಲೇಖಕರು ಉದಾಹರಿಸಿದ್ದಾರೆ.

ಸ್ವಾರಸ್ಯ :- "ದೇಶ ಸುತ್ತು : ಕೋಶ ಓದು'' ಎಂಬ ಮಾತಿನಂತೆ ಪರಿಪೂರ್ಣ ಶಿಕ್ಷಣಕ್ಕೆ ಪ್ರವಾಸ ಅತಿ ಮುಖ್ಯ. ಆದ್ದರಿಂದ ಈ ಪ್ರವಾಸದ ಮಹತ್ವ ತಿಳಿಸುತ್ತದೆ.

## ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು.ಇಲ್ಲಿನ ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಸಂಚರಿಸುತ್ತವೆ.ವೂಲವರ್ಥ ಸ್ಟೇಷನರಿ ಅಂಗಡಿಯ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ, ಇಲ್ಲಿ ಎಲ್ಲ ತರದ ಸಾಮಾಗ್ರಿಗಳು ದೊರಕುತ್ತವೆ. ಲಂಡನ್ ನಗರದ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳೇ ಕಾರ್ಯ ನಿರ್ವಹಿಸುತ್ತಾರೆ.ಚೇರಿಂಗ್ ಕ್ರಾಸ್ ಎಂಬ ಓಣೀಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ. ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿ ನೆಲ್ಸನ್‌ರವರ ಮೂರ್ತಿಯಿದೆ. ಇಲ್ಲಿ ಹೆಣ್ಣು ಮಕ್ಕಳ ಟೊಪ್ಪಿಗೆಯು ವೈವಿಧ್ಯಮಯವಾಗಿರುತ್ತದೆ. ವೆಸ್ಟಮಿನ್ಸ್ಟರ್ ಅಬೆ ಎಂಬುದು ಕನಿಷ್ಟ ಒಂದು ಸಾವಿರ ವರ್ಷದಷ್ಟು ಪುರಾತನ ಪ್ರಾರ್ಥನಾ ಮಂದಿರವಾಗಿದೆ. ಇದನ್ನು ಸತ್ತವರ ಸ್ಮಾರಕವಾಗಿದೆ ಎಂದು ಕರೆಯುತ್ತಾರೆ. ಪೊಯೆಟ್ಸ ಕಾರ್ನರಿನಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಕವಿಪುಂಗವರ ಸಮಾಧಿಗಳಿವೆ. ಇದರ ಸಮೀಪದಲ್ಲೇ ಪ್ರಖ್ಯಾತ ವಿಜ್ಞಾನಿಗಳ, ವ್ಯಾಪಾರಿಗಳ, ವಾಸ್ತುಶಿಲ್ಪಿಗಳ, ಸರದಾರರ, ಸೇನಾಪತಿಗಳ ಸಮಾಧಿಗಳು ಸಹ ಇವೆ. ಲಂಡನ್ ನಗರದಲ್ಲಿ ಇರುವ ಅರಮನೆಯ ಸೌಂದರ್ಯ ಹಾಗೂ ರಾಜರುಗಳ ವೈಭವ ರಾಯಲ್‌ಚಾಪೆಲ್‌ನಲ್ಲಿ ಕಂಡುಬರುತ್ತದೆ. ಸಾಮ್ರಾಟರ ರಾಜ್ಯಾಭಿಷೇಕ ಆಗುವಾಗ ಕೂಡುವ 'ಸ್ಟೋನ್ ಆಫ್ ಸ್ಕೋನ್' ವಿಶಿಷ್ಟವಾದುದಾಗಿದೆ. ಈ ಮೇಲಿನ ಎಲ್ಲಾ ವಿಶೇಷತೆಗಳನ್ನು ಲಂಡನ್ ನಗರದ ವೀಕ್ಷಣೆಯಲ್ಲಿ ಲೇಖಕರು ಗುರುತಿಸುತ್ತಾರೆ.

2) 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

ಲಂಡನ್ ನಗರದಲ್ಲಿರುವ ವೆಸ್ಟ ಮಿನಿಸ್ಟರ್ ಅಬೆ ಎನ್ನುವುದು ಕನಿಷ್ಟ ಒಂದು ಸಾವಿರದಷ್ಟು ಪುರಾತನವಾದ ಪ್ರಾರ್ಥನಾ ಮಂದಿರವಾಗಿದೆ.ಇದು ದಿವಂಗತರಾದ ಸಂತರು,ಸಾರ್ವಭೌಮರು, ಹಾಗೂ ಕವಿ ಪುಂಗವರ ಸ್ಮಾರಕವಾಗಿದೆ.ಆದ್ದರಿಂದ ಇದನ್ನು ಸತ್ತವರ ಸ್ಮಾರಕವೆಂದೂ ಸಹ ಕರೆಯುತ್ತಾರೆ. ಈ ಸ್ಮಾರಕವು "ಮರ್ತ್ಯತ್ವವೇ, ಎಷ್ಟು ಗೋರಿಗುಂಪುಗಳು ಇಲ್ಲಿವೆ; ನೋಡಿ ಅಂಜು" ಎಂಬ ಬ್ಯೂಮಾಂಟ್ ಕವಿಯ ಹಾಡನ್ನು ನೆನಪಿಸುತ್ತದೆ. ಗೋಲ್ಡಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು ವೆಸ್ಟಮಿನ್‌ಸ್ಟರ್ ಅಬೆಯನ್ನು ಕುರಿತು ಉತ್ತಮವಾದ ನಿಬಂಧನಗಳನ್ನು ರಚಿಸಿದ್ದಾರೆ. ಇಂದಿಗೂ ವೆಸ್ಟಮಿನ್‌ಸ್ಟರ್ ಅಬೆಯು ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿದೆ. ಈ ಕಟಡ್ಡದಲ್ಲಿ ಹೊರಗಿನಿಂದ ಶೃಂಗರಿಸಿ ಸಣ್ಣ ಬಾಗಿಲೊಂದು ಕಾಣುತ್ತದೆ.ಒಳಗೆ ಮಾತ್ರ ಭವ್ಯವಾಗಿದೆ.ಇಲ್ಲಿ ಪಾದ್ರಿಗಳು ಸತ್ತವರಿಗಾಗಿ ಪ್ರಾರ್ಥನೆ ಮಾಡುತ್ತಾರೆ.ಬಹುಜನರು ಪ್ರಾರ್ಥನೆಗಿಂತ ಪ್ರಾರ್ಥನಾ ಮಂದಿರವನ್ನು ನೋಡಲು ಬರುತ್ತಾರೆ ನಡುವೆ ಇರುವ ಸಣ್ಣ ಹಾದಿಯ ಎಡಬಲಕ್ಕೆ ರಾಜಕಾರಣ, ಚತುರರ ಶಿಲಾಮೂರ್ತಿಗಳಿವೆ. ರಾಜರಿಗಿಂತ ಕವಿಗಳಿಗಿಂತ ಇವರೇ ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದರೆಂಬುದು ಇಲ್ಲಿಯವರ ಅಭಿಪ್ರಾಯವಾಗಿದೆ.ಈ ಬಂಗಾರದ ಬಣ್ಣದಿಂದ ಲೇಪಿತವಾದ ಶಿಲಾ ಮೂರ್ತಿಗಳು ಹಾಗೂ ಉತ್ತಮವಾದ ಕೆತ್ತನೆಯು ಸಂದರ್ಶಕರ ಮನಸನ್ನು ಸೆಳೆಯುತ್ತವೆ.

# ಗದ್ಯಪಾಠ- 4 .ಭಾಗ್ಯಶಿಲ್ಪಿಗಳು - ಡಿ.ಎಸ್.ಜಯಪ್ಪಗೌಡ.

## ಲೇಖಕರ ಪರಿಚಯ : ಡಿ ಎಸ್ ಜಯಪ್ಪ ಗೌಡ

ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ ಇವರು ಕ್ರಿ.ಶ.1947 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಜನಿಸಿದರು. ಇತಿಹಾಸ ಮತ್ತು ಭಾಷಾಂತರ ವಿಷಯದಲ್ಲಿ ಮಹತ್ವದ ಕೃತಿಗಳನ್ನು ರಚಿಸಿರುವ ಇವರು ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಕೃತಿಗೆ ಕರ್ನಾಟಕ ಸಾಹಿತ್ಯ

ಅಕಾಡೆಮಿ ಪ್ರಶಸ್ತಿ ಹಾಗೂ ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಕ್ಕೆ ಭಾಜನರಾಗಿದ್ದಾರೆ.

## ಒಂದು ವಾಕ್ಯದಲ್ಲಿ ಉತ್ತರಿಸಿ

**1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?**

ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ. ಶ. **1895** ರಲ್ಲಿ ಪಟ್ಟಾಭಿಷಿಕ್ತರಾದರು.

**2. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ದರಾದರು?**

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ
ಕಂಕಣಬದ್ಧರಾದರು.

**3, ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದು ರೋಜನೆ ಯಾವುದು?**

ಶಿವನಸಮುದ್ರ ಜಲವಿದ್ಯುತ್ ಯೋಜನೆ ಏಷ್ಯಾ ಖಂಡದಲ್ಲೇ ಮೊದಲು ಪ್ರಾರಂಭಿಸಿದಜಲವಿದ್ಯುತ್ ಯೋಜನೆಯಾಗಿದೆ.

**4. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

**5. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದ

**6. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತೆ.**

ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜಿನಿಯರ್ ದಿನ' ವಾಗಿ ಆಚರಿಸಲಾಗುತ್ತದೆ.

## ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

**2. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ **1900**ರಲ್ಲಿಯೇ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು.ಇದು ಭಾರತ ಮಾತ್ರವಲ್ಲ ,ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆ. **1907**ರಲ್ಲಿ ವಾಣಿ ವಿಲಾಸ ಸಾಗರ ( ಮಾರಿಕಣಿವೆ) ಕಟ್ಟಲ್ಪಟ್ಟಿತು. **1911**ರಲ್ಲಿ ಕೃಷ್ಣ ರಾಜ ಸಾಗರ ಇವರ ಬೃಹತ್ ಕೊಡುಗೆ.

**3. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

**4. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ನೆಹರೂ ಅವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ವಿಶ್ವೇಶ್ವರಯ್ಯ ಅವರು ಕ್ರಿ.ಶ. **1913**ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**1. "ಸಾಮಾಜಿಕ ಕಾನೂನುಗಳ ಹರಿಕಾರ"**

ಆಯ್ಕೆ :- ಈ ವಾಕ್ಯವನ್ನುಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್‌ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬ ಗದ್ಯಪಾಠದಿಂದ ಆಯ್ದ "ಭಾಗ್ಯಶಿಲ್ಪಿಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :-ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.ನಾಲ್ವಡಿ ಕೃಷ್ಣರಾಜ ಒಡೆಯರ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳೀತ ವಿಕೇಂದ್ರೀಕರಣ ಮಾಡಿದರು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. "ಸಾಮಾಜಿಕ ಕಾನೂನುಗಳ ಹರಿಕಾರ'' ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತುನೀಡಿದರು.

ಸ್ವಾರಸ್ಯ :-ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ನೀಡಿರುವುದು ಒಪ್ಪುವಂತಾದ್ದಾಗಿದೆ.

**2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."**

ಆಯ್ಕೆ :- ಈ ವಾಕ್ಯವನ್ನುಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್‌ಸರ್ ಎಂ. ವಿಶ್ವೇಶ್ವರಯ್ಯನವರಕಾರ್ಯಸಾಧನೆಗಳು" ಎಂಬಪ್ರವಾಸ ಕಥನದಿಂದ ಆಯ್ದ"ಭಾಗ್ಯಶಿಲ್ಪಿಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ವಿಶ್ವೇಶ್ವರಯ್ಯ ಅವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು ಯಶಸ್ವಿಯಾಗಿ ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ವಿಶ್ವೇಶ್ವರಯ್ಯ ಅವರಲ್ಲಿದ್ದ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"

ಆಯ್ಕೆ :- ಈ ವಾಕ್ಯವನ್ನುಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್‌ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬಪ್ರವಾಸ ಕಥನದಿಂದ ಆಯ್ದ "ಭಾಗ್ಯಶಿಲ್ಪಿಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷರ್ಣಾಜ ಒಡೆಯರ್ ಅವರಿಂದ ದಿವಾನರಾಗಿ ನೇಮಕಗೊಂಡ ವಿಶ್ವೇಶ್ವರಯ್ಯ ಅವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದ ಸಂದರ್ಬದಲ್ಲಿ ಜನರು ಈ ರೀತಿ ಹಾಡಿ ಹೊಗಳುತ್ತಾರೆ.

ಸ್ವಾರಸ್ಯ :- ಮೈಸೂರು ಸಂಸ್ಥಾನದ ದಿವಾನರಾಗಿ ವಿಶ್ವೇಶ್ವರಯ್ಯ ಅವರು ಮಾಡಿದ ಕಾರ್ಯಗಳು ಅಭೂತಪೂರ್ವವಾದವುಗಳು ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

4. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು."

ಆಯ್ಕೆ :- ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'' ಎಂಬಗದ್ಯಭಾಗದಿಂದ ಆಯ್ದ "ಭಾಗ್ಯಶಿಲ್ಪಿಗಳು'' ಎಂಬ ಆರಿಸಲಾಗಿದೆ.

ಸಂದರ್ಭ :- ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಾರಿಮಾಡಿದ ಸಾಮಾಜಿಕ ಕಾನೂನುಗಳನ್ನು ತಿಳಿಸುವ ಸಂದರ್ಭದಲ್ಲಿ1927 ರಲ್ಲಿ ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕನ್ನು ನೀಡಿದರು ಎಂದು ಲೇಖಕರು ಉಲ್ಲೇಖಿಸಿದ್ದಾರೆ.ಇಷ್ಟೇ ಅಲ್ಲದೆ ದೇವದಾಸಿ ಪದ್ಧತಿ ನಿಷೇಧ , ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ; ವಿಧವಾ ವಿವಾಹ ಕಾಯ್ದೆ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಜಾರಿಗೊಳಿಸಿ ಸ್ತ್ರೀಯರಿಗೆ ಬಲತುಂಬಿದರು.

ಸ್ವಾರಸ್ಯ :- ಸ್ತ್ರೀಯರಿಗೆ ಸರಿಯಾದ ಸ್ಥಾನಮಾನಗಳಿಲ್ಲದ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಅವರಿಗೆ ಸಾಮಾಜಿಕ ನ್ಯಾಯ ದೊರಕಿಸಿದ್ದು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

## ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ

1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು? (ಮಾರ್ಚ್ 2018, ಮಾರ್ಚ್ ಜೂನ್ 2019)

ಉ: 1902ರ ಆಗಸ್ಟ್ 8ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿ ಕೃಷ್ಣರಾಜ ಒಡೆಯರ ಸುಪರ್ದಿಗೆ ಬಂದಿತು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು. ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರೂ ಸಹ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು.

2. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.(ಮಾರ್ಚ್ ಜೂನ್ 2019)

ಉ: ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ರಾಜ್ಯ ಪ್ರವಾಸ ಮಾಡಿ ಅಜಮಾಯಿಷಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು. ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತಾ ್ಸಹ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

3. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

ಉ: ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಕ್ರಿ.ಶ. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪಿಸಿದರು. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತಾ್ತಗದೆ

ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.

## ಗದ್ಯಪಾಠ 5 ಎದೆಗೆ ಬಿದ್ದ ಅಕ್ಷರ– ದೇವನೂರ ಮಹಾದೇವ

### ಲೇಖಕರ ಪರಿಚಯ: ದೇವನೂರ ಮಹಾದೇವ

ದೇವನೂರ ಮಹಾದೇವ ರವರು ಕ್ರಿ.ಶ. 1949 ರಲ್ಲಿಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು. ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾದ ಇವರು.ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ ಶ್ರೀಯುತರ ಪ್ರಮುಖ ಕೃತಿಗಳು. ಇವರ ಕುಸುಮಬಾಲೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಒಡಲಾಳ ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

### ಒಂದು ವಾಕ್ಯದಲ್ಲಿ ಉತ್ತರಿಸಿ

1. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು?

ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

2. ಮನೆಮಂಚಮ್ಮ ಯಾರು?

ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿನ ಗ್ರಾಮದೇವತೆ ಮನೆ ಮಂಚಮ್ಮ.

3. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?

ಮನೆಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ.

4. 'ಶಿವಾನುಭವ ಶಬ್ದಕೋಶ, ಪುಸ್ತಕಬರೆದವರು ಯಾರು?(ಮಾರ್ಚ್ 2018)

'ಶಿವಾನುಭವಶಬ್ದಕೋಶ' ಪುಸ್ತಕಬರೆದವರುಹಳಕಟ್ಟಿಯವರು.

5. ವಚನಕಾರರಿಗೆ ಯಾವುದು ದೇವರಾಗಿತ್ತು?(ಮಾರ್ಚ್ 2018)

ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

6. ಅಶೋಕ ಪೈ ಅವರ ವೃತ್ತಿ ಯಾವುದು?

ಅಶೋಕ ಪೈ ಅವರು ಮನೋವೈದ್ಯರು.

7. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನುಇಟ್ಟರೆ ಅದು ದೇವನೂರು ಮಹಾದೇವ ಅವರ ದೇವರು ಆಗುತ್ತದೆ.

### ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?(ಮಾರ್ಚ್ 2018 2019)

ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವಾಗ, ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆ ಆಡುತ್ತ ತಮ್ಮಿಷ್ಟಕ್ಕೆ ತಾವು ಇರುವಾಗ, ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾರೊಂದು ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ.ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

2. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.

ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

### ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

ಆಯ್ಕೆ :–ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನಪ್ರಾರಂಭಿಸಿದಾಗ, ಒಬ್ಬನ ಮೈಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

ಸ್ವಾರಸ್ಯ :– ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

2. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."(ಜೂನ್ 2019)

ಆಯ್ಕೆ :–ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ :– "ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

3. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"
ಆಯ್ಕೆ :–ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :–ಲೇಖಕರು ವಚನಕಾರರ ಪ್ರಕಾರ ದೇವರೆಂದರೆ ಏನು ಎಂದು ಹೇಳುವ ಸಂದರ್ಭದಲ್ಲಿ ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದು ಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು ಎಂದು ಹೇಳಿದ್ದಾರೆ.
ಸ್ವಾರಸ್ಯ :– ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಸಾಧ್ಯವಿಲ್ಲ. ಆದ್ದರಿಂದ ವಚನಕಾರರು ಬೆಂಕಿಯಂತಹ ಪ್ರಜ್ಞೆಯನ್ನೇ ಪ್ರಮಾಣವಾಗಿಸಿಕೊಂಡು ಸತ್ಯಕ್ಕೆ ಆದ್ಯತೆ ನೀಡಿದರು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.
4. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."
ಆಯ್ಕೆ :–ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :–ಲೇಖಕರಾದ ದೇವನೂರು ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡುನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ :– ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸರ್ವಸಮಾನತೆ ಮನೋಭಾವ ಮೂಡಿಸಿಕೊಂಡು ಬದುಕಬೇಕು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಕವಿ ಸಿದ್ದಲಿಂಗಯ್ಯನವರು ಹೇಳಿದ ಕತೆಯನ್ನು ಬರೆಯಿರಿ.
ಒಮ್ಮೆ ಗ್ರಾಮದ ಜನರೆಲ್ಲಾ ಸೇರಿ ತಮ್ಮ ಗ್ರಾಮದೇವತೆ ಮಂಚಮ್ಮನಿಗೆ ಗುಡಿಕಟ್ಟಲು ಪ್ರಾರಂಭಿಸುತ್ತಾರೆ.ಗುಡಿ ಕಟ್ಟಡವು ಚಾವಣಿ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೇ ಆ ಮಂಚಮ್ಮ ಆವಾಹಿಸಿಕೊಂಡು ಬಂದು "ನಿಲ್ಸಿ ನನ್ ಮಕ್ಳಾ " ಎಂದು ಅಬ್ಬರಿಸಿ " ಏನ್ರಯ್ಯ ಏನ್ ಮಾಡ್ತಾ ಇದ್ದಿರಿ? ಎನ್ನುತ್ತಾಳೆ. ಜನ " ತಾಯಿ ನಿನಗೊಂದು ಗುಡಿಮನೆ ಕಟ್ತಾ ಇದ್ದಿವಿ ಎನ್ನುತ್ತಾರೆ. ದೇವತೆ "ಓಹೋ, ನನಗೇ ಗುಡಿಮನೆ ಕಟ್ತಾ ಇದ್ದಿರೋ ? ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಳಾ ?"ಎಂದು ಕೇಳುತ್ತಾಳೆ. ಅಲ್ಲಿ ಇದ್ದವನೊಬ್ಬನು "ನನಗಿಲ್ಲ ತಾಯಿ" ಎನ್ನುತ್ತಾನೆ. ದೇವತೆ "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ" ಎನ್ನುತ್ತಾಳೆ. ಅಂದಿನಿಂದ ಆ ದೇವತೆಗೆ ಮನೆ ಮಂಚಮ್ಮ ಎಂಬ ಹೆಸರಾಗುತ್ತದೆ. ಇಂದಿಗೂ ಚಾವಣಿಯಿಲ್ಲದ ಗುಡಿಯಲ್ಲಿ ತಾಯಿ ಮನೆ ಮಂಚಮ್ಮ ಪೂಜಿತಳಾಗುತ್ತಾಳೆ. ಹೀಗೆ ಕವಿ ಸಿದ್ದಲಿಂಗ್ಯನವರು ದೇವನೂರು ಮಹಾದೇವ ಅವರಿಗೆ ಹೇಳಿದ ಮನೆ ಮಂಚಮ್ಮನ ಕಥೆ.

2) ವಚನಕಾರರ ಪ್ರಜ್ಞೆಯ ಬಗ್ಗೆ ದೇವನೂರು ಮಹಾದೇವರ ಅಭಿಪ್ರಾಯ ಏನಾಗಿತ್ತು ? ವಿವರಿಸಿ.
ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. ಈ ರೀತಿ ಪ್ರಜ್ಞೆಯೇ ದೇವರು ಅಂತ ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿ ಮೇಲೆ ಇಟ್ಟುಕೊಂಡಂತಾಗುತ್ತದೆ. ನಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ. ಅದೇ ಕಷ್ಟ ಆಗೋದು. ಇತರ ದೇವರಿಗಾದರೆ – ಯಾವುದೇ ಉಗ್ರ ದೇತೆಯಿರಲಿ, ಏನೋ ಸ್ವಲ್ಪ ಹೊಟ್ಟೆಯೊಳಗೆ ಹಾಕ್ಕೊಂತ ಸುಳ್ಳು ಪಳ್ಳು ಹೇಳಿ ಬಿಡಬಹುದು. ಆದರೆ ಪ್ರಜ್ಞೆ ಮುಂದೆ ಇದು ನಡೆಯದು. ಈ ಇಕ್ಕಟ್ಟಿಗೆ ವಚನಕಾರರು ಮುಖಾಮುಖಿಯಾದರೆಂದು ಕಾಣಿಸುತ್ತದೆ. ಅವರು ತಮ್ಮ ಕಷ್ಟ ಸುಖಾನ, ದು:ಖ ದುಮ್ಮಾನನ, ಏಳು ಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳುತ್ತಾ ಓಡಾಡುತ್ತಿದ್ದರೆಂದು ಕಾಣುತ್ತದೆ. ಈ ಒದ್ದಾಟಕ್ಕೆ ಅವರು ನುಡಿ ಕೊಟ್ಟರು. ಎನ್ನುವುದು ದೇನೂರು ಮಹಾದೇವರ ಅಭಿಪ್ರಾಯವಾಗಿತ್ತು.

# ಗದ್ಯ ಪಾಠ–6 ವ್ಯಾಘ್ರಗೀತೆ – ಎ ಎನ್ ಮೂರ್ತಿರಾವ್

## ಲೇಖಕರ ಪರಿಚಯ: ಎ.ಎನ್.ಮೂರ್ತಿರಾವ್

ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್ ರವರು ಕ್ರಿ.ಶ. 1900ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸೇವೆಸಲ್ಲಿಸಿದ ಇವರು ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಚಿತ್ರಗಳು– ಪತ್ರಗಳು ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ ಲಭಿಸಿವೆ.

## ಒಂದು ವಾಕ್ಯದಲ್ಲಿ ಉತ್ತರಿಸಿ:

1. ಭಗವದ್ಗೀತೆಯನ್ನು ರಚಿಸಿದವರು ಯಾರು?

ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.

2. ಹುಲಿಗೆ ಪರಮಾನಂದವಾಗಲು ಕಾರಣವೇನು?

ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

3. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?(ಮಾರ್ಚ್ ಜೂನ್ 2019)

ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ

4. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

## ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:

1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಅದು ಕಾಡುದಾರಿಯಾಗಿತ್ತು ಆದಿನ ಬೆಳುದಿಂಗಳಿನ ರಾತ್ರಿ.ಅದರೂ ಶಾನುಭೋಗರ ಮನಸ್ಸಿನಲ್ಲಿ ಭಯ ಆವರಿಸಿತ್ತು. ಹೊಟ್ಟೆಯೂ ಹಸಿಯುತ್ತಿತ್ತು. "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಶಾನುಭೋಗರು ಯೋಚಿಸಿದರು.

2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ

3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.(ಮಾರ್ಚ್ 2019)

ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದ ಪಲಾಯನಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು.ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ."

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು'' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :-ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು "ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು''ಎಂಬ ತನ್ನ ಧರ್ಮವನ್ನುನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

ಸ್ವಾರಸ್ಯ :- ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

2. "ಸ್ವಧರ್ಮೇ ನಿಧನಂ ಶ್ರೇಯಃ."

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :-ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನಹಿಂದೆ ಬಂದ ಹುಲಿಯು "ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು'' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಹುಲಿಗೆ ಭಗವದ್ಗೀತೆಯ ಈ ಮಾತು ನೆನಪಿಗೆ ಬಂದಿತು.

ಸ್ವಾರಸ್ಯ :-ಸದ್ವಂಶದಲ್ಲಿ ಜನಿಸಿದ ಹುಲಿಯು ಶಾನುಭೋಗರ ಬೆನ್ನಹಿಂದಿನಿಂದ ಆಕ್ರಮಣ ಮಾಡದೆ ಭಗವದ್ಗೀತೆಯ ಈ ಮಾತನ್ನು ನೆನೆಯುವುದು ಸ್ವಾರಸ್ಯಪೂರ್ಣವಾಗಿದೆ.

3. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."(ಮಾರ್ಚ್ 2018)

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತಪ್ರಬಂಧಗಳು' ಕೃತಿಯಿಂದ ಆಯ್ದ'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :-ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- "ಸಂಕಟ ಬಂದಾಗ ವೆಂಕಟರಮಣ'' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

4. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು'

ಕೃತಿಯಿಂದ ಆಯ್ದ' "ವ್ಯಾಘ್ರಗೀತೆ'' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲಲ್ಲು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ?" ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

5. "ಹುಲಿ ಈಗ ಎಷ್ಟು ಹಸಿದಿರಬೇಕು."

ಆಯ್ಕೆ :– ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತಪ್ರಬಂಧಗಳು'ಕೃತಿಯಿಂದಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವ ಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ

1) ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿರಿ.

"ಶಾಖಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಆಹಾರಕ್ಕಾಗಿ ಹುಲಿಯು ಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ತಪ್ಪಿಲ್ಲ. ಆದರೆ ಹಾಗೆ ಕೊಲ್ಲುವಾಗ ಯಾವುದಾದರು ಒಂದು ಧರ್ಮವನ್ನು ಅನುಸರಿಸಿ ಕೊಲ್ಲುವುದು ಅಥವಾ ಧರ್ಮಾಧರ್ಮಗಳ ಲೆಕ್ಕವಿಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೋ ಎಂಬುದೇ ಮುಖ್ಯ ಪ್ರಶ್ನೆ. ಇತರ ದೇಶಗಳಲ್ಲಿ ಇರುವ ಹುಲಿಗಳ ವಿಷಯ ಹೇಗೋ ಗೊತ್ತಿಲ್ಲ; ಆದರೆ ಯಾವ ನಾಡಿನಲ್ಲಿ ಶ್ರೀ ರಾಮನಂತ ದೊರೆಗಳು ಆಳಿದರೋ, ಭಗವದ್ಗಿಗೀತೆಯಂತ ಗ್ರಂಥ ಉದ್ಭವಿಸಿತೋ,ಆ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ; ಏಕೆಂದರೆ ಶತೃಗಳಾದರೂ ಸರಿಯೇ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಭಗಚದ್ಗಿಗೀತೆಯ 'ಸ್ವ ಧರ್ಮೇ ನಿಧನಂ ಶ್ರೇಯಃ' ಎಂಬ ಮಾತಿನಂತೆ ಹುಲಿಗಳು ಧರ್ಮಪರತೆಯಿಂದ ಬೇಟೆ ಆಡುತ್ತವೆ" ಎಂದು ಮೂರ್ತಿರಾಯರು ಅಭಿಪ್ರಾಯ ಪಡುತ್ತಾರೆ.

2) ಶ್ಯಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.

ಶ್ಯಾನುಭೋಗರು ಖಿರ್ದಿ ಪುಸ್ತಕ ಹುಲಿಗೆ ಎಸೆದದು ಹೋಗುವಾಗ ಎಡವಿ ಬಿದ್ದು ಮೂರ್ಛೆ ಹೋದರು.ಮೂರ್ಛೆಯಿಂದ ಎದ್ದಾಗ ನಾಲ್ಕೈದು ಜನ ರೈತರಿದ್ದರು. ನೀರು ಚಿಮುಕಿಸಿ ಶಾನುಭೊಗರನ್ನು ಎಚ್ಚರಿಸದರು. ಮನಗೆ ಬಂದ ಶಾನುಭೊಗರು ಖಿರ್ದಿಪುಸ್ತಕವನ್ನು ತೊಲೆಯ ಮೇಲೆ ಇಟ್ಟರು.ಶಾನುಭೊಗರು ಆ ಪುಸ್ತಕವನ್ನು ಅನಂತರ ವಾತ್ಸಲ್ಯದಿಂದ, ಕೃತಜ್ಞತೆಯಿಂದ ನೋಡಿದರು. ತನ್ನ ಪ್ರಾಣವನ್ನು ಖಿರ್ದಿ ಪುಸ್ತಕವೇ ರಕ್ಷಿಸಿತು ಎಂಬ ಕೃತಜ್ಞತೆ ಶಾನುಭೊಗರಲ್ಲಿದೆ. ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕ ಆ ಕ್ಷಣಕ್ಕೆ ಒಂದು ಸಾಧನವಾದರೂ ಅವರು ಎಡವಿಬಿದ್ದಾಗ ಬೆನ್ನಮೇಲಾಗಿ ಬಿದ್ದು ಮೂರ್ಛೆ ಹೋಗಿರುತ್ತಾರೆ.ಹುಲಿಯ ಧರ್ಮಶ್ರದ್ದೆ ಬೆನ್ನ ಕಡೆಯಿಂದ ಬೇಟೆಯಾಡುವುದಲ್ಲ. ಆದ್ದರಿಂದ ಅದು ಶಾನುಭೊಗರನ್ನು ಕಿಲ್ಲದೆ ಬಿಟ್ಟಿದೆ. ಖಿರ್ದಿ ಪುಸ್ತಕಗಿಂತ ಹುಲಿಯ ಧರ್ಮಶ್ರದ್ದೇಯೇ ಶಾನುಬೋಗರ ಪ್ರಾಣ ಉಳಿಯಲು ಕಾರಣವೆಂಬುದು ಲೇಖಕರ ಅಭಿಪ್ರಾಯವಾಗಿದೆ.

## ಗದ್ಯಪಾಠ – 7 ವೃಕ್ಷಸಾಕ್ಷಿ – ದುರ್ಗಸಿಂಹ

### ಲೇಖಕರ ಪರಿಚಯ: ದುರ್ಗಸಿಂಹ

ದುರ್ಗಸಿಂಹನು ಕ್ರಿ.ಶ.1031 ರಲ್ಲಿ ಕಿಸುಕಾಡು ನಾಡಿನ ಸಯ್ಯಡಿಯಲ್ಲಿ ಜನಿಸಿದನು. (ಈಗಿನ ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ) ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು. ಮತಧರ್ಮ ಸಮನ್ವಯಕಾರನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರಭವನಗಳನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. 'ಪಂಚತಂತ್ರ' ಎಂಬ ಚಂಪೂಕಾವ್ಯದ ಕರ್ತೃ. ಪಂಚತಂತ್ರದಲ್ಲಿ ಭೇದ, ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯ ಎಂಬ ಐದು ತಂತ್ರಗಳನ್ನಾಧರಿಸಿದ 48 ಉಪಕತೆಗಳಿವೆ. ಕಾವ್ಯವು 457 ಪದ್ಯಗಳಿಂದಲೂ 230 ಶ್ಲೋಕಗಳಿಂದಲೂ ಕೂಡಿದೆ.

### ಒಂದು ವಾಕ್ಯದಲ್ಲಿ ಉತ್ತರಿಸಿ

1. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿದನು.

2. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?(ಮಾರ್ಚ್ 2018)

ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತ ಕಳೆದನು.

3. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯ ವ್ಯಾಜ್ಯವನ್ನು ಪರಿಹರಿಸಲು, ವೃಕ್ಷಸಾಕ್ಷಿಯನ್ನು ಕೇಳಲು ವಟವೃಕ್ಷದ ಸಮೀಪಕ್ಕೆ ಬಂದರು.

4. ವೃಕ್ಷಸಾಕ್ಷಿ ಗದ್ಯಪಾತದ ಆಕರ ಗ್ರಂಥ ಯಾವುದು?

ವೃಕ್ಷಸಾಕ್ಷಿ ಗದ್ಯಪಾತದ ಆಕರ ಗ್ರಂಥ 'ಕರ್ಣಾಟಕ ಪಂಚತಂತ್ರ'

## ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು, "ಹೊನ್ನನ್ನು ಹಂಚಿಕೊಳ್ಳೋಣ" ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲೆಯೇ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.

2. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?(ಮಾರ್ಚ್ 2018)

ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

ಧರ್ಮಾದಿಕರಣರು ವಟವೃಕ್ಷಕ್ಕೆ "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ಪೊನ್ನನೆಲ್ಲಮಂ ನೀನೆ ಕೊಂಡೆ"

ಆಯ್ಕೆ :-ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾತದಿಂದ ಆರಿಸಲಾಗಿದೆ.

ಸಂದರ್ಭ :- ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ" ಎಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ದುಷ್ಟಬುದ್ಧಿಯು ಇನ್ನು ಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, "ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ" ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

2. "ಈತನ ಮಾತು ಅಶ್ರುತಪೂರ್ವಮ್"(ಜೂನ್ 2019)

ಆಯ್ಕೆ :- ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ "ವೃಕ್ಷಸಾಕ್ಷಿ'' ಎಂಬ ಗದ್ಯಪಾತದಿಂದ ಆರಿಸಲಾಗಿದೆ.

ಸಂದರ್ಭ :- ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದ ಸಂದರ್ಭದಲ್ಲಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ಧರ್ಮಾಧಿಕರಣರು "ವೃಕ್ಷವು ಸಾಕ್ಷಿಯನ್ನು ಹೇಳುವುದುಎಂಬುದನ್ನು ಹಿಂದೆ ಎಂದೂ ಕೇಳಿಲ್ಲ"ಎಂದು ವಿಸ್ಮಯದಿಂದ ಹೇಳುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

3. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"

ಆಯ್ಕೆ :- ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ "ವೃಕ್ಷಸಾಕ್ಷಿ'' ಎಂಬ ಗದ್ಯಪಾತದಿಂದ ಆರಿಸಲಾಗಿದೆ.

ಸಂದರ್ಭ :- ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಹಿಡಿದು, ಏಕಾಂತಸ್ಥಳಕ್ಕೆ ಕರೆದು ಕೊಂಡು ಹೋಗಿ, ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದ ಸಂದರ್ಭದಲ್ಲಿ ಅವನಿಗೆ ಬುದ್ಧಿಯನ್ನು ಹೇಳುತ್ತ ತಂದೆಯು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ದುಷ್ಟಬುದ್ಧಿಯನ್ನು ಕುರಿತು ಅವನ ತಂದೆಯು "ನಿನ್ನ ಕೆಟ್ಟತನ ನಮ್ಮ ಕುಲವನ್ನು ನಾಶಮಾಡುವ ರೀತಿಯದಾಗಿದೆ" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

4. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"(ಮಾರ್ಚ್ 2019)

ಆಯ್ಕೆ :- ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ "ವೃಕ್ಷಸಾಕ್ಷಿ'' ಎಂಬ ಗದ್ಯಪಾತದಿಂದ ಆರಿಸಲಾಗಿದೆ.

ಸಂದರ್ಭ :-ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ದರ್ಮದ ಹಾದಿಯನ್ನು ಬಿಟ್ಟು "ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡನೆಂದು" ನುಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ಪಾಪಕರ್ಮನಾದ ದುಷ್ಟಮಗನ ಮಾತನ್ನು ಕೇಳಿ ತಂದೆಯು ತೊಂದರೆಗೆ ಒಳಗಾದನು ಎಂಬುದನ್ನು ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯವು ಕಡಿಮೆಯಾಗುತ್ತದೆ'' ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವರ್ಣಿಸಲ್ಪಟ್ಟಿದೆ.

5. "ಹುಸಿಯದಬೇಹಾರಿಯೇ ಇಲ್ಲ."

ಆಯ್ಕೆ :– ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ "ವೃಕ್ಷಸಾಕ್ಷಿ" ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :– ಧರ್ಮಬುದ್ಧಿಯು ಆಲದ ಮರದ ಬಳಿ ಬಂದು ನೋಡಿ, ಮರವನ್ನು ಸುತ್ತು ಹಾಕಿ, ದೊಡ್ಡದಾದ ಪೊಟರೆಯನ್ನು, ಮನುಷ್ಯ ಸಂಚಾರ ವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ :– ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1) ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು?ಏಕೆ

ವೃಕ್ಷಸಾಕ್ಷಿ ಪಾಠದಲ್ಲಿ ನಾವು ಮೆಚ್ಚುವ ಪಾತ್ರ ಧರ್ಮಬುದ್ಧಿಯ ಪಾತ್ರ. ಧರ್ಮಬುದ್ಧಿ ವ್ಯಾಪಾರಿಯಾದರೂ ಕಪಟವರಿಯದ ಸತ್ಯವಂತ. ಆಧ್ಯಾತ್ಮಿಕ ಮನೋಭಾವವುಳ್ಳವನು. ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯ ಕರ್ಮಮುಗಿಸಿ. ದೇವರು, ಗುರುಗಳು. ವೇದಾಧ್ಯಯನ ನಿರತರನ್ನು ಪೂಜಿಸುವನು. ದುಷ್ಟಬುದ್ಧಿಯು ಮರದ ಪೊಟರಯೊಳಗೆ ತಂದೆಯನ್ನು ಕೂರಿಸಿ. ಧರ್ಮಬುದ್ಧೀಯೇ ಚಿನ್ನದ ನಾಣ್ಯಗಳನ್ನು ಕದ್ದನೆಂದು ಹೇಳಿಸಿದಾಗಲೂ ಕೂಗಾಡಲಿಲ್ಲ. ಶಾಂತನಾಗಿಯೇ ಇದ್ದನು. ಅವನಿಗೆ ದೇವರ ಮೇಲೆ ನಂಬಿಕೆ. ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ. ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧವಂತಿಕೆಯಿಂದ ಕಂಡುಕೊಂಡನು. ದುಷ್ಟಬುದ್ಧಿಗೆ ಬುದ್ದಿ ಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ." ಸುಳ್ಳನ್ನು ಸುಳ್ಳಿನಿಂದಲೇ, ಮುಳ್ಳನ್ನು ಮುಳ್ಳಿನಿಂದಲೇ ಜಯಸುವಂತೆ" ಧರ್ಮಬುದ್ದಿಯು ತಂತ್ರ ಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿದನು. ಆದ್ದರಿಂದ ಸತ್ಯವಂತನಾದ ಧರ್ಮಬುದ್ದಿ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

2) ದುಷ್ಟಬುದ್ದಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

ದುಷ್ಟಬುದ್ದಿ ಧರ್ಮಬುದ್ದಿಯೊಡನೆ ಸೇರಿ ಲಾಭ ಗಳಿಸಿದ್ದ ಚಿನ್ನದ ನಾಣ್ಯಗಳನ್ನು ತಾನೇ ದೋಚಿ ಕಳ್ಳತನವನ್ನು ಧರ್ಮಬುದ್ದಿಯ ಮೇಲೆ ಹೊರಿಸಿ. ಇದಕ್ಕೆ ವಟವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ ಅವನಿಂದ ಧರ್ಮಬುದ್ಧಿಯೇ ಚಿನ್ನದ ನಾಣ್ಯಗಳನ್ನು ಕದ್ದನೆಂದು ಸುಳ್ಳನ್ನು ಬಲವಂತದಿಂದ ಹೇಳಿಸುತ್ತಾನೆ. ಧರ್ಮಬುದ್ಧಿಯು ಇಲ್ಲೇನೋ ಮೋಸವಿದೆ ಎಂದು ಅನುಮಾನಗೊಂಡು ಮರದ ಬಳಿ ಪರೀಕ್ಷಿಸಿ ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯ ಮನೋಭಾವದಂತೆ ಸುಳ್ಳು ಹೇಳಿದ್ದಾಗಿ,ಚಿನ್ನದ ನಾಣ್ಯಗಳನ್ನು ತಾನೇ ತೆಗೆದುಕೊಂಡುದ್ದಾಗಿಯೂ ತಿಳಿಸಿ. ಈಗ ಆ ಚಿನ್ನದ ನಾಣ್ಯಗಳಿಗೆ ಹಾವು ಸುತ್ತುಕೊಂಡಿದೆ. ಎಂದು ಹೇಳಿ,ಚಿನ್ನದ ನಾಣ್ಯಗಳನ್ನು ತೆಗೆಯಲು ಮರದ ಪೊಟರೆಗೆ ಹುಲ್ಲುಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ. ಪೊಟರೆಗೆ ಹೊಗೆ ತುಂಬಿ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಉಸಿರುಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೆ ತಿಳಿಯುತ್ತದೆ.

# ಗದ್ಯಪಾಠ – 8 ಸುಕುಮಾರಸ್ವಾಮಿಯ ಕತೆ
# ಶಿವಕೋಟ್ಯಾಚಾರ್ಯ

## ಲೇಖಕರಪರಿಚಯ : ಶಿವಕೋಟ್ಯಾಚಾರ್ಯ

ಶಿವಕೋಟ್ಯಾಚಾರ್ಯ ಕ್ರಿ. ಶ. ಸುಮಾರ 10 ನೆಯ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕೋಗಳಿ ನಾಡಿನಲ್ಲಿ ಜನಿಸಿದನು. ಈತನು ಕನ್ನಡದ ಪ್ರಥಮ ಗದ್ಯಕೃತಿ 'ವಡ್ಡಾರಾಧನೆ'ಯ ಕರ್ತೃ. ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ 19 ಕಥೆಗಳಿವೆ

## ಒಂದು ವಾಕ್ಯದಲ್ಲಿ ಉತ್ತರಿಸಿ

1. ಸುಕುಮಾರಸ್ವಾಮಿಯ ತಂದೆತಾಯಿಯಗಳ ಹೆಸರೇನು?(ಜೂನ್ 2019)

ಸುಕುಮಾರಸ್ವಾಮಿಯ ತಂದೆ ಸೂರದತ್ತ, ತಾಯಿ ಯಶೋಭದ್ರೆ.

2. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?(ಮಾರ್ಚ್ 2019)

ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.

3. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?

ನೈಮಿತ್ತಿಕನು ಸುಕುಮಾರಸ್ವಾಮಿಯ ಕುರಿತು "ಎಂದು ಈತನು ಋಷಿಗಳನ್ನು ನೋಡುತ್ತಾನೋ ಅಂದು ತಪಸ್ಸಿಗೆ ಹೋಗುತ್ತಾನೆ ಎಂದುಹೇಳಿದನು.

4. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?(ಮಾರ್ಚ್ 2018)

ಯಶೋಭದ್ರೆಯು ರತ್ನ ಕಂಬಳಿಗಳನ್ನು ತನ್ನ ಮೂವತ್ತೆರಡು ಸೊಸೆಯಂದಿರಿಗೆ ಕೊಟ್ಟಳು.

5. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು?

ಅರಸ ವೃಷಭಾಂಕನ ಉಂಗುರವು ಮಜ್ಜನ (ಸ್ನಾನ) ಮಾಡುವ ಸಮಯದಲ್ಲಿ ಕೆಳಕ್ಕೆ ಬಿದ್ದಿತು.

## ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?(ಜೂನ್ 2019)

ಸುಕುಮಾರಸ್ವಾಮಿಯು ತಾರುಣ್ಯವನ್ನು ಪಡೆದು ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾದನು. ಅವನಿಗೆ ಮೂವತ್ತೆರಡು ಲತಾಗೃಹಗಳೂ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ ,ವಿಲಾಸ, ವಿಭ್ರಮಗಳಿಂದ ಕೂಡಿದ ದೇವತಾಸ್ತ್ರೀಯರನ್ನು ಹೋಲುವ ಮೂವತ್ತೆರಡು ಮಂದಿ ದಿವ್ಯರಾದ ಸ್ತ್ರೀಯರೂ ಇದ್ದರು, ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳು ಎಂಬಿವೆಲ್ಲವುಗಳನ್ನು ಹೊಂದಿದ್ದ ಸುಕುಮಾರ ಸ್ವಾಮಿ ಎಲ್ಲಾ ರೀತಿಯ ಸುಖಗಳನ್ನು ಅನುಭವಿಸುತ್ತಿದ್ದನು.

2. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?

ಒಮ್ಮೆ ಒಬ್ಬ ವರ್ತಕನು ಲಕ್ಷ ದಿನಾರ(ಚಿನ್ನದ ನಾಣ್ಯ)ಗಳ ಬೆಲೆಬಾಳುವ ರತ್ನಗಂಬಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದುಕೊಂಡು ಬಂದಿದ್ದಾಗ ಆ ಪಟ್ಟಣವನ್ನಾಳುವ ವೃಷಭಾಂಕನೆಂಬ ರಾಜ ಮತ್ತು ಮಹಾರಾಣಿ ಅವುಗಳ ಬೆಲೆ ಹೆಚ್ಚಾಯಿತೆಂದು ಕ್ರಯಕ್ಕೆ ಕೊಳ್ಳಲಿಲ್ಲ.ಆದರೆ ಸುಕುಮಾರ ಸ್ವಾಮಿಯ ತಾಯಿ ಅಷ್ಟೂ ಬೆಲೆ ಕೊಟ್ಟು ಖರೀದಿಸಿ ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ಸೊಸೆಯಂದಿರಿಗೆ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು.ಈ ಸಂಗತಿಯನ್ನು ತಿಳಿದು ರಾಜನು ಆಶ್ಚರ್ಯಪಟ್ಟನು.

3. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?(ಮಾರ್ಚ್ 2018, 2019)

ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಆಗಮಿಸಿದಾಗ,ಸ್ವಜನರೂ ಸೇವಕರೂ ಬಿಳಿಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆ ಕಾಳುಗಳು ಸುಕುಮಾರಸ್ವಾಮಿ ಕುಳಿತಿದ್ದ ಆಸನದಲ್ಲಿ ಒತ್ತುತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿ ಸುತ್ತಿದ್ದುದನ್ನೂ ದೀಪ ನೋಡಿದಾಗ ಅವನ ಕಣ್ಣೀರು ಸುರಿಯುತ್ತಿತ್ತು. ಅಲ್ಲದೆ ಊಟ ಮಾಡುವಾಗ ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಾ ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದು ಭಾವಿಸಿದನು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್"

ಆಯ್ಕೆ:– ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಸುಕುಮಾರಸ್ವಾಮಿ ಕಥೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :–ಸುಕುಮಾರಸ್ವಾಮಿಯ ಭವಿಷ್ಯವನ್ನು ಯಶೋಭದ್ರೆಗೆ ಹೇಳುವ ಸಂದರ್ಭದಲ್ಲಿ ಜೋಯಿಸರು ಹೇಳುತ್ತಾರೆ. ಒಂದು ದಿನ ಅರಮನೆಗೆ ಬಂದ ಒಬ್ಬ ಜೋಯಿಸನು " ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಎಂದು ಭವಿಷ್ಯ ನುಡಿದುದನ್ನು ಕೇಳಿದ ಯಶೋಭದ್ರೆ ತನ್ನಮನೆಗೆ ಪ್ರವೇಶಿಸದಂತೆ ಕಾವಲಿಟ್ಟಳು.

ಸ್ವಾರಸ್ಯ :– ಇಲ್ಲಿ ವಿಧಿಯನ್ನು ಯಾರಿಂದಲು ಬದಲಾಯಿಸಲು ಸಾಧ್ಯವಿಲ್ಲ ಎಂಬುದು ಸತ್ಯವಾದರೂ ಸುಕುಮಾರಸ್ವಾಮಿ ವೈರಾಗ್ಯ ಹೊಂದುವುದನ್ನು ತಡೆಯಲು ಯಶೋಭದ್ರೆ ಮಾಡುವ ಪ್ರಯತ್ನ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

2. "ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"

ಆಯ್ಕೆ:– ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ "ಸುಕುಮಾರಸ್ವಾಮಿ ಕಥೆ" ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ರಾಜ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆಬಂದು "ಸುಕುಮಾರನು ಎಲ್ಲಿದ್ದಾನೆ ?" ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ "ಸ್ವಾಮಿ, ಅವನು ಬಹಳಸಾಧು, ನೀವು ಬಂದುದನ್ನು ಅವನು ತಿಳಿದಿಲ್ಲ. ಉಪ್ಪರಿಗೆಯ ಮೇಲೆ ಇದ್ದಾನೆ' ಎಂದು ಯಶೋಭದ್ರೆ ಸುಕುಮಾರನಲ್ಲಿಗೆ ಹೋಗಿ "ಮಗನೇ , ರಾಜರು ಬಂದಿದ್ದಾರೆ ಬಾ, ಹೋಗೋಣ" ಎಂದಳು. ಆಗ ಸುಕುಮಾರನು "ರಾಜರೆಂದರೆ ಯಾರು?" ಎಂದು ಕೇಳಲು, ತಾಯಿಯು "ನಮ್ಮನ್ನು ಆಳುವವರು" ಎಂದು ಹೇಳಿದ ಸಂದರ್ಭದಲ್ಲಿ ಸುಕುಮಾರನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಹೊರಗಿನ ಪ್ರಪಂಚದ ಅರಿವೇ ಇಲ್ಲದ ಸುಕುಮಾರನು ತನ್ನ ಮನೆಯೇ ಅರಮನೆ, ನಾವೇ ಆಳುವವರೆಂದು ಭಾವಿಸಿದ್ದ ಸುಕುಮಾರಸ್ವಾಮಿಯು ನಮ್ಮನ್ನು ಆಳುವವರೂ ಇದ್ದಾರೆಯೇ! ಎಂದು ವಿಸ್ಮಯಪಡುವುದು ಇಲ್ಲಿ ಸ್ವಾರಸ್ಯಕರವಾಗಿದೆ.

3. ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ"

ಆಯ್ಕೆ:– ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಸುಕುಮಾರಸ್ವಾಮಿ ಕಥೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಆಹಾರವನ್ನು ಊಟಮಾಡುತ್ತಿದ್ದ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳಿದ್ದಾರೆ. ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು, ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ಭಾವಿಸಿಕೊಂಡನು.

ಸ್ವಾರಸ್ಯ :– ಇಲ್ಲಿ ಸುಕುಮಾರಸ್ವಾಮಿ ವೈಭವದ ಉತ್ತುಂಗ ಸ್ಥಿತಿ ಮತ್ತು ಆತನ ಸುಕೋಮಲತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

4. "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"

ಆಯ್ಕೆ:– ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಸುಕುಮಾರಸ್ವಾಮಿ ಕಥೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:–ಸುಕುಮಾರನ ತಾಯಿಯಮೂಲಕ ಆತನವೈಭವ ಗುಣ– ನಡತೆಗಳನ್ನೂ ಆತನು ಅನುಭವಿಸುತ್ತಿದ್ದ ಸುಖಭೋಗಗಳನ್ನೂ ಕೇಳಿದ ಕೂಡಲೇ ಸ್ವತಃ ರಾಜನೇ "ಈತನ ಒಂದು ಕ್ಷಣದ ಸುಖ–ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ ? ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ "ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ'' ಎಂದು ಸಂತಸಗೊಂಡ ಸಂದರ್ಭದಲ್ಲಿ ಅರಸನು ಅವನಿಗೆ "ಅವಂತಿ ಸುಕುಮಾರ'' ಎಂದು ಹೆಸರನ್ನಿಟ್ಟನು. ಎಂಬಲ್ಲಿ ಈ ಮಾತುಬಂದಿದೆ.

ಸ್ವಾರಸ್ಯ :–ಸ್ವತಃ ರಾಜನೇ ಸುಕುಮಾರಸ್ವಾಮಿಯ ವೈಭವವನ್ನು ಮೆಚ್ಚಿ ಈತನ ವೈಭವದ ಮುಂದೆ ತನ್ನ ವೈಭವ ಏನೇನೂ ಅಲ್ಲ ಎಂದು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರಿಟ್ಟಿದ್ದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

## ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1) ಸುಕುಮಾರ ಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಆವಂತಿ ನಾಡಿನಲ್ಲಿ ಸೂರದತ್ತ ಮತ್ತು ಯಶೋಭದ್ರೆ ದಂಪತಿಗಳ ಮಗನಾಗಿ ಸುಕುಮಾರಸ್ವಾಮಿಯು ಹುಟ್ಟಿದನು. ಸೂರದತ್ತನು ಮಗನಿಗೆ ಸೆಟ್ಟಿಪಟ್ಟವನ್ನು ಕಟ್ಟಿ ತಪಸ್ಸಿಗೆ ಹೋದನು. ಸುಂದರ ಯುವಕ ಸುಕುಮಾರಸ್ವಾಮಿ 32 ಸ್ತ್ರೀಯರೊಡನೆ, ನೃತ್ಯಾಂಗನೆಯರೊಡನೆ, 32 ಕೋಟಿ ಚಿನ್ನದ ನಾಣ್ಯಗಳ, ಪಂಚರತ್ನಗಳೊಡನೆ ಸುಖಜೀವನವನ್ನು ನಡೆಸುತ್ತಿದ್ದನು. ಜೋಯಿಸನೊಬ್ಬನು"ಈತನು, ಋಷಿಗಳ ದರ್ಶನವಾದಾಗ ತಪಸ್ಸಿಗೆ ಹೋಗುವನು" ಎಂದು ಭವಿಷ್ಯ ನುಡಿಯುತ್ತಾನೆ. ಕೆಲಕಾಲಾನಂತರ ಸುಕುಮಾರಸ್ವಾಮಿಯ ತಾಯಿ ಉಜ್ಜೇನಿ ಅರಸನೇ ಕೊಳ್ಳಲಾಗದ ಲಕ್ಷದಿನಾರುಗಳ ಸರ್ವ ರತ್ನಗಂಬಳಿಗಳನ್ನು ಕೊಂಡುಕೊಂಡು, 32 ತುಂಡುಮಾಡಿ, ತನ್ನ 32 ಜನ ಸೊಸೆಯಂದಿರಿಗೆ ಕೊಟ್ಟಳು. ಅವರು ತಮ್ಮ ಪಾದರಕ್ಷೆಗೆ ಹಾಕಿಕೊಂಡರು .ಇದನ್ನು ಕೇಳೀ ತಿಳಿದ ಉಜ್ಜೈನಿ ಅರಸ ವೃಷಭಾಂಕನು ಈ ವೈಭವವನ್ನು ನೋಡಲು ಅವರ ಮನೆಗೆ ಬಂದನು. ಸುಕುಮಾರಸ್ವಾಮಿಯೂ ರಾಜನೂ ಸುಪ್ಪತ್ತಿಗೆಯಲ್ಲಿ ಒಟ್ಟಿಗೆ ಕುಳಿತುಕೊಂಡರು. ಪರಿಜನರು ಮಂತ್ರಾಕ್ಷತೆಯನ್ನು ಹಾಕಿದರು. ಆಗ ಸುಕುಮಾರಸ್ವಾಮಿಯು ಸೊಂಟ ಅಲುಗಾಡಿಸುತ್ತಿದ್ದನು, ದೀಪದ ಬೆಳಕಿಗೆ ಕಣ್ಣೀರು ಸುರಿಸುತ್ತಿದ್ದನು. ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗಿ, ಅರ್ಧ ಆಹಾರವನ್ನು ಉಗುಳುತ್ತಿದ್ದನು. ಇದನ್ನು ನೋಡಿ ಯಾವುದೋ ವ್ಯಾಧಿ ಇರಬೇಕೆಂದು ಭಾವಿಸಿದ ಅರಸನು ಅವನ ತಾಯಿಗೆ "ಏಕೆ ಔಷಧವನ್ನು ಮಾಡಿಸಿಲ್ಲ" ಎಂದು ಕೇಳಿದನು. ಆಗ ಅವನ ತಾಯಿ ಇದು ವ್ಯಾಧಿಯಲ್ಲ. ಬಿಳಿ ಸಾಸುವೆಯು ಮೈಗೆ ಒತ್ತಿದ್ದರಿಂದ ಸೈರಿಸದೆ ಸೊಂಟ ಅಲುಗಾಡಿಸಿದನು. ಯಾವಾಗಲೂ ಮಾಣಿಕ್ಯದ ಬೆಳಕಿನಲ್ಲೇ ಇರುವುದರಿಂದ ದೀಪದ ಬೆಳಕನ್ನು ನೋಡಿದ್ದರಿಂದ ಕಣ್ಣೀರು ಸುರಿಯಿತು. ನಿಮಗಾಗಿ ಸುವಾಸಿತ ಅಕ್ಕಿಯೊಡನೆಬೇರೆ ಬೇರೆ ಅಕ್ಕಿಯನ್ನು ಬೆರೆಸಿದ ಅನ್ನವನ್ನು ನೀಡಿದಾಗ ಸುವಾಸಿತ ಅನ್ನವನ್ನು ಮಾತ್ರ ನುಂಗಿ, ಬೇರೆ ಅಕ್ಕಿಯನ್ನು ಉಗುಳಿದನು ಎಂದು ಹೇಳಿದಳು. ಈ ಮಾತನ್ನು ಕೇಳಿದ ಅರಸನು ಸುಕುಮಾರ ಸ್ವಾಮಿಯ ಕ್ಷಣಮಾತ್ರದ ಸುಖಬೋಗಗಳಿಗೆ ನಮ್ಮ ಎಲ್ಲಕಾಲದ ಸಕಲ ಸುಖ ಭೋಗಗಳು ಸಮವಲ್ಲ" ಎಂದು ಹೇಳಿ. ಅವನಿಗೆ 'ಅವಂತಿ ಸುಕುಮಾರ'ಎಂದು ಹೆಸರಿಟ್ಟನು.

2) ಸುಕುಮಾರ ಎಂಬ ಹೆಸರು ಸುಕುಮಾರ ಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ ವಿವರಿಸಿ?

'ಸುಕುಮಾರ' ಎಂಬುದಕ್ಕೆ ಕೋಮಲವಾದ ಶರೀರವಳ್ಳವನು ಒಳ್ಳೆಯ ಮಗ; ಸದಾಸುಖ ಭೋಗಗಳನ್ನು ಅನುಭವಿಸುವವನು ಎಂಬ ಅನ್ವರ್ಥಗಳು ಇವೆ. ಈ ಕತೆಯ ನಾಯಕನಾದ ಸುಕುಮಾರನು ಸಹ ಈ ಅನ್ವರ್ಥ ನಾಮಗಳಿಗೆ ಪೂರಕವಾದ ಜೀವನವನ್ನು ನಡೆಸಿದವನು. ಇವನು ತಂದೆ ತಾಯಿರಿಗೆ ಒಳ್ಳೆಯ ಮಗನಾಗಿದ್ದನು. ಇವನ ಸುಖ ಭೋಗ ಹೇಗಿತ್ತು ಅಂದರೆ; ಸುಕುಮಾರಸ್ವಾಮಿ 32 ಸ್ತ್ರೀಯರೊಡನೆ, ನೃತ್ಯಾಂಗನೆಯರೊಡನೆ, 32 ಕೋಟಿ ಚಿನ್ನದ ನಾಣ್ಯಗಳ, ಪಂಚರತ್ನಗಳೊಡನೆ ಸುಖಜೀವನವನ್ನು ನಡೆಸುತ್ತಿದ್ದನು. ಲಕ್ಷದಿನಾರುಗಳ ಸರ್ವ ರತ್ನಗಂಬಳಿಗಳನ್ನು ಕೊಂಡುಕೊಂಡು, 32 ತುಂಡು ಮಾಡಿ,ತನ್ನ 32 ಜನ ಸೊಸೆಯಂದಿರಿಗೆಕೊಟ್ಟಳು. ಅವರು ತಮ್ಮ ಪಾದರಕ್ಷೆಗೆ ಹಾಕಿಕೊಂಡರು .ಇದನ್ನು ಕೇಳೀ ತಿಳಿದ ಉಜ್ಜೈನಿ ಅರಸ ವೃಷಭಾಂಕನು ಈ ವೈಭವವನ್ನು ನೋಡಲು ಅವರ ಮನೆಗೆ ಬಂದನು. ಸುಕುಮಾರಸ್ವಾಮಿಯೂ ರಾಜನೂ ಸುಪ್ಪತ್ತಿಗೆಯಲ್ಲಿ ಒಟ್ಟಿಗೆ ಕುಳಿತುಕೊಂಡರು. ಪುರಜನರು ಮಂತ್ರಾಕ್ಷತೆಯನ್ನು ಹಾಕಿದರು. ಆಗ ಸುಕುಮಾರಸ್ವಾಮಿಯು ಸೊಂಟ ಅಲುಗಾಡಿಸುತ್ತಿದ್ದನು,ದೀಪದ ಬೆಳಕಿಗೆ ಕಣಣೀರು ಸುರಿಸುತ್ತಿದ್ದನು. ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗಿ, ಅರ್ಧ ಆಹಾರವನ್ನು ಉಗುಳುತ್ತಿದ್ದನು ಮುತ್ತು ರತ್ನಗಳ ಭಂಡಾರವೇ ನೀರು ಹೋಗುವ ರಂದ್ರದಲ್ಲಿ ಬಿದ್ದಿದ್ದವು . "ಸುಕುಮಾರ ಸ್ವಾಮಿಯ ಕ್ಷಣಮಾತ್ರದ ಸುಖಭೋಗಗಳಿಗೆ ನಮ್ಮ ಎಲ್ಲ ಕಾಲದ ಸಕಲ ಸುಖ ಭೋಗಗಳು ಸಮವಲ್ಲ" ಎಂದು ಹೇಳಿ.ಅವನಿಗೆ "ಆವಂತಿ ಸುಕುಮಾರ" ಎಂದು ಹೆಸರಿಟ್ಟನು.

## ಪದ್ಯ ಭಾಗ

### ಪದ್ಯ ಪಾಠ–೧ ಸಂಕಲ್ಪಗೀತೆ–

### ಜಿ ಎಸ್ ಶಿವರುದ್ರಪ್ಪ

ಕವಿ ಪರಿಚಯ: ಜಿ ಎಸ್ ಶಿವರುದ್ರಪ್ಪ

ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪರವರು ಕ್ರಿ.ಶ.1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಮೈಸೂರು, ಉಸ್ಮಾನಿಯಾ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಇವರು ಸಾಮಗಾನ, ಚೆಲುವು-ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. 'ಕಾವ್ಯಾರ್ಥಚಿಂತನೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪುರಸ್ಕಾರ, ಬೆಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳ ಗೌರವ ಡಿ.ಲಿಟ್.ಪದವಿ, ರಾಷ್ಟ್ರಕವಿ,ಪಂಪ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

## ಒಂದು ವಾಕ್ಯದಲ್ಲಿ ಉತ್ತರಿಸಿ

1. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?

ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.

2. ನದೀಜಲಗಳು ಏನಾಗಿವೆ?

ನದೀಜಲಗಳು ಕಲುಷಿತವಾಗಿವೆ.

3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?

ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

4. ಕಾಡು ಮೇಡುಗಳ ಸ್ಥಿತಿ ಹೇಗಿದೆ?

ಕಾಡು ಮೇಡುಗಳು ಬರಡಾಗಿವೆ.

5. ಯಾವ ಎಚ್ಚರದೊಳು ಬದುಕಬೇಕಿದೆ?

ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ

## ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನ ದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.

2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?

ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ.ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.

3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?

ಭಾಷೆ, ಜಾತಿ, ಮತ ಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

4. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

1. "ಪ್ರೀತಿಯ ಹಣತೆಯ ಹಚ್ಚೋಣ."

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು'' ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ'' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :- ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

2. "ಮುಂಗಾರಿನ ಮಳೆಯಾಗೋಣ."

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು'' ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ'' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :- ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

3. "ಹೊಸ ಭರವಸೆಗಳ ಕಟ್ಟೋಣ."

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು'' ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ'' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:-ಕವಿಗಳು"ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :–"ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು"ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**4. "ಹೊಸ ಎಚ್ಚರದೊಳು ಬದುಕೋಣ."**

ಆಯ್ಕೆ :–ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು'' ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ'' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :– ಕವಿಗಳು "ಜೀವನದಲ್ಲಿಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು"ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

## ಕೆಳಗಿನ ಪದ್ಯದಲ್ಲಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸಬರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡ ಗೋಡೆಗಳ
ಕೆಡುವುತ ಸೇತುವೆಯಾಗೋಣ.

ಕವಿ ಜಿ.ಎಸ್.ಶಿವರುದ್ರಪ್ಪನವರು ಬರೆದಿರುವ 'ಸಂಕಲ್ಪಗೀತೆ' ಪದ್ಯಭಾಗದಲ್ಲಿ; ನಾವು ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುವ ಧೃಢಸಂಕಲ್ಪ ಹೊಂದಬೇಕೆಂದು ಹೇಳಿದ್ದಾರೆ. ಶಾಶ್ವತವಲ್ಲದ ಈ ಬದುಕು ಬಿದ್ದು ಹೋಗುವಂತದ್ದೇ, ನಾವು ಪ್ರೀತಿ ಪ್ರೇಮ, ನಂಬಿಕೆ ವಿಶ್ವಾಸಗಳಿಂದ ಬಿದ್ದು ಹೋಗಿರುವ ಈ ಬದುಕನ್ನು ಮೌಲ್ಯಾಧಾರಿತವಾಗಿ ಹೊಸ ಬರವಸೆಗಳಿಂದ ಕಟ್ಟೋಣ. ಜಾತಿ ಮತ ಪಂಥಗಳಿಂದ ಅಡ್ಡವಾಗಿರುವ ಗೋಡೆಯನ್ನು ಕೆಡವಿ, ಒಡೆದ ಮನಸ್ಸುಗಳ ನಡುವೆ ಸೇತುವೆಯನ್ನು ಕಟ್ಟಬೇಕಿದೆ ಎಂದು ಕವಿ ಆಶಿಸುತ್ತಾರೆ.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣಳು
ನಾಳಿನ ಕನಸನು ಬಿತ್ತೋಣ.

ಕವಿ ಜಿ.ಎಸ್.ಶಿವರುದ್ರಪ್ಪನವರು ಬರೆದಿರುವ 'ಸಂಕಲ್ಪಗೀತೆ' ಪದ್ಯಭಾಗದಲ್ಲಿ; ನಾವು ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುವ ಧೃಢಸಂಕಲ್ಪ ಹೊಂದಬೇಕೆಂದು ಹೇಳಿದ್ದಾರೆ. ನಾವು ಮತ ಧರ್ಮಗಳ ಹೆಸರಿನಲ್ಲಿ ಕುರುಡಾಗಬಾರದು. ಎಲ್ಲಾ ಮತ ಧರ್ಮಗಳು ಮಾನವನ ಏಳಿಗೆಗೆ ಇರುವ ದಾರಿದೀಪಗಳು. ಎಂಬ ಭಾವನೆಯಿರಬೇಕೇ ಹೊರತು ಧರ್ಮಾಂಧತೆಯಲ್ಲ. ಭಯ ಸಂಶಯಗಳಿಂದ ಆತಂಕ ತುಂಬಿದ ಜನರ ಕಣ್ಣುಗಳಲ್ಲಿ ಹೊಸ ಭರವಸೆಯ ಬೆಳಕನ್ನು ಮೂಡಿಸಿ ಹೊಸ ಬಗೆಯ ಕನಸನ್ನು ಕಾಣಲು ನೇರವಾಗೋಣವೆಂದು ಕವಿ ಆಶಿಸುತ್ತಾರೆ.

## ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣಳು
ನಾಳಿನ ಕನಸನು ಬಿತ್ತೋಣ.

## ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

**1) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ದರಪ್ಪನವರ ಆಶಯವಾಗಿದೆ?(ಮಾರ್ಚ್ 2019)**

" ನಮ್ಮ ಸುತ್ತಲು ತುಂಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲಿ ಮುನ್ನೆಡಸಬೇಕು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಾಗಬೇಕು. ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗಬೇಕು. ಅತ್ಯಾಚಾರ, ಅನಾಚಾರ ಭ್ರಷ್ಟಾಚಾರ, ಅಸ್ಪೃಷ್ಯತೆ, ಅಸಮಾನತೆಗಳಿಂದ ಅಧ:ಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವಂತಾಗಬೇಕು. ಜಾತಿ,ಮತ, ಧರ್ಮಗಳ ಹಾಗೂ ಭಾಷೆಗಳ ಭೇಧಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಿ, ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು.ಎಲ್ಲಾ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚದಲಿ ಬದುಕುವಂತಾಗಬೇಕು. ಭಯ ಹಾಗೂ ಸಂಶಯಗಳಿಂದ ಮುಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಆಗಬೇಕು. ಇವೆಲ್ಲವೂ ಆಗುವಂತೆ ದೃಢಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದು ಕವಿ ಜಿ.ಎಸ್.ಶಿವರುದ್ರಪ್ಪನವರ ಆಶಯವಾಗಿದೆ.

**2) ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ತಿಳಿಸಿ.(ಮಾರ್ಚ್ 2018)**

ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣಮಾಡಬಹುದು. ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನೆಡೆಯುವುದರಿಂದ ಇಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ವನಸಂರಕ್ಷಣೆ ಮಾಡುವುದರಿಂದ ಕಾಡುಗಳು ಹಚ್ಚಹಸಿರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ಹೊಸಭರವಸೆಯನ್ನು ಮೂಡಿಸುವುದರಿಂದ ಸಮಾಜದ ನೈತಿಕ ಅಧ:ಪತನವನ್ನು ತಡೆಯಬಹುದು. ಸಮಾನ

ಮನೋಭಾವನೆಯುಳ್ಳವರಾಗುವುದರಿಂಧ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಬಹುದು. ಎಲ್ಲಾ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲಿ ಬದುಕುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂಧ ಮುಕ್ತರಾಗುವುದರಿಂಧ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ. ಶ್ರೀ ಜಿ.ಎಸ್.ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

# ಪದ್ಯ ಪಾಠ-2 ಹಕ್ಕಿ ಹಾರುತಿದೆ ನೋಡಿದಿರಾ – ದ.ರಾ.ಬೇಂದ್ರೆ

## ಕವಿ ಪರಿಚಯ: ದ.ರಾ.ಬೇಂದ್ರೆ

ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ 1896 ಧಾರವಾಡದಲ್ಲಿ ಜನಿಸಿದರು. ಪ್ರೌಢಶಾಲಾ ಅಧ್ಯಾಪಕರಾಗಿ, ಸೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ. ಧಾರವಾಡದ ಬಾನುಲಿ ಕೇಂದ್ರದ ಸಲಹೆಗಾರರಾಗಿ ಸೇವೆ ಸಲ್ಲಿಸಿದ ಇವರು ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಅರಳು-ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಕುತಂತಿ ಕವನಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

## ಒಂದು ವಾಕ್ಯದಲ್ಲಿ ಉತ್ತರಿಸಿ

1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
ಹಕ್ಕಿಯು ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟಿಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ ಹಾರುತ್ತಿದೆ.

2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
ಹಕ್ಕಿಯ ಗರಿಯಲ್ಲಿಕರಿ, ಬಿಳಿ ಕೆಂಪು, ಹೊನ್ನಿನ ಹೊಳೆಯುವ ಬಣ್ಣಗಳಿವೆ.

3. ಹಕ್ಕಿಯ ಕಣ್ಣುಗಳು ಯಾವುವು?
ಸೂರ್ಯ ಚಂದ್ರರು ಹಕ್ಕಿಯ ಕಣುಗ್ಗಳು.

4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

5. ಹಕ್ಕಿ ಯಾರನ್ನು ಹರಸಿದೆ?
ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

6. ಹಕ್ಕಿಯು ಯಾವುದರ ಸಂಕೇತವಾಗಿದೆ?(ಜೂನ್ 2019)
ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

7. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?
ಹಕ್ಕಿಯ ಚುಂಚಗಳು ದಿಗ್ಮಂಡಲಗಳ ಆಚೆ ಚಾಚಿವೆ

## ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲ ಮೇಘ ಮಂಡಲ – ಸಮಬಣ್ಣ ಎಂದು ಹೇಳಿ ಕಾಲದ ದೈತ್ಯತೆಯನ್ನು ಸಂಕೇತಿಸುವ ಕವಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ. ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿ ಬೇಂದ್ರೆ ವರ್ಣಿಸುತ್ತಾರೆ.

2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ

3. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ?
ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವನ್ನು ಹಳ್ಳಿಗೆ ಹೋಲಿಸಿ, ಕಾಲದ ಹಕ್ಕಿ ಆ ಹಳ್ಳಿಯ (ಶುಕ್ರಗ್ರಹದ) ಮೇರೆಯನ್ನು ದಾಟಿ ಹಾರಿಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಹಕ್ಕಿ(ಇಲ್ಲಿ ಭೌತಿಕವಾಗಿ ಮಾನವ ರೂಪದ ಕಾಲ) ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ. ಎಂದು ಕವಿಗಳು ವರ್ಣಿಸಿದ್ದಾರೆ.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

1. “ರೆಕ್ಕೆಗಳೆರಡೂ ಪಕ್ಕದಲ್ಲುಂಟು”

ಆಯ್ಕೆ :-ಈ ವಾಕ್ಯವನ್ನು “ಅಂಬಿಕಾತನಯದತ್ತ” ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ “ಗರಿ” ಕವನ ಸಂಕಲನದಿಂದ ಆಯ್ದ “ಹಕ್ಕಿ ಹಾರುತಿದೆ ನೋಡಿದಿರಾ” ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ಕವಿ ದ.ರಾ.ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯ ರೂಪವನ್ನು ತಿಳಿಸುತ್ತಾ ಅದರ ಎರಡೂ ಕಡೆ ಕೆನ್ನನ ಮತ್ತು ಹೊನ್ನನೆ ಬಣ್ಣದ ಎರಡು ರೆಕ್ಕೆಗಳಿವೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ :- ಕಾಲದ ಹಕ್ಕಿಗೆ ಸೂರ್ಯೋದಯ ಮತ್ತು ಸೂರ್ಯಾಸ್ತ ಎಂಬ ಎರಡು ರೆಕ್ಕೆಗಳಿವೆ ಎಂಬುದು ಕಾಲದ ಚಲನೆಗೆ ಸೂಕ್ತವಾದ ಕಲ್ಪನೆಯಾಗಿದ್ದು ಸ್ವಾರಸ್ಯಪೂರ್ಣವಾಗಿದೆ.

2. “ಸಾರ್ವಭೌಮರಾ ನೆತ್ತಿಯ ಕುಕ್ಕಿ”

ಆಯ್ಕೆ :-ಈ ವಾಕ್ಯವನ್ನು “ಅಂಬಿಕಾತನಯದತ್ತ” ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು

ರಚಿಸಿರುವ "ಗರಿ" ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

3. "ಬಲ್ಲರು ಯಾರಾ ಹಾಕಿದ ಹೊಂಚ"

ಆಯ್ಕೆ :–ಈ ವಾಕ್ಯವನ್ನು "ಅಂಬಿಕಾತನಯದತ್ತ'' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆಅವರು ರಚಿಸಿರುವ "ಗರಿ"ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ.ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲ ಪಕ್ಷಿಯು ಹಾರುತ್ತಾ ದಿಗ್ಮಂಡಲಗಳ ಅಂಚಿನ ಆಚೆಗೂ ತನ್ನ ಕೊಕ್ಕನ್ನು ಚಾಚಿ ಇಡೀ ಬ್ರಹ್ಮಾಂಡಗಳನ್ನು ಒಡೆಯುವುದಕ್ಕೆಂಬಂತೆ ಹಾರುತ್ತಿದೆ.ಅದರ ಸಂಚನ್ನು ಬಲ್ಲವರಾರು! ಎಂದು ವಿಸ್ಮಯದಿಂದ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲದ ವೇಗ ವಿಸ್ತಾರವನ್ನೂ ಅದು ಉಂಟು ಮಾಡಬಹುದಾದ ಪರಿಣಾಮವನ್ನೂ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

4. "ಹೊಸಗಾಲದ ಹಸುಮಕ್ಕಳ ಹರಸಿ"(ಜೂನ್ 2019)

ಆಯ್ಕೆ :–ಈ ವಾಕ್ಯವನ್ನು "ಅಂಬಿಕಾತನಯದತ್ತ'' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

5. "ಮಂಗಳ ಲೋಕದ ಅಂಗಳಕೇರಿ"

ಆಯ್ಕೆ :–ಈ ವಾಕ್ಯವನ್ನು "ಅಂಬಿಕಾತನಯದತ್ತ'' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ "ಗರಿ'' ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಕವಿ ದ.ರಾ.ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತಾ; ಕಾಲ ಪಕ್ಷಿಯು ನಕ್ಷತ್ರಗಳನ್ನು ಮೀರಿ; ಚಂದ್ರಲೋಕದ ನೀರನ್ನು ಹೀರಿ; ಆಟವಾಡಲು ಹಾರಾಡಲು ಮಂಗಳಲೋಕದ ಅಂಗಳಕ್ಕೇರಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ವೇಗದ ಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಮುಂದುವರೆಯುತ್ತಾ ಚಂದ್ರ, ಮಂಗಳ ಗ್ರಹ ಮುಂತಾದ ಕಾಯಗಳೆಡೆಗೆ ಹಾರುತ್ತಿರುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**ಈ ಕೆಳಗಿನ ಪದ್ಯಭಾಗಗಳಲ್ಲಿರುವ ಮೌಲ್ಯವನ್ನಾಧರಿಸಿ ಭಾವಾರ್ಥ ಬರೆಯಿರಿ:**

ನೀಲಮೇಘಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗೊಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿ ಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಪದ್ಯದಲ್ಲಿ ಕವಿ ದ.ರಾ.ಬೇಂದ್ರೆಯವರು 'ಕಾಲ'ವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ವಿಶೇಷವಾಗಿದೆ.

ಮೇಲಿನ ಪದ್ಯ ಭಾಗದಲ್ಲಿ ಕವಿ ಕಾಲದ ಅಗಾದತೆಯನ್ನು ಹೇಳುತ್ತಾ ಕಾಲವೆಂಬ ಪಕ್ಷಿಗೆ ನೀಲಿಬಣ್ಣದ ದಟ್ಟ ಮೋಡಗಳ ಸಮವಾದ ಬಣ್ಣ ಹೊಂದಿದ್ದು, ಈ ಮೋಡಗಳೇ ಕಾಲಪಕ್ಷಿಯ ರೆಕ್ಕೆಗಳಾಗಿ ಹುಟ್ಟಿಕೊಂಡವೋ ಎಂಬಂತೆ ಕಾಣುತ್ತಿದೆ. ನಕ್ಷತ್ರ ಮಾಲೆಯನ್ನು ಧರಿಸಿ, ಸೂರ್ಯ ಚಂದ್ರರನ್ನೇ ಕಣ್ಣುಗಳಾಗಿ ಮಾಡಿಕೊಂಡು ಹಾರುತ್ತಿರುವ ಕಾಲಪಕ್ಷಿಯನ್ನು ನೋಡಿದಿರಾ? ಎಂದು ಕವಿ ಕಾಲ ಪಕ್ಷಿಯನ್ನು ವರ್ಣಿಸಿದ್ದಾರೆ.

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

ಈ ಪದ್ಯದಲ್ಲಿ ಕವಿ ದ.ರಾ.ಬೇಂದ್ರೆಯವರು 'ಕಾಲ'ವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ವಿಶೇಷವಾಗಿದೆ.ಕವಿ ಇಲ್ಲಿ ಕಾಲದ ಮುಂದೆ ಯಾವುದು ಶಾಶ್ವತವಲ್ಲ; ಎಲ್ಲವೂ ನಶ್ವರ ಎಂಬುದನ್ನು ಹೇಳಿದ್ದಾರೆ. ಎಷ್ಟೋ ರಾಜ್ಯ, ಸಾಮ್ರಾಜ್ಯಗಳನ್ನು ಕಾಲಪಕ್ಷಿಯು ತೆನೆಯಿಂದ

ಕಾಳನ್ನು ಬೇರ್ಪಡಿಸಿ ತಿನ್ನುವಂತೆ ತಿಂದಿದೆ, ಅಲ್ಲದೆ ಮಂಡಲಗಳು ಕೋಟೆ ಕೊತ್ತಲಗಳನ್ನು ಮುಕ್ಕಿದೆ. ದೊಡ್ಡ ದೊಡ್ಡ ಭೂಭಾಗಗಳನ್ನು ತೇಲಿಸಿ ಮುಳುಗಿಸಿ ಎಷ್ಟೋ ಸಾರ್ವಭೌಮರ ಅಹಂಕಾರವನ್ನು ಇಲ್ಲವಾಗಿಸಿದೆ. ಎಂದು ವರ್ಣಿಸಿದ್ದಾರೆ.

## ಪದ್ಯ ಪೂರ್ಣಗೊಳಿಸಿ (ಕಂಠಪಾಠ ಮಾಡಿ)

ನೀಲಮೇಘಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗೊಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿ ಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

## ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1) ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿದ ಮಾತುಗಳಾವುವು?

* ಕವಿ ಬೇಂದ್ರೆಯವರ ಹಕ್ಕಿ ಹಾರುತಿದೆ ನೋಡಿದಿರಾ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಕವಿ ದ.ರಾ ಬೇಂದ್ರೆಯವರು 'ಹಕ್ಕಿ ಹಾರಿತಿದೆ ನೋಡಿದಿರಾ, ಕವನದಲ್ಲಿ ಚನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ." ರಾತ್ರಿಗಳು ಕಳೆದು ಹಗಲುಗಳು ಬೆಳಗಿ ದಶ ದಿಕ್ಕುಗಳಿಗೂ ಕಣ್ಣು ಮಿಟುಕಿಸುವಷ್ಟು ಸಮಯದಲ್ಲಿ ಕಾಲಪಕ್ಷಿಯು ಗಾವುದ ಗಾವುದ ವೇಗದಲ್ಲಿ ಮುಂದೆ ಸಾಗುತ್ತಿರುತ್ತದೆ. ಕಾಲಪಕ್ಷಿಗೆ ಗತಕಾಲ ಸೂಚಿತ ಕಪ್ಪು ಬಿಳುಪಿನ ಬಣ್ಣದ ಪುಚ್ಚಗಳು, ವರ್ತಮಾನಕಾಲ ಸೂಚಿತ ಬಿಳಿಹೊಳೆ ಬಣ್ಣದ ಗರಿಗಳು. ಭವಿಷ್ಯತ್‌ಕಾಲ ಸೂಚಿತ ಸಂಜೆಯ ಕಾಲದಲ್ಲಿ ಕಾಣುವ ಕೆಂಪು ಹೊಂಬಣ್ಣಗಳ ರೆಕ್ಕೆಗಳು ಇವೆ. ಸಮದೃಷ್ಟಿ ಪೂರಿತ ಬಣ್ಣಗಳಿಂದ ಕೂಡಿದ ನೀಲಮೇಘಮಂಡಲದ ಮುಗಿಲಿಗೆ ರೆಕ್ಕೆಗಳನ್ನು ಚಾಚಿ ನಕ್ಷತ್ರಮಾಲೆಯನ್ನು ಧರಿಸಿ, ಸೂರ್ಯಚಂದ್ರನನ್ನು ಕಣ್ಣಾಗಿಸಿಕೊಂಡು ಕಾಲಪಕ್ಷಿಯು ಹಾರುತ್ತಿದೆ, ಕಾಲಪಕ್ಷಿ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿಸಿ ಫಲಪಡೆದು ಭೂಮಂಡಲದ ಮೇಲಿರುವ ಖಂಡಗಳ ಪ್ರಗತಿ ಮತ್ತು ವಿನಾಶಕ್ಕು ಕಾರಣವಾಗಿದೆ. ಮರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನಯ ಮೆಟ್ಟಿ ನಿಂತಿದೆ. ಯುಗಯುಗಗಳ ಆಗು ಹೋಗುಗಳನ್ನು ಹಿಂದಿಕ್ಕಿ ಹೊಸ ಪರಿವರ್ತನೆಗೆ ಕಾರಣವಾಗಿದೆ. ಹಗಲು ರಾತಿಗಳೆಂಬ ತನ್ನ ರೆಕ್ಕೆಗಳನ್ನು ಬೀಸಿ. ಜೀವಿಗಳಿಗೆ ಚೈತನ್ಯವನ್ನು ನೀಡಿ, ನವಪೀಳಿಗೆಗಳ ಉತ್ತಮ ಭವಿಷ್ಯಕ್ಕಾಗಿ ಶುಭಹಾರೈಸುತ್ತಿದೆ. ಕಾಲಪಕ್ಷಿಯು ಹಾರುತ್ತಾ, ಹಾಡುತ್ತಾ, ಶುಕ್ರಗ್ರಹ ಎಂಬ ಹಳ್ಳಿಯ ಮೇರೆಯನ್ನು ಮೀರಿ ಚಂದ್ರ ಲೋಕದ ನೀರನ್ನು ಹೀರಲಿದೆ. ಮಂಗಳ ಗ್ರಹದ ಅಂಗಳವನ್ನು ಸಹ ಹೀರಲಿದೆ. ಎಂಬ ದಾರ್ಶನಿಕ ಮುನ್ನೋಟ ಈ ನುಡಿಯಲಿ ವ್ಯಕ್ತವಾಗಿದೆ. ಈ ಕಾಲಪಕ್ಷಿಯು ದಿಗ್ಮಂಡಲಗಳ ಹಾಗೂ ವೈಜ್ಞಾನಿಕ ಪ್ರಗತಿಯ ಅಂಚನ್ನು ಮುಟ್ಟಿ, ಅನಂತತೆಯ ಆಚೆಗೂ ತನ್ನ ಚುಂಚವನ್ನು ಚಾಚಿದೆ. ಜಗತ್ತನ್ನೇ ಈ ಕಾಲಪಕ್ಷಿ ಒಡೆಯಲೆಂದು ಹೊಂಚು ಹಾಕಿ ಹಾರುತ್ತಿದೆಯೇ? 'ಬಲ್ಲವರು ಯಾರು?' ಇಂತಹ ಹಕ್ಕಿ ಹಾರುತ್ತಿರುವುದನ್ನು ನೀವು ನೋಡಿದಿರಾ?" ಎಂದು ಕವಿ ಪ್ರಶ್ನಿಸುತ್ತಾರೆ.

# ಪದ್ಯಪಾಠ 3 – ಹಲಗಲಿ ಬೇಡರು
# ( ಜನಪದ ಲಾವಣಿ )

## ಒಂದು ವಾಕ್ಯದಲ್ಲಿ ಉತ್ತರಿಸಿ

1. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
(ಮಾರ್ಚ್ 2018 ಜೂನ್ 2019)

ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಿಬೇಕು ಎಂಬ ಆದೇಶ ಹೊರಡಿಸಿತು.

2. ಹಲಗಲಿಯ ನಾಲ್ವರು ಪ್ರಮುಖರು ಯಾರು?

ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.

3. ಹಲಗಲಿ ಗುರುತು ಉಳಿಯದಂತಾದುದು ಏಕೆ?

ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.

4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?

ಹಲಗಲಿಯ ಬೇಡರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.

5. ಹಲಗಲಿ ಗ್ರಾಮ ಎಲ್ಲಿದೆ?

ಹಲಗಲಿ ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ

## ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು.ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಿಟಿಷ್ ಸಿಪಾಯಿಗಳು ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು.ಇದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

2. ಹಲಗಲಿಗೆ ದಂಡು ಬರಲು ಕಾರಣವೇನು? (ಮಾರ್ಚ್ 2018, )

ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ

ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗು ಬಡಿಯಲು ದಂಡನ್ನು ಕರೆಯಿಸಿದರು.

3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?

ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬಿಟ್ರಿಷರ ದಂಡು ಬಂದಿತು.ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು.ಎದುರಿಗೆ ಸಿಕ್ಕ ಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ? (ಜೂನ್ 2019)

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ.ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

1. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ" (ಜೂನ್ 2019)

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು'' ಕೃತಿಯಿಂದ ಆಯ್ದ "ಹಲಗಲಿಯ ಬೇಡರು'' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– "ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

2. "ಜೀವ ಸತ್ತು ಹೋಗುವುದು ಗೊತ್ತ"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು'' ಕೃತಿಯಿಂದ

ಸಂದರ್ಭ :– ಬಿಟ್ರಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಹಲಗಲಿಯ ಬೇಡರು"ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

3. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು'' ಕೃತಿಯಿಂದ ಆಯ್ದ "ಹಲಗಲಿಯ ಬೇಡರು'' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು'' ಕೃತಿಯಿಂದ ಆಯ್ದ "ಹಲಗಲಿಯ ಬೇಡರು'' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– ಬಿಟ್ರಿಷ್ ಸೈನಿಕರು ಹಲಗಲಿಯನ್ನು ಲೂಟಿಮಾಡಿ, ಬೆಂಕಿ ಹಚ್ಚಿ ನಾಶಗೊಳಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– "ಹಲಗಲಿಯ ಬೇಡರ ಮೇಲಿನ ಬಿಟ್ರಿಷರ ದೌರ್ಜನ್ಯವು ವರ್ಣಿಸಲು ಅಸಾಧ್ಯವಾದುದು" ಎಂದು ಲಾವಣಿಕಾರನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾನೆ.

## ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಹಲಗಲಿ ದಂಗೆಗೆ ಕಾರಣವೇನು ಸರ್ಕಾರ ಅದನ್ನು ಹೇಗೆ ನಿಯಂತ್ರಿಸಿತು?

ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದು

ಹಲಗಲಿಯ ಬೇಡರ ದಂಗೆ ಏಳಲು ಕಾರಣವಾಯಿತು. ನಿಶ್ಯಸ್ತ್ರೀಕರಣ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ದಂಗೆ ಎದ್ದ ಹಲಗಲಿಯ ಬೇಡರನ್ನು ಬ್ರಿಟಿಷರ ದಂಡಿನ ಸಿಪಾಯಿಗಳು ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು.ಆಗ ಹಲಗಲಿಯ ವೀರರೆಲ್ಲರೂ ಬ್ರಿಟಿಷ್ ಸಿಪಾಯಿಗಳ ವಿರುದ್ಧ ಹೋರಾಡಿ ವೀರಮರಣವನ್ನು ಅಪ್ಪಿದರು. ಸಿಪಾಯಿಗಳು ಹಲಗಲಿಯನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಹಚ್ಚಿದ್ದರಿಂದ ಹಲಗಲಿ ಗುರುತು ಸಿಕ್ಕದಂತೆ ಸುಟ್ಟುಹೋಯಿತು.

2) ಹಲಗಲಿ ದಂಗೆಯ ಪರಿಣಾಮವೇನು?

ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದು ಹಲಗಲಿಯ ಬೇಡರ ದಂಗೆ ಏಳಲು ಕಾರಣವಾಯಿತು. ಬ್ರಿಟಿಷರ ದಂಗೆಯನ್ನು ಅಡಗಿಸಲು ಹಲಗಲಿಗೆ ಬಂದಿತ್ತು ಸೈನ್ಯವು ಜನರನ್ನು ಬೆಂಬೆತ್ತು ಕಡಿದು ಹಾಕಿದವು. ಜನರ ಮೇಲೆ ಕರುಣೆ ಇಲ್ಲದಂತೆ ಗುಂಡು ಹಾರಿಸಿದರು. ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ ರಾಮ, ಮೊದಲಾದ ವೀರರು ಹೋರಾಡಿ ವೀರಮರಣವನ್ನು ಹೊಂದಿದರು. ಬ್ರಿಟಿಷರ ಸೈನಿಕರು ಕೊಡಲಿ, ಕೋರೆ, ಕುಡ, ಕಬ್ಬಿಣ,ಮೊಸರು ಬೆಣ್ಣೆ, ಹಾಲು, ಉಪ್ಪು, ಎಣ್ಣೆ.ಅರಿಶಿಣ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ಚರಿಗೆ, ಮಂಗಳಸೂತ್ರ ಎಲ್ಲವನ್ನೂ ಲೂಟಿಮಾಡಿ, ಊರಿಗೆ ಬೆಂಕಿ ಇಟ್ಟು ಬೂದಿ ಮಾಡಿದರು. ಹಲಗಲಿಯು ಗುರುತಿಸಲಾಗದಷ್ಟು ಸಂಪೂರ್ಣನಾಶವಾಯಿತು.

## ಪದ್ಯಪಾಠ 4 .ಕೌರವೇಂದ್ರನ ಕೊಂದೆ ನೀನು – ಕುಮಾರವ್ಯಾಸ

### ಕವಿ ಪರಿಚಯ: ಕುಮಾರವ್ಯಾಸ(ಮಾರ್ಚ್ 2019)

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪನು ಕ್ರಿ.ಶ.1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು. ಆದಿಕವಿ ಪಂಪನ ಅನಂತರ ವ್ಯಾಸರ ಮಹಾಭಾರತದ ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿ ಪಂಡಿತರಿಗೆ ಮಾತ್ರವಲ್ಲದೇ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದ ಕುಮಾರವ್ಯಾಸ. ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ನಾಟ ಭಾರತ ಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ ಐರಾವತ ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ. ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ "ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದಿಗೆ ಪಾತ್ರನಾಗಿದ್ದಾನೆ.

### ಒಂದು ವಾಕ್ಯದಲ್ಲಿ ಉತ್ತರಿಸಿ

1. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?

ಕೃಷ್ಣನು ಕರ್ಣನ ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ ಪೀಠದಲ್ಲಿಕೂರಿಸಿದನು.

2. ಕುಮಾರವ್ಯಾಸನ ಆರಾಧ್ಯದೈವ ಯಾರು?

ಕುಮಾರವ್ಯಾಸನ ಆರಾಧ್ಯ ದೈವ ಗದುಗಿನ ವೀರನಾರಾಯಣ.

3. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು? (ಮಾರ್ಚ್ 2019)

ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

4. ಕುಮಾರವ್ಯಾಸನಿಗಿರುವ ಬಿರುದು ಯಾವುದು?

ಕುಮಾರವ್ಯಾಸನಿಗೆ "ರೂಪಕ ಸಾಮ್ರಾಜ್ಯ ಚಕ್ರವರ್ತಿ'' ಎಂಬ ಬಿರುದು ಇದೆ.

5. ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು?

ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ಕರ್ನಾಟ ಭಾರತ ಕಥಾಮಂಜರಿ ಎಂಬ ಕೃತಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿತು.

### ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ:

1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?

"ಕರ್ಣ ನಿಮಗೂ (ಪಾಂಡವರಿಗೂ) ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಭಿತ್ತಿದನು.

2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ;

ಸುಮ್ಮನೆ ಹೋಗುವುದೆ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು"ಎಂದು ಮನದಲ್ಲಿ ನೊಂದು ಕೊಂಡನು.

4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು.ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ" ಎಂದನು.

5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು.ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

1. "ರವಿಸುತನ ಕಿವಿಯಲಿ ಬಿತ್ತಿದನು ಭಯವ."

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷಣ್ನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

ಸ್ವಾರಸ್ಯ :– "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

2. "ಬಾಯ್ದಂಬುಲಕೆ ಕೈಯಾನುವರೆ."

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷಣ್ನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– "ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

3. "ಜೀಯ ಹಸಾದವೆಂಬುದು ಕಷ್ಟ"

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– "ಕರ್ಣ ನಿನ್ನಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಹಸಾದವೆಂಬುದು ಕಷ್ಟವಾಗುವುದಿಲ್ಲವೇ?"ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

4. "ನಿನ್ನಪದೆಸೆಯ ಬಯುಸುವನಲ್ಲ"

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷಣ್ನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ತನ್ನಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

5. "ಮಾರಿಗೌತಣವಾಯ್ತು ನಾಳಿನ ಭಾರತವು."

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ

"ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷನ್ನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

## ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? (ಮಾರ್ಚ್ 2018 ಜೂನ್ 2019)

"ಕರ್ಣ ನಿಮಗೂ ಯಾದವ ಕೌರವರಿಗೂ ವಂಶದಲ್ಲಿ ಗೌರವದಲ್ಲಿ ಭೇದವಿಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ಮನದಲ್ಲಿ ಅದರ ಅರಿವಿಲ್ಲ. ಎಂದು ಹೇಳುತ್ತ ಕೃಷ್ಣನನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಕಲಿಭೀಮ. ಅರ್ಜುನರು ಜನಿಸಿದರು. ಬಳಿಕ ಐದನೇ ಮಂತ್ರದಲ್ಲಿ ನಕುಲ ಸಹದೇವರು ಹುಟ್ಟಿದರು.ನಿನ್ನನ್ನು ಹಸ್ತಿನಾಪುರ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು ನಿನಗೆ ಎರಡು ವಂಶವೂ ಮರುಮಾತನಾಡದೇ ಸೇವೆಯನ್ನು ಮಾಡುವವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ? ಎಡಭಾಗದಲ್ಲಿ ಕೌರವೇಂದ್ರ ಸಮೂಹ. ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗದ ಯಾದವಾದಿಗಳು, ಮಧ್ಯದಲ್ಲಿ ನೀನು ರಾಜ್ಯಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನನ್ನು ತೊರೆಯುವುದು ಸರಿಯೇ? ದುರ್ಯೋಧನ ನುಡಿಸಲು "ಒಡೆಯ ಅನುಗ್ರಹವಾಗಲಿ " ಎಂಬುದು ನನಗೆ ಕಷ್ಟವಾಗುವುದಿಲ್ಲವೇ? ಎಂದು ಆಮಿಷ ಒಡ್ಡಿದನು.

2) ಪಾಂಡವರು ಸಹೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.(ಮಾರ್ಚ್ 2018 ಜೂನ್ 2019)

ಕೃಷ್ಣನು ಕರ್ಣನಿಗೆ ಆಮಿಷ ಒಡ್ಡಿದಾಗ ಕರ್ಣನು ದು:ಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೇ ಸುಮ್ಮನೇ ಹೋಗುವದೇ ಎಂದುಕೊಂಡನು" "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರ ಸೇವೆಯನ್ನು ಮಾಡುವುದು ನನಗೆ ಇಷ್ಟವಿರಲಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ, ವೀರದುರ್ಯೋಧನನೇ ಒಡೆಯನು ಆತನ ಹಗೆಯೆ ಹಗೆ, ಆತನ ಅಭಿಮಾನವೇ ಅಭಿಮಾನವವು, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ" ಎಂದುನು. " ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯು ದೇವತೆಗೆ ಭೋಜನಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧ ರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು,ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

# ಪದ್ಯಪಾಠ 5 .ಹಸುರು – ಕುವೆಂಪು

## ಕವಿ ಪರಿಚಯ: ಕುವೆಂಪು(ಜೂನ್2018, 2019)

ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ.ಶ. 1904ಡಿಸೆಂಬರ್ 29ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಆಧುನಿಕ ಕನ್ನಡ ಸಾಹಿತ್ಯದ ಕವಿಗಳಲ್ಲಿ ಅಗ್ರಗಣ್ಯರಾದ ಕುವೆಂಪು ಅವರು ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ ,ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು , ತಪೋನಂದನ, ರಸೋವೈಸ: ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್ – ನೆನಪಿನ ದೋಣಿಯಲ್ಲಿ ( ಆತ್ಮಕಥನ)ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ ,ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿಗಳು ಲಭಿಸಿವೆ

ಒಂದು ವಾಕ್ಯದಲ್ಲಿ ಉತ್ತರಿಸಿ:

1. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ? (ಮಾರ್ಚ್ 2019)

ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ

2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?

ಕವಿಯು ನೋಡಿದ ಅಡಕೆಯ ತೋಟ ವನದಂಚಿನಲ್ಲಿದೆ.

3. "ಹಸುರು" ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?

"ಹಸುರು" ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?

ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

## ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

**1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?**

ಕವಿಗೆ ನವರಾತ್ರಿಯಲ್ಲಿ , ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ, ಹಸುರಾದ ಕವಿಯ ಹೃದಯಕ್ಕೆ ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಲಿನಲ್ಲಿ, ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.

**2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ,ಸಂಜೆಯ ಬಿಸಿಲು,ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಗೋಚರವಾದರೆ , ಹೂವಿನ ಕಂಪಿನ ಹಸುರು ಮೂಗಿಗೆ , ಎಲರಿನ ತಂಪಿನ ಸ್ಪರ್ಷ ಚರ್ಮಕ್ಕೆ, ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ ಕಿವಿಗೆ, ಶ್ಯಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಗೆಗೆ ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರೀಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತಪೂರ್ಣವಾಗಿ ವರ್ಣಿಸಿದ್ದಾರೆ.

**3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ನವ ರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ; ಹಸುರು ಮುಗಿಲು; ಹಸುರು ಗದ್ದೆಯ ಬಯಲು ; ಹಸುರಿನ ಮಲೆ; ಹಸುರು ಕಣಿವೆ; ಸಂಜೆಯ ಬಿಸಿಲು,ಅಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ; ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸರು.. ಇವೆಲ್ಲ ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾದವು.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

**1. "ಹಸುರಾದುದು ಕವಿಯಾತ್ಮಂ"**

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ'' ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು'' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:– ನವರಾತ್ರಿಯ ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು, ರಸಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ' ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ.

ಸ್ವಾರಸ್ಯ :– ನವರಾತ್ರಿಯ ಕಪ್ಪು ಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಾಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**2. "ಬೇರೆ ಬಣ್ಣವನೆ ಕಾಣೆ" (ಮಾರ್ಚ್ 2018)**

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ'' ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು'' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ :– ಅಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯ ಹಸುರಿನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ :– ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ "ಬೇರೆ ಬಣ್ಣಗಳೇ ಕಾಣದಾದವು'' ಎಂದು ಹೇಳಿರುವಲ್ಲಿ ಅವರ ರಸಸ್ವಾದನೆಯ ಔನ್ನತ್ಯವನ್ನು ಪೂರ್ಣವಾಗಿ ಅಭಿವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

**3. "ಹಸುರು ಹಸುರಿಳೆಯುಸಿರೂ"**

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ'' ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು'' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ :– ಹೊಸ ಹೂವಿನ ಕಂಪು , ಬೀಸುವ ಗಾಳಿಯ ತಂಪು, ಹಕ್ಕಿಯ ಕೊರಲಿನಿಂದ ಹೊರಟ ಗಾನದ ಇಂಪು, ಅಲ್ಲದೆ ಇಡೀ ಭೂಮಿಯ ಶ್ವಾಸವೆಲ್ಲಾ ಹಸುರುಮಯವಾಗಿದೆ.ಎಂದು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇಲ್ಲಿ ಹೂವು– ಗಾಳಿ ಹಕ್ಕಿಯ ಗಾನಗಳಲ್ಲಿ ಬೇರೆ ಬೇರೆ ಅನುಭವವಿದ್ದರೂ ಕವಿಯ ಏಕತಾ ದೃಷ್ಟಿಯಲ್ಲಿ ಎಲ್ಲದರಲ್ಲೂ ಹಸುರೇ ಕಾಣುತ್ತದೆ.

ಸ್ವಾರಸ್ಯ:– ಹಸುರು ಸರ್ವೇಂದ್ರಿಯಗಳನ್ನೂ ವ್ಯಾಪಿಸಿದೆ. ಎಂದು ವರ್ಣಿಸಿರುವ ಕವಿಯ ಕಲ್ಪನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**4. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"**

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ'' ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು'' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:- ಅತ್ತ-ಇತ್ತ-ಎತ್ತಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು "ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು.ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರುಗಟ್ಟಿತು" ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರು ಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ! ಎಂದು ವರ್ಣಿಸಿದ್ದಾರೆ.

ಸ್ವಾರಸ್ಯ :- ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಪ್ರಕೃತಿಗಷ್ಟೇ ಅಲ್ಲದೆ ರಕ್ತದಲ್ಲೂ ಹಸುರು ವ್ಯಾಪಿಸಿದೆ ಎಂದು ಸ್ವಾರಸ್ಯಪೂರ್ಣವಾಗಿದೆ.

## ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ

1) ಪ್ರಕೃತಿಯ ಹಸಿರು ಜೀವಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

'ಹಸಿರು' ಶಾಂತಿ ಮತ್ತು ನೆಮ್ಮದಿಯ ಸಂಕೇತ. ಹಸಿರು ಕಣ್ಣುಗಳಿಗೆ ತಂಪಿನ ಅನುಭವವನ್ನು ನೀಡುತ್ತದೆ. ಹಸಿರು ಇಳೆಯ ಉಸಿರಾಗಿದೆ. ಆದ್ದರಿಂದ ಇದು ಜೀವ ಜಗತ್ತಿಗೆ ಅತಿ ಮುಖ್ಯ ಮಳೆಯಾಗಿ, ಬೆಳೆಯು ಹಸಿರಿನಿಂದ ಕಂಗೊಳಿಸಿದಾಗ ರೈತನ ಮುಖದಲ್ಲಿ ಸಂತಸ ವ್ಯಕ್ತವಾಗುತ್ತದೆ. ಆಶ್ವಯುಜಮಾಸ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸಿರಿನಿಂದ ಜೀವಜಗತ್ತಿನಲ್ಲೂ ಹಸಿರಿನ ಭಾವ ಕಾಣುತ್ತದೆ. ಹಸಿರಿನಿಂದ ಕೂಡಿದ ಗಿಡಮರಗಳು ಪ್ರಾಣಿಪಕ್ಷಿಗಳಿಗೆ ಆಹಾರವನ್ನು ನೀಡುತ್ತವೆ. ಆದ್ದರಿಂದ ಪ್ರಾಣಿ ಪಕ್ಷಿಗಳು ಸಹ ಹಸಿರನ್ನು ಕಂಡು ಆನಂದದಿಂದ ಕುಣಿದಾಡುತ್ತವೆ. ಪ್ರಕೃತಿಯಲ್ಲಿ ಅರಳಿದ ಹೊಸಹೂವಿನ ಕಂಪನ್ನು ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ. ಎಲೆಗಳ ತಂಪು ಮೈಗೆ ಹಸುರು ಸ್ಪರ್ಶದ ಆನಂದವನ್ನು ನೀಡುತ್ತದೆ. ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಳಿನ ಇಂಪು ಕಿವಿಗೆ ಹಸುರಿನ ಆನಂದವನ್ನು ನೀಡುತ್ತದೆ. ಇಳೆಯಿಂದ ಬೀಸುವ ಗಾಳಿಯು ಹಸುರಿನ ಭಾವದ ಅನುಭವಗಳನ್ನು ನೀಡುತ್ತದೆ.ಅಲ್ಲಿ,ಇಲ್ಲಿ, ಎಲ್ಲೇಲ್ಲೂ ಹಾಗೂ ಕಡಲಿನಲ್ಲೂ ಪ್ರಕೃತಿಯ ಹಸಿರಿನಿಂದ ಕೂಡಿ ಹಚ್ಚಹಸಿರಾಗುತ್ತದೆ. ಜೀವಜಗತ್ತು ಈ ಹಸುರಿನ ಭಾವದಿಂದ ಕೂಡಿ ಪುಳಕಗೊಳ್ಳುತ್ತದೆ. ಪ್ರಕೃತಿಯ ಹಚ್ಚಹಸಿರಿನ ಹಿನ್ನೆಲೆಯಲ್ಲಿ ಜೀವ ಜಗತ್ತು ಹಸಿರುಗಟ್ಟಿ ಹಸಿರು ಭಾವವನ್ನು ಮೈದುಂಬಿಕೊಂಡು ಶಾಂತಿಯನ್ನು ಅನುಭವಿಸುತ್ತದೆ.

2) 'ಹಸಿರು' ಕವನದ ರೀತ್ಯ ಎಲ್ಲೆಲ್ಲಿ ಹಸಿರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

ಆಶ್ವಯುಜ ಮಾಸದ ನವರಾತಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸಿನಿಂದ ಕವಿಗೆ ಆಗಸವೂ ಹಾಗೂ ಆಗಸದಲ್ಲಿನ ಮುಗಿಲಿನ ಬಣ್ಣವು ಹಸುರಾಗಿ ಕಾಣುತ್ತದೆ. ಗದ್ದೆಯ ಬಯಲಿನಲ್ಲಿ ಸೋಂಪಾದ ಬೆಳೆದ ಭತ್ತದ ಪೈರುಗಳು ಹಸುರಾಗಿ ಕಾಣುತ್ತವೆ, ಮಲೆಯಲ್ಲಿ ಹಾಗೂ ಕಣಿವೆಯಲ್ಲಿ ದಟ್ಟವಾಗಿ ಬೆಳೆದ ಗಿಡಮರಗಳು ಹಸಿರಾಗಿ ಕಾಣುತ್ತವೆ. ಪ್ರಕೃತಿಯೇ ಹಚ್ಚಹಸಿರಿನಿಂದ ಕೂಡಿರುವುದರಿಂದ ಸಂಜೆಯ ಬಿಸಿಲು ಸಹ ಕವಿಗೆ ಹಸುರಾಗಿ ಕಾಣುತ್ತದೆ. ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸಿರಿನಿಂದ ಕವಿಗೆ ಸಕಲೇಂದ್ರಿಯಗಳಲ್ಲೂ ಹಸುರಿನ ಭಾವ ಕಾಣುತ್ತದೆ. ಪ್ರಕೃತಿಯಲ್ಲಿ ಅರಳಿದ ಹೊಸ ಹೂವಿನ ಕಂಪನ್ನು ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ. ಎಲೆಗಳ ತಂಪು ಮೈಗೆ ಹಸಿರು ಸ್ಪರ್ಶದ ಆನಂದವನ್ನು ನೀಡುತ್ತದೆ. ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಳಿನ ಇಂಪು ಕಿವಿಗೆ ಹಸುರಿನ ಆನಂದವನ್ನು ನೀಡುತ್ತವೆ. ಹಸಿರು ಇಳೆಯ ಉಸಿರಾಗಿದೆ. ಹೀಗೆ ಹಸುರಿನ ಶಾಂತತೆಯ ಭಾವ ಆನಂದ ಅನುಭವವನ್ನು ನೀಡುತ್ತದೆ.. ಹೀಗೆ ಹಸುರು ಎಲ್ಲೆಲ್ಲೂ ವ್ಯಾಪಿಸಿದೆ.

## ಪದ್ಯಪಾಠ 6. ಛಲಮನೆ ಮೆಱೆವೆಂ- ರನ್ನ

**ಕವಿ ಪರಿಚಯ:** ರನ್ನ ಮಹಾಕವಿ ಕ್ರಿ.ಶ.949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಇವನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಈತನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು "ಸಾಹಸ ಭೀಮ ವಿಜಯಂ (ಗದಾಯುದ್ಧ)" "ಅಜಿತ ತೀರ್ಥಂಕರ ಪುರಾಣ ತಿಲಕಂ" "ಪರಶುರಾಮ ಚರಿತಂ", "ಚಕ್ರೇಶ್ವರಚರಿತಂ" ಎಂಬ ಕಾವ್ಯಗಳನ್ನು ಬರೆದಿದ್ದಾನೆ. "ರನ್ನಕಂದ"ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಇವನಿಗೆ ತೈಲಪನು "ಕವಿಚಕ್ರವರ್ತಿ" ಎಂಬ ಬಿರುದನ್ನು ಕೊಟ್ಟನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನು.

ಒಂದು ವಾಕ್ಯದಲ್ಲಿ ಉತ್ತರಿಸಿ

1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?

ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಭೀಷ್ಮಾಚಾರ್ಯರಿಗೆ ಹೇಳುವನು.

2. ದಿನಪಸುತ ಎಂದರೆ ಯಾರು?

ದಿನಪಸುತ ಎಂದರೆ ಕರ್ಣ.

3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೊಧನ ಹೇಳುತ್ತಾನೆ?

ಅರ್ಜುನ ಮತ್ತು ಭೀಮ ಇವರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೊಧನ ಹೇಳುತ್ತಾನೆ.

4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?

ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.

5. ಅಂತಕಾತ್ಮಜ ಎಂದರೆ ಯಾರು?

ಅಂತಕಾತ್ಮಜ ಎಂದರೆ ಧರ್ಮರಾಯ.

## ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?

ದುರ್ಯೋಧನನು ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು.ಈ ಭೂಮಿ ನನಗೆ ಪಾಳು ಭೂಮಿಗೆ ಸಮ.ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೆ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ'' ಎಂದು ಹೇಳುತ್ತಾನೆ.

**2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. ಅವನು'' ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವುದಿಲ್ಲ'''' ಎನ್ನುತ್ತಾನೆ.

**3. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

"ನನ್ನ ಪ್ರೀತಿಯ ಗೆಳೆಯ ಕರ್ಣನನ್ನು ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಲ್ಲುವೆನು.ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ" ಎಂಬುದು ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

## ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

**1. "ನೆಲಕಿಟಿವೆನೆಂದು ಬಗೆದಿರೆ ಚಲಕಿಟೆವೆಂ."**

ಆಯ್ಕೆ :– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿ ಕೊಳ್ಳಲಾಗಿದೆ.

ಸಂದರ್ಭ:–ಭೀಷ್ಮಾಚಾರ್ಯರು "ಪಾಂಡವರನ್ನು ಒಪ್ಪಿಸುತ್ತೇನೆ,ಸಂಧಿ ಮಾಡಿಕೋ'' ಎಂದು ಹೇಳಿದಾಗ ದುರ್ಯೋಧನನು "ಅಜ್ಜಾ, ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ'' ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ದುರ್ಯೋಧನನು ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ. ಸಂಧಿ ಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."**

ಆಯ್ಕೆ :– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ?'' ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ" ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ "ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ'' ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**3. "ಪಾಂಡವರೊಳಿಱಿದು ಛಲಮನೆ ಮೆರೆವೆಂ."**

ಆಯ್ಕೆ :– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– "ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ದುರ್ಯೋಧನನ ಕೋಪ ಹೆಚ್ಚಾಗಲು ಕಾರಣವನ್ನು ನೀಡುವುದಲ್ಲದೆ ತನ್ನ ಸಹೋದರರು ಸತ್ತಿಲ್ಲ ಅವರು ಮತ್ತೆ ಹುಟ್ಟಿಬರುವರೆಂಬ ನಂಬಿಕೆ ಹೊಂದಿರುವರುವುದು ಹಾಗೂ ಛಲಕ್ಕಾಗಿ ಹೋರಾಡುವ ಆತನ ನಿಲುವು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**4. "ಮೇಣಾಯ್ತು ಕೌರವಂಗವನಿತಳಂ."**

ಆಯ್ಕೆ :– ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಸಂಧಿಗೆ ಒಪ್ಪದ ದುರ್ಯೋಧನನು , "ಅಜ್ಜ, ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು.ಆದ್ದರಿಂದ ಈ ಭೂಮಿ ಪಾಂಡವರದಾಗಬೇಕು ಇಲ್ಲವೆ ಕೌರವನದಾಗಬೇಕು" ಎಂದುಶರಶಯ್ಯೆಯಲ್ಲಿಮಲಗಿದ್ದ

ಭೀಷ್ಮಾಚಾರ್ಯರಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ತನ್ನ ಕೊನೆಯುಸಿರು ಇರುವವರೆಗೂ ಪಾಂಡವರ ವಿರುದ್ಧ ಹೋರಾಡುತ್ತೇನೆಂಬ ದುರ್ಯೋಧನನ ದಿಟ್ಟ ನಿರ್ಧಾರ, ಪಾಂಡವರ ಮೇಲಿನ ಕೋಪದ ತೀವ್ರತೆ ಈ ಸಂದರ್ಭದಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ

1) ಭೀಷ್ಮ ಹಾಗೂ ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಮಹಾಭಾರತ ಯುದ್ದದಲ್ಲಿ ತನ್ನೆಲ್ಲ ಸಹೋದರರನ್ನೂ ಆಪ್ತಮಿತ್ರನಾದ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವುದು ಸೂಕ್ತವೆಂದು ದುರ್ಯೋಧನನಿಗೆ ಸಲಹೆ ನೀಡುತ್ತಾರೆ. ಭೀಷ್ಮರು ದುರ್ಯೋಧನನಿಗೆ "ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು" ಎಂದು ಹೇಳುತ್ತಾರೆ. ಅವರಿಗೆ ದುರ್ಯೋಧನನು ಛಲಗಾರ ಎಂಬುದು ತಿಳಿದಿದ್ದರೂ ಹಿರಿಯರಾಗಿ ಅವನನ್ನು ಸಂಧಿಗಾಗಿ ಒಪ್ಪಿಸುವ ಒಂದು ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಹಾಗೆಯೇ "ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು" ಎಂದು ಹೇಳುವ ಭೀಷ್ಮರ ಮಾತುಗಳಲ್ಲಿ ಅವರಿಗೆ ಪಾಂಡವರ ಮೇಲಿದ್ದ ನಂಬಿಕೆ-ವಿಶ್ವಾಸವೂ ವ್ಯಕ್ತವಾಗಿದೆ. "ಅಜ್ಜಾ, ನಾನು ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ. ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ಆದರೆ ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ" ಎಂದು ಹೇಳುವಲ್ಲಿ ಅವನ ದಿಟ್ಟ ನಿರ್ಧಾರ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೆ "ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳಲಾದೀತೆ? ನನ್ನ ಪ್ರೀತಿಯ ಗೆಳೆಯನನ್ನು ನನ್ನ ಪ್ರೀತಿಯ ತಮ್ಮನನ್ನು ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ; ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿಮಾಡಿಕೊಳ್ಳುತ್ತೇನೆ" ಎಂದು ಹೇಳುವಲ್ಲಿ ಆತನಿಗೆ ಕರ್ಣ ಮತ್ತು ದುಶ್ಯಾಸನನ ಮೇಲಿದ್ದ ಪ್ರೀತಿಯೂ ಭೀಮಾರ್ಜುನರ ಬಗೆಗಿದ್ದ ಕೋಪದ ತೀವ್ರತೆಯೂ ವ್ಯಕ್ತವಾಗಿದೆ. ಪ್ರಾಣ ಹೋದರೂ ಅಭಿಮಾನ ಬಿಡುವುದಿಲ್ಲ ಎಂಬ ದುರ್ಯೋಧನನ ಮಾತುಗಳು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿವೆ.

2) ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ಭೀಷ್ಮಾಚಾರ್ಯರು ತಮ್ಮ ಬಳಿಗೆ ಬಂದ ದುರ್ಯೋಧನನಿಗೆ ಪಾಂಡವರೊಡನೆ ಸಂಧಿಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಆದರೆ ಅಭಿಮಾನಧನನಾದ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. ಆಗ ಅವನಾಡುವ ಮಾತುಗಳಲ್ಲಿ ಆತನ ಛಲದ ಗುಣ ವ್ಯಕ್ತವಾಗಿರುವುದನ್ನು ಕಾಣಬಹುದು. ದುರ್ಯೋಧನನು ಭೀಷ್ಮರನ್ನು ಕುರಿತು "ಅಜ್ಜ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವೆನೆ?" "ನನ್ನ ಪ್ರೀತಿಯ ಗೆಳೆಯನನ್ನೂ ಪ್ರೀತಿಯ ತಮ್ಮನನ್ನೂ ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಅಜ್ಜಾ, ನಾನು ಸಂಧಿಯನ್ನು ಒಪ್ಪುವುದಿಲ್ಲ. ಆ ಇಬ್ಬರನ್ನೂ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿಮಾಡಿಕೊಳ್ಳುತ್ತೇನೆ. ನನ್ನ ಒಡಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು; ಇಲ್ಲವೆ ನಾನು ಉಳಿಯಬೇಕು. ಹಾಗೆಯೇ ಈ ಭೂಮಿ ಪಾಂಡವರದಾಗಬೇಕು; ಇಲ್ಲವೇ ಕೌರವನದಾಗಬೇಕು" ಎಂದು ದುರ್ಯೋಧನನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳುವ ಮಾತುಗಳಲ್ಲಿ ಆತನ ಛಲದೃಢನಿರ್ಧಾರ ಮತ್ತು ಸ್ವಾಭಿಮಾನವನ್ನು ಕಾಣಬಹುದಾಗಿದೆ.

# ಪದ್ಯಪಾಠ 7. ವೀರಲವ – ಲಕ್ಷ್ಮೀಶ

## ಕವಿ ಪರಿಚಯ(ಮಾರ್ಚ್ 2017)

ಲಕ್ಷ್ಮೀಶನು ಕ್ರಿ.ಶ.1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಜೈಮಿನಿ ಭಾರತವೆಂಬ ಪ್ರಸಿದ್ಧ ಕಾವ್ಯದ ಕರ್ತೃ. ಲಕ್ಷ್ಮೀಶ ಕವಿಗೆ ಉಪಮಾಲೋಲ, ಕರ್ಣಾಟಕವಿಚೂತವನ ಚೈತ್ರ ಎಂಬ ಬಿರುದುಗಳಿವೆ.

## ಒಂದು ವಾಕ್ಯದಲ್ಲಿ ಉತ್ತರಿಸಿ

1. "ಜೈಮಿನಿ ಭಾರತ" ಕಾವ್ಯವನ್ನು ಬರೆದ ಕವಿ ಯಾರು?
ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.

2. ಯಜ್ಞಾಶ್ವವನ್ನು ಕಟ್ಟಿದವರು ಯಾರು?
ಯಜ್ಞಾಶ್ವವನ್ನು ಕಟ್ಟಿದವರು ಲವ.

3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು? (ಮಾರ್ಚ್ 2018)
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

4. ಮುನಿಸುತರು ಹೆದರಲು ಕಾರಣವೇನು?

ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

## ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

**1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.(ಮಾರ್ಚ್ 2018)**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ" ಎಂದ ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ**

ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು. ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ.ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

**1. "ರಘೂದ್ವಹನ ಸೊಲ್ಗೇಳಿ ನಮಿಸಲ್"**

ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ'' ಮಹಾಕಾವ್ಯದಿಂದ ಆಯ್ದ "ವೀರಲವ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:- ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:- ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**2."ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"(ಮಾರ್ಚ್ 2019)**

ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ'' ಮಹಾಕಾವ್ಯದಿಂದ ಆಯ್ದ "ವೀರಲವ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:- ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**3. "ಅರಸುಗಳ ವಾಜಿಯಂ ಬಿಡು" (ಜೂನ್ 2019)**

ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ'' ಮಹಾಕಾವ್ಯದಿಂದ ಆಯ್ದ "ವೀರಲವ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:- ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**4. "ಜಾನಕಿಯ ಮಗನಿದಕೆ ಬೆದರುವನೆ"**

ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ'' ಮಹಾಕಾವ್ಯದಿಂದ ಆಯ್ದ "ವೀರಲವ'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:- ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

ಸ್ವಾರಸ್ಯ :- ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

*ಯಜ್ಞಾಶ್ವದ ಹಣೆಯಲ್ಲಿದ್ದ ವಿವರವನ್ನು ಓದಿದ ನಂತರ ಲವನ ಪ್ರತಿಕ್ರಿಯೆಯನ್ನು ಬರೆಯಿರಿ.

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ

ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು. ಆಗ ಇದನ್ನು ಕಂಡ ಲವನು "ಇದು ಯಾವ ಕಡೆಯ ಕದುರೆಯು, ಹೊಕ್ಕು, ಹೂತೋಟವನ್ನು ನುಗ್ಗುನುರಿಯಾಗುವಂತೆ ತುಳಿದುದು." ಎಂದು ಕುದುರೆಯ ಕಡೆಗೆ ನಡೆದು ಬಂದು ನೋಡಿದನು ಯಜ್ಞಾಶ್ವದ ಹಣೇಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಶಲ್ಯ ಮಗನಾದ ರಾಮನು ಒಬ್ಬನೇ ವೀರನುಇದು ಅವನ ಯಜ್ಞದ ಕುದುರೆ, ಇದನ್ನು ತಡೆಯುವ ಸಾಮರ್ಥ್ಯ ಉಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು. ಇದನ್ನು ಓದಿದ ಲವನು ಕೋಪಗೊಂಡು " ಅಹಂಕಾರವನ್ನು ಬಿಡಿಸದಿದ್ದರೆ ತನ್ನತಾಯಿಯನ್ನು ಎಲ್ಲ ಜನರೂ ಬಂಜೆಯೆನ್ನದಿರುವರೇ, ತನಗೆ ಇರುವ ತೋಳುಗಳು ಇವು ಏತಕೆ?" ಎಂದು ಪ್ರತಿಜ್ಞೆಯನ್ನು ಕೈಗೊಂಡು ಯಜ್ಞಾಶ್ವವನ್ನು ತನ್ನ ಉತ್ತರೀಯಿಂದ ಕಟ್ಟಿಹಾಕಿದನು.

## 8.ಕೆಮ್ಮನೆ ಮೀಸೆವೊತ್ತನೇ – ಪಂಪ

### ಕವಿ ಪರಿಚಯ(ಮಾರ್ಚ್ 2018)

ಮಹಾಕವಿ ಕ್ರಿ.ಶ. 941 ರಲ್ಲಿ ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ.ಪಂಪ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ವಿಕ್ರಮಾರ್ಜುನ ವಿಜಯ ಕಾವ್ಯಕ್ಕೆ ಪಂಪಭಾರತ ಎಂಬ ಮತ್ತೊಂದು ಹೆಸರೂ ಇದೆ. ಕಲಿಯೂ ಕವಿಯೂ ಆಗಿದ್ದ ಪಂಪ ರತ್ನತ್ರಯರಲ್ಲಿ ಒಬ್ಬ. ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ ಎಂಬ ಬಿರುದುಗಳನ್ನು ಪಡೆದಿದ್ದ ಕವಿ. ವೇದವ್ಯಾಸರ ಮಹಾಭಾರತವನ್ನು ಆಧರಿಸಿ ವಿಕ್ರಮಾರ್ಜುನ ವಿಜಯ ಎಂಬ ಕನ್ನಡ ಮಹಾಕಾವ್ಯವನ್ನು ಬರೆದ ಪಂಪ ಮಹಾಕವಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಇದೊಂದು ಲೌಕಿಕ ಕಾವ್ಯವೆಂದು ಘೋಷಿಸಿದ್ದಾನೆ.

ಒಂದು ವಾಕ್ಯದಲ್ಲಿ ಉತ್ತರಿಸಿ

1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?

ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಸಂಪತ್ತು/ಹಣ)ಬೇಡುವುದಕ್ಕಾಗಿ ಬಂದನು.

2. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು? (ಮಾರ್ಚ್ 2019)

ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.

3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು? (ಜೂನ್ 2019)

ಪರಶುರಾಮನು ದ್ರೋಣನಿಗೆ ವಾರುಣ, ವಾಯುವ್ಯ, ಆಗ್ನೇಯ, ಐಂದ್ರಾದಿ ಪ್ರಧಾನ ಅಸ್ತ್ರಗಳು ಕೊಟ್ಟನು.

4. ದ್ರುಪದನು ಪಡಿಯರಿನಿಗೆ ಏನೆಂದು ಹೇಳಿ ಕಳುಹಿಸಿದನು?

ದ್ರುಪದನು ಪಡಿಯರಿನಿಗೆ "ಅಂತಹವನನ್ನು ನಾನು ತಿಳಿದಿಲ್ಲ; ಅವನನ್ನು ಹೊರಕ್ಕೆ ತಳ್ಳು" ಎಂದು ಹೇಳಿ ಕಳುಹಿಸಿದನು.

### ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

1. ಪರಶುರಾಮನು ಮಣ್ಣಿನ ಪಾತ್ರಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?

ಪರಶುರಾಮನು ತನ್ನಲ್ಲಿದ್ದದ್ದನ್ನೆಲ್ಲಾ ಬೇಡಿದವರಿಗೆ ದಾನಮಾಡಿದ್ದರಿಂದ ಆತನ ಬಳಿ ಬಿಲ್ಲು –ಬಾಣಗಳಲ್ಲದೆ ಬೇರೇನೂ ಇರಲಿಲ್ಲ. ಆ ಸಂದರ್ಭದಲ್ಲಿ ದ್ರೋಣನು ಅಶ್ವತ್ಥಾಮನ ಜೊತೆಯಲ್ಲಿ ಏನಾದರೂ ದ್ರವ್ಯ ಬೇಡಲೆಂದು ಪರಶುರಾಮನ ಬಳಿಗೆ ಬಂದನು. ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

2. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು?

ದ್ರುಪದನು ದ್ರೋಣರಿಗೆ "ನೀನು ಯಾರೆಂದು ನನಗೆ ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮ ಭೇದಕವಾಗುವಂತೆ ಹಿಯ್ಯಾಳಿಸಿದನು.

3. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು? (ಮಾರ್ಚ್ 2019)

ದ್ರುಪದನ ಮಾತಿಗೆ ದ್ರೋಣನು 'ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ? ಜೊತೆಯಲ್ಲಿ ಅಭ್ಯಾಸ ಮಾಡಿದೆವೆಂಬ ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ.ಈ ಸಭಾ ವಲಯದಲ್ಲಿ ಹಿಯ್ಯಾಳೀಸಿದ ನಿನ್ನನ್ನು ನನ್ನ ಶಿಷ್ಯರಿಂದ ನೀನು ಬೆಚ್ಚುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಹೊತ್ತಿರುವುದು ವ್ಯರ್ಥವಲ್ಲವೇ?'' ಎಂದು ಪ್ರತ್ಯುತ್ತರ ಕೊಟ್ಟನು.

### ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

1. "ಈಗಳೊಂದಡಕೆಯುಮಿಲ್ಲ ಕೈಯೊಳ್"

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ'' ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ'' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ :– ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶ ದೇಶಗಳಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದ ಸಂದರ್ಭದಲ್ಲಿ ಪರಶುರಾಮನು "ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು . ನನ್ನಲ್ಲಿ ಒಂದಡಕೆಯೂ ಇಲ್ಲ'' ಎಂದು ದ್ರೋಣನಿಗೆಹೇಳುತ್ತಾನೆ.

ಸ್ವಾರಸ್ಯ :– ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ನಿಜ ಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

2. "ವಿದ್ಯಾಧನಮೆ ಧನಮಪ್ಪುದು"

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ'' ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ'' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.
ಸಂದರ್ಭ :– ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು "ಎಲೈ ದ್ರೋಣನೆ ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ನನ್ನಲ್ಲಿ ಬೇರೆ ಯಾವುದೇ ಆಸ್ತಿಯಿಲ್ಲ.ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು''ಎಂದು ಹೇಳಿದ ಸಂದರ್ಭದಲ್ಲಿ ದ್ರೋಣನು "ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು'' ಎಂದು ಹೇಳುತ್ತಾನೆ.

ಸ್ವಾರಸ್ಯ :– "ವಿದ್ಯಾಧನವೇ ನಿಜವಾದ ಸಂಪತ್ತು'' ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

3. "ಎಂತು ನಾಣಿಲಿಗರಪ್ಪರೆ ಮಾನಸರ್''

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ'' ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ'' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.
ಸಂದರ್ಭ :– ದ್ರೋಣನು ದ್ರುಪದನ ಬಳಿಗೆ ಹೋಗಿ "ಅಣ್ಣಾ ನೀನೂ ನಾನೂ ಜೊತೆಯಲ್ಲಿವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ" ಎನ್ನಲು ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ಹಿಯ್ಯಾಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ :– ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ ನೀನಾರೋ ನನಗೆ ತಿಳಿದಿಲ್ಲ'' ಎಂದು ಹೇಳುವ ದೃಪದನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4. "ಜಲಕನ್ನೀಗಳರಂಜೆದೆಂ ಸಿರಿ ಕಳ್ಳೊಡಟ್ಟಿತೆಂಬುದಂ''

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ'' ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ'' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.
ಸಂದರ್ಭ :– ತನ್ನ ಬಳಿ ಸಹಾಯ ಕೇಳಲು ಬಂದ ದ್ರೋಣನನ್ನು ಕುರಿತು ದ್ರುಪದನು "ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? " ಎಂದು ಹೀಯಾಳಿಸಿದ ಸಂದರ್ಭದಲ್ಲಿ ದ್ರೋಣನು "ಐಶ್ವರ್ಯವೆಂಬ ಮದವೇರಿದ ಮಾತಿನಲ್ಲಿ ಮುಖದಲ್ಲಿ ವಕ್ರತೆಯುಂಟಾತ್ತದೆ. ಸಂಬಂಧವನ್ನು ಮರೆಯುವಂತೆ ಮಾಡುವುದು; ಆದುದರಿಂದ ಐಶ್ವರ್ಯವು ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ನಾನು ತಕ್ಷಣವೇ ಸ್ಪಷ್ಟವಾಗಿ ತಿಳಿದೆನು'' ಎಂದು ಹೇಳುತ್ತಾನೆ.
ಸ್ವಾರಸ್ಯ :– ಸಮುದ್ರ ಮಥನ ಕಾಲದಲ್ಲಿ ಐಶ್ವರ್ಯ(ಲಕ್ಷ್ಮಿ) ಮತ್ತು ಕಳ್ಳು (ಅಮೃತ /ಸುರಪಾನ) ಇವೆರಡೂ ಹುಟ್ಟಿದವು. ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು ದ್ರುಪದನ ಐಶ್ವರ್ಯ ಮದಕ್ಕೆ'' ಅನ್ವಯಮಾಡಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

5. "ನೊಳವಿಂಗೆ ತಪ್ಪೆ ವರಂ"

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ'' ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ'' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.
ಸಂದರ್ಭ :– ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು "ಎಲೋ ಖಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು'' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ , ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಶಪಥ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– "ನೊಣಕ್ಕೆ ಕಸವೇ ಶ್ರೇಷ್ಠ'' ಎಂಬಂತೆ ವ್ಯಕ್ತಿಯ ಯೋಗ್ಯತೆಗೆತಕ್ಕಂತೆ ಗುಣ–ನಡತೆ ಅಭಿರುಚಿಗಳಿರುತ್ತವೆ.ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

## ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1) ಧ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ದ್ರೋಣನು ತನ್ನ ಗೆಳೆಯನಾದ ದ್ರುಪದನ ಛತ್ರಾವತಿಯಲ್ಲಿ ರಾಜನಾಗಿದ್ದಾನೆಂದು ತಿಳಿದು, ದ್ರುಪದನ ಅರಮನೆಯ ಬಾಗಿಲಲ್ಲಿ ಬಂದು ನಿಂತಾಗ ದ್ರುಪದನು ದ್ವಾರಪಾಲಕನೊಡನೆ, "ಏನು, ದ್ರೋಣ ಎಂಬುವವನು ಬ್ರಾಹ್ಮಣನೇ? ನನಗೆ ಹೇಗೆ ಗೆಳೆಯನು? ಅಂತಹವನು ನಾನು ತಿಳಿಯೆನು. ಅವನನ್ನು ಹೊರಗೆ ತಳ್ಳು." ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ದ್ರೋಣನು ಬಲತ್ಕಾರದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ, "ಅಣ್ಣಾ ನೀವು ನಾವು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ" ಎನ್ನುತ್ತಾನೆ. ಆಗ ದ್ರುಪದನು " ನಿನ್ನನ್ನು ನಾನು ತಿಳಿಯೆನು ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಗೆಗೆಟ್ಟವರಾಗುತ್ತಾರೆಯೇ?" ಎನ್ನುತ್ತಾನೆ. ಈ ಮರ್ಮಭೇದಕ ಮಾತುಗಳು ದ್ರೋಣನಿಗೆ ತೀವ್ರವಾದ ನಾಚಿಕೆಯನ್ನು ಉಂಟುಮಾಡುತ್ತದೆ. ಆಗ ದ್ರೋಣನು "ಎಲೈ ನೀಚನೇ, ನೊಣಕ್ಕೆ ಕಸದ ಸಿಪ್ಪೆಯೇ ಶ್ರೇಷ್ಠವಾದುದು" ಎಂಬ ಗಾದೆಯಂತೆ ನಿನ್ನ

ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆನು. ಈ ಸಭಾಮಂಡಲದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ಅನಾಯಾಸವಾಗಿ ನಿನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

2) ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

ದ್ರೋಣನು ತನ್ನ ಗೆಳೆಯನಾದ ದ್ರುಪದನ ಛತ್ರಾವತಿಯಲ್ಲಿ ರಾಜನಾಗಿದ್ದಾನೆಂದು ತಿಳಿದು, ದ್ರುಪದನ ಅರಮನೆಯ ಬಾಗಿಲಲ್ಲಿ ಬಂದು ನಿಂತಾಗ ದ್ರುಪದನು ದ್ವಾರಪಾಲಕನೊಡನೆ, "ಏನು, ದ್ರೋಣ ಎಂಬುವವನು ಬ್ರಾಹ್ಮಣನೇ? ನನಗೆ ಹೇಗೆ ಗೆಳೆಯನು? ಅಂತಹವನು ನಾನು ತಿಳಿಯೆನು.ಅವನ್ನು ಹೊರಗೆ ತಳ್ಳು." ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ದ್ರೋಣನು ಬಲತ್ಕಾರದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ, "ಅಣ್ಣಾ ನೀವು ನಾವು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ" ಎನ್ನುತ್ತಾನೆ. ಆಗ ದ್ರುಪದನು " ನಿನ್ನನ್ನು ನಾನು ತಿಳಿಯೆನು ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ?" ಎನ್ನುತ್ತಾನೆ. ಈ ಮರ್ಮಭೇದಕ ಮಾತುಗಳು ದ್ರೋಣನಿಗೆ ತೀವ್ರವಾದ ನಾಚಿಕೆಯನ್ನು ಉಂಟುಮಾಡುತ್ತದೆ. ಆಗ ದ್ರೋಣನು " ಎಲೈ ನೀಚನೇ, ನೊಣಕ್ಕೆ ಕಸದ ಸಿಪ್ಪೆಯೇ ಶ್ರೇಷ್ಠವಾದುದು" ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆನು. ಈ ಸಭಾಮಂಡಲದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ಅನಾಯಾಸವಾಗಿ ನಿನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ಪ್ರತಿಜ್ಞೆಯನ್ನು ಮಾಡುತ್ತಾ

# ಪಠ್ಯಪೋಷಕಅಧ್ಯಯನ

## ಸ್ವಾಮಿ ವಿವೇಕಾನಂದರ ಚಿಂತನೆಗಳು

### ಒಂದು ವಾಕ್ಯದಲ್ಲಿ ಉತ್ತರಿಸಿ

1. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ?

ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಫೋಟ, ಸ್ಪಷ್ಟತೆಗಳ ರೂಪಕವಾಗಿದ್ದಾರೆ.

2. ವಿವೇಕಾನಂದರು ಮೊದಲನೆ ಆದ್ಯತೆ ಯಾವುದಕ್ಕೆ ನೀಡಬೇಕೆಂದಿದ್ದಾರೆ?

ವಿವೇಕಾನಂದರು ಮೊದಲನೆ ಆದ್ಯತೆಯನ್ನು ದೈಹಿಕ ಹಸಿವನ್ನು ಇಂಗಿಸುವುದಕ್ಕೆ ನೀಡಬೇಕೆಂದಿದ್ದಾರೆ .

3. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?

ವಿವೇಕಾನಂದರು ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸುತ್ತಾರೆ.

4. ಜಾತಿ ವ್ಯವಸ್ಥೆಯ ಕೌರ್ಯಕ್ಕೆ ತುತ್ತಾಗಿರುವವರು ಯಾರು?

ಜಾತಿ ವ್ಯವಸ್ಥೆಯ ಕೌರ್ಯಕ್ಕೆ ತುತ್ತಾಗಿರುವವರು ಶೂದ್ರರು ಹಾಗೂ ಅಸ್ಪೃಶ್ಯರು.

5. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು?

ಸರ್ವಧರ್ಮ ಸಮ್ಮೇಳನವು 11–09–1893 ರಲ್ಲಿ ಚಿಕಾಗೋದಲ್ಲಿ ನಡೆಯಿತು.

6.ವಿವೇಕಾನಂದರನ್ನು "ಮಾನವತಾಮಿತ್ರ" ರೆಂದು ಕರೆದವರಾರು?

ವಿವೇಕಾನಂದರನ್ನು "ಮಾನವತಾಮಿತ್ರ" ರೆಂದು ಕರೆದವರು ಕುವೆಂಪುರವರು.

### ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ

1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?(ಮಾರ್ಚ್ 2018)

ಸ್ವಾಮಿ ವಿವೇಕಾನಂದರು ಜಾತಿ ವ್ಯವಸ್ಥೆಯನ್ನು ಕುರಿತು "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ" ಎಂದು ಹೇಳಿದ್ದಾರೆ.

2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?(ಮಾರ್ಚ್ 2019)

ಸ್ವಾಮಿ ವಿವೇಕಾನಂದರು ಕೋಮುವಾದವನ್ನು ವಿರೋಧಿಸುತ್ತಾ, ಅವರು " ಏಕ ಸಂಸ್ಕೃತಿ ಮತ್ತು ಏಕ ಧರ್ಮ ವಿಸ್ತರಣೆಗಳ ಪರವಾಗಿರಲಿಲ್ಲ. ಅದು ಹಿಂದೂ ಧರ್ಮವಿರಲಿ, ಕ್ರೈಸ್ತ ಧರ್ಮವಿರಲಿ, ಇಸ್ಲಾಂ ಧರ್ಮವಿರಲಿ, ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವ ವಿರೋಧವೆಂದು ಭಾವಿಸಿದ್ದರು".

3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

ವಿವೇಕಾನಂದರು 11/09/1893 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತಾ "ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಾಭಿಮಾನಗಳು ಈ ಸುಂದ ಜಗತ್ತನ್ನಾವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಕ್ಕದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು" ಎಂದು ಹೇಳಿದರು.

## ವಸಂತ ಮುಖ ತೋರಲಿಲ್ಲ – ಶ್ರೀಮತಿ.ವಿಜಯಶ್ರೀ ಸಬರದ

### ಒಂದು ವಾಕ್ಯದಲ್ಲಿ ಉತ್ತರಿಸಿ

1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

2. ಅಮ್ಮ ಎಲ್ಲಿ ಮಲಗಿದ್ದಾಳೆ? (ಮಾರ್ಚ್ 2018)

ಅಮ್ಮ ಗುಡಿಸಲಿನಲಿ ಮಲಗಿದ್ದಾಳೆ.

3. ಯಾರಿಗೆ ವಸಂತಮುಖ ತೋರಲಿಲ್ಲ?

ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರನಿಗೆ ವಸಂತಮುಖ ತೋರಲಿಲ್ಲ.

4. ಪುಟ್ಟಿಯ ಪ್ರಶ್ನೆಗಳೇನು?

ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಎಂದು ಪುಟ್ಟಿ ಪ್ರಶ್ನಿಸಿಕೊಳ್ಳುತ್ತಾಳೆ

5. ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತಹ ಸಂಭ್ರಮ ಈ ಕವನದಲ್ಲಿ ವ್ಯಕ್ತವಾಗಿದೆ.

## ಭಗತ್‌ಸಿಂಗ್ – ಡಾ. ಜಿ. ರಾಮಕೃಷ್ಣ

### ಒಂದು ವಾಕ್ಯದಲ್ಲಿ ಉತ್ತರಿಸಿ

1. ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಎಂದು ನಡೆಯಿತು?

ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಏಪಿಲ್ರ್ 13, 1919 ರಂದು ನಡೆಯಿತು

2. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.

3. ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು?

ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಹೀಗಿದೆ: "ಏಪ್ರಿಲ್– 13– 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ."

4. ಭಗತ್‌ಸಿಂಗ್‌ನ ಸಹಚರರು ಯಾರು?

ಸುಖ್‌ದೇವ್ , ರಾಜ್‌ಗುರು, ಭಟುಕೇಶ್ವರ ದತ್ತರು ಭಗತ್‌ಸಿಂಗ್‌ನ ಸಹಚರರು.

5. ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ?

ಭಗತ್‌ಸಿಂಗ್ ಮಾರ್ಚ 23, 1931 ರಂದು ಬ್ರಿಟಿಷರಿಂದ ಮರಣದಂಡನೆಗೆ ಗುರಿಯಾಗಿ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಹುತಾತ್ಮನಾದನು.

## ಮೃಗ ಮತ್ತು ಸುಂದರಿ – ಪಿ.ಲಂಕೇಶ

### ಒಂದು ವಾಕ್ಯದಲ್ಲಿ ಉತ್ತರಿಸಿ

1. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?

ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆಂದರೆ ಅವರ ಜೀವನ ಸರಳವಾಗಿತ್ತು.

2. ಮೃಗದ ಬಾಹ್ಯ ಆಕಾರ ಹೇಗಿತ್ತು?

ಮೃಗದ ಬಾಹ್ಯ ಆಕಾರ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿತ್ತು.

3. ಯಾರು ಶಾಪಗೊಂಡು ಮೃಗವಾಗಿದ್ದರು?

ಓರ್ವ ಸುಂದರ ರಾಜಕುಮಾರ ಶಾಪಗೊಂಡು ಮೃಗವಾಗಿದ್ದರು.

4. ದೇವತೆ ಕೊಟ್ಟ ಶಾಪವೇನು?

"ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು'' ಎಂದು ದೇವತೆ ಶಾಪ ಕೊಟ್ಟಳು.

5. ಶಾಪ ವಿಮೋಚನೆಯ ಫಲವೇನು?

ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ ಝಗ ಝಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

6. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ? (ಮಾರ್ಚ್ 2018)

ಏಕೆಂದರೆ ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಆತನ ಕಾಳಜಿಯನ್ನು ನೆನೆದು ಸುಂದರಿಯ ಮನ ಕರಗುತ್ತಿತ್ತು.

## 5. ಜನಪದ ಒಗಟುಗಳು – ಸಂಗ್ರಹ

### ಒಂದು ವಾಕ್ಯದಲ್ಲಿ ಉತ್ತರಿಸಿ

1. "ಅಂಗಿ'' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

"ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡ ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ ರಾಯ ರಾಯರಿಗೆಲ್ಲ ತಾನೇ ಪ್ರಚಂಡ" ಎಂದು "ಅಂಗಿ'' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯಾಗಿದೆ.

2. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

"ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು ನೀರು ತಾಕಿದರೆ ಮಟಮಾಯವಾಗುತ್ತದೆ" ಎಂಬುದು ಉಪ್ಪಿನ ವಿಶೇಷತೆ.

3. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?

"ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿಕಾರ'' ಎಂಬುದಾಗಿ ವಿವರಿಸುತ್ತದೆ.

4. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?

"ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಚೆರಗ ಹಿಡಿಯೋದು'' ಮತ್ತು "ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವಾನ ಕಂಡು ನಗುವುದು'' ಎನ್ನುವ ಒಗಟುಗಳು ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ವಿವರಿಸುತ್ತವೆ.

5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?(ಮಾರ್ಚ್ 2019)

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡು ಕೊಳ್ಳಲು ಮನಸ್ಸು ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು

ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ

# (ಅಭ್ಯಾಸ ಪ್ರಶ್ನೆಗಳನ್ನು ಹೊರತುಪಡಿಸಿ ಪರೀಕ್ಷೆಯಲ್ಲಿ ಕೇಳಬಹುದಾದ ಹೆಚ್ಚುವರಿ ಪ್ರಶ್ನೋತ್ತರಗಳು)

## 1. ಯುದ್ಧ

**ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಸಾರಾ ಅಬೂಬಕ್ಕರ್ ಅವರ 'ಯುದ್ಧ' ಸಣ್ಣಕಥೆ ಯಾವ ಅಂಶವನ್ನು ಎತ್ತಿ ಹಿಡಿದಿದೆ ?

ಜನಸಾಮಾನ್ಯರಲ್ಲಿ ಯುದ್ಧದ ಬಗೆಗಿನ ತಿರಸ್ಕಾರವನ್ನು, ಸಂಕಷ್ಟದಲ್ಲಿ ವೈರಿ–ಮಿತ್ರ ಎಂದು ನೋಡದೆ ಪರಸ್ಪರ ಸಹಕಾರದೊಂದಿಗೆ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವುದನ್ನು 'ಯುದ್ಧ' ಪಾಠದಲ್ಲಿ ನೋಡಬಹುದಾಗಿದೆ.

2. ಸಾ.ರ. ಅಬೂಬಕ್ಕರ್ ಅವರ 'ಯುದ್ಧ' ಸಣ್ಣಕಥೆಯನ್ನು ಯಾವ ಕಥಾ ಸಂಕಲನದಿಂದ ಆರಿಸಲಾಗಿದೆ?

'ಯುದ್ಧ'ಕತೆಯನ್ನು ಸಾರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥಾಸಂಕಲನದಿಂದ ಆರಿಸಲಾಗಿದೆ.

3. 'ಯುದ್ಧ' ಸಣ್ಣಕಥೆ ಲೇಖಕರು ಯಾರು ?

'ಯುದ್ಧ' ಸಣ್ಣಕಥೆಯ ಲೇಖಕರು ಶ್ರೀಮತಿಸಾರಾ ಅಬೂಬಕ್ಕರ್‌ರವರು.

**ಕೆಳಕಂಡ ಪ್ರಶ್ನೆಗಳಿಗೆ 3– 4 ವಾಕ್ಯಗಳಲ್ಲಿ ಉತ್ತರಿಸಿ:**

1. ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧ ಸಣ್ಣಕಥೆಗಾರರನ್ನು ಹೆಸರಿಸಿ.

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಚದುರಂಗ, ಅನುಪಮಾ ನಿರಂಜನ, ವೈದೇಹಿ, ಯಶವಂತ ಚಿತ್ತಾಲ, ಪೂ.ಚಂ.ತೇಜಸ್ವಿ, ಅಮರೇಶ ನುಗಡೋಣಿ, ಸಾರಾ ಅಬೂಬಕ್ಕರ್ ಮೊದಲಾದವರು ಸಣ್ಣಕಥಾ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

2. ಸಣ್ಣಕಥೆಯ ವಸ್ತುಗಳಾವುವು ತಿಳಿಸಿ.

ಸಮಾಜದಲ್ಲಿನ ಏಳು–ಬೀಳುಗಳು, ಜನರ ಬದುಕು–ಬವಣೆಗಳು, ನೋವು–ನಲಿವುಗಳು, ಕ್ರೌರ್ಯ–ಶಾಂತಿಯ ನಡೆ ಹಾಗೂ ಅದರ ಪರಿಣಾಮಗಳು, ಮಾನವೀಯ ಮೌಲ್ಯಗಳು ಎಲ್ಲವೂ ಸಣ್ಣಕಥೆಗೆ ವಸ್ತುಗಳಾಗಿವೆ.

3. ಇತಿಹಾಸವನ್ನು ಗಮನಿಸಿದಾಗ ಯುದ್ಧಕ್ಕೆ ಪ್ರೇರಣೆ ನೀಡಿದ ಸಂಗತಿಗಳಾವುವು?

'ಯುದ್ಧ' ಇತಿಹಾಸದ ಉದ್ದಕ್ಕೂ ಇರುವಂತಹದ್ದೇ ಆಗಿದೆ. ಸಾಮ್ರಾಜ್ಯ ವಿಸ್ತರಣೆ, ಲೋಭ, ಶಕ್ತಿಯ ಪ್ರದರ್ಶನ, ಕೌಟುಂಬಿಕ ಕಲಹಗಳು, ದ್ವೇಷ ಸಾಧನೆ ಮುಂತಾದವು ಯುದ್ಧಕ್ಕೆ ಕಾರಣವಾಗುತ್ತವೆ.

ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

4. ಯುದ್ಧದ ಭೀಕರತೆ ಕುರಿತು ನಿಮ್ಮ ಮಾತುಗಳಲ್ಲಿ ತಿಳಿಸಿ.

ಯುದ್ಧದ ಭೀಕರತೆಯು ಧರ್ಮ, ದೇಶಗಳ ಭೇದವಿಲ್ಲದೆ ಭಾಗಿಯಾದ ಸೈನಿಕರಿಗೂ ಅವರ ಕುಟುಂಬ ವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಇದರ ನಡುವೆ ಯುದ್ಧದಲ್ಲಿ ನೊಂದವರು ಧರ್ಮಭಿನ್ನತೆ, ದೇಶಭಿನ್ನತೆ, ವೈರಿ–ಮಿತ್ರ ಎಂಬುದನ್ನೆಲ್ಲ ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ, ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡೆವಳಿಕೆಗಳು ಮುಖ್ಯವಾಗುತ್ತವೆ.

5. ಸಾ. ರಾ. ಅಬೂಬಕ್ಕರ್ ಅವರ ಕೃತಿಗಳು ಯಾವುವು?

ಸಾ. ರಾ. ಅಬೂಬಕ್ಕರ್ ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದುವು ಇವರ ಪ್ರಮುಖ ಕಾದಂಬರಿಗಳು. ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಇವು ಕಥಾ ಸಂಕಲನಗಳು.

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:**

1. "ಇದು ನಮ್ಮ ಪ್ರದೇಶವೇ, ಶತ್ರುಗಳ ಪ್ರದೇಶವೇ"

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ'ಯುದ್ಧ'ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರೇಡಿಯೋ ಸಮನಾಗಿ ಕಾರ್ಯನಿರ್ವಹಿಸದ ಕಾರಣ ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗದೇ ಇದ್ದಾಗ ರಾಹಿಲನು "ಇದು ನಮ್ಮ ಪ್ರದೇಶವೇ, ವೈರಿಗಳ ಪ್ರದೇಶವೇ ಎಂದು ಕೂಡಾ ಗೊತ್ತಾಗ್ತಾ ಇಲ್ಲ. ಹೇಗಾದರೂ ನೆಲ ಮುಟ್ಟಿದ್ದರೆ ಸಾಕಾಗಿತ್ತು" ಎನ್ನುತ್ತಾ ರಾಹಿಲ್ ತನ್ನ ಕೈಯಲ್ಲಿದ್ದ ಔಷಧ ಮತ್ತು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಇನ್ನಷ್ಟು ಭದ್ರವಾಗಿ ಹಿಡಿದುಕೊಳ್ಳುತ್ತಾ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಯುದ್ಧದ ಸಂದರ್ಭದಲ್ಲಿ ಬ್ಲಾಕ್ ಔಟ್ ನಿಯಮವನ್ನು ಅನುಸರಿಸುತ್ತಲಿದ್ದ ಕಾರಣ ರಾಹಿಲನಿಗೆ ತಮ್ಮನ್ನು ರಕ್ಷಣೆ ಮಾಡಿಕೊಳ್ಳುವ ಆತಂಕವೇ ಇಲ್ಲಿನ ಸ್ವಾರಸ್ಯವಾಗಿದೆ.

2. "ಯಾರಮ್ಮ ಅದು? ಏನಾಗಿದೆ ?"

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗುತ್ತಿರಲಿಲ್ಲ. ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆಯ ಆರ್ತನಾದವನ್ನು ಕೇಳಿಸಿಕೊಂಡಿದ್ದ ರಾಹಿಲನು ಮುದುಕಿಯನ್ನು ಕುರಿತು "ಯಾರಮ್ಮಾ ಅದು? ಏನಾಗಿದೆ?" ತನ್ನ ನೋವನ್ನೂ ಮರೆತು ಕೇಳುತ್ತಾನೆ.

ಸ್ವಾರಸ್ಯ :– ಯುದ್ಧದ ಸಂದರ್ಭದಲ್ಲಿ ಗಾಯ ಗೊಂಡಿರುವ ರಾಹಿನು ಜಾತಿ ,ಧರ್ಮ , ದೇಶ , ಜನಾಂಗ, ವೈರಿ–ಮಿತ್ರ ವೆಂಬ ಭೇದವನ್ನು ಮರೆತು ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆಯ ಆರ್ತನಾದ ಕೇಳಿ ಆತಂಕಗೊಂಡ ಸಂದರ್ಭವೇ ಇಲ್ಲಿನ ಸ್ವಾರಸ್ಯವಾಗಿದೆ.

3. " ಅಮ್ಮ ನಾನೊರ್ವ ಡಾಕ್ಟರ್. ನಾನಾಕೆಯನ್ನು ಪರೀಕ್ಷಿಸಲೇ?

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗುತ್ತಿರಲಿಲ್ಲ. ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆಯ ಆರ್ತನಾದವನ್ನು ಕೇಳಿಸಿಕೊಂಡಿದ್ದ ರಾಹಿಲನು ಮುದುಕಿಯನ್ನು ಕುರಿತು "ಅಮ್ಮಾ, ನಾನೋರ್ವ ಡಾಕ್ಟರ್. ನಾನು ಆಕೆಯನ್ನು ಪರೀಕ್ಷಿಸಲೇ?"ತನ್ನ ನೋವನ್ನೂ ಮರೆತು ಕೇಳುತ್ತಾನೆ.

ಸ್ವಾರಸ್ಯ :– ಯುದ್ಧದ ಸಂದರ್ಭದಲ್ಲಿ ಗಾಯ ಗೊಂಡಿರುವ ರಾಹಿಲನು ಜಾತಿ ,ಧರ್ಮ , ದೇಶ , ಜನಾಂಗ, ವೈರಿ–ಮಿತ್ರ ವೆಂಬ ಭೇದವನ್ನು ಮರೆತು ಸಹಾಯ ಮಾಡಲು ಧಾವಿಸುವ ಸಂದರ್ಭವೇ ಇಲ್ಲಿನ ಸ್ವಾರಸ್ಯವಾಗಿದೆ.

4. "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ "

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗದೇ ಇದ್ದುದರಿಂದ ರಾಹಿಲನು ಸಹ ಓರ್ವ ಡಾಕ್ಟರನಾಗಿದ್ದರಿಂದ ಹೆರಿಗೆ ಮಾಡಿಸಲು ಪ್ರಯತ್ನಿಸಿದನು. ಆದರೆ ಅವನ ಪ್ರಯತ್ನ ವಿಫಲವಾಯಿತು. ಮುದುಕಿ ಮತ್ತು ಸೊಸೆಯ ರೋಧನೆ ಮನೆಯ ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿಸಿತು. "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಎಂದು ರೋಧಿಸುತ್ತಾಳೆ.

ಸ್ವಾರಸ್ಯ:ಬಹಳ ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕದೇ ಹೋದ ನಿರಾಶಾ ಭಾವನೆ ಮುದುಕಿಯ ಮಾತಿನಲ್ಲಿ ಧ್ವನಿತವಾಗಿದೆ.

5. " ಅಮ್ಮ ನಾನು ಬರುವುದು ಸ್ವಲ್ಪ ತಡವಾಗಿದ್ದರೂ ನಿಮ್ಮ ಸೊಸೆಯೂ ಉಳಿಯುತ್ತಿರಲಿಲ್ಲ"

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗದೇ ಇದ್ದುದರಿಂದ ರಾಹಿಲನು ಸಹ ಓರ್ವ ಡಾಕ್ಟರನಾಗಿದ್ದರಿಂದ ಹೆರಿಗೆ ಆಡಿಸಲು ಪ್ರಯತ್ನಿಸಿದನು. ಆದರೆ ಅವನ ಪ್ರಯತ್ನ ವಿಫಲವಾಯಿತು. ಆಗ "ಅಮ್ಮಾ, ನಾನು ಬರುವುದು ಕೊಂಚ ತಡವಾಗಿದ್ದರೂ ನಿಮ್ಮ ಸೊಸೆಯೂ ಉಳಿಯುತ್ತಿರಲಿಲ್ಲ. ಹೇಗೋ ಸೊಸೆಯನ್ನು ಬದುಕಿಸಿದೆ. ಎಂದು ಹೇಳುತ್ತಾನೆ.

ಸ್ವಾರಸ್ಯ:– ರಾಹಿಲನು ಜಾತಿ ,ಧರ್ಮ , ದೇಶ , ಜನಾಂಗ, ವೈರಿ–ಮಿತ್ರ ವೆಂಬ ಭೇದವನ್ನು ಮರೆತು ಸಹಾಯ ಮಾಡಲು ಧಾವಿಸಿದರೂ ಆತನ ಪ್ರಯತ್ನ ವಿಫಲವಾದ ಕಾರಣ ನಿರಾಶೆಯು ಈ ಮಾತಿನಲ್ಲಿ ವ್ಯಕ್ತವಾಗಿದೆ.

6. "ಡಾಕ್ಟರ್ ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ"

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ರಾಹಿಲ್ ಮತ್ತು ಪೈಲೆಟ್ ಇಬ್ಬರೂ ಕೂಡ ಯುದ್ಧದ ಸಮಯದಲ್ಲಿ ರಾತ್ರಿ ಎರಡೂ ದೇಶಗಳ ಗಡಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಬ್ಲಾಕ್ ಔಟ್ ನಿಯಮವನ್ನು ಪಾಲಿಸಲಾಗುತ್ತಿದ್ದುದ್ದರಿಂದ ಸುತ್ತಲೂ ಕತ್ತಲೆ ಆವರಿಸಿರುತ್ತದೆ. ಅವರು ತಾವು ಶತ್ರು ದೇಶದಲ್ಲಿದ್ದೇವೆಯೋ ಅಥವಾ ತಮ್ಮ ದೇಶದಲ್ಲಿದ್ದೇವೆಯೋ ಎಂದು ತಿಳಿಯದೇ ಇದ್ದಾಗ "ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?" ಎಂದು ಪೈಲೆಟ್ ರಾಹಿಲನಿಗೆ ಹೇಳುತ್ತಾನೆ.

ಸ್ವಾರಸ್ಯ:– ಯುದ್ಧದ ಸಂದರ್ಭದಲ್ಲಿ ಬ್ಲಾಕ್ ಔಟ್ ನಿಯಮವನ್ನು ಅನುಸರಿಸುತ್ತಲಿದ್ದ ಕಾರಣ ರಾಹಿಲನಿಗೆ ಹಾಗೂ ಪೈಲೆಟ್‌ಗೆ ತಮ್ಮನ್ನು ರಕ್ಷಣೆ ಮಾಡಿಕೊಳ್ಳುವ ಆತಂಕವೇ ಇಲ್ಲಿನ ಸ್ವಾರಸ್ಯವಾಗಿದೆ.

7. " ಏನು ಮಗಳೇ ? ಈ ಮಳೆಯಲ್ಲಿ ಈ ಕತ್ತಲಲ್ಲಿ ನನು ಯಾರನ್ನು ಕರೆಯಲಿ "

ಆಯ್ಕೆ :– ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಬ್ಲಾಕ್

ಔಟ್ ನಿಯಮವನ್ನು ಪಾಲಿಸಲಾಗುತ್ತಿತ್ತು. ಅಲ್ಲದೇ ರಾತ್ರಿಯಾಗಿದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗದ ಸ್ಥಿತಿಯಲ್ಲಿ ಮುದುಕಿಯು ಅಸಹಾಯಕಳಾಗಿ "ಏನು ಮಾಡಲಿ ಮಗಳೇ? ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ? ಒಮ್ಮೆ ಬೆಳಗಾಗಿದ್ದರೆ ಸಾಕಾಗಿತ್ತು." ಎಂದು ಹೇಳುತ್ತಾಳೆ.

ಸ್ವಾರಸ್ಯ:- ಯುದ್ಧದ ಸಂದರ್ಭದಲ್ಲಿ ಬ್ಲಾಕ್ ಔಟ್ ನಿಯಮವನ್ನು ಅನುಸರಿಸುತ್ತಲಿದ್ದ ಕಾರಣ ಯಾರೂ ಸಹ ಸಕಾಲದಲ್ಲಿ ನೆರವಿಗೆ ಇಲ್ಲದಿರುವ ಮುದುಕಿಯ ಅಸಹಾಯಕತೆಯೇ ಇಲ್ಲಿನ ಸ್ವಾರಸ್ಯವಾಗಿದೆ.

8. " ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ?"

ಆಯ್ಕೆ :- ಈ ವಾಕ್ಯವನ್ನು "ಶ್ರೀಮತಿ ಸಾರಾ ಅಬೂಬಕ್ಕರ್" ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:- ರಾಹಿಲ ಮತ್ತು ಮುದುಕಿಯರಲ್ಲಿ ಒಂದೆರಡು ದಿನಗಳಲ್ಲಿ ಪರಸ್ಪರರಲ್ಲಿ ವಿಶ್ವಾಸ ಮೂಡಿತು. ಇಬ್ಬರೂ ಪರಸ್ಪರರಲ್ಲಿ ಸುಖ ದುಃಖಗಳನ್ನು ಹಂಚಿಕೊಂಡರು ಮುದುಕಿಯ ಹಿಂದಿನ ಕಥೆಯನ್ನು ಕೇಳಿದಾಗ ಮುದುಕಿಯು "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ತಿರಸ್ಕಾರದಿಂದ ಹೇಳುತ್ತಾಳೆ.

ಸ್ವಾರಸ್ಯ:- ಮುದುಕಿಯ ಗಂಡನ್ನು, ಮಗನ್ನು ಕೊನೆಗೆ ತನ್ನ ಮೊಮ್ಮಗುವನ್ನು ಬಲಿ ತೆಗೆದುಕೊಂಡ ಯುದ್ಧದ ಬಗ್ಗೆ ಮುದುಕಿಯು ಹೊಂದಿದ್ದ ತಿರಸ್ಕಾರದ ಭಾವನೆಯು ಈ ಮಾತಿನಲ್ಲಿ ವ್ಯಕ್ತವಾಗಿದೆ.

## 2. ಶಬರಿ

### ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಗೀತನಾಟಕಗಳಿಗೆ ಪ್ರೇರಿತ ಕಾವ್ಯಗಳಾವುವು?

ಗೀತನಾಟಕಗಳಿಗೆ ಪ್ರೇರಿತ ಕಾವ್ಯಗಳೆಂದರೆ ರಾಮಾಯಣ, ಮಹಾಭಾರತ ಮಹಾಕಾವ್ಯಗಳು.

2. ಚಿತ್ರಕೂಟ ಪರ್ವತ ಎಲ್ಲಿದೆ ?

ಒಂದು ಪರ್ವತ. ಉತ್ತರ ಭಾರತದ ಪಯೋಷ್ಣಿ ನದಿಯ ಪಕ್ಕದಲ್ಲಿದೆ.

3. ಶಬರಿ ಗೀತಾ ನಾಟಕ ಕರ್ತೃ ಯಾರು ?

ಶಬರಿ ಗೀತಾ ನಾಟಕ ಕರ್ತೃ ಪು.ತಿ.ನ ಅವರು

4. ಪು.ತಿ.ನ ಅವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ
ಪ್ರಶಸ್ತಿ ಲಭಿಸಿದೆ?

ಪು.ತಿ.ನ ಅವರ ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ

5. ಪು.ತಿ.ನ ಅವರ ಯಾವ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ?

ಪು.ತಿ.ನ ಅವರ ಶ್ರೀಹರಿಚರಿತೆ ಕಾವ್ಯಕ್ಕೆ ಪಂಪಪ್ರಶಸ್ತಿ ಲಭಿಸಿದೆ.

### ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ:

1. ಗೀತನಾಟಕದ ವಿಶೇಷತೆಯನ್ನು ತಿಳಿಸಿ.

ಸಾಹಿತ್ಯ, ಸಂಗೀತ, ನೃತ್ಯ, ಕಲೆಗಳ ಸಂಗಮವಾದ ಗೀತನಾಟಕ ಸಂಭಾಷಣಾಯುಕ್ತವಾದುದು, ಪ್ರತಿಯೊಂದು ಪಾತ್ರದ ಹಿರಿಮೆಯೊಂದಿಗೆ ಸಂವೇದನಾಶೀಲವಾಗಿ ಕಥೆಯನ್ನು ನಿರೂಪಿಸುವ ಗುಣ ಈ ಗೀತನಾಟಕದ್ದಾಗಿದೆ.

2. ವಾಲಿಯು ಮತಂಗ ಮುನಿಗಳ ಆಶ್ರಮಕ್ಕೆ ಬಾರದಂತೆ ಇರಲು ಕಾರಣವಾದ ಘಟನೆ ಯಾವುದು?

ವಾಲಿಯು ದುಂದುಭಿಯೆಂಬ ರಕ್ಕಸನನ್ನು ಕೊಂದು ಮದೋನ್ಮತ್ತನಾಗಿ ಕಳೇಬರವನ್ನು ಆಶ್ರಮಕ್ಕೆ ಎಸೆದಾಗ ಋಷ್ಯಾಶ್ರಮವು ಕಲುಷಿತಗೊಂಡಿತು. ಇದರಿಂದ ಕ್ರುದ್ಧನಾದ ಮತಂಗಮುನಿಯು "ವಾಲಿಯು ಈ ಆಶ್ರಮವನ್ನು ಪ್ರವೇಶ ಮಾಡಿದರೆ ಸಾವು ಸಂಭವಿಸಲಿ" ಎಂದು ಶಪಿಸಿದನು. ಹಾಗಾಗಿ ವಾಲಿಯು ಮತಂಗಾಶ್ರಮಕ್ಕೆ ಬಾರದಂತಾಯಿತು.

3. ಶಬರಿ ಗೀತ ನಾಟಕದಲ್ಲಿ ಮನೋಜ್ಞವಾಗಿ ಮೂಡಿ ಬಂದಿರುವ ಅಂಶಗಳಾವುವು ?

ಸೀತಾಪಹರಣದ ಅನಂತರ ಶೋಕತಪ್ತರಾದ ರಾಮ-ಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ ದನು ಎಂಬವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯದೈವ ಶ್ರೀರಾಮನನ್ನು ಕಂಡು ಆನಂದಿಸಿ, ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸಿದ ಸಂದರ್ಭವೇ ಈ ಗೀತ ನಾಟಕ.

4. ಪು.ತಿ.ನ ಅವರ ಪ್ರಮುಖ ಕೃತಿಗಳಾವುವು ?

ಪು.ತಿ.ನ ಅವರ ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು.

### ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:

1." ದೊರೆವಳೇ ಸೀತೆ ! ಭೂಮಿಜಾತೆ ಆತ್ಮ ಕಾಮಕಲ್ಪಲತೆ"

ಆಯ್ಕೆ :-ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಸೀತಾಪಹರಣದ ಅನಂತರ ಶೋಕತಪ್ತರಾದ ರಾಮ–ಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ದನು ಪುತ್ರರ ಸೂಚನೆಯಂತೆ ಮಾತಂಗಾ ಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಶ್ರೀರಾಮನು ಗಿರಿವನವನ್ನು ಕುರಿತು "ದೊರೆವಳೇ ಸೀತೆ । ಭೂಮಿಜಾತೆ ಆತ್ಮ ಕಾಮಕಲ್ಪಲತೆ ದೊರೆವಳೇ ಚೆಲುವೆ? । ಎರೆವೆ ಎರೆವೆ ಗಿರಿವನವೇ, ಪೇಳಿರಿ ನಾನೆರೆವೆ ದೊರೆವಳೇ? ದೊರೆಯಳೇ? ಅವಳ ನೆಲೆ ಯಾರು ಅರಿಯಿರೇ, ಪೇಳಿ ಎನ್ನರಸಿ ದೊರೆಯಳೇ? ಎಂದು ಪ್ರಾರ್ಥಿಸುತ್ತಾನೆ.

ಸ್ವಾರಸ್ಯ:–ಸೀತಾಪಹರಣದಿಂದ ಶೋಕತಪ್ತನಾದ ಶ್ರೀರಾಮನ ಸಹಾಯಕತೆ, ದುಗುಡವು ಮತ್ತು ಸೀತೆಯ ಬಗ್ಗೆ ಅವನು ಹೊಂದಿದ್ದ ಪ್ರೀತಿಯು ಈ ಮಾತಿನಲ್ಲಿ ವ್ಯಕ್ತವಾಗಿದೆ.

2. ''ಎನ್ನಹಂಕೃತಿಗೆ ಮನ್ನಣೆಯ ಕೊಟ್ಟೆ''

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ದನುಪುತ್ರರ ಸೂಚನೆಯಂತೆ ಮಾತಂಗಾ ಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಚಿತ್ರಕೂಟವನ್ನೇ ಹೋಲುತ್ತಿದ್ದ ಮತಂಗಾಶ್ರವನ್ನು ಕುರಿತು ಶ್ರೀರಾಮನು ಹೇಳುತ್ತಿರುವಾಗ ಲಕ್ಷ್ಮಣನು "ಅಹುದು ದಿಟ ಚಿತ್ರಕೂಟವೆ ಮನಕೆ ಬಹುದು । ಜತೆಯೊಳತ್ತಿಗೆಯಿದ್ದ ಬಗೆಯಂತಹುದು. ಹಾ! ಪಾಪಿ, ನಾ ಆಕೆಯನು ಒಂಟಿಯೊಳೆ ಬಿಟ್ಟೆ । ಎನ್ನಹಂಕೃತಿಗೆಯೇ ಮನ್ನಣೆಯ ಕೊಟ್ಟೆ !" ಎಂದು ಹೇಳುತ್ತಾನೆ.

ಸ್ವಾರಸ್ಯ:– :–ಸೀತಾಪಹರಣದಿಂದ ಶೋಕತಪ್ತನಾದ ಶ್ರೀರಾಮನಿಗೆ ಲಕ್ಷ್ಮಣನು ತನ್ನ ತಪ್ಪಿನಿಂದಲೇ ಹೀಗಾಯಿತೆಂದು ಸ್ವವಿಮರ್ಶಿಸಿಕೊಳ್ಳುವುದು ಈ ಮಾತಿನಲ್ಲಿ ವ್ಯಕ್ತವಾಗಿದೆ.

3. ''ರೂಪಕ್ಕೂ ನಾಮ ಮಿಗಿಲಾತ್ಮ ಸುರಭಿಯದು''

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :–ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ದನು ಪುತ್ರರ ಸೂಚನೆಯಂತೆ ಮಾತಂಗಾ ಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಶಬರಿಯು ಶ್ರೀರಾಮನ ಬರುವಿಕೆಗಾಗಿ ಕಾಯುತ್ತಾ ಹಂಬಲಿಸುವುದನ್ನು ಕಂಡ ಲಕ್ಷ್ಮಣನು "ನಿನ್ನ ನೋಡದೆ ಇಂತು ಮರುಳಾದ ಈ ಸಿದ್ಧೆ । ಇನ್ನು ನೋಡಿದ ಬಳಿಕ ಏನಪ್ಪಳೋ ವೃದ್ಧೆ!' ಎಂದಾಗ ರಾಮನು "ರೂಪಕೂ ನಾಮ ಮಿಗಿಲಾತ್ಮ ಸುರಭಿಯದು । ಎನ್ನ ಕಾಣುತಲಿವಳ ಬೆರಗು ತಿಳಿಯುವುದು" ಎಂದು ಹೇಳುತ್ತಾನೆ.

ಸ್ವಾರಸ್ಯ:– ದೈಹಿಕ ರೂಪಕ್ಕಿಂತ ನಾಮ ಅಥವಾ ಹೆಸರೇ ಶ್ರೇಷ್ಠ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

4. ''ಎಂದು ಕಾಂಬೆ ನಾ ರಾಮನ ನೆಂದು ಕಾಂಬೆ ನಾ''

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಶ್ರೀರಾಮನಿಗಾಗಿ ಹಂಬಲಿಸುತ್ತಿರುವ ಶಬರಿಯು ನಿತ್ಯವೂ ಹೂ ಹಣ್ಣುಗಳನ್ನು ಮಧುಪರ್ಕವನ್ನು ಸಂಗ್ರಹಿಸಿಕೊಂಡು ಅವನಿಗಾಗಿ ಹಗಲಿರುಳು ಕಾಯುತ್ತಿರುತ್ತಾಳೆ. ಅವನಿಗಾಗಿ ಹಂಬಲಿಸುತ್ತ "ಎಂದು ಕಾಂಬೆ ನಾ ರಾಮನ । ನೆಂದು ಕಾಂಬೆ ನಾ ! ದಶರಥನ ಪುತ್ರನಂತೆ । ಸಾಧು ಜನರ ಮಿತ್ರನಂತೆ ಧೀರ ಶೂರ ವೀರ ಗಂ_ । ಭೀರ ಸದ್ಗುಣ ಸಾರನಂತೆ" –ಎಂದು ತಾನೊಬ್ಬಳೇ ಹಾಡಿಕೊಳ್ಳುತ್ತಾಳೆ.

ಸ್ವಾರಸ್ಯ:– ಶ್ರೀರಾಮನಿಗಾಗಿ ಹಂಬಲಿಸುತ್ತಿರುವ ಶಬರಿಯ ಹಂಬಲ, ಪ್ರೀತಿ, ಭಕ್ತಿಯೇ ಇಲ್ಲಿನ ಸ್ವಾರಸ್ಯವಾಗಿದೆ.

5. ''ನಮ್ಮಯೋಧ್ಯೆಯರಮನೆಯೊಳು ಇದಕು ಲೇಸು ಇಲ್ಲ''

ಆಯ್ಕೆ :–ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಶಬರಿಯು ಮತಂಗಾಶ್ರಮಕ್ಕೆ ಆಗಮಿಸಿದ ಶ್ರೀರಾಮ– ಲಕ್ಷ್ಮಣರಿಗಾಗಿಯೇ ತಾನು ವನದಿಂದ ಸಂಗ್ರಹಿಸಿ ತಂದಿದ್ದ ಹೂ ಹಣ್ಣುಗಳನ್ನು ಮಧುಪರ್ಕವನ್ನು ಅವರಿಗೆ ಅಪಿಸಿದಾಗ ಅವಳ ಆತಿಥ್ಯದಿಂದ ಸಂತೃಪ್ತನಾದ ಶ್ರೀರಾಮನು ಶಬರಿಯ ಮೇಲೆ ಕರುಣೆಯಿಂದ ಮಾತಾಡಿದಾಗ ಶಬರಿಯು ನಾನು ಬಡವಿ, ನಾನಬ್ಬಳೇ ಏನು ಮಾಡೆಳೆಂದು ಮರುಕ ಪಟ್ಟಿರಾ ಎಂದು ಕೇಳಿದಾಗ ಶ್ರೀರಾಮನು "ಕಣ್ಣ ನೀರಿದೇಕೆ ತಾಯೆ, ತುಸವೂಣೆಯವಿಲ್ಲ ನಮ್ಮಯೋಧ್ಯೆಯರಮನೆಯೊಳು ಇದಕು ಲೇಸು ಸಲ್ಲ. ಇಂದು ಹಳುವ ಮರೆತೆವು । ಇಲ್ಲೆ ಮನೆಯನರಿತೆವು" ಎಂದು ಹೇಳುತ್ತಾನೆ.

ಸ್ವಾರಸ್ಯ:–ಶಬರಿಯ ಆತಿಥ್ಯದಿಂದ ಸಂತೃಪ್ತರಾದ ಶ್ರೀರಾಮ ಲಕ್ಷ್ಮಣರ ಧನ್ಯತಾ ಭಾವ ಇಲ್ಲಿ ವ್ಯಕ್ತವಾಗಿದೆ.

# 3. ಲಂಡನ್ ನಗರ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಪ್ರವಾಸ ಕಥನವನ್ನು ಪ್ರತಿನಿಧಿಸುವ ಗಾದೆ ಮಾತುಯಾವುದು?

"ದೇಶ ನೋಡು ಕೋಶ ಓದು" ಎಂಬುದು ಪ್ರವಾಸ ಕಥನವನ್ನು ಪ್ರತಿನಿಧಿಸುವ ಗಾದೆ ಮಾತು.

2. ವಿ.ಕೃ.ಗೋಕಾಕರ ಪ್ರಮುಖ ಕೃತಿಗಳಾವುವು?

ವಿ.ಕೃ.ಗೋಕಾಕ ಅವರು ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ ಮೊದಲಾದ ಕೃತಿಗಳ ಕರ್ತೃ.

3. ವಿ.ಕೃ.ಗೋಕಾಕರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?

ವಿ.ಕೃ.ಗೋಕಾಕರ ದ್ಯಾವಾ ಪೃಥಿವೀ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

4. ವಿ.ಕೃ.ಗೋಕಾಕರಿಗೆ ಸಂದಿರುವ ಪ್ರಶಸ್ತಿಗಳಾವುವು?
ವಿ.ಕೃ.ಗೋಕಾಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಜ್ಞಾನಪೀಠ ಪ್ರಶಸ್ತಿ ಹಾಗೂ ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.
5. 'ಲಂಡನ್ ನಗರ' ಪ್ರವಾಸ ಕಥೆಯು ವಿ.ಕೃ ಅವರ ಯಾವ ಕೃತಿಯಿಂದ ಆರಿಸಲಾಗಿದೆ?
'ಲಂಡನ್ ನಗರ' ಪ್ರವಾಸ ಕಥೆಯು ವಿ.ಕೃ. ಗೋಕಾಕ ವಿರಚಿತ 'ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಿ ಸಂಗ್ರಹಿಸಲಾಗಿದೆ.
6. ವೆಸ್ಟ್ ಮಿನಿಸ್ಟರ್ ಅಬೆಯಲ್ಲಿರುವ ಪ್ರಸಿದ್ಧ ಕವಿ, ಲೇಖಕರ ಸ್ಮಾರಕಗಳಾವುವು ?
ವೆಸ್ಟ್ ಮಿನಿಸ್ಟರ್ ಅಬೆಯಲ್ಲಿರುವ **Poet's Corner**(ಪೊಯೆಟ್ಸ್ ಕಾರ್ನರ್) ನಲ್ಲಿ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್, ಡ್ರಾಯ್‌ಡನ್,ಬೆನ್‌ಜಾನ್ಸನ್, ವರ್ಡ್ಸ್‌ವರ್ತ್, ಮೊದಲಾದ ಪ್ರಸಿದ್ಧ ಕವಿ, ಲೇಖಕರ ಸ್ಮಾರಕಗಳಿವೆ.
7. ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಪ್ರಸಿದ್ಧ ವಿಜ್ಞಾನಿಗಳ ಸಮಾಧಿಗಳಾವುವು ?
ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಡಾರ್ವಿನ್, ಹರ್ಶೆಲ್, ನ್ಯೂಟನ್ ಮೊದಲಾದ ಪ್ರಸಿದ್ಧ ವಿಜ್ಞಾನಿಗಳ ಸಮಾಧಿಗಳಿವೆ.
ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:
1. ಲಂಡನ್ ನಗರವನ್ನು ಲೇಖಕರು ಸ್ವತಂತ್ರ ಜಗತ್ತು ಎಂದು ಏಕೆ ಕರೆದಿದ್ದಾರೆ?
ಲಂಡನ್ ನಗರದ ವ್ಯಾಪಾರ ವ್ಯವಸ್ಥೆ, ರಸ್ತೆಗಳು, ಭೂಗರ್ಭದ ಮಾರ್ಗಗಳು, ಸಾರಿಗೆ ಸಾಧನಗಳಾದ ಟ್ರಾಮ್ ಬಸ್ಸುಗಳು, ಹಳಿ, ಇಲೆಕ್ಟ್ರಿಕ್‌ಗಾಡಿ, ನಿಲ್ದಾಣ, ಎಸ್ಕಲೇಟರ್‌ಗಳು ಎಲ್ಲವನ್ನೂ ಗಮನಿಸಿದ ಲೇಖಕರು ಅದೊಂದು ಸ್ವತಂತ್ರ ಜಗತ್ತು ಎಂದು ಕರೆದಿದ್ದಾರೆ.
2. ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸ್ ಕುರಿತು ವಿವರಿಸಿ.
ಲಂಡನ್ ನಗರದ ಚೇರಿಂಗ್ ಕ್ರಾಸ್‌ನಲ್ಲಿರುವ ಇಂಡಿಯಾ ಆಫೀಸು ನೋಡುವ ಹಾಗಿದೆ. ವಾಚನಾಲಯದಲ್ಲಿ ಅನೇಕ ಮಹತ್ತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗಬಹುದೆಂದು ಕಾಣುತ್ತದೆ. ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ. ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ.
3. **Royal chapel**(ರಾಜ ವಿಭಾಗ)ನಲ್ಲಿ ಯಾರ ಗೋರಿಗಳಿವೆ ?
**Royal chapel**(ರಾಜ ವಿಭಾಗ)ನಲ್ಲಿರಿಚರ್ಡ್, 2ನೆಯ ಎಡ್ವರ್ಡ್, ಅರ್ಲ್ ಆಫ್ ಸ್ಟ್ಯಾಫೋರ್ಡ್, ರಾಣಿ ಎಲಿಜಬೆತ್, 1ನೆಯ ಜೇಮ್ಸ್,7ನೆಯ ಹೆನ್ರಿ ಮೊದಲಾದ ಅರಸು, ಅರಸಿಯರ ಗೋರಿಗಳಿವೆ.
4.'ವೂಲವರ್ಥ'ನ್ನು ಲೇಖಕರು ಪ್ರಾಚೀನ ಮಹಾಕಾವ್ಯವೆಂದು ಕರೆಯಲು ಕಾರಣವೇನು ?
'ವೂಲವರ್ಥ' ಎಂಬ 'ಸ್ಟೇಷನರಿ' ಅಂಗಡಿಯು ನೋಡುವ ಹಾಗಿದೆ. ಎಲ್ಲ ತರದ ಸಾಮಾನುಗಳನ್ನು ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ.ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೊಟೋ, ಅಡವಿಯ ಹೂವು, ಯುದ್ಧಸಾಮಗ್ರಿ ಮೊದಲಾದವುಗಳು ಇಲ್ಲಿ ದೊರೆಯುತ್ತವೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಎಂದು ಲೇಖಕರು ಕರೆದಿದ್ದಾರೆ.
5. ಇಂಗ್ಲೆಂಡ್‌ನಲ್ಲಿ ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವೆಂದು ಏಕೆ ಕರೆದಿದ್ದಾರೆ?
ಲಂಡನ್ ನಗರದ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರಗೃಹಗಳಲ್ಲಿ ಇಲ್ಲಿ ಮಾಣಿಗಳಿಲ್ಲ, ಬೆಂಗಳೂರಿನ ಮಾತಿನಲ್ಲಿ ಹೇಳುವುದಾದರೆ 'ಅಮ್ಮಣ್ಣಿ'ಗಳಿರುತ್ತಾರೆ. ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ, ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ನಮ್ಮ ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ! ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿಯೇ ಕಾಣಬೇಕೆಂದು ಆಂಗ್ಲರ ಮತ.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:
1. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"
ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:– ಲೇಖಕರಾದ ವಿ.ಕೃ.ಗೋಕಾಕ್ ರವರು ಪ್ರವಾಸದ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ಪ್ರವಾಸವು ಶಿಕ್ಷಣದ ಭಾಗವಾಗಿದೆ. ಪ್ರವಾಸದಿಂದ ವ್ಯಕ್ತಿಯಲ್ಲಿ ವಿಶಾಲ ದೃಷ್ಟಿಕೋನ ಬೆಳೆಯುವುದಲ್ಲದೆ, ವಿಭಿನ್ನ ಸಂಸ್ಕೃತಿಯ ಪರಿಚಯವಾಗುತ್ತದೆ, ಜ್ಞಾನವರ್ಧನೆಯಾಗುವುದು ಎಂದು ಹೇಳುತ್ತಾ, ಪ್ರವಾಸ ಕೈಗೊಳ್ಳದ ವ್ಯಕ್ತಿಯನ್ನು ಕುರಿತು ವಿಲಿಯಂ ಷೇಕ್ಸ್‌ಪಿಯರನು ಹೇಳಿದ 'ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ' ಎಂಬ ಮಾತನ್ನು ನೆನಪಿಸಿಕೊಳ್ಳುತ್ತಾ ಹೇಳುತ್ತಾರೆ.

ಸ್ವಾರಸ್ಯ:– ಪ್ರವಾಸದಿಂದ ದೃಷ್ಟಿಯು ಎಷ್ಟು ವಿಶಾಲವಾಗುತ್ತದೆ, ವಿಭಿನ್ನ ಸಂಸ್ಕೃತಿಯ ಪರಿಚಯವಾಗುತ್ತದೆ. ಪ್ರವಾಸ ಮಾಡದಿರುವ ವ್ಯಕ್ತಿಯ ಜ್ಞಾನದ ಕುರಿತು ಹೇಳಿರುವುದೇ ಇಲ್ಲಿನ ಔಚಿತ್ಯವಾಗಿದೆ.

2.''ಇಲ್ಲಿ ಸರ್ಕಾರಿ ಡಾಕ್ಟರ್ ರಂತೆ, ಸಕಾರಿ ವೈದಿಕರೂ ಇರುತ್ತಾರೆ.''

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಲೇಖಕರಾದ ವಿ.ಕೃ.ಗೋಕಾಕ್ ರವರು ಲಂಡನ್ ನಗರದಲ್ಲಿರುವ ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬ ಸ್ಮಾರಕವನ್ನು ಕುರಿತು ವಿವರಿಸುತ್ತಾ "ಕಟ್ಟಡವು ಭವ್ಯವಾಗಿದೆ. ನಾವು ಹೋದಾಗ ಪಾದ್ರಿಯು ಪ್ರಾರ್ಥನೆಯನ್ನು ಓದುತ್ತಿದ್ದರು. ಕೇಳಲೆಂದು ನೂರಾರು ಜನರು ನೆರೆದಿದ್ದರು. 'ಸರಕಾರಿ ಡಾಕ್ಟರ'ರಂತೆ ಇಲ್ಲಿ 'ಸರಕಾರಿ ವೈದಿಕರೂ' ಇರುತ್ತಾರೆ. ಜನರ ಆತ್ಮಗಳ ಆರೋಗ್ಯವನ್ನು ಕಾಯುವುದೇ ಅವರ ಕೆಲಸ. ಇದು ಎಷ್ಟರಮಟ್ಟಿಗೆ ಸಾಧಿಸುವುದೋ ದೇವರೇ ಬಲ್ಲ!" ಎಂದು ಉದ್ಗರಿಸುತ್ತಾರೆ.

ಸ್ವಾರಸ್ಯ:– ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಜನರ ಆತ್ಮಗಳ ಆರೋಗ್ಯವನ್ನು ಕಾಯುವ ಸಲುವಾಗಿ ನೇಮಕಗೊಂಡಿರುವ ಸರ್ಕಾರಿ ವೈದಿಕರ ಕುರಿತು ಹೇಳಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

3.''ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ" ಎಂಬ ಪ್ರವಾಸಕಥನದಿಂದ ಆಯ್ದ "ಲಂಡನ್‌ನಗರ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಸಂದರ್ಭ:– ಲೇಖಕರಾದ ವಿ.ಕೃ.ಗೋಕಾಕ್ ರವರು ಲಂಡನ್ ನಗರದಲ್ಲಿರುವ ವೂಲವರ್ಥ ಸ್ಟೇಷನರಿ ಅಂಗಡಿಯ ಕುರಿತು ವರ್ಣಿಸುತ್ತಾ "ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಅಂಗಡಿಯಲ್ಲಿ ಎಲ್ಲಾ ವಿಧದ ಜೀವನಾವಶ್ಯಕ ವಸ್ತುಗಳು ಇಲ್ಲಿ ದೊರೆಯುತ್ತವೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಎಂದು ಹೇಳಿದ್ದಾರೆ.

ಸ್ವಾರಸ್ಯ:– ಲಂಡನ್ ನಗರದಲ್ಲಿರುವ ವೂಲವರ್ಥ ಸ್ಟೇಷನರಿ ಅಂಗಡಿಯ ವೈಶಿಷ್ಟ್ಯತೆ ಇಲ್ಲಿ ವ್ಯಕ್ತವಾಗಿದೆ.

4.''ಮರ್ತ್ಯತ್ವವೇ ಎಷ್ಟು ಗೋರಿಗುಂಪುಗಳು ಇಲ್ಲಿವೆ ನೋಡಿ ಅಂಜು"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:–ಲೇಖಕರಾದ ವಿ.ಕೃ.ಗೋಕಾಕ್ ರವರು ಲಂಡನ್ ನಗರದಲ್ಲಿರುವ ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬ ಸ್ಮಾರಕವನ್ನು ಕುರಿತು ವಿವರಿಸುತ್ತಾಇಲ್ಲಿ ಸಂತ, ಸಾರ್ವಭೌಮರು ಮಲಗಿರುವರು; ಕವಿಪುಂಗವರು ಒರಗಿರುವರು. ಸತ್ತವರ ಸ್ಮಾರಕವೆಂದು ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. "ಮರ್ತ್ಯತ್ವವೇ ಎಷ್ಟು ಗೋರಿಗುಂಪುಗಳು ಇಲ್ಲಿವೆ ನೋಡಿ ಅಂಜು" ಎಂದು 300 ವರ್ಷಗಳ ಹಿಂದೆ ಬ್ಯೂಮಾಂಟ್ ಎಂಬ ಕವಿ ಹೇಳಿದ ಮಾತನ್ನು ನೆನಪಿಸಿಕೊಳ್ಳುತ್ತಾರೆ.

ಸ್ವಾರಸ್ಯ:– ವೆಸ್ಟ್ ಮಿನಿಸ್ಟರ್ ಅಬೆಯ ಮಹತ್ವವನ್ನು ಕುರಿತು ವಿವಿಧ ಕವಿಗಳು, ಲೇಖಕರು ಹೇಳಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ

5.''ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ, ಒಂದೊಂದು ಕಲ್ಲನ್ನು ಕೊಟ್ಟಿದ್ದಾರೆ"

ಆಯ್ಕೆ :– ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್‌ನಗರ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– ಲೇಖಕರಾದ ವಿ.ಕೃ.ಗೋಕಾಕ್ ರವರು ಲಂಡನ್ ನಗರದಲ್ಲಿರುವ ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬ ಸ್ಮಾರಕವನ್ನು ಕುರಿತು ವಿವರಿಸುತ್ತಾಇಲ್ಲಿರುವ ಕಅಜಣ' ಅಅಡಿಟಜಡಿ (ಪೊಯೆಟ್ಸ್ ಕಾರ್ನರ್) ಕವಿಗಳ ಮೂಲೆಯಲ್ಲಿರುವ ವಿವಿಧ ಕವಿಗಳ ಸ್ಮಾರಕಗಳನ್ನು ವೀಕ್ಷಿಸುತ್ತಾ ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ:– ಲಂಡನ್ ನಗರದ ಅರಸರು ಸಂತ, ಸಾರ್ವಭೌಮರು ಕವಿಪುಂಗವರಿಗೆ ನೀಡಿರುವ ಮನ್ನಣೆಯೇ ಇಲ್ಲಿಯ ವೈಶಿಷ್ಟ್ಯ.

## 3. ಭಾಗ್ಯಶಿಲ್ಪಿಗಳು

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಶಿವನಸಮುದ್ರದ ಬಳಿ ಜಲವಿದ್ಯುತ್ ಉತ್ಪಾದನಾ ಕೇಂದ್ರ
ಯಾವಾಗ ಆರಂಭಗೊಂಡಿತು ?

ಶಿವನಸಮುದ್ರದ ಬಳಿ ಜಲವಿದ್ಯುತ್ ಉತ್ಪಾದನಾ ಕೇಂದ್ರ ಕ್ರಿ.ಶ. 1900ರಲ್ಲಿ ಆರಂಭಗೊಂಡಿತು

2. ನಾಲ್ವಡಿ ಕೃಷ್ಣರಾಜ ಒಡೆಯರ ಪರವಾಗಿ ರೀಜೆಂಟಾಗಿ ಆಡಳಿತ ನಿರ್ವಹಣೆ ಮಾಡಿದವರು ಯಾರು ?

ಮಹಾರಾಣಿ ವಾಣಿ ವಿಲಾಸರವರು ನಾಲ್ವಡಿ ಕೃಷ್ಣರಾಜ ಒಡೆಯರ ಪರವಾಗಿ ರೀಜೆಂಟಾಗಿ ಆಡಳಿತ ನಿರ್ವಹಣೆ ಮಾಡಿದರು.

3. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷೇಕ್ತರಾದರು?

ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ.ಶ. 1895ರಲ್ಲಿ ಪಟ್ಟಾಭಿಷೇಕ್ತರಾದರು

4. ನ್ಯಾಯ ವಿಧೇಯಕ ಸಭೆ ಯಾವವರ್ಷದಲ್ಲಿ

ಸ್ಥಾಪನೆಗೊಂಡಿತು?

ಕ್ರಿ.ಶ.1907ರಲ್ಲಿ ನ್ಯಾಯ ವಿಧೇಯಕ ಸಭೆ ಸ್ಥಾಪನೆಗೊಂಡಿತು

5. ವಿಶ್ವೇಶ್ವರಯ್ಯನವರ ಜನ್ಮಶತಮಾನೋತ್ಸವ ಎಲ್ಲಿ ನಡೆಯಿತು?

ವಿಶ್ವೇಶ್ವರಯ್ಯನವರ ಜನ್ಮಶತಮಾನೋತ್ಸವ ಬೆಂಗಳೂರಿನಲ್ಲಿ ನಡೆಯಿತು

6. ವಿಶ್ವೇಶ್ವರಯ್ಯ ಅವರ ತಂದೆ ತಾಯಿ ಯಾರು?

ವಿಶ್ವೇಶ್ವರಯ್ಯ ಅವರ ತಂದೆ ತಾಯಿಗಳು_ ಶ್ರೀನಿವಾಸಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ರವರು.

7. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಯಾವುದು?

ವಿಶ್ವೇಶ್ವರಯ್ಯನವರ ಜನ್ಮಸ್ಥಳ ಚಿಕ್ಕಬಳ್ಳಾಪುರ ಸಮೀಪದಲ್ಲಿರುವ ಮುದ್ದೇನಹಳ್ಳಿ.

8. ವಿಶ್ವೇಶ್ವರಯ್ಯನವರ ಪೂರ್ವಜರ ಸ್ಥಳ ಯಾವುದು ?

ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಕರ್ನೂಲು ಜಿಲ್ಲೆ ಗಿಡ್ಡಲೂರು ತಾಲೂಕಿನ 'ಮೋಕ್ಷಗೊಂಡಂ' ಅಗ್ರಹಾರಕ್ಕೆ ಸೇರಿದವರು.

9. ವಿಶ್ವೇಶ್ವರಯ್ಯನವರು ಯಾವ ವರ್ಷದಲ್ಲಿ ಜನಿಸಿದರು ?

ವಿಶ್ವೇಶ್ವರಯ್ಯ ಅವರು ಕ್ರಿಸ್ತ ಶಕ 1860 ಸೆಪ್ಟೆಂಬರ್ 15ರಂದುಜನಿಸಿದರು.

10. ವಿಶ್ವೇಶ್ವರಯ್ಯ ಅವರ ಸೇವೆ ಎಲ್ಲಿ ? ಯಾವಾಗ? ಆರಂಭಗೊಂಡಿತು.

ವಿಶ್ವೇಶ್ವರಯ್ಯನವರು 1884 ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು.

## ಈ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:

1. ಪ್ರಜಾಪ್ರತಿನಿಧಿಯ ಸ್ಥಾಪನೆ, ಉದ್ದೇಶ ಮತ್ತು ಕಾರ್ಯಗಳನ್ನು ವಿವರಿಸಿ.

'ಪ್ರಜಾಪ್ರತಿನಿಧಿ ಸಭೆ'ಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಪ್ರಜಾ ಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ (1 ಜೂನ್– ಮಹಾರಾಜರ ವರ್ಧಂತಿ, 2 ಅಕ್ಟೋಬರ್ – ದಸರಾ ಮಹೋತ್ಸವ) ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡೆವಳಿಕೆ ನಡೆಯುತ್ತಿದ್ದವು

2. ನ್ಯಾಯ ವಿಧೇಯಕ ಸಭೆಯು ಹೇಗೆ ಸರ್ಕಾರದ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು ವಿವರಿಸಿ.

ನ್ಯಾಯ ವಿಧೇಯಕ ಸಭೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

3. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಜಾರಿ ಮಾಡಿದ ಸಾಮಾಜಿಕ ಕಾನೂನುಗಳು ಯಾವುವು ?

ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ 1. ಗ್ರಾಮ ನೈರ್ಮಲೀಕರಣ 2. ವೈದ್ಯಕೀಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು.

4. ನಾಲ್ವಡಿ ಕೃಷ್ಣರಾಜ ಒಡೆಯರು ರೈಲ್ವೇ ಸಾರಿಗೆ ವ್ಯವಸ್ಥೆಗೆ ನೀಡಿದ ಕಾಣಿಕೆಗಳನ್ನು ತಿಳಿಸಿ.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು, ಅರಸೀಕೆರೆ, ಬೆಂಗಳೂರು–ಚಿಕ್ಕಬಳ್ಳಾಪುರ, ಚಿಕ್ಕಜಾಜೂರು– ಚಿತ್ರದುರ್ಗ, ನಂಜನಗೂಡು– ಚಾಮರಾಜನಗರ, ತರೀಕೆರೆ– ಶಿವಮೊಗ್ಗ– ಆನಂದಪುರ ಈ ಎಲ್ಲ ರೈಲು ಮಾರ್ಗಗಳನ್ನು 1931ರ ವೇಳೆಗೆ ಪೂರೈಸಲಾಯಿತು.

5. ಹೈದರಾಬಾದ್ ನಗರಕ್ಕೆ ವಿಶ್ವೇಶ್ವರಯ್ಯನವರು ನೀಡಿದ ಕೊಡುಗೆಯನ್ನುತಿಳಿಸಿ.

ವಿಶ್ವೇಶ್ವರಯ್ಯನವರು ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

6. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗೆ ಸಂದ ಗೌರವ ಪ್ರಶಸ್ತಿಗಳು ಯಾವುವು ?

ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ದೇಶದ ಹಲವಾರು ಪ್ರತಿಷ್ಠಿತ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳು ಸದಸ್ಯತ್ವ ಹಾಗೂ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದವು. ಮಹಾನ್ ಆಡಳಿತಗಾರರಾದ ಇವರ ಶತಮಾನೋತ್ಸವದ ಸವಿನೆನಪಿಗಾಗಿ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಲಾಯಿತು

7. ವಿಶ್ವೇಶ್ವರಯ್ಯನವರ ಅವರ ಕೃತಿಗಳಾವುವು ?

ವಿಶ್ವೇಶ್ವರಯ್ಯನವರ ಅವರು 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ', 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯ' ಹಾಗೂ ಆತ್ಮಚರಿತ್ರೆ 'ಮೆಮೋರೀಸ್ (Memoirs)ಆಫ್ ಮೈ ವರ್ಕಿಂಗ್ ಲೈಫ್', 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಕೃತಿಗಳನ್ನು ರಚಿಸಿದ್ದಾರೆ.

## ಈ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ:

1. ವಿಶ್ವೇಶ್ವರಯ್ಯನವರ ಶಿಕ್ಷಣ ಕುರಿತು ವಿವರಿಸಿ.

ವಿಶ್ವೇಶ್ವರಯ್ಯ ಅವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಸೋದರಮಾವ ಎಚ್. ರಾಮಯ್ಯ ಅವರ ಮಾರ್ಗದರ್ಶನದಂತೆ ಬೆಂಗಳೂರಿನ ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣವನ್ನೂ, ಸೆಂಟ್ರಲ್ ಕಾಲೇಜಿನಲ್ಲಿ ಎರಡು ವರ್ಷಗಳ ಇಂಟರ್ ಮೀಡಿಯಟ್ ಮತ್ತು ಮೂರು ವರ್ಷಗಳ ಬಿ.ಎ. ಪದವಿ ಶಿಕ್ಷಣವನ್ನೂ ಪಡೆದರು. ವ್ಯಾಸಂಗದಲ್ಲಿ ಕ್ರಮನಿಷ್ಠರಾಗಿದ್ದ ಅವರು ಜೀವನದಲ್ಲಿ ಉನ್ನತವಾದುದನ್ನು ಸಾಧಿಸಬೇಕೆಂಬ ದೃಢನಿರ್ಧಾರವನ್ನು ಹೊಂದಿದ್ದರು. ಅದಕ್ಕೆ ತಕ್ಕನಾದ ಪ್ರತಿಭೆ, ಮನೋಸ್ಥೈರ್ಯ ಅವರಲ್ಲಿತ್ತು. ಅಂದಿನ ಮೈಸೂರು ದಿವಾನರಾಗಿದ್ದ ಸಿ. ರಂಗಾಚಾರ್ಲುರವರು ನೀಡಿದ ವಿದ್ಯಾರ್ಥಿವೇತನ ಸೌಲಭ್ಯವನ್ನು ಬಳಸಿಕೊಂಡು ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಕ್ಕೂ ಪಾತ್ರರಾದರು.

2. ವಿಶ್ವೇಶ್ವರಯ್ಯ ಅವರು ಲೋಕೋಪಯೋಗಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಳನ್ನು ಕುರಿತು ವಿವರಿಸಿ.

ವಿಶ್ವೇಶ್ವರಯ್ಯನವರು 1884 ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು. ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಮುಂಬೈ ಸರ್ಕಾರದ ಸೂಚನೆಯ ಮೇರೆಗೆ ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು. ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಹಾಡಿಹೊಗಳಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಇದನ್ನೇ ಮುಂದೆ ಗ್ವಾಲಿಯರ್‌ನ ತಿಗ್ರ ಜಲಾಶಯಕ್ಕೂ ಮೈಸೂರಿನ ಕೃಷ್ಣರಾಜಸಾಗರ (ಈಗಿನ ಮಂಡ್ಯಜಿಲ್ಲೆಯ) ಜಲಾಶಯಕ್ಕೂ ಅಳವಡಿಸಲಾಯಿತು. ಮುಂದೆ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬುದು ಗಮನಾರ್ಹ ಅಂಶ.

3.'ಮೈಸೂರು ಮಾದರಿ' ಯಾಗಿ ರೂಪಿಸಲು ದಿವಾನ್ ವಿಶ್ವೇಶ್ವರಯ್ಯನವರ ಕೊಡುಗೆಯನ್ನು ವಿವರಿಸಿ.

ವಿಶ್ವೇಶ್ವರಯ್ಯ ಅವರು ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದರು. ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ಯೋಜನೆ ಪ್ರಾರಂಭ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ, ಮಾರಿಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ, ಇವೆಲ್ಲ ಅವರ ಅಭಿವೃದ್ಧಿ ಕಾರ್ಯಗಳ ಕುರುಹು.

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು. ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ಅಷ್ಟೇ ಅಲ್ಲದೆ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಗಾಂಧೀಜಿ ಅವರು ಮೈಸೂರಿನ ಆಡಳಿತ ರೀತಿಯನ್ನು ಮುಕ್ತಕಂಠದಿಂದ ಹೊಗಳಿದರು. ಇದರಿಂದ 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು.

4. ಕರ್ನಾಟಕ ಕೈಗಾರಿಕೀಕರಣಕ್ಕಾಗಿ ವಿಶ್ವೇಶ್ವರಯ್ಯನವರ ಕೊಡುಗೆ ವಿವರಿಸಿ.

ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವುದು ಅವರ ದೊಡ್ಡ ಗುರಿಯಾಗಿತ್ತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು –ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು.

5. ವಿಶ್ವೇಶ್ವರಯ್ಯನವರ ರೂಪಿಸಿದ ಹಣಕಾಸು ನೀತಿ ಕುರಿತು ವಿವರಿಸಿ.

ವಿಶ್ವೇಶ್ವರಯ್ಯ ರವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು. ಇದಕ್ಕಾಗಿ 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಅನಂತರ ಉಳಿತಾಯ ಬ್ಯಾಂಕ್‌ಗಳು ಅಸ್ತಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆ ಗೊಳಿಸಿದರು. ಪ್ರಾಂತೀಯ

ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

# 5. ಎದೆಗೆ ಬಿದ್ದ ಅಕ್ಷರ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1.ವೈಜ್ಞಾನಿಕ ಚಿಂತನೆ ತೀವ್ರಗೊಳ್ಳಲು ಪ್ರೇರಣೆಯಾದ ಅಂಶಗಳಾವುವು?

ಶಿಕ್ಷಣ, ವಿಜ್ಞಾನ, ನಗರೀಕರಣದ ಪ್ರಭಾವದಿಂದ ವೈಚಾರಿಕ ಚಿಂತನೆ ತೀವ್ರವಾಯಿತು.

2.ಸಾಮಾಜಿಕ ಸಾಮರಸ್ಯಕ್ಕೆ ಅಡ್ಡಿಯಾದ ಅಂಶ ಯಾವುದು?

ಸಾಮಾಜಿಕ ಸಾಮರಸ್ಯಕ್ಕೆ ಮೊದಲನೆಯ ಅಡ್ಡಿ ಮೌಢ್ಯವೆ ಆಗಿದೆ.

3.ದೇವನೂರ ಮಹದೇವ ಅವರ ಪ್ರಮುಖ ಅಂಶಗಳಾವುವು?

"ಕಾರುಣ್ಯ, ಸಮತೆ, ಪ್ರಜ್ಞೆಗಳೇ"ದೇವನೂರ ಮಹದೇವ ಅವರಪ್ರಮುಖ ಅಂಶಗಳು.

4. ದೇವನೂರ ಮಹದೇವ ಅವರ ಕೃತಿಗೆ ಯಾವ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ಲಭಿಸಿದೆ ?

ದೇವನೂರ ಮಹದೇವ ಅವರ 'ಒಡಲಾಳ'ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ಲಭಿಸಿದೆ

5. ದೇವನೂರ ಮಹದೇವ ಅವರ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ ?

ದೇವನೂರ ಮಹದೇವ ಅವರ ಕುಸುಮಬಾಲೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

6. ದೇವನೂರ ಮಹದೇವ ಅವರು ಯಾವಾಗ ಜನಿಸಿದರು?

ದೇವನೂರ ಮಹಾದೇವ ಕ್ರಿ.ಶ.1948ರಲ್ಲಿ ಜನಿಸಿದರು

7. ದೇವನೂರ ಮಹದೇವ ಅವರ ಜನ್ಮಸ್ಥಳ ಯಾವುದು ?

ದೇವನೂರ ಮಹದೇವ ಅವರ ಜನ್ಮಸ್ಥಳ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು,

8.'ಎದೆಗೆ ಬಿದ್ದ ಅಕ್ಷರ ' ಲೇಖನದ ಪ್ರಮುಖ ಆಶಯವೇನು?

'ಎದೆಗೆ ಬಿದ್ದ ಅಕ್ಷರ ' ಲೇಖನದ ಪ್ರಮುಖ ಆಶಯ ಕಾರುಣ್ಯ,ಸಮತೆ, ಪ್ರಜ್ಞೆಗಳೇ ದೇವರು. ಅವು ಜಾಗೃತವಾಗಬೇಕೆಂಬುದೇ ಆಶಯವಾಗಿದೆ.

ಈ ಕೆಳಕಂಡ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ:

1. ಸಾಮಾಜಿಕ ಸ್ವಾಸ್ಥ್ಯವನ್ನು ಹೇಗೆ ಸ್ಥಿರಗೊಳಿಸಬಹುದೆಂದು ದೇವನೂರ ಮಹಾದೇವರವರು ಹೇಳಿದ್ದಾರೆ?

ವಚನಕಾರರ ಸಂದೇಶಗಳನ್ನು ನಾವು ನಡೆನುಡಿಗಳಲ್ಲಿ ಅನ್ವಯಿಸಿಕೊಂಡು ಅರಿವು ಮೂಡಿಸಿಕೊಂಡು, ದ್ವೇಷ ಅಸೂಯೆಗಳನ್ನು ತೊರೆದು ಸಮಷ್ಟಿಯ ಒಳಿತಿಗಾಗಿ ಸಾಮರಸ್ಯದ ನೆಲೆಯಲ್ಲಿ ಬದುಕನ್ನು ರೂಪಿಸಿಕೊಂಡಲ್ಲಿ ಸಮಾಜದ ಸ್ವಾಸ್ಥ್ಯ ಸ್ಥಿರಗೊಳ್ಳಬಹುದು ಎಂದು ದೇವನೂರ ಮಹಾದೇವರವರು ಹೇಳಿದ್ದಾರೆ.

2.ದೇವನೂರರ ಪ್ರಮುಖ ಕೃತಿಗಳಾವುವು ?

ದ್ಯಾವನೂರು, ಒಡಲಾಳ, ಕುಸುಮಬಾಲೆ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ ದೇವನೂರರ ಪ್ರಮುಖ ಕೃತಿಗಳು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:

1. "ನಿಲ್ಲಿ ನನ್ನ ಮಕ್ಕಳ"

ಆಯ್ಕೆ :-ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ದೇವನೂರರಿಗೆ ಕವಿ ಸಿದ್ಧಲಿಂಗಯ್ಯ ರವರು ಹೇಳಿದ ಮನೆಮಂಚಮ್ಮನ ಕಥೆಯಲ್ಲಿ ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನಪ್ರಾರಂಭಿಸಿದಾಗ, ಒಬ್ಬನ ಮೈಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

ಸ್ವಾರಸ್ಯ :- ಮೌಢ್ಯತೆ ತುಂಬಿರುವ ಭಕ್ತರನ್ನು ಮನೆಮಂಚಮ್ಮ ಎಂಬ ಗ್ರಾಮದೇವತೆಯು ಪ್ರತ್ಯಕ್ಷಳಾಗಿ ಎಚ್ಚರಿಸುವ ಮೂಲಕ ಪ್ರಜ್ಞೆ ಉಂಟುಮಾಡುವುದೇ ಇಲ್ಲಿನ ಸ್ವಾರಸ್ಯವಾಗಿದೆ.

2." ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು"

ಆಯ್ಕೆ :-ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯ ಉದಾಹರಣೆ ನೀಡುತ್ತಾ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಒಂದುಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಾ, ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು. ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು- ಅದು ಘಾಸಿಗೊಳಿಸುವುದು- ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೆ. ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ ಎಂದು ಹೇಳುತ್ತಾರೆ.

ಸ್ವಾರಸ್ಯ:- ಪ್ರತಿಯೊಂದು ಜೀವಿಯ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ ಎಂಬುದೇ ಇಲ್ಲಿನ ಆಶಯವಾಗಿದೆ.

3. "ತಮ್ಮ ಪ್ರಜ್ಞೇ ಮುಂದೆ ಸುಳ್ಳು ಹೇಳಕ್ಕಾಗಲ್ಲ "

ಆಯ್ಕೆ :-ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:- ದೇವನೂರು ರವರು ವಚನಕಾರರ ಪ್ರಕಾರ ದೇವರೆಂದರೆ ಏನು ಎಂದು ಹೇಳುವ ಸಂದರ್ಭದಲ್ಲಿ ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದು ಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಸಾಧ್ಯವಿಲ್ಲ. ಆದ್ದರಿಂದ ವಚನಕಾರರು ಬೆಂಕಿಯಂತಹ ಪ್ರಜ್ಞೆಯನ್ನೇ ಪ್ರಮಾಣವಾಗಿಸಿಕೊಂಡು ಸತ್ಯಕ್ಕೆ ಆದ್ಯತೆ ನೀಡಿದರು ಎಂದು ಹೇಳಿದ್ದಾರೆ.

ಸ್ವಾರಸ್ಯ:- ಪ್ರಜ್ಞೆಯೇ ದೇವರು ಎಂಬುದನ್ನು ಪ್ರತಿಪಾದಿಸುವುದೇ ಇಲ್ಲಿನ ಸ್ವಾರಸ್ಯವಾಗಿದೆ.

# 6. ವ್ಯಾಘ್ರಗೀತೆ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾವುವು ?

ಕಾವ್ಯ, ನಾಟಕ, ಕಾದಂಬರಿ, ಭಾವಗೀತೆ, ಜೀವನಚರಿತ್ರೆ, ಪ್ರಬಂಧಗಳು, ಸಂಶೋಧನಾತ್ಮಕ ಲೇಖನಗಳು ಮೊದಲಾದವುಗಳು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು.

2. ಎ.ಎನ್.ಮೂರ್ತಿರಾವ್ ಅವರ ಪ್ರಮುಖ ಕೃತಿಗಳಾವುವು?

ಎ.ಎನ್.ಮೂರ್ತಿರಾವ್ ಹಗಲುಗನಸುಗಳು. ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು-ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ, ಚಿತ್ರಗಳು- ಪತ್ರಗಳು ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ.

3. ಎ.ಎನ್. ಮೂರ್ತಿರಾವ್ ಅವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?

ಎ.ಎನ್. ಮೂರ್ತಿರಾವ್ ಅವರ "ಚಿತ್ರಗಳು-ಪತ್ರಗಳು" ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ

4. ಎ.ಎನ್. ಮೂರ್ತಿರಾವ್ ಅವರ ಯಾವ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ ?

ಎ.ಎನ್. ಮೂರ್ತಿರಾವ್ ಅವರ 'ದೇವರು' ಎಂಬ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ

5.ಎ.ಎನ್. ಮೂರ್ತಿರಾವ್ ಅವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ನೀಡಿದ ಪದವಿ ಯಾವುದು ?

ಎ.ಎನ್. ಮೂರ್ತಿರಾವ್ ಅವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದೆ.

6. ಎ.ಎನ್. ಮೂರ್ತಿರಾವ್ ಅವರ ಯಾವ ಕೃತಿಯಿಂದ ವ್ಯಾಘ್ರಗೀತೆ ಗದ್ಯಭಾಗವನ್ನು ಆರಿಸಿಕೊಳ್ಳಲಾಗಿದೆ?

ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಸಂಕಲನದಿಂದ 'ವ್ಯಾಘ್ರಗೀತೆ' ಗದ್ಯಭಾಗವನ್ನು ಆಯ್ಕೆಮಾಡಲಾಗಿದೆ

7.ಖಿರ್ದಿ ಪುಸ್ತಕ ಎಂದರೇನು ?

ಕಂದಾಯ ವಿವರಗಳನ್ನೊಳಗೊಂಡ ಪುಸ್ತಕವನ್ನು ಖಿರ್ದಿ ಪುಸ್ತಕ ಎನ್ನುತ್ತಾರೆ.

8. ಇರಸಾಲು ಎಂದರೇನು ?

ಇರಸಾಲು ಎಂದರೆ "ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸುವುದು"

9. ಮಸಿಕಾಣಿಕೆ ಎಂದರೇನು ?

ಮಸಿಕಾಣಿಕೆ ಎಂದರೆ "ಕಂದಾಯ ವಸೂಲಿ ಸಂದರ್ಭದಲ್ಲಿ ಶಾನುಭೋಗರು ರೈತರಿಂದ ಪಡೆಯುತ್ತಿದ್ದ ಕಿರು ಕಾಣಿಕೆ"

10. ಹುಲಿಯ ಧರ್ಮಶ್ರದ್ಧೆಯ ಬಗ್ಗೆ ಲೇಖಕರಿಗೆ ಕಥೆ ಹೇಳಿದವರು ಯಾರು ?

ಲೇಖಕರಾದ ಎ.ಎನ್. ಮೂರ್ತಿರಾಯರ ಬಂಧುಗಳಾದ ಕೃಷ್ಣಮೂರ್ತಿ ತನ್ನ ವಂಶದವರೊಬ್ಬರ ಅನುಭವದ ಹುಲಿಯ ಧರ್ಮಶ್ರದ್ಧೆಯ ಕಥೆಯನ್ನು ಹೇಳಿದರು.

11. ಶ್ಯಾನುಭೋಗರ ಕುಟುಂಬದ ರಾಜಭಕ್ತಿಯ ಲಾಂಛನ ಯಾವುದಾಗಿತ್ತು ?

ಶ್ಯಾನುಭೋಗರ ಕುಟುಂಬದ ರಾಜಭಕ್ತಿಯ ಲಾಂಛನ "ಖಿರ್ದಿ ಪುಸ್ತಕ"ವೇ ಆಗಿತ್ತು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:

1."ಮಡಿಯಬೇಕಾದರೆ ಮಾಡಿಯೇ ಮಾಡಿಯೇ ಮಡಿಯುತ್ತೇನೆ "

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:- ಮದಲಿಂಗನ ಕಣಿವೆಯ ದಾರಿಯಲ್ಲಿ ಹೇಗಾದರೂ ಮಾಡಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಯೋಚಿಸುತ್ತಾ ಹುಲಿಯ ಪಂಜಾದಿಂದ ಒಂದೇಟು ಬಿದ್ದರೆ ಸಾಕು-ಮುಂದೆ ಯಾವುದರ ಅರಿವೂ ಉಳಿಯುವುದಿಲ್ಲ. ನೋವೇನಿದ್ದರೂ ಒಂದೇ ಒಂದು ಕ್ಷಣದ ಮಾತು. "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ," ಎಂದು ನಿಶ್ಚಯಿಸುತ್ತಾರೆ.

ಸ್ವಾರಸ್ಯ:- ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ! ಎಂಬಂತೆ ಮನುಷ್ಯ ಪ್ರಯತ್ನದಲ್ಲಿರುವುದನ್ನೆಲ್ಲಾ ಮಾಡಿ ಬಿಡಬೇಕು ಎಂಬುದೇ ಇಲ್ಲಿನ ಸ್ವಾರಸ್ಯ.

2. "ಕುಡಿಯುವ ನೀರು ಅಲುಗದ ಹಾಗೆ"

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:-ಶಾನುಭೋಗರು ಹುಲಿಯ ಆಕ್ರಮಣದಿಂದ ತೀವ್ರ ಸಾಹಸದ ನಂತರ ತಪ್ಪಿಸಿಕೊಂಡುಹೇಗೋ ಮನೆಗೆ

ತಲುಪುತ್ತಾರೆ. ಶಾನುಭೋಗರು "ಕುಡಿದ ನೀರು ಅಲುಗದ ಹಾಗೆ" ಎನ್ನಲಾಗದಿದ್ದರೂ ಜೀವ ಸಹಿತ ಮನೆ ಸೇರಿಕೊಂಡರು ಎನ್ನುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ:- ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ರೀತಿಯೇ ೦ಇಲ್ಲಿನ ಸ್ವಾರಸ್ಯವಾಗಿದೆ.

2. "ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ, ಹುಲಿಯಲ್ಲಿ ಅದೊಂದು ಅಪರಾಧವೇ"

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ:-ಲೇಖಕರು ಮಾನವ ಹಾಗೂ ಹುಲಿಯ ಆಹಾರದ ಕುರಿತು ಹುಲಿಯ ಕೊಲ್ಲುವ ಧರ್ಮದ ಬಗ್ಗೆ ವಿವರಿಸುತ್ತಾ ಅದು ಆಹಾರಕ್ಕಾಗಿ ಕೊಲ್ಲುವುದರಲ್ಲೇನೂ ತಪ್ಪಿಲ್ಲ;ಹಾಗೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೆ ಎಂದು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ:- ಹುಲಿಯು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವಾಗ ಅನುಸರಿಸುವ ಧರ್ಮವೇ ಇಲ್ಲಿನ ಸ್ವಾರಸ್ಯವಾಗಿದೆ.

4."ಆ ಭರತ ಭೂಮಿಯಲ್ಲಿ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೆ?"

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ:- ಹುಲಿಗಳು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವಾಗ ಅವು ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ? ಹಾಗೆಯೇ ಭರತ ಖಂಡದ ಹುಲಿಗಳ ಕೊಲ್ಲುವ ಧರ್ಮದ ಕುರಿತು ಹೇಳುವಾಗ ಈ ಮೇಲಿನ ಮಾತು ಬಂದಿದೆ.
ಸ್ವಾರಸ್ಯ:- ಭರತ ಖಂಡದ ಹುಲಿಗಳು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವಾಗ ಅನುಸರಿಸುವ ಧರ್ಮವೇ ಇಲ್ಲಿನ ಸ್ವಾರಸ್ಯವಾಗಿದೆ

5. "ತಿಂದರೆ ಇಂಥಹವನನ್ನೆ ತಿನ್ನಬೇಕು"

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ:- ಶಾನುಭೋಗರ ಹುಲಿ ಹತ್ತಿರ ಬಂದು ಶಾನುಭೋಗರ ಮೇಲೆ ನೆಗೆಯಿತು. ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಶಾನುಭೋಗರು ಸ್ವಲ್ಪ ಬಾಗಿದರು. ಹುಲಿ ನೆಲಕ್ಕೆ ಇಳಿದು ತಮ್ಮ ಕಡೆಗೆ ತಿರುಗುವುದರೊಳಗೆ ಅವರೂ ಹಿಂದಿರುಗಿ ಬಂದ ದಾರಿಯಲ್ಲೇ ಪುನಃ ನಡೆದರು. ಹುಲಿ ಕತ್ತೆತ್ತಿ ನೋಡಿದರೆ ಶಾನುಭೋಗರು ಮತ್ತೆ ತನ್ನ ಕಡೆಗೆ ಬೆನ್ನುತಿರುಗಿಸಿದ್ದಾರೆ!ಹುಲಿಯ ಮುಖ ಪೆಚ್ಚಾಯಿತು. ಆದರೆ ಶಾನುಭೋಗರ ವಿಷಯದಲ್ಲಿ ಮೆಚ್ಚಿಕೆಯೂ ಆಯಿತು-ತನಗೆ ಎದುರಾಳಿಯೇ ಸಿಕ್ಕಿದನೆಂಬ ಮೆಚ್ಚಿಕೆಯಿಂದ ಈ ಮೇಲಿನಂತೆ ಎಂದುಕೊಂಡಿತು ಎಂದು ಲೇಖಕರು ಹೇಳುತ್ತಾರೆ.
ಸ್ವಾರಸ್ಯ:- ಹುಲಿಯ ಹಸಿವಿನ ನಡುವೆಯೂ ಶಾನುಭೋಗರ ರಕ್ಷಣಾತ್ಮಕ ನಡುಗೆಯ ಮಧ್ಯೆ ತನ್ನ ಧರ್ಮ ಪಾಲನೆಯೇ ಇಲ್ಲಿಯ ಸ್ವಾರಸ್ಯವಾಗಿದೆ.

6."ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು."

ಆಯ್ಕೆ :-ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ "ಸಮಗ್ರ ಲಲಿತ ಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ:-ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದ ಶಾನುಭೋಗರು ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ತಮ್ಮ ಹಳ್ಳಿಯನ್ನು ತಲಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳುದಿಂಗಳ ದಿನ ; ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಳ್ಳುತ್ತಾರೆ.
ಸ್ವಾರಸ್ಯ:- ಶಾನುಭೋಗರ ಹಸಿವಿನ ಜೊತೆಗೆ ಭಯವೂ, ಆತಂಕವೂ ಇಲ್ಲಿನ ಸ್ವಾರಸ್ಯವಾಗಿದೆ.

# 7. ವೃಕ್ಷಸಾಕ್ಷಿ

1. ಪಂಚತಂತ್ರಗಳಾವುವು?
ಭೇದ, ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯ – ಇವು ಪಂಚತಂತ್ರಗಳು

2. ದುರ್ಗಸಿಂಹ ಕವಿಯ ಕರ್ಣಾಟ ಪಂಚತಂತ್ರ ಕೃತಿಯ ಸಂಪಾದಕರು ಯಾರು?
ದುರ್ಗಸಿಂಹ ಕವಿಯ ಕರ್ಣಾಟ ಪಂಚತಂತ್ರ ಕೃತಿಯ ಸಂಪಾದಕರು ಗುಂಡ್ಮಿ ಚಂದ್ರಶೇಖರ ಐತಾಳರು

3. ದುರ್ಗಸಿಂಹನ ಜನ್ಮಸ್ಥಳ ಯಾವುದು?
ದುರ್ಗಸಿಂಹನ ಜನ್ಮ ಸ್ಥಳ ಕಿಸುಕಾಡು ನಾಡಿನ ಸಯ್ಯಡಿ

4. ವೃಕ್ಷಸಾಕ್ಷಿ ಯಾವ ನೀತಿಯನ್ನು ಪ್ರತಿಪಾದಿಸುತ್ತದೆ ?
ವೃಕ್ಷಸಾಕ್ಷಿ ಕಥೆಯು "ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ" ಎಂಬ ನೀತಿಯನ್ನು ಪ್ರತಿಪಾದಿಸುತ್ತದೆ.

7. ವ್ಯಾಪಾರಕ್ಕೆ ಹೋಗಿದ್ದ ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯರು ಎಲ್ಲಿ ಬೀಡುಬಿಟ್ಟಿದ್ದರು?
ವ್ಯಾಪಾರಕ್ಕೆ ಹೋಗಿದ್ದ ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯರು ಮಧುರಾ ನಗರದ ಬಹಿರುದ್ಯಾನದಲ್ಲಿ ಬೀಡುಬಿಟ್ಟಿದ್ದರು

6. ಧರ್ಮಬುದ್ಧಿ ಹಾಗೂ ದುಷ್ಟಬುದಿಯ ನಿಜಜನ್ಮಭೂಮಿ ಯಾವುದು?

ಮಧುರಾ ನಗರವು ಧರ್ಮಬುದ್ಧಿ ಹಾಗೂ ದುಷ್ಟಬುದಿಯ ನಿಜಜನ್ಮಭೂಮಿಯಾಗಿತ್ತು.

7.ವ್ಯಾಪಾರಿಗಳಿಬ್ಬರು ನ್ಯಾಯ ಕೇಳಲು ಯಾರಲ್ಲಿ ಬಂದರು?

ವ್ಯಾಪಾರಿಗಳಿಬ್ಬರು ನ್ಯಾಯಕೇಳಲು ಧರ್ಮಾಧಿಕರಣರಲ್ಲಿಗೆ ಬಂದರು.

8 ದುಷ್ಟಬುದ್ಧಿಯ ತಂದೆಯ ಹೆಸರೇನು?

ದುಷ್ಟಬುದ್ಧಿಯ ತಂದೆಯ ಹೆಸರು ಪ್ರೇಮಮತಿ.

9. ದುಷ್ಟಬುದ್ಧಿ ತನ್ನ ತಂದೆಯನ್ನು ಎಲ್ಲಿ ಅಡಗಿಸಿದನು?

ದುಷ್ಟಬುದ್ಧಿ ತನ್ನ ತಂದೆಯನ್ನು ಆಲದ ಮರದ ಪೊಟರೆಯೊಳಗೆ ಅಡಗಿಸಿದನು.

10.ಪ್ರೇಮಮತಿ ತನ್ನ ಮಗನಿಗೆ ಏನೆಂದು ಬುದ್ಧಿ ಹೇಳಿದನು?

ಪ್ರೇಮಮತಿ ತನ್ನ ಮಗನಿಗೆ ಪರರಧನವನ್ನು ಅಪಹರಿಸುವುದು, ನಂಬಿಕೆ ದ್ರೋಹವನ್ನು ಮಾಡುವುದು ಸ್ವಾಮಿ ದ್ರೋಹವನ್ನು ಮಾಡುವುದು ಇವೆಲ್ಲವೂ ನಾವು ಏನೇ ಮಾಡಿದರೂ ನಮ್ಮನ್ನು ಕೆಡಿಸುತ್ತವೆ ಎಂದು ಬುದ್ಧಿ ಹೇಳಿದನು.

ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.

1.ದುಷ್ಟಬುದ್ಧಿಯು ತನ್ನ ತಂದೆಯನ್ನು ಅಡಗಿಸಿದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ.

ದುಷ್ಟಬುದ್ಧಿಯು ತನ್ನ ತಂದೆಯನ್ನು ಕವಿದ ಕತ್ತಲೆಯಲ್ಲಿ ತನ್ನ ತಂದೆಯನ್ನು ಕೊಲ್ಲದೆ ಬಿಡೆನು ಎಂಬಂತೆ ಕರೆದುಕೊಂಡು ಹೋಗಿ, ಮಾರಿಯ ಮನೆಗೆ ಹರಕೆಯ ಕುರಿಯನ್ನು ಒಳಹೋಗಿಸುವಂತೆ ಆಲದ ಮರದ ಪೊಟರೆಯ ಒಳಭಾಗಕ್ಕೆ ಹೋಗಿಸಿ ಅಡಗಿಸಿಟ್ಟು ಜಗಳವನ್ನು ಗೆದ್ದೆನೆಂದು ಸಂತಸಪಟ್ಟನು.

2. ಮರುದಿನ ಬೆಳಿಗ್ಗೆ ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿ ಮಾಡಿದ ಕಾರ್ಯಗಳೇನು?

ಸೂರ್ಯೋದಯವಾದೊಡನೆ ಧರ್ಮಬುದ್ಧಿಯು ದೇವರು, ಗುರುಗಳು, ವೇದಾಧ್ಯಯನ ನಿರತರಾದವರನ್ನು ಪೂಜೆ ಮಾಡುತ್ತ ಬೆಳಗಿನ ಹೊತ್ತನ್ನು ಕಳೆದನು. ಇದರಿಂದ ತಡವಾಗಲು ಇತ್ತ ದುಷ್ಟಬುದ್ಧಿಯು ಮುಖವನ್ನೂ ತೊಳೆಯದೇ ಧರ್ಮಾಧಿಕರಣರಲ್ಲಿಗೆ ಬಂದನು.

3. ಪಂಚತಂತ್ರ ಕಾವ್ಯದ ವಿಶೇಷತೆಗಳನ್ನು ಕುರಿತು ಬರೆಯಿರಿ.

ದುರ್ಗಸಿಂಹನ ಪಂಚತಂತ್ರದ ಕಥೆಗಳು ಆಬಾಲವೃದ್ಧರಿಗೂ ಪ್ರಿಯವಾಗುತ್ತವೆ. ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರ ಕೃತಿಯನ್ನು ದುರ್ಗಸಿಂಹನು ಕನ್ನಡಕ್ಕೆ ಅಳವಡಿಸಿ ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಪಂಚತಂತ್ರ ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ಕೃತಿಗಳಲ್ಲಿ ಮಹತ್ವದ್ದು.

## ಸಂದರ್ಭ ಸಹಿತ ವಿವರಿಸಿ

1.''ನಾವೀ ಪೊನ್ನಂ ಪಚ್ಚುಕೊಂಡು ಮನೆಯೊಳ್ ಸ್ವೇಚ್ಛೆಯಿಂದರ್ಪವರಲ್ಲಂ'

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ವ್ಯಾಪಾರಕ್ಕೆಂದು ಹೋಗಿದ್ದ ಧರ್ಮಬುದ್ಧಿ ದುಷ್ಟಬುದ್ಧಿಯರು ಮಧುರಾನಗರದ ಬಹಿರುದ್ಯಾನದಲ್ಲಿ ಬೀಡುಬಿಟ್ಟಿದ್ದ ಅರ್ಧ ರಾತ್ರಿಯ ಸಮಯದಲ್ಲಿ ಧರ್ಮಬುದ್ಧಿಯು ತಾವು ಸಂಪಾದಿಸಿದ್ದ ಹೊನ್ನನ್ನು ಹಂಚಿಕೊಳ್ಳೋಣ ಎನ್ನಲು ದುರ್ಬುದ್ಧಿಯಾದ ದುಷ್ಟಬುದ್ಧಿಯು "ನಾವು ಈ ಹೊನ್ನನ್ನು ಹಂಚಿಕೊಂಡು ಸ್ವೇಚ್ಛೆಯಿಂದ ಇರುವವರಲ್ಲ, ಮತ್ತೆ ವ್ಯಾಪಾರಕ್ಕೆ ದೂರದೇಶಕ್ಕೆ ಹೋಗಬೇಕಾಗುತ್ತದೆ. ಆ ಕಾರಣದಿಂದ ಬೇಕಾದಷ್ಟು ಹೊನ್ನನ್ನು ತೆಗೆದೊಕೊಂಡು ಮಿಕ್ಕ ಹೊನ್ನನ್ನು ಇಲ್ಲಿಯೇ ಇಡೋಣ ಎಂದು ಸಲಹೆ ನೀಡುತ್ತಾನೆ.

ಸ್ವಾರಸ್ಯ:– ಧರ್ಮಬುದ್ಧಿಯ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಳ್ಳಲು ದುರ್ಬುದ್ಧಿಯಾದ ದುಷ್ಟಬುದ್ಧಿಯ ಮೋಸದ ಸಂಚು ಇಲ್ಲಿನ ಸ್ವಾರಸ್ಯವಾಗಿದೆ.

2. ''ಪೊನ್ನಿಲ್ಲವಿನ್ನುಂ ಕಿರಿದು ಪೊನ್ನಂ ತೆಗೆದುಕೊಳ್ವಂ"

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:–ಧರ್ಮಬುದ್ಧಿ ದುಷ್ಟಬುದ್ಧಿಯರು ಮಧುರಾನಗರದ ಬಹಿರುದ್ಯಾನದಲ್ಲಿ ಹೂತಿಟ್ಟಿದ್ದ ಹೊನ್ನಿನಲ್ಲಿ ಇನ್ನಷ್ಟು ಹೊನ್ನನ್ನು ತೆಗೆದುಕೊಳ್ಳೋಣ ಎಂದು ದುಷ್ಟಬುದ್ಧಿಯು ಧರ್ಮಬುದ್ಧಿಯಲ್ಲಿ ಬಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ:– ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿದ ಸಂಚು ಇಲ್ಲಿನ ಸ್ವಾರಸ್ಯವಾಗಿದೆ.

3. ''ಧರ್ಮಬುದ್ಧಿಯೇ ಧನಮಂ ತೆಗೆದುಕೊಂಡನ್''

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ'ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:–ಧರ್ಮಬುದ್ಧಿ ದುಷ್ಟಬುದ್ಧಿಯರು ಮಧುರಾನಗರದ ಬಹಿರುದ್ಯಾನದ ಆಲದ ಮರದಡಿ ಹೂತಿಟ್ಟ ಹೊನ್ನನ್ನು ತೆಗೆದುಕೊಳ್ಳಲು ಹೋದಾಗ ಇಲ್ಲಿ ಹೊನ್ನು ಇಲ್ಲದೇ ಹೋದಾಗ ದುಷ್ಟಬುದ್ಧಿಯು ಧರ್ಮಬುದ್ಧಿ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿ ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ:– ಧರ್ಮಬುದ್ಧಿಯ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಳ್ಳಲು ದುರ್ಬುದ್ಧಿಯಾದ ದುಷ್ಟಬುದ್ಧಿಯ ಮೋಸದ ಸಂಚು ಇಲ್ಲಿನ ಸ್ವಾರಸ್ಯವಾಗಿದೆ.

4. ''ಹಾ! ಹಾ! ಕೆಟ್ಟೆನ್"

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ಧರ್ಮಬುದ್ಧಿ ದುಷ್ಟಬುದ್ಧಿಯರು ಮಧುರಾನಗರದ ಬಹಿರುದ್ಯಾನದ ಆಲದ ಮರದಡಿ ಹೂತಿಟ್ಟಹೊನ್ನನ್ನು ತೆಗೆದುಕೊಳ್ಳಲು ಹೋದಾಗ ಇಲ್ಲಿ ಹೊನ್ನು ಇಲ್ಲದೇ

ಹೋದಾಗ ಈಗಾಗಲೇ ಮೋಸದಿಂದ ಹೊನ್ನನ್ನು ಕದ್ದಿದ್ದ ದುಷ್ಟಬುದ್ಧಿಯು ತನ್ನ ಮೇಲೆ ಕಳ್ಳತನದ ಆರೋಪ ಬರುತ್ತದೆಂದು ಮೊದಲೇ ಈ ಮೇಲಿನಂತೆ ಬಾಯನ್ನು ಹೊಟ್ಟೆಯನ್ನು ಬಡಿದುಕೊಂಡು ಕೂಗಾಡುತ್ತಾನೆ.

ಸ್ವಾರಸ್ಯ:– ಧರ್ಮಬುದ್ಧಿಯ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಳ್ಳಲು ದುರ್ಬುದ್ಧಿಯಾದ ದುಷ್ಟಬುದ್ಧಿಯ ಮೋಸದ ಸಂಚು ಇಲ್ಲಿನ ಸ್ವಾರಸ್ಯವಾಗಿದೆ.

5.“ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸ್ಸುವಂತೆ”

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ “ಕರ್ನಾಟಕ ಪಂಚತಂತ್ರ” ಕೃತಿಯಿಂದ ಆಯ್ದ ‘ವೃಕ್ಷಸಾಕ್ಷಿ’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:– ದುಷ್ಟಬುದ್ಧಿಯು ತನ್ನ ತಂದೆಯನ್ನು ಕವಿದ ಕತ್ತಲೆಯಲ್ಲಿ ತನ್ನ ತಂದೆಯನ್ನು ಕೊಲ್ಲದೆ ಬಿಡೆನು ಎಂಬಂತೆ ಕರೆದುಕೊಂಡು ಹೋಗಿ, ಮಾರಿಯ ಮನೆಗೆ ಹರಕೆಯ ಕುರಿಯನ್ನು ಒಳಹೋಗಿಸುವಂತೆ ಆಲದ ಮರದ ಪೊಟರೆಯ ಒಳಭಾಗಕ್ಕೆ ಹೋಗಿಸಿ ಅಡಗಿಸಿಟ್ಟು ಜಗಳವನ್ನು ಗೆದ್ದೆನೆಂದು ಸಂತಸಪಟ್ಟ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ:– ದುಷ್ಟಬುದ್ಧಿಯ ಮೋಸದ ಅಂತ್ಯ ಹೇಗುತ್ತದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

6.“ಪ್ರತ್ಯರ್ಥಿ ಬಂದನಿಲ್ಲ ಪಿರಿದು ಪೊಳ್ತು ಪೋದುದು ಎನಗೆ“

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ “ಕರ್ನಾಟಕ ಪಂಚತಂತ್ರ” ಕೃತಿಯಿಂದ ಆಯ್ದ ‘ವೃಕ್ಷಸಾಕ್ಷಿ’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ:–ಸೂರ್ಯೋದಯ ಆದೊಡನೆ ಧರ್ಮಬುದ್ಧಿಯು ದೇವರು, ಗುರುಗಳು, ವೇದಾಧ್ಯಯನ ನಿರತರಾದವರನ್ನು ಪೂಜೆ ಮಾಡುತ್ತ ಬೆಳಗಿನ ಹೊತ್ತನ್ನು ಕಳೆದನು. ಇದರಿಂದ ತಡವಾಗಲು ಇತ್ತ ದುಷ್ಟಬುದ್ಧಿಯು ಮುಖವನ್ನೂ ತೊಳೆಯದೇ ಧರ್ಮಾಧಿಕರಣರಲ್ಲಿಗೆ ಬಂದು ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ:– ದುಷ್ಟಬುದ್ಧಿಗೆ ನ್ಯಾಯದ ಬಗ್ಗೆ ಇದ್ದ ಆತುರತೆಯು ಈ ಮಾತಿನಲ್ಲಿ ಹೇಗಿದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

## ಈ ಪ್ರಶ್ನೆಗಳಿಗೆ 8–10 ವಾಕ್ಯದಲ್ಲಿ ಉತ್ತರಿಸಿ.

1. ಧರ್ಮಬುದ್ಧಿಯ ತೀಕ್ಷ್ಣ ಬುಧ್ಧಿವಂತಿಕೆ ಹೇಗೆ ಅವನನ್ನು ರಕ್ಷಿಸಿತು ವಿವರಿಸಿ.

ಧರ್ಮಬುದ್ಧಿ ವ್ಯಾಪಾರಿಯಾದರೂ ಕಪಟವರಿಯದ ಸತ್ಯವಂತ. ಆಧ್ಯಾತ್ಮಿಕ ಮನೋಭಾವವುಳ್ಳವನು. ಹಾಗೂ ತೀಕ್ಷ್ಣ ಬುದ್ಧಿವಂತನೂ ಆಗಿದ್ದ. ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯ ಕರ್ಮಮುಗಿಸಿ. ದೇವರು, ಗುರುಗಳು. ವೇದಾಧ್ಯಯನ ನಿರತರನ್ನು ಪೂಜಿಸುವನು. ದುಷ್ಟಬುದ್ದಿಯು ಮರದ ಪೊಟರಯೊಳಗೆ ತಂದೆಯನ್ನು ಕೂರಿಸಿ. ಧರ್ಮಬುದ್ಧೀಯೇ ಚಿನ್ನದ ನಾಣ್ಯಗಳನ್ನು ಕದ್ದನೆಂದು ಹೇಳಿಸಿದಾಗಲೂ ಕೂಗಾಡಲಿಲ್ಲ. ಶಾಂತನಾಗಿಯೇ ಇದ್ದನು. ಅವನಿಗೆ ದೇವರ ಮೇಲೆ ನಂಬಿಕೆ. ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ. ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧವಂತಿಕೆಯಿಂದ ಕಂಡುಕೊಂಡನು. ದುಷ್ಟಬುದ್ದಿಗೆ ಬುದ್ದಿ ಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ.” ಸುಳ್ಳನ್ನು ಸುಳ್ಳಿನಿಂದಲೇ, ಮುಳ್ಳನ್ನು ಮುಳ್ಳಿನಿಂದಲೇ ಜಯಸುವಂತೆ” ಧರ್ಮಬುದ್ದಿಯು ತಂತ್ರ ಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿದನು. ಹೀಗಾಗಿಧರ್ಮಬುದ್ಧಿಯ ತೀಕ್ಷ್ಣ ಬುಧ್ಧಿವಂತಿಕೆಯೇ ಅವನನ್ನು ರಕ್ಷಿಸಿತು ಎಂದು ನಿಸ್ಸಂಶಯವಾಗಿ ಹೇಳಬಹುದು.

# ಸುಕುಮಾರಸ್ವಾಮಿಯ ಕಥೆ

1. ವಡ್ಡಾರಾಧನೆಯ ಕರ್ತೃ ಯಾರು?
   ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯ
2. ವಡ್ಡರಾಧನೆ ಕೃತಿ ಸಂಪಾದಕರು ಯಾರು ?
   ವಡ್ಡರಾಧನೆ ಕೃತಿ ಸಂಪಾದಕರು ಡಾ. ಡಿ. ಎಲ್. ನರಸಿಂಹಾಚಾರ್
3. ವಡ್ಡಾರಾಧನೆಯಲ್ಲಿ ಬರುವ ಕಥೆಗಳೆಷ್ಟು?
   ವಡ್ಡಾರಾಧನೆಯು ಹತ್ತೊಂಬತ್ತು ಕಥೆಗಳಿಂದ ಕೂಡಿದೆ.
4. ವಡ್ಡಾರಾಧನೆ ಎಂದರೇನು ?
   ವಡ್ಡಾರಾಧನೆ ಎಂದರೆ ‘ವೃದ್ಧರ ಆರಾಧನೆ’ ಎಂದರ್ಥ.
5. ಪಂಚರತ್ನಗಳು ಯಾವುವು ?
   ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ ಎಂಬ ಇವೇ ಪಂಚರತ್ನಗಳು
6. ಸುಕುಮಾರಸ್ವಾಮಿಯಾಗಿ ಜನಿಸಿದ ದೇವಂ ಯಾರು?
   ಸುಕುಮಾರಸ್ವಾಮಿಯಾಗಿ ಜನಿಸಿದ ದೇವ ನಾಗಶ್ರೀಯಾಗಿದ್ದ ದೇವನು
7. ಸೂರದತ್ತನ ತಂದೆ–ತಾಯಿ ಯಾರು?
   ಸೂರದತ್ತನ ತಂದೆ–ತಾಯಿಗಳು ಇಂದ್ರದತ್ತನೆಂಬ ವರ್ತಕ ಮತ್ತು ಅವನ ಹೆಂಡತಿ ಗುಣಮತಿ ಎಂಬುವವರು.
8. ಸುಕುಮಾರಸ್ವಾಮಿಯ ತಂದೆ–ತಾಯಿ ಯಾರು ?
   ಸುಕುಮಾರಸ್ವಾಮಿಯ ತಂದೆ–ತಾಯಿಗಳು ಸೂರದತ್ತ ಯಶೋಭದ್ರೆ ಎಂಬುವವರು.
9. ಯಶೋಭದ್ರೆಯ ತಂದೆ–ತಾಯಿ ಯಾರು?
   ಯಶೋಭದ್ರೆಯ ತಂದೆ–ತಾಯಿ ಸುಭದ್ರ ಮತ್ತು ಹೆಂಡತಿ ಸರ್ವಯಶಿಯೆಂಬವಳು.
10. ಸುಕುಮಾರಸ್ವಾಮಿಯು ರಿಸಿಗಳನ್ನು ಕಾಣದಂತೆ ಏಕೆ ಕಾವಲಿನವರನ್ನು ನೇಮಿಸಲಾಗಿತ್ತು?

ಜೋಯಿಸರು "ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಎಂದು ಭವಿಷ್ಯ ನುಡಿದಿದ್ದರಿಂದ ಸುಕುಮಾರಸ್ವಾಮಿಯು ರಿಸಿಗಳನ್ನು ಕಾಣದಂತೆ ಕಾವಲಿನವರನ್ನು ನೇಮಿಸಲಾಗಿತ್ತು.

11. ವೃಷಭಾಂಕನು ಯಾರು ?

ವೃಷಭಾಂಕನು ಉಜ್ಜೈನಿಯ ಅರಸ.

12. ವ್ಯಾಪಾರಿಯು ರತ್ನಗಂಬಳಿಯನ್ನು ಯಾರಿಗೆ ಮಾರಿದನು?

ವ್ಯಾಪಾರಿಯು ರತ್ನಗಂಬಳಿಯನ್ನು ಯಶೋಭದ್ರೆಗೆ ಮಾರಿದನು

13. ವ್ಯಾಪಾರಿಯು ರತ್ನಗಂಬಳಿಯನ್ನು ಎಷ್ಟು ಹೊನ್ನಿಗೆ ಮಾರಿದನು?

ವ್ಯಾಪಾರಿಯು ರತ್ನಗಂಬಳಿಯನ್ನು ಲಕ್ಷದೀನಾರಗಳ ಹೊನ್ನಿಗೆ ಮಾರಿದನು

14. ಅರಸನು ರತ್ನಗಂಬಳಿಯನ್ನು ಏಕೆ ಕೊಳ್ಳಲಿಲ್ಲ?

ಅರಸನು ರತ್ನಗಂಬಳಿಯ ಬೆಲೆಯೇನೆಂದು ಕೇಳಿದಾಗ ಲಕ್ಷದೀನಾರಗಳೆಂದು ಹೇಳಿದಾಗ ಕ್ರಯಕ್ಕೆ ಕೊಳ್ಳಲಿಲ್ಲ.

15. ಯಶೋಭದ್ರೆ ರತ್ನಗಂಬಳಿಯನ್ನು ಯಾರಿಗೆ ಹಂಚಿದಳು?

ಯಶೋಭದ್ರೆ ರತ್ನಗಂಬಳಿಯನ್ನು ಮೂವತ್ತೆರಡು ತುಂಡುಗಳನ್ನು ಮಾಡಿ ತನ್ನ ಮೂವತ್ತೆರಡು ಸೊಸೆಯಂದಿರಿಗೆ ಹಂಚಿಕೊಟ್ಟಳು.

16. ಸೊಸೆಯಂದಿರು ರತ್ನಗಂಬಳಿಯನ್ನು ಎಲ್ಲಿಗೆ ಧರಿಸಿದರು?

ಸೊಸೆಯಂದಿರು ರತ್ನಗಂಬಳಿಯನ್ನು ತಮ್ಮತಮ್ಮ ಪಾದುಕೆಗಳಿಗೆ ಸಿಕ್ಕಿಸಿಕೊಂಡರು.

17. ಸುಕುಮಾರಸ್ವಾಮಿಯ ಕಣ್ಣ ನೀರಿಗೆ ಕಾರಣವೇನು?

ಸುಕುಮಾರಸ್ವಾಮಿಯು ದೀಪ ನೋಡಿದಾಗ ಕಣ್ಣೀರು ಸುರಿಯಿತು.

18. ಸುಕುಮಾರಸ್ವಾಮಿಯು ಅರ್ಧಾಹಾರವನ್ನು ಏಕೆ ಉಗುಳುತ್ತದ್ದನು ?

ಸುಕುಮಾರಸ್ವಾಮಿಯು ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು.

ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ

1. ವಡ್ಡಾರಾಧನೆ ಕೃತಿಯ ಹಿನ್ನೆಲೆಯನ್ನು ವಿವರಿಸಿ.

ವಡ್ಡಾರಾಧನೆಯು ಹತ್ತೊಂಬತ್ತು ಕಥೆಗಳಿಂದ ಕೂಡಿದ್ದು, ಅನೇಕ ಉಪಕಥೆಗಳಿಂದ ಕೂಡಿದ ಹಳಗನ್ನಡ ಭಾಷೆಯಲ್ಲಿರುವ ಬೃಹತ್ ಕಥಾಗುಚ್ಛ. ವಡ್ಡಾರಾಧನೆಯು ಕನ್ನಡದ ಮೊದಲ ಗದ್ಯಕೃತಿ ಎಂಬ ಹೆಗ್ಗಳಿಕೆ ಹೊಂದಿದೆ. ವಡ್ಡಾರಾಧನೆ ಎಂದರೆ 'ವೃದ್ಧರ ಆರಾಧನೆ' ಎಂದರ್ಥ. ಕಥೆಗಳ ನಾಯಕರೆಲ್ಲ ಧರ್ಮವೀರರು. ತಪಸ್ಸಿಗೆ ಕುಳಿತಿರುವ ಯತಿಗಳಿಗೆ ದೇವತೆ, ಮನುಷ್ಯ, ಪ್ರಾಣಿ ಹಾಗೂ ಜಡವಸ್ತುಗಳಿಂದ ನಾನಾ ಬಗೆಯ ತೊಂದರೆಗಳಾಗುತ್ತವೆ. ಅಲ್ಲದೆ ಹಸಿವು, ನೀರಡಿಕೆ, ಶೀತ–ವಾತ ಮುಂತಾದ ಬಾಧೆಗಳು ಎದುರಾಗುತ್ತವೆ. ತಪಸ್ಸಿಗೆ ಕುಳಿತವರು ಇವನ್ನೆಲ್ಲ ಸಹಿಸಿಕೊಳ್ಳಬೇಕು. ಅವರಲ್ಲಿ ಸಹನಾ ಶಕ್ತಿಯನ್ನು ಮೂಡಿಸಲು ಹಿರಿಯ ಯತಿಗಳಿಂದ ಕಥೆಗಳನ್ನು ಹೇಳಿಸುತ್ತಿದ್ದರು. ಆ ಹಿನ್ನೆಲೆಯಲ್ಲಿ ಮೂಡಿಬಂದ ಕಥೆಗಳಲ್ಲಿ ವಡ್ಡಾರಾಧನೆಯ ಕಥೆಗಳು ಜನಪ್ರಿಯ ಹಾಗೂ ಪ್ರಮುಖವಾದುವು.

2. ಅರಸನ ಬರುವಿಕೆಗಾಗಿ ಯಶೋಭದ್ರೆ ತನ್ನ ಅರಮನೆಯನ್ನು ಹೇಗೆ ಶೃಂಗರಿಸಿದಳು?

ಯಶೋಭದ್ರೆ ಅರಸನು ಬರುವುದನ್ನು ಕೇಳಿ, ರಾಜರು ಬರುವ ದಾರಿಯಲ್ಲೆಲ್ಲ ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ – ಎಂಬ ಐದು ಬಗೆಯ ರತ್ನಗಳಿಂದ ರಂಗೋಲೆ ಹಾಕಿಸಿದಳು. ನೇತ್ರ, ಪಟ್ಟು, ದುಕೂಲ, ಚೀನ – ಎಂಬ ಬಗೆಬಗೆಯ ರೇಷ್ಮೆಯ ದಿವ್ಯವಾದ ಬಟ್ಟೆಗಳನ್ನು ಹಾಸಿದಳು. ರತ್ನಗಳಿಂದ ಚೆಲುವಾದ ಚಿನ್ನದ ಮುತ್ತಿನ ಸರಗಳಿಂದ ತೋರಣ ಕಟ್ಟಿದಳು. ಇಂದ್ರನ ಅರಮನೆಯನ್ನು ಹೋಲುವ ರೀತಿಯಲ್ಲಿ ಶೃಂಗರಿಸಿದಳು.

3. ಮಜ್ಜನಕ್ಕೆ ತೆರಳಿದ ವೃಷಭಾಂಕನಿಗೆ ಅಚ್ಚರಿಯಾಗಲು ಕಾರಣವೇನು ?

ವೃಷಭಾಂಕನಿಗೆ 'ಸ್ನಾನಕ್ಕೆ ಏಳಿ, ಬನ್ನಿ' ಎನ್ನಲು 'ಹಾಗೆಯೇ ಮಾಡುವೆವು' ಎಂದು ಸ್ನಾನ ಮಾಡಲು ಉದ್ಯುಕ್ತನಾಗಿ ದೇವಲೋಕಕ್ಕೆ ಸಮಾನವಾದ ರತ್ನಮಯವಾದ ನೆಲಗಟ್ಟುಳ್ಳ ಬಾವಿಗೆ(ಕೆರೆಗೆ) ಹೋಗಿ ಸ್ನಾನ ಮಾಡಿದನು. ಆಗ ತನ್ನ ಬೆರಳಿನಲ್ಲಿದ್ದ ಅಮೂಲ್ಯವಾದ ಉಂಗುರ ಬಿದ್ದು ಹೋಗಲು, ಅದನ್ನು ಹುಡುಕುವುದಕ್ಕಾಗಿ ಆ ಕೆರೆಯ ಎದುರಿನ ತೂಬನ್ನು ತೆಗೆದು ನೀರನ್ನು ಬಿಟ್ಟನು. ಆಗ ಅಲ್ಲಿ ದೇವೇಂದ್ರನ ಖಜಾನೆಯನ್ನೇ ತೆರೆದ ರೀತಿಯಲ್ಲಿ ಶ್ರೇಷ್ಟವಾದ ಬಗೆಬಗೆಯ ರತ್ನಗಳ ವಿಚಿತ್ರವಾದ ಹಲವು ಆಭರಣಗಳನ್ನು ಕಂಡು ಬಹಳ ಆಶ್ಚರ್ಯಪಟ್ಟವನಾಗಿ ನೋಡಿದನು.

# 1. ಸಂಕಲ್ಪಗೀತೆ

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಸಂಕಲ್ಪಗೀತೆ ಕವನದ ಕರ್ತೃ ಯಾರು?
   ಸಂಕಲ್ಪಗೀತೆ ಕವನದ ಕರ್ತೃ ಜಿ.ಎಸ್. ಶಿವರುದ್ರಪ್ಪ
2. ಸಂಕಲ್ಪಗೀತೆ ಕವನದ ಆಕರ ಗ್ರಂಥ ಯಾವುದು?
   ಜಿ.ಎಸ್. ಶಿವರುದ್ರಪ್ಪ ವಿರಚಿತ 'ಎದೆತುಂಬಿ ಹಾಡಿದೆನು' ಕವನ ಸಂಕಲನ ಸಂಕಲ್ಪಗೀತೆ ಕವನದ ಆಕರ ಗ್ರಂಥ
3. ಸಂಕಲ್ಪಗೀತೆ ಕವನದ ಮುಖ್ಯ ಆಶಯವೇನು?
   ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂಬುದನ್ನು ಭಾವಗೀತೆಯ ಮೂಲಕ ವ್ಯಕ್ತಗೊಳಿಸುವುದೇ ಸಂಕಲ್ಪಗೀತೆ ಕವನದ ಮುಖ್ಯಆಶಯವಾಗಿದೆ.
4. ಹಿಂದಿನ ತಲೆಮಾರಿನ ಯುವಕರಿಗೆ ನೆಲೆಯನ್ನು ತಿಳಿಸುವ ಮಾತು ಯಾವುದು?

"ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು, ಸಾಗುತ್ತಿತ್ತು ಧೀರರ ದಂಡು" ಎಂಬ ಮಾತು ಹಿಂದಿನ ತಲೆಮಾರಿನ ಯುವಕರಿಗಿದ್ದ ನೆಲೆಯನ್ನು ತಿಳಿಸುತ್ತದೆ.

5. ಜಿ ಎಸ್ ಶಿವರುದ್ರಪ್ಪ ರವರು ರಚಿಸಿರುವ ಗ್ರಂಥಗಳು ಯಾವುವು?

ಜಿ ಎಸ್‌ಶಿವರುದ್ರಪ್ಪ ಅವರು ಸಾಮಗಾನ, ಚೆಲುವು-ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

6. ಜಿ ಎಸ್ ಶಿವರುದ್ರಪ್ಪ ನವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?

ಜಿಎಸ್ ಶಿವರುದ್ರಪ್ಪನವರ 'ಕಾವ್ಯಾರ್ಥಚಿಂತನ'ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

7. ಜಿ ಎಸ್ ಶಿವರುದ್ರಪ್ಪ ರವರು ಬರಡಾಗಿರುವ ಕಾಡುಮೇಡುಗಳಿಗೆ ಏನಾಗಬೇಕೆಂದು ಹೇಳಿದ್ದಾರೆ?

ಜಿ ಎಸ್ ಶಿವರುದ್ರಪ್ಪ ರವರು ಬರಡಾಗಿರುವ ಕಾಡುಮೇಡುಗಳಿಗೆ ವಸಂತವಾಗುತ ಮುಟ್ಟಬೇಕೆಂದು ಹೇಳಿದ್ದಾರೆ

8. ಕವಿದಿರುವ ಕತ್ತಲೆಯನ್ನು ಯಾವುದರಿಂದ ದೂರ ಮಾಡಬೇಕೆಂದು ಕವಿ ಹೇಳುತ್ತಾರೆ?

ಪ್ರೀತಿಯ ಹಣತೆಯ ಹಚ್ಚುವ ಮೂಲಕ ಕವಿದಿರುವ ಕತ್ತಲೆಯನ್ನು ದೂರ ಮಾಡಬೇಕೆಂದು ಕವಿ ಹೇಳುತ್ತಾರೆ

9. ಜಿ ಎಸ್ ಶಿವರುದ್ರಪ್ಪ ರವರು ಯಾರಿಗೆಹೊಸ ಭರವಸೆಗಳನ್ನು ಮೂಡಿಸಬೇಕಾಗಿದೆ?

ಬಿದ್ದವರನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳನ್ನು ಮೂಡಿಸಬೇಕಾಗಿದೆ.

10. ಜಿ ಎಸ್ ಶಿವರುದ್ರಪ್ಪ ರವರು ಯಾವುದನ್ನು ಕೆಡವುತ ಸೇತುವೆಯಾಗಬೇಕೆಂದು ಹೇಳಿದ್ದಾರೆ?

ಜಿ ಎಸ್ ಶಿವರುದ್ರಪ್ಪ ರವರು ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವುತ ಸೇತುವೆಯಾಗಬೇಕೆಂದು ಹೇಳಿದ್ದಾರೆ.

## ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ

1. "ನಾಳಿನ ಕನಸನ್ನುಬಿತ್ತೋಣ"

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು" ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ" ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:-ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:-ನಾವು ಮತ ಧರ್ಮಗಳ ಹೆಸರಿನಲ್ಲಿ ಕುರುಡಾಗಬಾರದು. ಎಲ್ಲಾ ಮತ ಧರ್ಮಗಳು ಮಾನವನ ಏಳಿಗೆಗೆ ಇರುವ ದಾರಿದೀಪಗಳು. ಎಂಬ ಭಾವನೆಯಿರಬೇಕೇ ಹೊರತು ಧರ್ಮಾಂಧತೆಯಲ್ಲ. ಭಯ ಸಂಶಯಗಳಿಂದ ಆತಂಕ ತುಂಬಿದ ಜನರ ಕಣ್ಣುಗಳಲ್ಲಿ ಹೊಸ ಭರವಸೆಯ ಬೆಳಕನ್ನು ಮೂಡಿಸಿ ಹೊಸ ಬಗೆಯ ಕನಸನ್ನು ಕಾಣಲು ನೇರವಾಗೋಣವೆಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

2. "ಕೆಡವುತ ಸೇತುವೆಯಾಗೋಣ"

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು" ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ" ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:-ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:- ಶಾಶ್ವತವಲ್ಲದ ಈ ಬದುಕು ಬಿದ್ದು ಹೋಗುವಂತದ್ದೇ, ನಾವು ಪ್ರೀತಿ ಪ್ರೇಮ, ನಂಬಿಕೆ ವಿಶ್ವಾಸಗಳಿಂದ ಬಿದ್ದು ಹೋಗಿರುವ ಈ ಬದುಕನ್ನು ಮೌಲ್ಯಾಧಾರಿತವಾಗಿ ಹೊಸ ಬರವಸೆಗಳಿಂದ ಕಟ್ಟೋಣ. ಜಾತಿ ಮತ ಪಂಥಗಳಿಂದ ಅಡ್ಡವಾಗಿರುವ ಗೋಡೆಯನ್ನು ಕೆಡವಿ, ಒಡೆದ ಮನಸ್ಸುಗಳ ನಡುವೆ ಸೇತುವೆಯನ್ನು ಕಟ್ಟಬೇಕೆಂಬುದೇ ಇಲ್ಲಿನ ಸ್ವಾರಸ್ಯವಾಗಿದೆ..

3."ವಸಂತವಾಗುತ ಮುಟ್ಟೋಣ"

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು" ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ" ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:-ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಕಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:- ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

4. "ಎಚ್ಚರದಲಿ ಮುನ್ನಡೆಸೋಣ"

ಆಯ್ಕೆ :-ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ "ಎದೆತುಂಬಿ ಹಾಡಿದೆನು" ಕವನ ಸಂಕಲನದಿಂದ ಆಯ್ದ "ಸಂಕಲ್ಪಗೀತೆ" ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ:-ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:- ಜಾತಿಯತೆ, ಮತ, ಭಾಷೆ, ಬಣ್ಣ, ಜ್ಞಾನ-ಅಜ್ಞಾನ ದ್ವೇಷ-ಅಸೂಯೆ ಮೂಢನಂಬಿಕೆಗಳ ಎಂಬ ಕತ್ತಲೆಯನ್ನು ಜ್ಞಾನದ ಹಣತೆಯನ್ನು ಹಚ್ಚಿ ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರಿಕೆಯಿಂದ ಮುನ್ನಡೆಸಿ ದಡವನ್ನು ಸೇರೋಣ

## 2. ಹಕ್ಕಿ ಹಾರುತಿದೆ ನೋಡಿದಿರಾ

### ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಹಕ್ಕಿಹಾರುತಿದೆ ನೋಡಿದಿರಾ ಕವನದ ಕರ್ತೃ ಯಾರು?
ಹಕ್ಕಿಹಾರುತಿದೆ ನೋಡಿದಿರಾ ಕವನದ ಕರ್ತೃ ದ.ರಾ. ಬೇಂದ್ರೆಯವರು.
2. ಹಕ್ಕಿಹಾರುತಿದೆ ನೋಡಿದಿರಾ ಕವನದ ಆಕರ ಗ್ರಂಥ ಯಾವುದು?
ಹಕ್ಕಿಹಾರುತಿದೆ ನೋಡಿದಿರಾ ಕವನದ ಆಕರ ಗ್ರಂಥ 'ಗರಿ' ಎಂಬ ಕವನ ಸಂಕಲನ.
3. ಹಕ್ಕಿಹಾರುತಿದೆ ನೋಡಿದಿರಾ ಕವನದ ಆಶಯವೇನು?
"ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ಅದಕ್ಕೆ ಹೊಂದಿಕೊಳ್ಳಬೇಕು" ಎಂಬುದೇ ಹಕ್ಕಿಹಾರುತಿದೆ ನೋಡಿದಿರಾ ಕವನದ ಆಶಯ.
4. ದ.ರಾ. ಬೇಂದ್ರೆಯವರ ಪ್ರಮುಖ ಕೃತಿಗಳು ಯಾವುದು?
ದ.ರಾ. ಬೇಂದ್ರೆ ಅವರು ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
5. ಜೀವಂತಿಕೆಯ ಗುಣ ಯಾವುದು?
ಚಲನಶೀಲತೆಯೇ ಜೀವಂತಿಕೆಯ ಗುಣ
6. ಹಕ್ಕಿಯು ಏನನ್ನು ಸೆಕ್ಕಿಸಿಕೊಂಡಿದೆ?
ಹಕ್ಕಿಯು ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡಿದೆ.
7. ಹಕ್ಕಿಯು ಏನನ್ನು ಒಕ್ಕಿದೆ?
ಹಕ್ಕಿಯು ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿದೆ
8. ಕಾಲದ ಹಕ್ಕಿಯು ಏನನ್ನು ಮುಕ್ಕಿದೆ?
ಕಾಲದ ಹಕ್ಕಿಯು ಮಂಡಲ-ಗಿಂಡಲಗಳ ಗಡ ಮುಕ್ಕಿದೆ
9.ಕವಿ ಬ್ರಹ್ಮಾಂಡದ ರಹಸ್ಯವನ್ನು ಹಕ್ಕಿಗಳು ಹೇಗೆ ಒಡೆಯುವುದು ಎಂದು ತಿಳಿಸಿದ್ದಾರೆ?
ಕಾಲವೆಂಬ ಹಕ್ಕಿಯು ತನ್ನ ಬಾಹುದಿಂದದಿಶಾವಲಯದ ಆಚೆಗೆ ತನ್ನಯ ಕೊಕ್ಕನ್ನು ಚಾಚಿ ಬ್ರಹ್ಮಾಂಡದ ರಹಸ್ಯವನ್ನು ಒಡೆಯುವುದು ಎಂದು ತಿಳಿಸಿದ್ದಾರೆ.
10. ಕಾಲದ ಹಕ್ಕಿಯು ಯಾವ ಮೇರೆಯನ್ನು ಮೀರಿದೆ?
ಕಾಲದ ಹಕ್ಕಿಯು ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿದೆ.
11. ಕವಿ ಬೇಂದ್ರೆಯವರ ಕಾಲದ ಹಕ್ಕಿಯ ರೆಕ್ಕೆ ಗರಿಗಳನ್ನು ಯಾವ ಯಾವ ಬಣ್ಣಗಳಿಗೆ ಹೋಲಿಸಿದ್ದಾರೆ?
ವರಕವಿ ಬೇಂದ್ರೆಯವರು "ಕಾಲದ ಹಕ್ಕಿಗೆ ಪಕ್ಕೆಯಲ್ಲಿರುವ ರೆಕ್ಕೆಗಳನ್ನು ಕೆಂಪಾದ ಹೊಳೆಯುವ ಹೊನ್ನಿನ ಬಣ್ಣ ಬಣಗಳಿಗೆ ಹೋಲಿಸಿದ್ದಾರೆ. ಹುಚ್ಚಗಳನ್ನು ಕಪ್ಪು ಮತ್ತು ಬಿಳಿ ಬಣ್ಣಕ್ಕೆ ಹೋಲಿಸಿದ್ದಾರೆ. ಹಾಗೆಯೇ ಹಕ್ಕಿಯ ಗರಿಗಳನ್ನು ಬಿಳಿ-ಹೊಳೆ ಬಣ್ಣಕ್ಕೆ ಹೋಲಿಸಿದ್ದಾರೆ."
12. ಬೇಂದ್ರೆಯವರು ವರ್ಣಿಸಿದ ಕಾಲದ ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ ಮತ್ತು ಏಕೆ?
ಬೇಂದ್ರೆಯವರು "ಕಾಲವೆಂಬ ಹಕ್ಕಿಯು ದಿಶಾ ವಲಯದ ತುತ್ತತುದಿಗೆ ಮುಟ್ಟಿದೆ ದಿಶಾವಲಯದ ಆಚೆಗೆ ಚಾಚಿದೆ ಬ್ರಹ್ಮಾಂಡದ ಮೂಲವನ್ನು ಹೊಡೆಯಲು ಪ್ರಪಂಚದ ವಿಸ್ಮಯವನ್ನು ಭೇದಿಸಲು ಎಂಬಂತೆ ಹೊಂಚು ಹಾಕಿದೆ" ಎಂದು ವರ್ಣಿಸಿದ್ದಾರೆ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ಎವೆ ತೆರೆದಿಕ್ಕುವ ಹೊತ್ತಿನ ಒಳಗೆ"
ಆಯ್ಕೆ :-ಈ ವಾಕ್ಯವನ್ನು "ಅಂಬಿಕಾತನಯದತ್ತ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ "ಗರಿ"ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:- ಕವಿ ದ.ರಾ.ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯ ಹಾರಾಡುವ ವೇಗವನ್ನು ವರ್ಣಿಸುತ್ತಾ "ಕಾಲ, ರಾತ್ರಿ ಕಳೆದು ದಿನ ಬೆಳಕಾಗಿ ಪುನಹ ರಾತ್ರಿ ಬೆಳಗು ಹೀಗೆ ನರ ವರ್ತನೆ ಯಾಗುವ ಚಲನ ಗುಣವೊಂದಿದೆ. ಅದು ಮೇಲೆ ಕೆಳಗೆ ಸುತ್ತಮುತ್ತ ಎತ್ತಲು ತನ್ನ ಕಬಂಧ ಬಾಹುವನ್ನು ಹರಡಿಕೊಂಡು ವಿಶ್ವವ್ಯಾಪಕವಾಗಿ ಕಣ್ಣು ತೆರೆದು ಮುಚ್ಚುವುದು ಪ್ರೀತಿಯಲ್ಲಿ ವೇಗವಾಗಿ ಹಾರಿ ಹೋಗುತ್ತಿದೆ" ಎಂದು ವರ್ಣಿಸುತ್ತಾರೆ.
ಸ್ವಾರಸ್ಯ:-ಇಲ್ಲಿ ಕಾಲದ ಚಲನಶೀಲ ಗುಣ ವಿಸ್ತಾರ ವೇಗ ಗುಣವನ್ನು ವರ್ಣಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

# 2. ಹಲಗಲಿಯ ಬೇಡರು

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಜನಪದ ಸಾಹಿತ್ಯಕ್ಕೆ ಮೂಲ ಪ್ರೇರಣೆ ಯಾವುದು?
ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ಪ್ರೇರಣೆ.
2. ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳು ಯಾವುವು?
ಜನಪದ ಗೀತೆಗಳು, ಕತೆ, ಗಾದೆ, ಒಗಟು ಮತ್ತು ಲಾವಣಿಗಳೂ ಪ್ರಮುಖ ಪ್ರಕಾರಗಳು.
3. ಲಾವಣಿಗಳಲ್ಲಿ ಅಭಿವ್ಯಕ್ತಗೊಳ್ಳುವ ಅಂಶಗಳು ಯಾವುವು?
ಲಾವಣಿಗಳಲ್ಲಿ ನಾಡು, ನುಡಿಗಾಗಿ ಶ್ರಮಿಸಿದ ಸಾಧಕರನ್ನು ಕುರಿತ ವ್ಯಕ್ತಿಚಿತ್ರಗಳು, ಹಾಗೂ ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಗೊಳ್ಳುವ ಅಂಶಗಳಾಗಿವೆ.
3. ಹಲಗಲಿ ಬೇಡರು ಜನಪದ ಲಾವಣಿಯ ಮುಖ್ಯ ಆಶಯ ಭಾವವನ್ನು ತಿಳಿಸಿ.
ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆ ಯನ್ನು ಜಾರಿಗೆ ತಂದರು. ಸ್ವಾತಂತ್ರ್ಯಪ್ರಿಯರಾಗಿದ್ದ ಹಲಗಲಿಯಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು. ಆ ಸಂದರ್ಭದಲ್ಲಿ ಅನಕ್ಷರಸ್ಥ ಸಮುದಾಯದಲ್ಲಿದ್ದ ಸ್ವಾತಂತ್ರ್ಯ ಪ್ರೇಮವನ್ನು ಪರಿಚಯಿಸಿ ದೇಶ ಪ್ರೇಮವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಹಲಗಲಿ ಬೇಡರು ಜನಪದ ಲಾವಣಿಯ ಆಶಯ.
4. ಹಲಗಲಿಯು ಯಾವ ಸಂಸ್ಥಾನಕ್ಕೆ ಸೇರಿದ್ದಾಗಿತ್ತು?
ಹಲಗಲಿಯು ಮುಧೋಳ ಸಂಸ್ಥಾನಕ್ಕೆ ಸೇರಿದ್ದಾಗಿತ್ತು.
5. ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ನಿಶ್ಶಸ್ತ್ರೀಕರಣ ಕಾಯಿದೆಯನ್ನು ವಿರೋಧಿಸಿದವರು ಯಾರು?

ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ನಿಶ್ಶಸ್ತ್ರೀಕರಣ ಕಾಯಿದೆಯನ್ನು ವಿರೋಧಿಸಿದವರು "ಹಲಗಲಿಯ ಬೇಡರು"

6. ಹಲಗಲಿ ಬೇಡರ ನಾಯಕರಿಗೆ ಬುದ್ಧಿಮಾತು ಹೇಳಿದವರು ಯಾರು?
ಹೆಬಲಕ್ ಸಾಹೇಬನು ಹಲಗಲಿ ಬೇಡರ ನಾಯಕರಿಗೆ ಬುದ್ಧಿಮಾತು ಹೇಳಿದನು.

7. ಯಾರ ದಯದಿಂದ "ಹಲಗಲಿ ಬೇಡರು" ಲಾವಣಿಯನ್ನು ಹಾಡಿದೆನೆಂದು ಲಾವಣಿಕಾರನು ಹೇಳಿದ್ದಾನೆ?
ಕುರ್ತಕೋಟಿಯ ಕಲ್ಮೇಶನ ದಯದಿಂದ "ಹಲಗಲಿ ಬೇಡರು" ಲಾವಣಿಯನ್ನು ಹಾಡಿದೆನೆಂದು ಲಾವಣಿಕಾರನು ಹೇಳಿದ್ದಾನೆ.

10. 'ಚಟಕೆಕಾರರು' ಎಂದು ಯಾರನ್ನು ಕರೆಯಲಾಗಿದೆ?
ಚಟಕೆಕಾರರು ಎಂದು ಆಂಗ್ಲೋ ಇಂಡಿಯನ್‌ರನ್ನು ಕರೆಯಲಾಗಿದೆ.

8. ಹೆಬಲಕ ಸಾಹೇಬನು ಯಾರು?
'ಹೆಬಲಕ ಸಾಹೇಬ' ಯಾರೆಂದರೆ ಹೆನ್ರಿ ಹ್ಯಾವ್‌ಲಾಕ್ ಎಂಬ ಬ್ರಿಟಿಷ್ ಅಧಿಕಾರಿ.

11. 'ಕಾರ ಸಾಹೇಬ' ಎಂದರೆ ಯಾರು?
'ಕಾರಸಾಹೇಬ' ಎಂದರೆ ಅಲೆಗ್ಸಾಂಡರ್ ವಿಲಿಯಂ ಕೆರ್ರೆ ಎಂಬ ಬ್ರಿಟಿಷ್ ಅಧಿಕಾರಿ.

## ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ

1. "ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು" ಕೃತಿಯಿಂದ ಆಯ್ದ "ಹಲಗಲಿಯ ಬೇಡರು" ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ:– "ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ವಿರೋಧಿಸ ಹಲಗಲಿಯ ಬೇಡರ ನಾಯಕರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ:– ಹಲಗಲಿಯ ಬೇಡರು "ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

2. "ಕೊಡುತಿವಿ ಕಬುಲ ಕೇಳಿರಿ ಮಾತ, ಹೋಗಬ್ಯಾಡಿರಿ ಸತ್ತ"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು" ಕೃತಿಯಿಂದ ಆಯ್ದ "ಹಲಗಲಿಯ ಬೇಡರು" ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ:– ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆಯುವಾಗ ಹೆಬಲಕ್ ಸಾಹೇಬನು ಊರ ಹೆಬ್ಬಾಗಿಲಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿಮಾತು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:– ಹಲಗಲಿಯ ಬೇಡರ ದಂಗೆಯನ್ನು ಹೇಗಾದರೂ ಮಾಡಿ ಹತ್ತಿಕ್ಕಬೇಕೆಂಬ ಬ್ರಿಟಿಷರ ಧೋರಣೆಯೇ ಇಲ್ಲಿನ ಸ್ವಾರಸ್ಯವಾಗಿದೆ.

3. "ಮೋಸ ಮಾಡಿ ನಮ್ಮ ದೇಶ ಗೆದಿತಾರ ಮುಂದೆ ನಮಗ ಘೋರಾ"

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು" ಕೃತಿಯಿಂದ ಆಯ್ದ "ಹಲಗಲಿಯ ಬೇಡರು" ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ:– ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆಯುವಾಗ ಹೆಬಲಕ್ ಸಾಹೇಬನು ಊರ ಹೆಬ್ಬಾಗಿಲಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿಮಾತು ಹೇಳುವ ಸಂದರ್ಭದಲ್ಲಿ ಹಲಗಲಿ ಬೇಡರ ನಾಯಕ ಜಡಗನು ಬ್ರಿಟಿಷರ ವಂಚಕ ಬುದ್ಧಿಯನ್ನು ಕುರಿತು ಈ ಮೇಲೆನಂತೆ ಹೇಳುತ್ತಾನೆ.

ಸ್ವಾರಸ್ಯ:– ಹಲಗಲಿಯ ಬೇಡರು ಹೊಂದಿದ್ದ ಬ್ರಿಟಿಷರ ಮೇಲಿನ ಅವಿಶ್ವಾಸವೇ ಈ ಮೇಲಿನ ಮಾತಿನ ಸ್ವಾರಸ್ಯವಾಗಿದೆ.

## 4. ಕೌರವೇಂದ್ರನ ಕೊಂದೆ ನೀನು

### ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಕುಮಾರವ್ಯಾಸನ ಜನ್ಮಸ್ಥಳ ಯಾವುದು?
ಕುಮಾರವ್ಯಾಸನ ಜನ್ಮಸ್ಥಳ ಗದಗ ಪ್ರಾಂತದ ಕೋಳಿವಾಡದವನು.

2. ಕುಮಾರವ್ಯಾಸನು ಜೀವಿಸಿದ್ದ ಕಾಲ ಯಾವುದು?
ಕುಮಾರವ್ಯಾಸನು ಜೀವಿಸಿದ್ದ ಕಾಲ ಕ್ರಿ.ಶ.ಸು.1430

3. ಕೌರವೇಂದ್ರನ ಕೊಂದೆ ನೀನು ಪದ್ಯಭಾಗವನ್ನು ಮಹಾಭಾರತದ ಯಾವ ಪರ್ವದಿಂದ ಆರಿಸಿಕೊಳ್ಳಲಾಗಿದೆ?
ಕೌರವೇಂದ್ರನ ಕೊಂದೆ ನೀನು ಪದ್ಯಭಾಗವನ್ನು ಮಹಾಭಾರತದ ಉದ್ಯೋಗಪರ್ವದಿಂದ ಆರಿಸಿಕೊಳ್ಳಲಾಗಿದೆ

4. ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಕೃಷ್ಣನನ್ನು ಯಾವ ಯಾವ ಹೆಸರುಗಳಿಂದ ಸಂಬೋಧಿಸಿದ್ದಾನೆ?
ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಕೃಷ್ಣನನ್ನು ದನುಜರಿಪು, ಮುರಾರಿ, ಶೌರಿ, ದಾನವಸೂದನ, ಹರಿ, ಮಾಧವ, ಎಂದು ಮೊದಲಾದ ಹೆಸರುಗಳಿಂದ ಸಂಬೋಧಿಸಿದ್ದಾನೆ.

5.ಕೌರವೇಂದ್ರನ ಕೊಂದೆ ನೀನು ಪದ್ಯಭಾಗದ ಆಶಯವೇನು?
ಧರ್ಮ ಪಾಂಡವರ ಪರವಿದ್ದುದರಿಂದ ಶ್ರೀಕೃಷ್ಣ ಕೌರವರ ಪಕ್ಷದ ವೀರಕರ್ಣನ ಜನ್ಮರಹಸ್ಯವನ್ನು ಹೇಳಿ, ತನ್ನವರಿಗೆ ಆತನಿಂದ ಅಪಾಯವಾಗದಂತೆ ಮಾಡುವ ಹೃದಯವಿದ್ರಾವಕ ಸನ್ನಿವೇಶ ಕೌರವೇಂದ್ರನ ಕೊಂದೆ ನೀನು ಎಂಬುದೇ ಕೌರವೇಂದ್ರನ ಕೊಂದೆ ನೀನು ಪದ್ಯಭಾಗದ ಆಶಯ.

6. ಸಂಘರ್ಷದ ಪರಿಣಾಮ ಎಂತಹದು? ಅದರಲ್ಲಿ ಗೆಲುವು ಸಾಧಿವುದು ಹೇಗೆ?
ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅಪೇಕ್ಷಣೀಯ. ಅದು ಸಾಧ್ಯವಾಗದೆ ಮತ್ಸರ, ಛಲ ಪ್ರಧಾನವಾದರೆ ಸಂಘರ್ಷ ಅನಿವಾರ್ಯವಾಗುತ್ತದೆ. ಒಬ್ಬರನ್ನೊಬ್ಬರು ನಾಶಮಾಡುವವರೆಗೂ ಅದು ಬೆಳೆಯುತ್ತದೆ. ಅದರ ಪರಿಣಾಮ ಘೋರವಾದುದು ಎಂಬ ಅರಿವಿರುವುದಾದರೂ ಪ್ರತಿಷ್ಠೆಯಿಂದ ಹಠ ಸಾಧಿಸಿದಾಗ ಗೆಲ್ಲಲು, ಉಳಿಯಲು ವಿವಿಧ ತಂತ್ರಗಳನ್ನು ಬಳ ಸುವುದುಸಹಜ. ಶತ್ರುವಿನೊಂದಿಗೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲವು ಸಾಧಿಸಬಹುದು.

## ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ

**1.** "ಎನಗೆ ನಿಮ್ಮಡಿಗಳಲಿ ಸಮಸೇವನೆಯೆ ದೇವ"
ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ'' ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು'' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:– :– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.
ಸ್ವಾರಸ್ಯ:– ಇದುವರೆಗೂ ತನ್ನನ್ನು ಸೂತಪುತ್ರನೆಂದೇ ಭಾವಿಸಿದ್ದ ಕರ್ಣನು ದೇವ ನಾನು ನಿಮ್ಮ ಸೇವಕನು, ಹೀಗಿರುವಾಗ ನೀನು ನನ್ನನ್ನು ನಿಮಗೆ ಸಮನಾಗಿ ಪೀಠದಲ್ಲಿ ಕುಳಿತುಕೊಳ್ಳುವುದೇ ಎಂದು ಏನೂ ತೋಚದೇ ಭಯದಿಂದ ಪ್ರತಿಕ್ರಿಯಿಸುವುದೇ ಇಲ್ಲಿನ ಸ್ವಾರಸ್ಯವಾಗಿದೆ.

**2.** "ಹರಿಯ ಹಗೆ ಹೊಗೆದೋರದುರುದೆ"
ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:– ಕೃಷ್ಣನು ಕರ್ಣನಿಗೆ ಅವನ ಜನ್ಮವೃತ್ತಾಂತ ಹಾಗೂ ಆಮಿಷಗಳನ್ನು ಒಡ್ಡಿದಾಗ ಕರ್ಣನ ಕೊರಳ ನರಗಳು ಬಿಗಿದವು, ಕಣ್ಣೀರು ಹೆಚ್ಚಾಗಿ, ಅತಿಯಾಗಿ ನೊಂದುಕೊಳ್ಳುತ್ತಾನೆ. ಅಯ್ಯೋ ಕುರುಪತಿಗೆ ಕೇಡಾಯಿತಲ್ಲ ಎಂದು ತನ್ನ ಮನಸ್ಸಿನಲ್ಲೇ ಈ ಮೇಲಿನಂತೆ ಹೇಳಿಕೊಳ್ಳುತ್ತಾನೆ.
ಸ್ವಾರಸ್ಯ:– ಕೃಷ್ಣನ ಹಗೆ ಕೌರವನ ವಂಶವನ್ನು ನಾಶಮಾಡದೆ ಸುಡದೆ ಇರಲಾದು ಎಂಬ ಕರ್ಣನ ಆತಂಕವೇ ಇಲ್ಲಿನ ಸ್ವಾರಸ್ಯವಾಗಿದೆ.

**3.** "ಕೌರವೇಂದ್ರನ ಕೊಂದೆ ನೀನು"
ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:– ಕೃಷ್ಣನ ಮಾತಿಗೆ ಮರುಳಾಗದ ಕರ್ಣ ತನ್ನ ಸ್ವಾಮಿಯಾದ ಕೌರವನ ಮೇಲೆ ಅಪಾರವಾದ ನಿಷ್ಠೆಯನ್ನು ಹೊಂದಿದ್ದಾನೆ. ಅವನು ಕೃಷ್ಣ ಒಡ್ಡಿದ ರಾಜ್ಯದ ಸಿರಿಸಂಪತ್ತಿಗೆ ಮರುಳಾಗದೇ ಕೃಷ್ಣನನ್ನೇ ಮರುಳನೆಂದು ಜರೆಯುತ್ತಾ, ನಾನು ಪಾಂಡವರನ್ನು ನಾಶಮಾಡುವ ಭರದಲ್ಲಿದ್ದೆ ಆದರೆ ನೀನು ನನ್ನ ಜನ್ಮಹಸ್ಯದ ಬಗ್ಗೆ ತಿಳಿಸಿ ಮೇಲಿನಂತೆ ಕೌರವನ ಮೇಲೆ ಕರುಣೆ, ಭಕ್ತಿಯಿಂದ ಈ ಮೇಲಿನಂತೆ ಹೇಳುತ್ತಾನೆ.
ಸ್ವಾರಸ್ಯ:– ಕರ್ಣನ ಜನ್ಮರಹಸ್ಯ ತಿಳಿದನಂತರ ಪಾಂಡವರ ಮೇಲೆ ವೈರತ್ವ ಕಡಿಮೆಯಾಗಿ ಕೃಷ್ಣನು ತನ್ನ ವಂಶದ ಬಗ್ಗೆ ತಿಳಿಸಿ ಕೌರವನನ್ನೇ ಕೊಂದು ಬಿಟ್ಟನಲ್ಲ ಎಂದು ಆತಂಕ ವ್ಯಕ್ತಪಡಿಸುವುದೇ ಇಲ್ಲಿನ ಸ್ವಾರಸ್ಯವಾಗಿದೆ.

**4.** "ನಾಳೆ ಸಮರದ ಸಾರದಲ್ಲಿ ತೋರುವೆನು ನಿಜ ಭುಜ"
ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ:– ಕೃಷ್ಣನು ಕರ್ಣನಿಗೆ ಏನೇ ಆಮಿಷ ಒಡ್ಡಿದರೂ ತಾನು ಕೌರವನ ಮೇಲೆ ಹೊಂದಿದ್ದ ಸ್ವಾಮಿನಿಷ್ಠೆ ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಕೌರವನ ಮಿತ್ರರು ತನಗೂ ಮಿತ್ರರೇ, ಆತನ ಶತ್ರುಗಳು ತನಗೂ ಶತ್ರುಗಳೇ ಎಂದು ಭಾವಿಸಿದ್ದ ಕರ್ಣನು ನಾಳಿನ ಯುದ್ಧದಲ್ಲಿ ತನ್ನ ಪರಾಕ್ರಮದ ಶ್ರೇಷ್ಠತೆಯನ್ನು ತೋರಿಸದೆ ಇರಲಾರೆ ಎಂದು ಕೃಷ್ಣನಿಗೆ ಈ ಮೇಲಿನಂತೆ ಹೇಳುತ್ತಾನೆ.
ಸ್ವಾರಸ್ಯ:– ಕರ್ಣನು ಕೌರವನ ಮೇಲೆ ಹೊಂದಿದ್ದ ಸ್ವಾಮಿನಿಷ್ಠೆ, ಶೌರ್ಯಗುಣವೇ ಇಲ್ಲಿನ ಸ್ವಾರಸ್ಯವಾಗಿದೆ.

**5.** "ನಿನ್ನಯ ವೀರರೈವರ ನೋಯಿಸೆನು ರಾಜೀವಸಖನಾಣೆ"
ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:– :–ಕರ್ಣನು ಭಾರತ ಯುದ್ಧದಲ್ಲಿ ತನ್ನ ಪರಾಕ್ರಮದ ಶ್ರೇಷ್ಟತೆಯನ್ನು ತೋರಿಸದೆ ಇರಲಾರೆ, ನಾಳಿನ ಭಾರತ ಯುದ್ಧವು ಮಾರಿ ದೇವತೆಗೆ ಔತಣವನ್ನೀಯುವ ರೀತಿಯಲ್ಲಿ ಕೌರವನ ಋಣಹಿಂಗುವಂತೆ ಕಾದಾಡುತ್ತೇನೆ ಆದರೆ ಪಾಂಡವರಲ್ಲಿ ಸಂಪನ್ನತನವನ್ನು ತೋರಿಸುವೆನು ಎನ್ನುತ್ತಾ ಕೃಷ್ಣನಿಗೆ ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ:– ಕರ್ಣನು ತನ್ನ ಪಾಂಡವ ಸಹೋದರರ ಮೇಲಿನ ವಾತ್ಸಲ್ಯ ಹಾಗೂ ಕೌರವನ ಋಣ ತೀರಿಸುವ ಹಂಬಲವೇ ಇಲ್ಲಿನ ಸ್ವಾರಸ್ಯವಾಗಿದೆ.

# 5. ಹಸುರು

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಕುವೆಂಪುರವರ ಯಾವ ಕೃತಿಯನ್ನುಪ್ರಕೃತಿಗೀತೆಗಳ ಪ್ರಾತಿನಿಧಿಕ ಸಂಕಲನವೆಂದೇ ಗುರುತಿಸಲಾಗಿದೆ?
   ಕುವೆಂಪುರವರ 'ಪಕ್ಷಿಕಾಶಿ' ಕೃತಿಯನ್ನು ಅವರ ಪ್ರಕೃತಿಗೀತೆಗಳ ಪ್ರಾತಿನಿಧಿಕ ಸಂಕಲನವೆಂದೇ ಗುರುತಿಸಿದ್ದಾರೆ.
2. ಕವಿಪ್ರಜ್ಞೆಗೆ ಯಾವುದು ಮುಕ್ತಿಯಾನಂದ ಸಾಧನೆಯಾಗುತ್ತದೆ?
   ಕವಿಪ್ರಜ್ಞೆಗೆ 'ಪ್ರಕೃತಿ ಒಲುಮೆಯೇ ಮುಕ್ತಿಯಾನಂದ ಸಾಧನೆಯಾಗುತ್ತದೆ'.
3. 'ಹಸುರು' ಕವನ ಕುವೆಂಪು ಅವರ ವ್ಯಕ್ತಿತ್ವದ ಯಾವ ಅಂಶಕ್ಕೆ ನಿದರ್ಶನವಾಗಿದೆ?
   ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ.
4. ಹಸುರು ಕವನದ ರಚನೆಗೆ ಪ್ರೇರಕವಾದ ಅಂಶ ಯಾವುದು?
   'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.
5. 'ಹಸುರು' ಕವನದ ಆಕರ ಗ್ರಂಥ ಯಾವುದು?
   'ಹಸುರು' ಕವನದ ಆಕರ ಗ್ರಂಥ ಕುವೆಂಪು ರವರ 'ಪಕ್ಷಿಕಾಶಿ' ಕವನಸಂಕಲನ.
6. ಕವಿಯ ಆತ್ಮವು ಯಾವುದರಿಂದ ಮಿಂದು ಹೋಗಿದೆ?
   ಕವಿಯ ಆತ್ಮವು ಹಸುರುಗಟ್ಟಿ ಒಡಲಿನ ರಕ್ತವೂ ಹಸಿರಾಗಿ ಅದರಲ್ಲಿ ಮಿಂದು ಹೋಗಿದೆ.
7. ಭತ್ತದ ಗದ್ದೆಯು ಯಾವ ಬಣ್ಣದಿಂದ ಕಂಗೊಳಿಸುತ್ತಿದೆ ಎಂದು ಕವಿ ವರ್ಣಿಸಿದ್ದಾರೆ?

ಭತ್ತದ ಗದ್ದೆಯು ಗಿಳಿಯ ಹಸುರು ಬಣ್ಣದಿಂದ ಕಂಗೊಳಿಸುತ್ತಿದೆ ಎಂದು ಕವಿ ವರ್ಣಿಸಿದ್ದಾರೆ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

**1.** "ಅಶ್ವೀಜದ ಶಾಲಿವನದ ಗಿಳಿಯೆದೆ ಬಣ್ಣದ ನೋಟ"

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ" ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:– ಪ್ರಕೃತಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ವರ್ಣಿಸುತ್ತಾ ಅಶ್ವಯುಜ ಮಾಸದಲ್ಲಿ ಭತ್ತದ ಗದ್ದೆಗಳು ಗಿಳಿಯ ಹಸುರು ಬಣ್ಣದಂತೆ ಪ್ರಕೃತಿಯು ಹಸಿರನ್ನು ಹೊದ್ದಿತ್ತು ಎಂದು ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ:–ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ ಪ್ರಕೃತಿಯ ಆರಾಧನೆಯೇ ಇಲ್ಲಿನ ಸ್ವಾರಸ್ಯವಾಗಿದೆ.

**2.** "ಹಸುರಾಗಸ; ಹಸುರು ಮುಗಿಲು"

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ" ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:–ಪ್ರಕೃತಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ವರ್ಣಿಸುತ್ತಾ ಅವರಿಗೆ ಆಕಾಶ, ಮುಗಿಲು ಸಹ ಹಚ್ಚಹಸಿರನ್ನು ಹೊದ್ದಿತ್ತು ಎಂದು ವರ್ಣಿಸುತ್ತಾ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ:–ಕವಿಗೆ ಸರ್ವಸ್ವವೂ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ ಪ್ರಕೃತಿಯ ಆರಾಧನೆಯೇ ಇಲ್ಲಿನ ಸ್ವಾರಸ್ಯವಾಗಿದೆ.

**3.** "ಅದೊ ಹುಲ್ಲಿನ ಮಕಮಲ್ಲಿನ ಪೊಸಪಚ್ಚೆಯ ಜಮಖಾನೆ"

ಆಯ್ಕೆ :– ಈ ವಾಕ್ಯವನ್ನು ಕುವೆಂಪು ಅವರ "ಪಕ್ಷಿಕಾಶಿ" ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ:–ಪ್ರಕೃತಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ವರ್ಣಿಸುತ್ತಾ ಭೂತಾಯಿಯು ನಯವಾದ ಬಟ್ಟೆಯಂತಿರುವ ಹುಲ್ಲಿನ ಹೊದಿಕೆಯನ್ನು ಹೊದ್ದಿದ್ದಾಳೆ, ಅದು ಎಳೆಯ ಚಿಗುರಿನ ಜಮಖಾನೆಯಾಗಿ ಕಂಗೊಳಿಸುತಿದೆ ಎಂದು ಮುಗಿಲು ಸಹ ಹಚ್ಚಹಸಿರನ್ನು ಹೊದ್ದಿತ್ತು ಎಂದು ವರ್ಣಿಸುತ್ತಾ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ:– ಕವಿಗೆ ಸರ್ವಸ್ವವೂ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ ಪ್ರಕೃತಿಯ ಆರಾಧನೆಯೇ ಇಲ್ಲಿನ ಸ್ವಾರಸ್ಯವಾಗಿದೆ.

# 6. ಛಲಮನೆ ಮೆಱೆವೆಂ

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಸಾಹಸಭೀಮ ವಿಜಯಂ ಮಹಾಕಾವ್ಯದ ಕರ್ತೃ ಯಾರು?

ಸಾಹಸಭೀಮ ವಿಜಯಂ ಮಹಾಕಾವ್ಯದ ಕರ್ತೃ ರನ್ನ ಕವಿ

2. "ರನ್ನ ಸಂಪುಟ" ಕೃತಿಯ ಸಂಪಾದಕರು ಯಾರು?
   "ರನ್ನ ಸಂಪುಟ" ಕೃತಿಯ ಸಂಪಾದಕರು ಪ್ರೊ. ಹಂಪ ನಾಗರಾಜಯ್ಯ
3. ಪಂಪ ಕವಿಯ ನಂತರ ಕಾಣಬರುವ 'ಶಕ್ತಿಕವಿ' ಎಂದರೆ ಯಾರು?
4. ಪಂಪ ಕವಿಯ ನಂತರ ಕಾಣಬರುವ 'ಶಕ್ತಿಕವಿ' ಎಂದರೆ ಮಹಾಕವಿ ರನ್ನ
5. ಸಾಹಸಭೀಮ ವಿಜಯಂ ಮಹಾಕಾವ್ಯವು ಯಾವ ಶೈಲಿಯಲ್ಲಿ ರಚಿತವಾಗಿದೆ?
   ಸಾಹಸಭೀಮ ವಿಜಯಂ ಮಹಾಕಾವ್ಯವು ಸಿಂಹಾವಲೋಕನ ಕ್ರಮದಲ್ಲಿ ಶೈಲಿಯಲ್ಲಿ ರಚಿತವಾಗಿದೆ.
6. ರನ್ನ ಚಿತ್ರಿಸಿರುವ ದುರ್ಯೋಧನನ ಮುಖ್ಯಗುಣ ಯಾವುದು?
   ರನ್ನ ಚಿತ್ರಿಸಿರುವ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು.
7. ಶರಶಯ್ಯೆಯಲ್ಲಿ ಮಲಗಿದ್ದವರು ಯಾರು?
   ಶರಶಯ್ಯೆಯಲ್ಲಿ ಮಲಗಿದ್ದವರು ಭೀಷ್ಮಾಚಾರ್ಯರು.
8. 'ಛಲಮನೆ ಮೆಱೆವೆಂ' ಪದ್ಯಪಾಠದ ಮುಖ್ಯ ಆಶಯವೇನು?
   ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆದರೆ ದುರ್ಯೋಧನ ಅದಕ್ಕೊಪ್ಪದೆ, ತಾನು ಯುದ್ಧವನ್ನೇ ಮಾಡುವುದಾಗಿ ತಿಳಿಸುತ್ತಾನೆ. ಈ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ 'ಛಲಮನೆ ಮೆಱೆವೆಂ' ಪದ್ಯಪಾಠದಲ್ಲಿ ನಿರೂಪಿತವಾಗಿದೆ.
9. ದುರ್ಯೋಧನನತಂದೆ-ತಾಯಿಯರ ಅಪೇಕ್ಷೆ ಏನಾಗಿತ್ತು?
   ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ.
10. ದುರ್ಯೋಧನನು ಭೀಷ್ಮರ ಯಾವ ಮಾತಿಗೆ ನಕ್ಕನು?
   ದುರ್ಯೋಧನನಿಗೆ ಭೀಷ್ಮಾಚಾರ್ಯರು " ನಾನು ಹೇಳುವ ಮಾತನ್ನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಮೊದಲಿನಂತೆಯೇ ನಡೆದುಕೊಳ್ಳುವಂತೆ ಮಾಡುವೆನು. ಈಗಲಾದರೂ ಅವರು ನಾನು ಹೇಳಿವುದನದನು ಮೀರುವವರಲ್ಲ. ನೀನೂ ನಾನು ಹೇಳುವುದನ್ನು ಮೀರದೇ ನಡೆದುಕೊಳ್ಳಬೇಕು" ಈ ಮಾತಿಗೆ ದುರ್ಯೋಧನನು ಮುಗುಳ್ನಕ್ಕನು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ

1. "ನಿಮಗೆ ಪೊಡೆಮಟ್ಟು ಪೋಪೀ"

ಆಯ್ಕೆ :- ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿ ಕೊಳ್ಳಲಾಗಿದೆ.

ಸಂದರ್ಭ:- ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನನು ಸಂಧಿಗೆ ಒಪ್ಪಿಕೊಳ್ಳದೇ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:- ಪಾಂಡವರೊಂದಿಗೆ ಸಂಧಿಗೆ ಒಪ್ಪಿಕೊಳ್ಳದೇ ಅವನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ.

2. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ಟಪೆನೇ"

ಆಯ್ಕೆ :- ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿ ಕೊಳ್ಳಲಾಗಿದೆ.

ಸಂದರ್ಭ:- ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನನು ಸಂಧಿಗೆ ಒಪ್ಪಿಕೊಳ್ಳದೇ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:- ಪಾಂಡವರೊಂದಿಗೆ ಸಂಧಿಗೆ ಒಪ್ಪಿಕೊಳ್ಳದೇ ಅವನತನ್ನವರಿಗೆ ಆದ ಅನ್ಯಾಯದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬುದು ದುರ್ಯೋಧನನ ಛಲದ ಗುಣ ಇಲ್ಲಿನ ಸ್ವಾರಸ್ಯವಾಗಿದೆ.

3. "ಪುಟ್ಟಿದ ನೂರ್ವರುಮೆನ್ನೊಡವುಟ್ಟಿದ ನೂರ್ವರು"

ಆಯ್ಕೆ :- ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ''ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ"ಎಂಬ ಪದ್ಯಭಾಗದಿಂದ ಆರಿಸಿ ಕೊಳ್ಳಲಾಗಿದೆ.

ಸಂದರ್ಭ:- ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನನು ಸಂಧಿಗೆ ಒಪ್ಪಿಕೊಳ್ಳದೇ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:- ಪಾಂಡವರೊಂದಿಗೆ ಸಂಧಿಗೆ ಒಪ್ಪಿಕೊಳ್ಳದೇ ಅವನತನ್ನವರಿಗೆ ಆದ ಅನ್ಯಾಯದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬುದು ದುರ್ಯೋಧನನ ಛಲದ ಗುಣ ಇಲ್ಲಿನ ಸ್ವಾರಸ್ಯವಾಗಿದೆ.

## 7. ವೀರಲವ

### ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ವಿಷ್ಣುವು ಮಾನವ ರೂಪವನ್ನು ಧರಿಸಿ ಮಾಡಿದ ಕಾರ್ಯಗಳನ್ನು ತಿಳಿಸಿಕೊಡುವ ಕೃತಿಗಳಾವುವು?
   ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ವಿಷ್ಣುವು ಮಾನವ ರೂಪವನ್ನು ಧರಿಸಿ ಮಾಡಿದ ಕಾರ್ಯಗಳನ್ನು ತಿಳಿಸಿಕೊಡುವ ಕೃತಿಗಳಾಗಿವೆ.

2. ಲಕ್ಷೀಶ ಕವಿಯು "ಜೈಮಿನಿ ಭಾರತ"ವನ್ನು ರಚಿಸಲು ಕಾರಣವೇನು?
   ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಲ್ಲಿ ಬರುವ ಅನೇಕ ವಿಷ್ಣುಭಕ್ತರ ಶೌರ್ಯ, ಧೈರ್ಯ, ಸಾಹಸ, ಗುಣಸ್ವಭಾವಗಳನ್ನು ಸಹೃದಯರಿಗೆ ತಿಳಿಸಿಕೊಡುವ ಆಶಯದಿಂದ ಲಕ್ಷೀಶ ಕವಿಯು "ಜೈಮಿನಿ ಭಾರತ"ವನ್ನು ರಚಿಸಿದ್ದಾನೆ.

3. ವಿಷ್ಣುವು ಮಾನವ ರೂಪವನ್ನು ಧರಿಸಲು ಕಾರಣವೇನು?
ವಿಷ್ಣುವು "ದುಷ್ಟ ಶಿಕ್ಷಣಕ್ಕಾಗಿ, ಶಿಷ್ಟರಕ್ಷಣೆಗಾಗಿ" ಮಾನವ ರೂಪವನ್ನು ಧರಿಸಿದನು.

4. ತಂದೆ-ಮಕ್ಕಳು ಬೇರೆಬೇರೆಯಾಗಿ ಸಂಘರ್ಷಕ್ಕೆ ಮುಂದಾಗುವ ಪ್ರಸಂಗಗಳನ್ನು ಹೆಸರಿಸಿ.
   ತಂದೆ-ಮಕ್ಕಳು ಬೇರೆಬೇರೆಯಾಗಿ ಸಂಘರ್ಷಕ್ಕೆ ಮುಂದಾಗುವ ಪ್ರಸಂಗಗಳು -ಭೀಮ-ಘಟೋತ್ಕಚ, ಅರ್ಜುನ-ಬಬ್ರುವಾಹನ. ಲವಕುಶ- ಶ್ರೀರಾಮ ಇತ್ಯಾದಿ.

5. ಲವ-ಕುಶರ ಪಾತ್ರಗಳು 'ವೀರಲವ' ಪದ್ಯಭಾಗದಲ್ಲಿ ಹೇಗೆ ನಿರೂಪಿತವಾಗಿವೆ?
   ಲವಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾರೆ. ಕಷ್ಟ-ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿಯುಳ್ಳ ಲವ-ಕುಶರ ಪಾತ್ರಗಳು ವೀರಲವ ಪದ್ಯಭಾಗದಲ್ಲಿ ನಿರೂಪಿತವಾಗಿವೆ.

6. ಶ್ರೀರಾಮ ಕೈಗೊಂಡ ಅಶ್ವಮೇಧಯಾಗದ ಕುದುರೆಯ ಬೆಂಗಾವಲಿಗೆ ಯಾರನ್ನು ಕಳುಹಿಸುತ್ತಾನೆ?
   ಶ್ರೀರಾಮ ಕೈಗೊಂಡ ಅಶ್ವಮೇಧಯಾಗದ ಕುದುರೆಯ ಬೆಂಗಾವಲಿಗೆ ಶತೃಘ್ನನನ್ನು ಕಳುಹಿಸುತ್ತಾನೆ.

### ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ತೊತ್ತಳದುಳಿದುದು"
   ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ" ಮಹಾಕಾವ್ಯದಿಂದ ಆಯ್ದ "ವೀರಲವ" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
   ಸಂದರ್ಭ:- ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗದ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು. ಆಗ ಇದನ್ನು ಕಂಡ ಲವನು ಆ ಯಜ್ಞಾಶ್ವವನ್ನು ನೋಡುತ್ತಾ ಈ ಮೇಲಿನಂತೆ ಹೇಳುತ್ತಾನೆ.
   ಸ್ವಾರಸ್ಯ:- ಸೀತೆಯ ಮಗನಾದ ಲವನ ಕರ್ತವ್ಯ ಪ್ರಜ್ಞೆ, ಮತ್ತು ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನೊರ್ವನೇ ವೀರ"
   ಆಯ್ಕೆ:-ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ "ಜೈಮಿನಿ ಭಾರತ" ಮಹಾಕಾವ್ಯದಿಂದ ಆಯ್ದ "ವೀರಲವ" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
   ಸಂದರ್ಭ:- ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
   ಸ್ವಾರಸ್ಯ:ಬಾಲಕನಾದ ಲವನಿಗೆ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟದ ಲಿಖಿತವನ್ನು ಕುತೂಹಲದಿಂದ ಓದುವ ಸಂದರ್ಭವೇ ಇಲ್ಲಿನ ಸ್ವಾರಸ್ಯವಾಗಿದೆ.

## 8. ಕೆಮ್ಮನೆ ಮೀಸೆವೊತ್ತೆನೇ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನದ ವೈಶಿಷ್ಟ್ಯತೆಯೇನು?
   ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನವು "ಸುವರ್ಣ ಯುಗ"ವೆಂದೇ ಪ್ರಖ್ಯಾತವಾಗಿದೆ.
2. ಕನ್ನಡದ ರತ್ನತ್ರಯರನ್ನು ಹೆಸರಿಸಿ.
   ಕನ್ನಡದ ಮಹಾಕವಿಗಳಾದ ಪಂಪ, ಪೊನ್ನ, ರನ್ನರು ರತ್ನತ್ರಯರೆಂದೇ ಖ್ಯಾತರಾಗಿದ್ದಾರೆ.
3. ಪಂಪನ ವಿಕ್ರಮಾರ್ಜುನ ವಿಜಯದ ನಾಯಕ ಯಾರು?
   ಪಂಪನ ವಿಕ್ರಮಾರ್ಜುನ ವಿಜಯದ ನಾಯಕ ಅರ್ಜುನ
4. "ಕೆಮ್ಮನೆ ಮೀಸೆವೊತ್ತೆನೇ" ಪದ್ಯಪಾಠದ ಆಶಯವೇನು?
   ದ್ರುಪದ ರಾಜನ ಬಳಿ ಸಹಾಯ ಅರಸಿ ಬಂದ ದ್ರೋಣನನ್ನು ರಾಜನು ಮದೋನ್ಮತನಾಗಿ ಅವಮಾನಗೊಳಿಸಿ ಹೊರಗಟ್ಟಲು ತನ್ನ ಸೇವಕರಿಗೆ ಹೇಳುತ್ತಾನೆ. ಆಗ ದ್ರೋಣನು ಶಪಥಗೈಯುವ ಸನ್ನಿವೇಶವು "ಕೆಮ್ಮನೆ ಮೀಸೆವೊತ್ತೆನೇ" ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.
5. ಪಂಪನ ವಿಕ್ರಮಾರ್ಜುನ ವಿಜಯದ ಸಂಪಾದಕರು ಯಾರು?
   ಪಂಪನ ವಿಕ್ರಮಾರ್ಜುನ ವಿಜಯದ ಸಂಪಾದಕರು ಡಿ.ಎಲ್. ನರಸಿಂಹಾಚಾರ್ ರವರು.

6. ಕನ್ನಡದ ಆದಿಕವಿ ಯಾರು?
ಕನ್ನಡದ ಆದಿಕವಿ ಪಂಪ

7. ದ್ರೋಣ–ದ್ರುಪದರು ಯಾರಲ್ಲಿ ವಿದ್ಯಾಭ್ಯಾಸ ಮಾಡಿದರು?
ದ್ರೋಣ–ದ್ರುಪದರು ಯಜ್ಞಸೇನರೆಂಬ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿದರು.

8. ದ್ರುಪದನು ದ್ರೋಣನಿಗೆ ಏನೆಂದು ಆಶ್ವಾಸನೆ ನೀಡಿದ್ದನು?
ದ್ರುಪದನು ತಾನು ದೊರೆಯಾದಾಗ ತನ್ನ ಬಳಿ ಬಂದರೆ ಸಹಾಯ ಮಾಡುವುದಾಗಿ ಆಶ್ವಾಸನೆ ನೀಡಿದ್ದನು.

9. ದ್ರುಪದನ ಬಳಿ ದ್ರೋಣನು ಬರಲು ಕಾರಣವೇನು?
ದ್ರೋಣನು ತನಗೆ ಬಡತನ ಬರಲು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು ರಾಜನಾಗಿದ್ದ ದ್ರುಪದನ ಸಹಾಯವನ್ನು ನಿರೀಕ್ಷಿಸಿ ಬಂದನು.

10. "ಕುಂಭ ಸಂಭವ" ಎಂದರೆ ಯಾರು?
"ಕುಂಭ ಸಂಭವ" ಎಂದರೆ ದ್ರೋಣಾಚಾರ್ಯರು.

11. ಪರಶುರಾಮರು ದ್ರೋಣನನ್ನು ಕಂಡು ಯಾವುದರಿಂದ ಅರ್ಘ್ಯವನ್ನು ನೀಡಿದರು?
ಪರಶುರಾಮರು ದ್ರೋಣನನ್ನು ಕಂಡು ಚಿನ್ನದ ಪಾತ್ರೆ ಇಲ್ಲಿದ್ದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದರು.

12. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?
ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು

13. ಪರಶುರಾಮರು ಭೂಮಿಯನ್ನು ಯಾರಿಗೆ ಕೊಟ್ಟಿದ್ದರು?
ಪರಶುರಾಮರು ಭೂಮಿಯನ್ನು ಗುರುವಿಗೆ ಕೊಟ್ಟಿದ್ದರು.

14. ಸಿರಿ ಯಾವುದರೊಂದಿಗೆ ಹುಟ್ಟಿತು?
ಸಿರಿ ಕಳ್ಳಿನೊಂದಿಗೆ (ಮದ್ಯ / ಹೆಂಡ) ಹುಟ್ಟಿತು.

15. ನೋಣಕ್ಕೆ ಯಾವುದು ಶ್ರೇಷ್ಠ?
ನೋಣಕ್ಕೆ ತಿಪ್ಪೆಯೇ ಶ್ರೇಷ್ಠ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. "ನಾಣಿಲಿ ಪಾರ್ವನನೆಟೆದು ಕಳೆಯಿಮೆಂಬುದುಂ"

ಆಯ್ಕೆ :– ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ "ವಿಕ್ರಮಾರ್ಜುನ ವಿಜಯಂ" ಕೃತಿಯಿಂದ ಆಯ್ದ "ಕೆಮ್ಮನೆ ಮೀಸೆವೊತ್ತೆನೇ" ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:– ದ್ರೋಣನು ದ್ರುಪದನ ಬಳಿಗೆ ಹೋಗಿ "ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ" ಎನ್ನಲು ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? "ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ಹಾಕಿರಿ" ಎಂದು ದ್ರುಪದನು ಹೇಳುತ್ತಾನೆ.

ಸ್ವಾರಸ್ಯ:– ದೃಪದನ ಅಹಂಕಾರ, ಅಧಿಕಾರದ ಮದಾಂಧತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

ಪಠ್ಯ ಪೋಷಕ ಅಧ್ಯಯನ ವಿಭಾಗ

# 1. ಸ್ವಾಮಿ ವಿವೇಕಾನಂದರ ಚಿಂತನೆಗಳು

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಮೊದಲು ಯಾವ ಹಸಿವನ್ನು ನೀಗಿಸಬೇಕೆಂದು ವಿವೇಕಾನಂದರು ಹೇಳಿದ್ದಾರೆ?
ದೈಹಿಕ ಹಸಿವನ್ನು ನೀಗಿಸಬೇಕೆಂದು ವಿವೇಕಾನಂದರು ಹೇಳಿದ್ದಾರೆ.

2. ಸ್ವಾಮಿ ವಿವೇಕಾನಂದರ ಪ್ರಕಾರ ಸಮಾಜ ಕ್ರಾಂತಿಯ ಅಂಶಗಳಾವುವು?
ಸಮತಾವಾದ, ಅರಾಜಕವಾದ, ಶೂನ್ಯವಾದಗಳು ಸಮಾಜ ಕ್ರಾಂತಿಯ ಅಂಶಗಳು.

ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.

1. ಸ್ವಾಮಿ ವಿವೇಕಾನಂದರು ಮೂಲಭೂತವಾಗಿರಲಿಲ್ಲವೆಂದು ಹೇಗೆ ನಿರೂಪಿಸಬಹುದು ?
ದೈಹಿಕ ಹಸಿವನ್ನು ಹಿಂಗಿಸುವುದು ಅವರ ಮೊದಲ ಆದ್ಯತೆ, ಅನಂತರ ಆತ್ಮದ ಹಸಿವು, ವೇದಾಂತದ ಹಸಿವು, ಸಾಂಸ್ಥಿಕವಾದ ಧರ್ಮದ ಹಸಿವು, ಈ ಕಾರಣದಿಂದಾಗಿಯೇ ವಿವೇಕಾನಂದರು ಮೂಲಭೂತವಾಗಿರಲಿಲ್ಲ.

2. ಸ್ವಾಮಿ ವಿವೇಕಾನಂದರ ಚಿಂತನೆಗಳು ಇಂದಿನ ಸನ್ನಿವೇಶಕ್ಕೂ ಹೆಚ್ಚು ಪ್ರಸ್ತುತವಾಗಿದೆ ವಿವರಿಸಿ.
ಏಕ ಸಂಸ್ಕೃತಿ ಹಾಗೂ ಏಕಧರ್ಮ ವಿಸ್ತರಣೆ, ಸ್ವಮತಾಭಿಮಾನ, ಅನ್ಯ ಮತದ್ವೇಷ ಇವುಗಳು ಇಂದಿನ ಸಮಾಜದ ದುರವಸ್ಥೆಗೆ ಕಾರಣವಾಗಿದ್ದು, ಸ್ವಾಮಿ ವಿವೇಕಾನಂದರು ತಮ್ಮ ಚಿಂತನೆಗಳಲ್ಲಿ ಈ ಅಂಶಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಇಂದಿಗೂ ಸ್ವಾಮಿ ವಿವೇಕಾನಂದರ ಚಿಂತನೆಗಳು ಪ್ರಸ್ತುತವಾಗಿದೆ ಎಂದು ಹೇಳಬಹುದು.

3. ಮಾನವ ಜನಾಂಗ ಹಿಂದುಳಿಯಲು ಕಾರಣವಾದ ಸಂಗತಿಗಳು ಯಾವುದೆಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ?
ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ, ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು ಎಂದು ಹೇಳಿದ್ದಾರೆ.

# 2. ವಸಂತ ಮುಖ ತೋರಲಿಲ್ಲ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ವಸಂತ ಮುಖ ತೋರಲಿಲ್ಲ ಕವನದ ಕರ್ತೃ ಯಾರು ?
ವಸಂತ ಮುಖ ತೋರಲಿಲ್ಲ ಕವನದ ಕರ್ತೃ ಡಾ. ವಿಜಯಶ್ರೀ ಸಬರದ.

2. ಬಾಲ ರವಿ ಎಲ್ಲಿ ಸೊರಗಿದ್ದಾನೆ ?
ತೂತು ಬಿದ್ದ ಸೀರೆಯಲಿ ಬಾಲ ರವಿ ಸೊರಗಿದ್ದಾನೆ.

3. ಪುಟ್ಟಿಯ ಮನೆಗೆ ವಸಂತ ಬರಲು ಏಕೆ ಹೆದರಿದ್ದಾನೆ ?

ಗುಡಿಸಲೊಳಗೆ ಕತ್ತಲು ಗವ್ವೆನ್ನುತಿದ್ದುದರಿಂದ ವಸಂತ ಬರಲು ಹೆದರಿದ್ದಾನೆ.

4. 'ವಸಂತ ಮುಖ ತೋರಲಿಲ್ಲ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆರಿಸಿಲಾಗಿದೆ ?

'ವಸಂತ ಮುಖ ತೋರಲಿಲ್ಲ' ಕವಿತೆಯನ್ನು 'ಮುಗಿಲ ಮಲ್ಲಿಗೆ' ಕವನ ಸಂಕಲನದಿಂದ ಆರಿಸಿಲಾಗಿದೆ.

## ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.

1. ಪುಟ್ಟಿ ಏಕೆ ಮೂಕ ವಿಸ್ಮಿತಗಳಾಗಿದ್ದಳು ?

ಬಾಗಿಲಲಿ ಬಳಕುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವಲಿ ಬೀರುವ ಮುಗುಳು ನಗೆ, ಹೊಳೆವ ರಂಗೋಲಿಯಲಿ ಥಳಥಳಿಸುವ ಬಾಲ ರವಿಯ ಕಂಡು ಪುಟ್ಟಿ ಮೂಕವಿಸ್ಮಿತಗಳಾಗಿದ್ದಾಳೆ.

# 3. ಭಗತ್ ಸಿಂಗ್

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಜಲಿಯಾನ್ ವಾಲಾಬಾಗ್ ದುರಂತಕ್ಕೆ ಕಾರಣವಾದ ಬ್ರಿಟಿಷ್ ಅಧಿಕಾರಿ ಯಾರು ?

ಜಲಿಯಾನ್ ವಾಲಾಬಾಗ್ ದುರಂತಕ್ಕೆ ಕಾರಣವಾದ ಬ್ರಿಟಿಷ್ ಅಧಿಕಾರಿ ಜನರಲ್ ಡಯರ್.

ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.

1. ಜಲಿಯನ್ ವಾಲಾಬಾಗ್ ಸ್ಮಾರಕದಲ್ಲಿನ ಒಕ್ಕಣೆಯೇನು ?

"ಏಪ್ರಿಲ್ 13. 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ"

2. ಜನರಲ್ ಡಯರ್ ಕ್ರೂರ ಪೈಶಾಚಿಕ ಕೃತ್ಯವನ್ನು ವಿವರಿಸಿ.

ಕ್ರೂರ ಮಾರ್ಗದಿಂದ ಭಾರತೀಯರನ್ನೂ ಬಗ್ಗು ಬಡಿಯಬಹುದೆಂದು ಅವನ ಎಣಿಕೆಯಾಗಿತ್ತು, ಬ್ರಿಟಿಷ್ ಸಾಮ್ರಾಜ್ಯದ ಅನವರತ ಏಳಿಗೆಗೆ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಚಿಂತಿಸಲು ಅವನು ಅಶಕ್ತನಾಗಿದ್ದ, ಒಟ್ಟು 1650 ಸುತ್ತುಗಳನ್ನು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು " ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ" ಇಂತಹ ಕ್ರೂರ ಮನಸ್ಥಿತಿಯಿಂದ ಭಾರತೀಯರ ಮೇಲೆ ಪೈಶಾಚಿಕ ಕೃತ್ಯವನ್ನು ಎಸಗಿದನು.

# 4. ಮೃಗ ಮತ್ತು ಸುಂದರಿ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಮೃಗಕ್ಕೆ ಏಕೆ ಸಂತೋಷವಾಯಿತು?

ಸುಂದರಿಯು ಮದುವೆಯಾಗಲು ಒಪ್ಪಿದ್ದರಿಂದ ಮೃಗಕ್ಕೆ ಸಂತೋಷವಾಯಿತು.

ಈ ಕೆಳಕಂಡ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.

1. ವರ್ತಕನ ಹೆಣ್ಣು ಮಕ್ಕಳ ಗುಣ ಸ್ವಭಾವವನ್ನು ವಿವರಿಸಿ.

ಹಿರಿಯರಿಬ್ಬರದು ಬಿಂಕ, ಬಡಿವಾರದ ಹುಡುಗಿಯರು, ಫ್ಯಾಷನ್, ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ. ಮೂರನೆಯ ಹುಡುಗಿ ತಂದೆಯಷ್ಟೇ ಮೃದು ಸ್ವಭಾವದವಳಾಗಿದ್ದಳು.

2. ಸುಂದರಿಯ ತಂದೆಯು ಹಳ್ಳಿಗೆ ಬರಲು ಕಾರಣವೇನು ?

ಅವನ ವ್ಯಾಪಾರ ಕುಸಿದು ಬಿತ್ತು, ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಭಾದಿಸತೊಡಗಿದವು. ಇದ್ದಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲಾ ಮಾರಿ ಸಾಲತೀರಿಸ, ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯಲ್ಲೊಂದು ಮನೆ ಮಾಡಿಕೊಂಡನು.

3. ಮೃಗವು ವರ್ತಕನ ಮೇಲೆ ಏಕೆ ಸಿಟ್ಟುಗೊಂಡಿತು ?

ಹಸಿದಿದ್ದ ವರ್ತಕನಿಗೆ ಅರಣ್ಯದ ಮಧ್ಯೆಯಿದ್ದ ಬಂಗಲೆ ಗೋಚರಿಸಿತು, ನಿರ್ಜನವಾಗಿ ಮೌನವಾಗಿದ್ದ ಮನೆಯೊಳಗೆ ಪ್ರವೇಶಿಸಿದ, ಕೋಣೆಯಲ್ಲಿದ್ದ ಭಕ್ಷ್ಯಭೋಜ್ಯಗಳನ್ನು ಕಂಡು ಹಸಿವೆ ತಾಳಲಾರದೆ ಉಂಡ, ಸವಿದು ಹೊರಬಂದ. ಪುಷ್ಪವನದ ಗುಲಾಬಿಗಳನ್ನು ಕಂಡು ತನ್ನ ಮಗಳು ಸುಂದರಿಗಾಗಿ ಒಂದು ಗೊಂಚಲು ಕಿತ್ತುಕೊಂಡ ಇದರಿಂದಾಗಿ ಮೃಗವು ಸಿಟ್ಟುಗೊಂಡಿತು.

# 5. ಜನಪದ ಒಗಟುಗಳು

1. 'ಬೀಸುಕಲ್ಲು ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

"ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿಂಬೂದು ನಂಗ್ಹೇಳಿ ಅರ್ಥು."

2. 'ಉತ್ತರಾಣಿ ಗಿಡ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

" ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವನ ಕಂಡು ನಗುವುದು"

# ಕಂಠಪಾಠದ ಪದ್ಯಗಳು

## ಈ ಕೆಳಕಂಡ ಪದ್ಯಭಾಗಗಳನ್ನು ಅಭ್ಯಾಸ ಮಾಡಿಸುವುದು ಕಡ್ಡಾಯ

### 1. ಸಂಕಲ್ಪಗೀತೆ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

### 2. ಹಕ್ಕಿ ಹಾರುತಿದೆ ನೋಡಿದಿರಾ(ಮಾರ್ಚ್ 2019)

ನೀಲಮೇಘಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ

### 3. ಹಲಗಲಿ ಬೇಡರು

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

### 4. ಕೌರವೇಂದ್ರನ ಕೊಂದೆ ನೀನು

ಮಾರಿಗೌತಣವಾಯ್ತು ನಾಳಿನ (ಮಾರ್ಚ್ 2017)
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

### 5. ಹಸುರು

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ !

### 6. ವೀರಲವ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು॥

### 7. ಕೆಮ್ಮನೆ ಮೀಸೆವೊತ್ತೆನೆ

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಚಿಂತೆನಗೆ ಕೆಳೆಯನೇ ನೂಂ
ಕಂತಪ್ಪನನಜೆಯೆನೆಂದು ಸಭೆಯೊಳ್ ನುಡಿದಂ

### 8. ಛಲಮನೆ ಮೆರೆವೆಂ(ಮಾರ್ಚ್ 2018 ಜೂನ್ 2019)

ನೆಲಕಿಚಿವೆನೆಂದು ಬಗೆದಿರೆ।
ಚಲಕಿಚಿವೆಂ ಪಾಂಡುಸುತರೊಳೀನೆಲನಿದು ಪಾ॥
ಟ್ಚಿಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ದಪೆನೇ॥

## ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ವಾಕ್ಯರಚನೆ(29 ಅಂಕಗಳು)

## 1. ಕನ್ನಡ ವರ್ಣಮಾಲೆ (49 ಅಕ್ಷರಗಳು)

1. ಸ್ವರಗಳು –13
   ಅ. ಆ. ಇ. ಈ. ಉ. ಊ. ಋ. ಎ. ಏ. ಐ. ಒ, ಓ, ಔ.
2. ಹ್ರಸ್ವಸ್ವರಗಳು –06.
   ಅ, ಇ, ಉ, ಋ, ಎ, ಒ.
3. ದೀರ್ಘಸ್ವರಗಳು –07.
   ಆ, ಈ, ಊ, ಏ, ಐ, ಓ, ಔ.
4. ವ್ಯಂಜನಗಳು –34.
   ಕ ವರ್ಗ – ಕ್, ಖ್, ಗ್, ಘ್, ಙ್.
   ಚ ವರ್ಗ – ಚ್, ಛ್, ಜ್, ಝ್, ಞ್.
   ಟ ವರ್ಗ –ಟ್, ಠ್, ಡ್, ಢ್, ಣ್.
   ತ ವರ್ಗ –ತ್, ಥ್, ದ್, ಧ್, ನ್.
   ಪ ವರ್ಗ – ಪ್, ಫ್, ಬ್, ಭ್, ಮ್.
   ಯ್, ರ, ಲ್, ವ್, ಶ್, ಷ್, ಸ್, ಹ್, ಳ್.
5. ವರ್ಗೀಯ ವ್ಯಂಜನಗಳು – 25
   ಅಲ್ಪಪ್ರಾಣಗಳು –10.
   ಕ್. ಗ್, ಚ್. ಜ್, ಟ್, ಡ್, ತ್, ದ್, ಪ್, ಬ್.
   ಮಹಾಪ್ರಾಣಗಳು –10.
   ಖ್, ಘ್, ಛ್, ಝ್. ಠ್, ಢ್, ಥ್, ಧ್, ಫ್, ಭ್.
   ಅನುನಾಸಿಕಗಳು – 05.
   ಙ್, ಞ್, ಣ್, ನ್, ಮ್.
6. ಅವರ್ಗೀಯ ವ್ಯಂಜನಗಳು–09
   ಯ್, ರ್, ಲ್, ವ್, ಶ್, ಷ್, ಸ್, ಹ್, ಳ್.
7. ಯೋಗವಾಹಗಳು–2,
   ಅನುಸ್ವಾರ 'ಂ', ವಿಸರ್ಗ 'ಃ'

## ನಾಮಪದ

- ಅಂಕಿತನಾಮ:ಸಹದೇವ,ಧರ್ಮರಾಯ,ರಾಹುಲ, ಕಮಲಾಕ್ಷ.
- ರೂಢನಾಮ :– ನದಿ, ಪರ್ವತ, ಊರು ದೇಶ, ಮನುಷ್ಯ.
  ಅನ್ವರ್ಥನಾಮ :– ವ್ಯಾಪಾರಿ,ವಿಜ್ಞಾನಿ, ವಿದ್ವಾಂಸ, ಪೂಜಾರಿ.
- ಗುಣವಾಚಕ :– ಒಳ್ಳೆಯ, ಕೆಟ್ಟ, ದೊಡ್ಡದು, ಹಳತು.
- ಸಂಖ್ಯಾವಾಚಕ :– ಹನ್ನೆರಡು, ಐವತ್ತು, ಎಂಬತ್ತು.
- ದಿಗ್ವಾಚಕಗಳು :–ಮೂಡಣ, ತೆಂಕಣ, ಪಡುವಣ, ಈಶಾನ್ಯ, ಆಗ್ನೇಯ.
- ಪರಿಮಾಣವಾಚಕಗಳು :– ಅಷ್ಟು, ಎಷ್ಟು, ಹಲವು, ಇನಿತು, ಅನಿತು.
- ಭಾವನಾಮಗಳು :–ಕೆಂಪು, ಹಿರಿಮೆ,ನೋಟ, ಮಾಟ, ಆಟ.

## 3. ಸರ್ವನಾಮಗಳು:

ಪುರುಷಾರ್ಥಕ ಸರ್ವನಾಮಗಳು

ನಾನು – ನಾವು, ನೀನು – ನೀವು ಅವನು –ಅವರು, ಇವನು –ಇವರುಅವಳು –ಅವರು, ಇವಳು – ಇವರು ಅದು ಅವು, ಇದು –ಇವು

ಆತ್ಮಾರ್ಥಕ ಸರ್ವನಾಮಗಳು :ತಾನು, ತಾವು, ತನ್ನ, ತಮ್ಮ

ಪ್ರಶ್ನಾರ್ಥಕ ಸರ್ವನಾಮಗಳು :ಯಾರು?, ಯಾವುದು?, ಏನು?

## 4. ಕ್ರಿಯಾಪದಗಳು:

ವಿಧ್ಯರ್ಥಕ ರೂಪ ಕ್ರಿಯಾಪದಗಳು:

| ಕ್ರ.ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡುವೆ | ಹಾಡೋಣ |
| 2 | ಮಧ್ಯಮ ಪುರುಷ | ಹಾಡು | ಹಾಡಿರಿ |

ನಿಷೇದಾರ್ಥಕ ರೂಪ ಕ್ರಿಯಾಪದಗಳು:

| ಕ್ರ.ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡೆನು | ಹಾಡೆವು |
| 2 | ಮಧ್ಯಮ ಪುರುಷ | ಹಾಡೆ | ಹಾಡರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | ಹಾಡನು<br>ಹಾಡಳು<br>ಹಾಡದು | ಹಾಡರು<br>ಹಾಡರು<br>ಹಾಡವು |

ಸಂಭಾವನಾರ್ಥಕ ರೂಪ ಕ್ರಿಯಾಪದಗಳು:

| ಕ್ರ.ಸ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡೇನು | ಹಾಡೇವು |
| 2 | ಮಧ್ಯಮ ಪುರುಷ | ಹಾಡೀಯೆ | ಹಾಡೀರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | ಹಾಡಿಯಾನು<br>ಹಾಡಿಯಾಳು<br>ಹಾಡೀತು | ಹಾಡಿಯಾರು<br>ಹಾಡಿಯಾಳು<br>ಹಾಡಿಯಾವು |

## ಗ್ರಾಂಥಿಕ ರೂಪಗಳು:

| | |
|---|---|
| ಹೀಂಗ | ಹೀಗೆ |
| ಕಳುವ್ಯಾರೆ | ಕಳುಹಿಸಿದ್ದಾರೆ |
| ಇಲ್ಲದ್ಹಂಗ | ಇಲ್ಲದಹಾಗೆ |
| ಇಸವಾಸ | ವಿಶ್ವಾಸ |
| ಸಕ್ಕಾರಿ | ಸಕ್ಕರೆ |
| ಮ್ಯಾಗ | ಮೇಲೆ |

## ಕನ್ನಡ ದೇಶಿ ಪದಗಳು:

ಅಂಗಾಂಗಗಳು : ಕೈ, ತಲೆ, ಹೊಟ್ಟೆ, ಕಾಲು, ಬೆನ್ನು ಇತ್ಯಾದಿ.
ಸಂಬಂಧವಾಚಕಗಳು : ಅಪ್ಪ, ಅಮ್ಮ, ಅಜ್ಜ, ಅಜ್ಜಿ, ಚಿಕ್ಕಪ್ಪ, ಮಾವ, ಬಾವ, ಅಣ್ಣ, ತಂಗಿ, ತಮ್ಮ ಇತ್ಯಾದಿ.
ಪ್ರಾಣಿಗಳು : ಇಲಿ, ಹಾವು, ಎತ್ತು, ಎಮ್ಮೆ, ದನ, ಕೋಳಿ ಇತ್ಯಾದಿ.
ಪದಾರ್ಥಗಳು : ಬಾಗಿಲು, ಉಪ್ಪು, ಹಾಲು, ಚಿಲಕ ಇತ್ಯಾದಿ.
ಸರ್ವನಾಮಗಳು : ನಾನು, ಅವನು, ನೀನು, ಅವಳು, ಅದು, ಅವು, ಅವರು ಇತ್ಯಾದಿ.
ಸಂಖ್ಯಾವಾಚಕಗಳು : ಒಂದರಿಂದ ಒಂಬೈನೂರತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳು.
ಧಾತುಗಳು : ತಿನ್ನು, ಹೋಗು, ಕೇಳು, ಬಿಡು ಇತ್ಯಾದಿ.

## ಸಮಾಸಗಳು

ತತ್ಪುರುಷ ಸಮಾಸ: ಉತ್ತರ ಪದ ಪ್ರಧಾನವಾಗಿರುತ್ತದೆ.
ಬೆಟ್ಟದಾವರೆ, ತಲೆನೋವು, ದೈವಭಕ್ತಿ, ಸ್ವಾಮಿದ್ರೋಹ, ಪರಧನ, ಪೂದೋಟ, ಕಾಲುಬಳೆ, ಧನದಹರಣ,
ಕರ್ಮಧಾರಯ ಸಮಾಸ: ವಿಶೇಷಣ ಹಾಗೂ ವಿಶೇಷ್ಯಗಳ ಸಂಬಂಧದಿಂದ ಕೂಡಿರುತ್ತದೆ.
ಇಮ್ಮಾವು, ಮೆಲ್ವಾತು, ಹೊಸಗನ್ನಡ, ಅತಿಕುಟಿಲ, ಕಟ್ಟೇಕಾಂತ, ಪೆರ್ಮಗ, ಪೆರ್ಮರ, ನಲ್ಗುದುರೆ, ಹೆದ್ದೊರೆ, ದಿವ್ಯಶರಾಳಿ
ದ್ವಿಗು ಸಮಾಸ: ಪೂರ್ವಪದ ಸಂಖ್ಯಾವಾಚಕವಾಗಿರುತ್ತದೆ.
ಮೂಗಾವುದ, ಮುಕ್ಕಣ್ಣು, ಸಪ್ತಸ್ವರಗಳು, ಒಕ್ಕಣ್ಣು, ಪಂಚೇಂದ್ರಿಯ, ಇಮ್ಮಡಿ
ಬಹುವ್ರೀಹಿ ಸಮಾಸ: ಅನ್ಯಪದದ ಅರ್ಥ ಪ್ರಧಾನವಾಗಿರುತ್ತದೆ.
ಹಣೆಗಣ್ಣ, ಮುಕ್ಕಣ್ಣ, ಚಕ್ರಪಾಣಿ, ಅಬ್ಜೋದರ, ಘಟಸಂಭೂತ, ಗಾಂಡೀವಿ, ಪವನನಂದನ, ಮದಾಂಧ, ಇನತನೂಜ, ದನುಜರಿಪು, ಮುರಾರಿ, ಮೇದಿನೀಪತಿ, ರಾಜೀವಸಖ, ದಿನಪಸುತ, ಅಂತಕಾತ್ಮಜ, ಮಹೀಪತಿ, ನಾಣಿಲಿ
ಅಂಶಿ ಸಮಾಸ: ಅಂಶಾಂಶಿ ಭಾವ ಸಂಬಂಧದಿಂದ ಸೇರುತ್ತವೆ.
ಅಂಗೈ, ಹಿಂದಲೆ, ಕಡೆಗಣ್ಣು, ಮುಂಗೈ, ನಡುರಾತ್ರಿ, ನಟ್ಟಡವಿ
ದ್ವಂದ್ವ ಸಮಾಸ: ಪೂರ್ವೋತ್ತರ ಪದಗಳು ಅರ್ಥ ಪ್ರಧಾನವಾಗಿರುತ್ತವೆ.
ಗಿರಿವನದುರ್ಗಗಳು, ಕರಿತುರಗರಥಗಳು, ಹನುಮಭೀಮರಾಮರು, ಸೂರ್ಯಚಂದ್ರರು, ಮಾದ್ರಮಾಗಧಯಾದವರು, ಕೆರೆಕಟ್ಟೆಬಾವಿಗಳು, ಪಾರ್ಥಭೀಮರು,

ಕ್ರಿಯಾ ಸಮಾಸ: ಪೂರ್ವಪದದ ದ್ವಿತೀಯ ವಿಭಕ್ತಿ ಪ್ರತ್ಯೆಯ ಲೋಪವಾಗಿ ಉತ್ತರ ಪದ ಕ್ರಿಯಾಪದವಾಗಿರುತ್ತದೆ.
ಮೈಮುಚ್ಚು, ಕಣ್ದೆರೆ, ಕಂಗೆಡು, ಕೈಕೊಳ್ವುದು, ಸಾಕ್ಷಿಮಾಡಿ, ಬಲವಂದು, ಮೋಸಮಾಡು, ಕೈಯಾನು, ಹೊಗೆದೋರು,ಸೊಲ್ಗೇಳಿ, ಬಿಲ್ಗೊಂಡು, ಬಿಲ್ದಿರುವನೇರಿಸಿ, ಕಳ್ಗುಡಿದ
ಗಮಕ ಸಮಾಸ: ಪೂರ್ವಪದ ಸರ್ವನಾಮ ಅಥವಾ ಕೃದಂತವಾಗಿ ಉತ್ತರದ ನಾಮಪದಗಳ ಜೊತೆ ಸೇರುತ್ತದೆ.
ಆ ಕಲ್ಲು, ಈ ಬೆಕ್ಕು ನೆಯ್ದವಸ್ತ್ರ , ಬೆಂದಬೇಳೆ, ತಿಂದ ಕೂಳು, ಮಾಡಿದಡುಗೆ, ಸಿಡಿದುದ್ದು.

## ವಾಕ್ಯ ಪ್ರಕಾರಗಳು

1. ಸಾಮಾನ್ಯ ವಾಕ್ಯಗಳು :ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯವಾಕ್ಯವೆಂದು ಕರೆಯುತ್ತಾರೆ.

ಉದಾಹರಣೆಗಳು:
ಅ. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು.
ಆ. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
ಇ. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.
ಈ. ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪ– ರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

1. ಸಂಯೋಜಿತ ವಾಕ್ಯ :
ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯವೆನ್ನಿಸುವುದು.
ಉದಾಹರಣೆ: ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.

2. ಮಿಶ್ರವಾಕ್ಯ :
ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತೇವೆ.ಮಿಶ್ರವಾಕ್ಯ ಎನ್ನುತ್ತೇವೆ.

ಉದಾಹರಣೆ: ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.
ಇಲ್ಲಿ ಅವರು ಬಹುವಾಗಿ ಮರುಗಿದರು ಎಂಬ ಪ್ರಧಾನ ವಾಕ್ಯಕ್ಕೆ
1– ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು;

2– ಅವರ ನಿರ್ಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ ಎಂಬ ವಾಕ್ಯ ಗಳು ಉಪವಾಕ್ಯಗಳಾಗಿ ಸೇರಿಕೊಂಡಿರುವುದರಿಂದ ಇದು ಮಿಶ್ರವಾಕ್ಯ.

## ವಿಭಕ್ತಿ ಪ್ರತ್ಯಯ:

| ವಿಭಕ್ತಿ | ಕಾರಕಾರ್ಥ | ಹೊಸಗನ್ನಡ ಪ್ರತ್ಯಯ | ರೂಪ | ಹಳಗನ್ನಡ ಪ್ರತ್ಯಯ | ರೂಪ |
|---|---|---|---|---|---|
| ಪ್ರಥಮಾ | ಕರ್ತ್ರರ್ಥ | ಉ | ಸಾವಿತ್ರಿಯು | ಮ್ | ಸಾವಿತ್ರಿಯುಮ್ |
| ದ್ವಿತೀಯಾ | ಕರ್ಮಾರ್ಥ | ಅನ್ನು | ಸಾವಿತ್ರಿಯನ್ನು | ಅಂ | ಸಾವಿತ್ರಿಯಂ |
| ತೃತೀಯಾ | ಕರಣಾರ್ಥ | ಇಂದ | ಸಾವಿತ್ರಿಯಿಂದ | ಇಂ, ಇಂದಂ, ಇಂದೆ | ಸಾವಿತ್ರಿಯಂ |
| ಚತುರ್ಥಿ | ಸಂಪ್ರದಾನ | ಗೆ, ಇಗೆ, ಕ್ಕೆ | ಸಾವಿತ್ರಿಗೆ | ಗೆ, ಕೆ, ಕ್ಕೆ | ಸಾವಿತ್ರಿಂಗೆ |
| ಪಂಚಮೀ | ಅಪಾದಾನ | ದೆಸೆಯಿಂದ | ಸಾವಿತ್ರಿಯ ದೆಸೆಯಿಂದ | ಅತ್ತಣಿಂ ಅತಣಿಂದಂ | ಸಾವಿತ್ರಿಯತ್ತಣಿಂ |
| ಷಷ್ಠೀ | ಸಂಬಂಧ | ಅ | ಸಾವಿತ್ರಿಯ | ಅ | ಸಾವಿತ್ರಿಯ |
| ಸಪ್ತಮಿ | ಅಧಿಕರಣ | ಅಲ್ಲಿ | ಸಾವಿತ್ರಿಯಲ್ಲಿ | ಒಳ್ | ಸಾವಿತ್ರಿಯೊಳ್ |

## ಅನ್ಯದೇಶಿ ಪದಗಳು:

| ಗ್ರೀಕ್ ಮತ್ತು ರೋಮನ್ | ಪಾರ್ಶಿ | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದುಸ್ಥಾನಿ | ಇಂಗ್ಲೀಷ್ |
|---|---|---|---|---|---|---|
| ದಮ್ಮಡಿ, ದಮಡಿ, ದಮ್ಮ, ದಿನಾರ, ಗದ್ಯಾಣ | ಅಬಕಾರಿ, ರಸ್ತೆ, ದವಾಖಾನೆ, ಚೌಕಾಸಿ, ಜಮೀನು, ಅಜಮಾಹಿಸಿ, ಆಮದು, ದಲ್ಲಾಳಿ, ಮಸಲತ್ತು, ದಿವಾನ, ಸರಕಾರ | ಅಮಾನತು, ಅಸಲು, ಇನಾಮು, ಕಾಯ್ದೆ, ಗಲೀಜು, ತಕರಾರು, ತರಬೇತು, ನಕಲಿ | ಮೇಜು, ತಂಬಾಕು, ಅನಾನಸು, ಸಾಬೂನು, ಆಸ್ಪತ್ರೆ, ಚೊಂಬು, ಇಸ್ತ್ರಿ, ರಸೀದಿ, ಚಾ | ಕಿಮ್ಮತ್ತು, ತಾರೀಖು, ತಾಲೂಕು, ಅಹವಾಲು, ಇಲಾಖೆ, ದರ್ಜೆ, ಬಂದೂಕು, ರುಜು, ಶುರು, ಶಾಮೀಲು, ದಾಖಲೆ, ಜುಲ್ಮಾನೆ | ಅರ್ಜಿ, ಕಛೇರಿ, ಕಾರ್ಖಾನೆ, ಸಲಾಮು, ದರ್ಬಾರು, ಕುರ್ಚಿ, ಕಾಗದ, ಹುಕುಂ | ಬಸ್ಸು, ಕಾರು ಕಾಲೇಜು, ನೈಟು, ಪೆನ್ನು, ಸ್ಯಾನಿಟರಿ, ಸೋಪು, ಡಿಪ್ಲೋಮಾ, ಸ್ವಿಚ್, ಡಿಕ್ರಿ |

## ತತ್ಸಮ–ತದ್ಭವ

| ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ |
|---|---|---|---|---|
| ವಿಜ್ಞಾನ >ಬಿನ್ನಾಣ, | ಸುಧೆ > ಸೊದೆ | ವಂಶ > ಬಂಚ | ಶುನಕ > ಸೊಣಗ, | ದೃಷ್ಟಿ > ದಿಟ್ಟಿ |
| ಮುಖಶಾಲೆ>ಮೊಗಸಾಲೆ | ತಟ > ತಡಿ | ಸ್ಥಾನ > ತಾಣ | ಧರ್ಮ > ಧಮ್ಮ | ಗ್ರಹ > ಗರ |
| ದಾತೃ > ದಾತಾರ | ವ್ಯಯ > ಬೀಯ | ಯಶ > ಜಶ | ಪಕ್ಷಿ > ಹಕ್ಕಿ | ದಿಶೆ > ದಿಶಾ |
| ವಿಜ್ಞಾಪನೆ> ಬಿನ್ನಹ | ವ್ಯಾಪಾರಿ > | ಪಟ್ಟಣ > ಪತ್ತನ | ಬ್ರಹ್ಮ > ಬೊಮ್ಮ | ಶ್ರೀ > ಸಿರಿ |
| ಸಾಮಂತ>ಸಾವಂತ | ಬೇಹಾರಿ | ಕಾರ್ಯ > ಕಜ್ಜ | ಚಂದ್ರ > ಚಂದಿರ | ವೈಶಾಖ> ಬೇಸಗೆ |
| ಕೋಕಿಲಾ>ಕೋಗಿಲೆ | ಸಂದೇಹ > | ಕಣೆ > ಗಣೆ | ಅಟವಿ > ಅಡವಿ | ಪಾದುಕಾ> ಹಾವುಗೆ |
| ವಂಧ್ಯಾ > ಬಂಜೆ | ಸಂದೆಯ | ಪುಣ್ಯ > ಹೂನ್ಯ | ಪ್ರಸಾದ > ಹಸಾದ | ಕವಿ > ಕಬ್ಬಿಗ |
| ವೀರ > ಬೀರ | ಅಮೃತ > | ಶಶಿ > ಶಶಿ | ಕುಠಾರ > ಕೊಡಲಿ | ಭಕ್ತ > ಬಕುತ |
| ಅರ್ಕ > ಎಕ್ಕ | ಅಮರ್ದು | ವಿದ್ಯಾಧರ > | ವರ್ಷ > ವರುಷ | ತಪಸ್ವಿ> ತವಸಿ |

| | | | | |
|---|---|---|---|---|
| | ಕಾವ್ಯ > ಕಬ್ಬ<br>ಯಜ್ಞ > ಜನ್ನ<br>ದ್ಯೂತ > ಜೂಜು | ಬಿಜ್ಜೋಧರ | | |

## ಪದಗಳ ಅರ್ಥ:

| ಪದ | ಅರ್ಥ |
|---|---|
| ಪೆರೆ | ಚಂದ್ರ |
| ಅಬ್ಧಿ | ಸಮುದ್ರ |
| ಆರ್ತಗೆ | ಬಯಕೆ |
| ಊಣೆಯ | ಕೊರತೆ |
| ಅರ್ತಿ | ಪ್ರೀತಿ |
| ಮಸಲತ್ತು | ಪಿತೂರಿ |
| ಐಹಿಕ | ಲೌಕಿಕ |
| ಕಿಂಕರ | ಸೇವಕ |
| ಕಾಪು | ರಕ್ಷಣೆ |
| ಇರಿವನ್ನರ್ | ಯುದ್ಧಮಾಡುವವರು |
| ತಡಿ | ತಟ |
| ಅಂದಣ | ಪಲ್ಲಕ್ಕಿ |
| ದ್ರುಮ | ಮರ |
| ದೃಗಜಲ | ಕಣ್ಣೀರು |
| ಮತ್ತು | ಅಮಲು |
| ಪೆರ್ಮೆ | ಹಿರಿಮೆ |
| ವಾಜಿ | ಕುದುರೆ |
| ಸೊದೆ | ಅಮೃತ |
| ಕಸರತ್ತು | ಚಮತ್ಕಾರ |
| ಕುರುಕುಳನಂದನ | ದುರ್ಯೋಧನ |

| ಪದ | ಅರ್ಥ |
|---|---|
| ಪೈಕಿ | ಸಂಬಂಧಿಕ |
| ಸುರಭಿ | ಕಾಮಧೇನು |
| ಇಂಬು | ಅವಕಾಶ |
| ವಿಲಾತಿ | ವಿಲಾಯಿತಿ |
| ಬಂಬಲ | ಗುಂಪು |
| ಉರ್ವಿ | ನೆಲ |
| ಕುಮಕಿ | ಸಹಾಯಕ |
| ಹಮ್ಮು | ಗರ್ವ |
| ಕುಟಿಲ | ಮೋಸ |
| ತೃಷೆ | ಬಾಯಾರಿಕೆ |
| ಅನೃತ | ಸುಳ್ಳು |
| ಚೋದ್ಯ | ಆಶ್ಚರ್ಯ |
| ಕದಳಿ | ಬಾಳೆ |
| ಧೃತಿ | ಧೈರ್ಯ |
| ಅಗಡು | ಶೌರ್ಯ |
| ನಣ್ಪು | ನಂಟು |
| ಬೆಸಕೈ | ಹೇಳು |
| ಜರ್ಬು | ಭರ್ಜರಿ |
| ಉಪಾಸನೆ | ಪೂಜೆ |
| ಪವನನಂದನ | ಭೀಮ |

## ದ್ವಿರುಕ್ತಿಗಳು, ಅನುಕರಣಾವ್ಯಗಳು ಹಾಗೂ ಜೋಡುನುಡಿಗಳು

| ದ್ವಿರುಕ್ತಿಗಳು | | ಅನುಕರಣಾವ್ಯಯಗಳು | | ಜೋಡುನುಡಿಗಳು | |
|---|---|---|---|---|---|
| | | ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಅನುಕರಣಾವ್ಯಯಗಳು ಎನ್ನಲಾಗುತ್ತದೆ | | ಒಂದು ಪದದ ಜೊತೆ ಪ್ರಾಸಕ್ಕಾಗಿ ಕೆಲವೊಮ್ಮೆ ಮತ್ತೊಂದು ಪದ ಬಳಸುವುದುಂಟು. ಆ ಪದವನ್ನು ಜೋಡಿಪದ ಎನ್ನುವರು | |
| ಮೆಲ್ಲಮೆಲ್ಲನೆ | ಬನ್ನಿ ಬನ್ನಿ | ಗುಜುಗುಜು | | ಕಕ್ಕಾಬಿಕ್ಕಿ | |
| ಊರೂರು | ಹತ್ತಿರಹತ್ತಿರ | ಸರಸರ | | ಕರಿನರೆ | |
| ಖಂಡಖಂಡಗಳ | ನೋಡುನೋಡು | ಝಣಝಣ | | ಬಿಳಿಹೊಳೆ | |
| ಹೆಚ್ಚು ಹೆಚ್ಚು | ಮೆಲ್ಲಮೆಲ್ಲನೆ | ಘಮಘಮ | | ಸತಿಪತಿ | |
| ಮನೆ ಮನೆಗಳಲ್ಲಿ | ತುತ್ತತುದಿ | ಧಗಧಗ | | ಹಾಲ್ಜೇನು | |
| ಕೇರಿ ಕೇರಿಗಳನ್ನು | ದುರದುರನೆ | ಪಟಪಟ | | ಬಟ್ಟೆಬರೆ | |
| ಅಬ್ಬಾಬ್ಬಾ | ಕಟ್ಟಕಡೆ | ಫಳಫಳ | | ಮಕ್ಕಳುಮರಿ | |
| ಗಾವುದಗಾವುದ | ದುಂಡುದುಂಡಾದ | ಢಣಢಣ | | ಹುಳುಹುಪ್ಪಡಿ | |
| ಗರಿಗರಿ | ನಡುನಡುವೆ | ಜುಳುಜುಳು | | ಸೊಪ್ಪುಸದೆ | |
| ಬಣ್ಣಬಣ್ಣಗಳ | ದಿನದಿನ | ಚಟಚಟ | | ಹಾಲು–ಗೀಲು | |
| ಖಂಡಖಂಡಗಳ | ನಟ್ಟನಡುವೆ | ದಡದಡ | | ಮನೆಮಠ | |
| ಸಲಸಲಕ್ಕೂ | ಬಟ್ಟಬಯಲು | ಘುಳುಘುಳು | | ಕೆನೆ ಮೊಸರು | |

| | | | | | |
|---|---|---|---|---|---|
| ಇರುಳಿರುಳು | ದುರದುರನೆ | ರೊಯ್ಯನೆ | | | |
| ಕೊನೆಕೊನೆಗೆ | ಈಗೀಗ | ಸುಯ್ಯನೆ | | | |
| ಬೇಡಬೇಡ | ಓಡೋಡು | ಲಕಲಕ | | | |
| ನೋಡಿ ನೋಡಿ | ಕೊತ್ತಕೊನೆಗೆ | ಚುಮುಚುಮು | | | |

## ಕನ್ನಡ ಸಂಧಿಗಳು

| ಲೋಪಸಂಧಿ | | ಆಗಮ ಸಂಧಿ | | ಆದೇಶ ಸಂಧಿ | |
|---|---|---|---|---|---|
| ಊರೂರು | ಸಂಪನ್ನರಾದ | ಕೈಯನ್ನು | | ಮಳೆಗಾಲ | ಪೋಗಲ್ವೇಳ್ಕುಂ |
| ಬಲ್ಲೆನೆಂದು | ಕಾದಾಟದಾಟ | ಮಳೆಯಿಂದ | | ಮೈದೋರು | ಧೃತಿಗೆಟ್ಟು |
| ಮಾತಂತು | ನೆತ್ತರೊಂದೆ | ಶಾಲೆಯಲ್ಲಿ | | ಬೆಂಬತ್ತು | ಕೈವಿಡಿದು |
| ಪೊಳ್ದಡೆ | ತೆರೆದಿಕ್ಕುವ | ಮರವನ್ನು | | ಕಡುವೆಳ್ಪು | |
| ಮನದೊಳಗೆ | ನಾನೊಬ್ಬ | ಮಗುವಿಗೆ | | ಮೆಲ್ವಾತು | |
| | | ಮನೆಯೊಳಗೆ | | ಹೊಸಗಾಲ | |

## ಸಂಸ್ಕೃತ ಸಂಧಿಗಳು

| ಸವರ್ಣಸಂಧಿ | ಗುಣಸಂಧಿ | ಯಣ್‌ಸಂಧಿ | ಜಶ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕಸಂಧಿ | ವೃದ್ಧಿಸಂಧಿ |
|---|---|---|---|---|---|---|
| ಮಹಾತ್ಮ | ದೇವೇಂದ್ರ | ಅತ್ಯವಸರ | ವಾಗ್ದೇವಿ | ಶರಚ್ಚಂದ್ರ | ಷಣ್ಮುಖ | ಏಕೈಕ |
| ಗಿರೀಶ | ಜ್ಞಾನೇಶ್ವರ | ಜಾತ್ಯತೀತ | ಅಜಂತ | ಜಗಜ್ಯೋತಿ | ವಾಙ್ಮಯ | ಆನೈಕ್ಯ |
| ಚಂದ್ರಾರ್ಕ | ಸೂರ್ಯೋದಯ | ಕೋಟ್ಯಾಧೀಶ್ವರ | ಷಡಾನನ | ಪಯಶ್ಚ್ಯಯನ | ಉನ್ಮಾದ | ವನೌಷಧಿ |
| ಸುರಾಸುರ | ಮಹರ್ಷಿ | ಕೋಟ್ಯಾನುಕೋಟಿ | ದಿಗಂತ | ಬೃಹಚ್ಛತ್ರ | ತನ್ಮಯ | ಅಷ್ಟೈಶ್ವರ್ಯ |
| ವಧೂಪೇತ | ಮಹೇಶ | ಗತ್ಯಂತರ | ಅಬ್ಧಿ | ಹರಿಶ್ಚಂದ್ರ | | |
| ನಿಜಾಶ್ರಮ | ಕಲೋಪಾಸಕ | | | | | |
| ಜಿನಾಲಯ | ಮಂಡಳೇಶ್ವರ | | | | | |
| ಸಕಳಾಚಾರ್ಯ | | | | | | |

# ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |

## ಕೃದಂತನಾಮಗಳು:

| ಧಾತು | ಕೃತ್ ಪ್ರತ್ಯಯ | ಕೃದಂತ ಭಾವನಾಮಗಳು |
|---|---|---|
| ಓಡು | ವ+ಅ | ಓಡುವ |
| ಬಾಳು | ದ+ಅ | ಬಾಳಿದ |

| | | |
|---|---|---|
| ಬರೆ | ಅದ+ಅ | ಬರೆಯದ |

## ಕೃದಂತ ಭಾವನಾಮಗಳು:

| ಧಾತು | ಕೃತ್ ಪ್ರತ್ಯಯ | ಕೃದಂತ ಭಾವನಾಮಗಳು |
|---|---|---|
| ಓಡು | ಐ | ಓಟ |
| ನೋಡು | ಐ | ನೋಟ |
| ಬಾಳು | ವಿಕೆ | ಬಾಳುವಿಕೆ |
| ಬರೆ | ವಿಕೆ | ಬರೆಯುವಿಕೆ |
| ಅಂಜು | ಇಕೆ | ಅಂಜಿಕೆ |
| ನಂಬು | ಇಕೆ | ನಂಬಿಕೆ |
| ಉಡು | ಗೆ | ಉಡುಗೆ |
| ತೊಡು | ಗೆ | ತೊಡುಗೆ |
| ನಗು | ಉದು | ನಗುವುದು |
| ತಿನ್ನು | ಉದು | ತಿನ್ನುವುದು |

## ಕೃದಂತಾವ್ಯಯಗಳು:

| ಧಾತು | ಕೃತ್ ಪ್ರತ್ಯಯ | ಕೃದಂತಾವ್ಯಯಗಳು |
|---|---|---|
| ಉಣ್ಣು | ಅದೆ | ಉಣ್ಣದೆ |
| ಮಾಡು | ಅದೆ | ಮಾಡದೆ |
| ಬರು | ಉತ್ತ | ಬರುತ್ತ |
| ಮಾಡು | ಉತ್ತ | ಮಾಡುತ್ತ |
| ಬರೆ | ದು | ಬರೆದು |
| ಹೋಗು | ಅಲಿಕ್ಕೆ | ಹೋಗಲಿಕ್ಕೆ |
| ಮಾಡು | ಅಲಿಕ್ಕೆ | ಮಾಡಲಿಕ್ಕೆ |
| ಮಾಡು | ಅಲು | ಮಾಡಲು |
| ಮಾಡು | ಅ | ಮಾಡ |
| ಮಾಡು | ಇ | ಮಾಡಿ |
| ಉಣ್ಣು | ಅದೆ | ಉಣ್ಣದೆ |
| ಮಾಡು | ಅದೆ | ಮಾಡದೆ |
| ಬರು | ಉತ್ತ | ಬರುತ್ತ |
| ಮಾಡು | ಉತ್ತ | ಮಾಡುತ್ತ |
| ಬರೆ | ದು | ಬರೆದು |
| ಹೋಗು | ಅಲಿಕ್ಕೆ | ಹೋಗಲಿಕ್ಕೆ |
| ಮಾಡು | ಅಲಿಕ್ಕೆ | ಮಾಡಲಿಕ್ಕೆ |

## ತದ್ಧಿತಾಂತಗಳು

| ತದ್ಧಿತಾಂತ ನಾಮ | | ತದ್ಧಿತಾಂತ ಭಾವನಾಮ | ತದ್ಧಿತಾಂತ ಅವ್ಯಯ | |
|---|---|---|---|---|
| ಪುಲ್ಲಿಂಗ | ಸ್ತ್ರೀಲಿಂಗ | | | |
| | | ಬಡತನ | ಚಂದ್ರನಂತೆ | ಅವನಂತೆ |
| ಮೋಸಗಾರ | ಮೋಸಗಾರ್ತಿ | ಸಿರಿತನ | ಚಂದ್ರನವೊಲ್ | ಅವನವೊಲ್ |
| ಕನ್ನಡಿಗ | ಕನ್ನಡತಿ | ಹಿರಿಮೆ | ಮನೆಯವೋಲು | ಇದರವೋಲು |
| ಬಳೆಗಾರ | ಬಳೆಗಾರ್ತಿ | ಜಾಣತನ | ಕರಡಿಯವೋಲ್ | ನದಿಯವೋಲ್ |
| ಕೋಲುಕಾರ | ಕೋಲುಕಾರ್ತಿ | ಚೆಲುವಿಕೆ | ಮನೆಯತನಕ | ಹಿಮಾಲಯದತನಕ |
| ಸಿರಿವಂತ | ಸಿರಿವಂತೆ | ಕಪ್ಪು | ಶಾಲೆಯವರೆಗೆ | ಪಟ್ಟಣದವರೆಗೆ |
| | | ಪೆರ್ಮೆ | ಇವಳಮಟ್ಟಿಗೆ | ಸುಂದರನಮಟ್ಟಿಗೆ |
| | | ನನಗೋಸ್ಕರ | ಬೆಕ್ಕಿಗೋಸ್ಕರ | ನನಗೋಸ್ಕರ |
| | | ಅರ್ಜುನನ ಸಲುವಾಗಿ | ಕಟ್ಟಡದ ಸಲುವಾಗಿ | ಅರ್ಜುನನ ಸಲುವಾಗಿ |
| | | ರಾಧೆಗಿಂತ | ಅದಕ್ಕಿಂತ | ರಾಧೆಗಿಂತ |
| | | ನಿನಗಾಗಿ | ಇದಕ್ಕಾಗಿ | ನಿನಗಾಗಿ |
| | | ಮದುವೆಗೋಸುಗ | ಕಾಗೆಗೋಸುಗ | ಮದುವೆಗೋಸುಗ |

# ಅಲಂಕಾರಗಳು

- ✓ ಕಾವ್ಯಕ್ಕೆ ಶೋಭೆ ತರುವ ಧರ್ಮವೇ ಅಲಂಕಾರ. ಮಾತಿನ ಅಥವಾ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸುವ ಶಬ್ದ ಹಾಗೂ ಅರ್ಥ ಚಮತ್ಕಾರಗಳನ್ನು "ಅಲಂಕಾರ'' ಎನ್ನುವರು.
- ✓ ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳೆಂದು ಎರಡು ವಿಧಗಳಿವೆ.

# ಶಬ್ದಾಲಂಕಾರಗಳು

- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಹೆಚ್ಚಿದರೆ ಅದನ್ನು "ಶಬ್ದಾಲಂಕಾರ'' ಎನ್ನುವರು. ಶಬ್ದಾಲಂಕಾರದಲ್ಲಿ ಮೂರು ವಿಧಗಳಿವೆ. 1. ಅನುಪ್ರಾಸ 2. ಯಮಕ 3.ಚಿತ್ರ ಕವಿತ್ವ.
- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಪುನರಾವರ್ತನೆಯಿಂದ ಹೆಚ್ಚಿದರೆ ಅದನ್ನು "ಅನುಪ್ರಾಸ'' ಎನ್ನುವರು.ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.
- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಒಂದು ಅಥವಾ ಎರಡು ಅಕ್ಷರಗಳು ಪ್ರತಿಪಾದದಲ್ಲಿ ಪುನರಾವರ್ತನೆ ಆಗುವುದರಿಂದ" ಹೆಚ್ಚಿದರೆ ಅದನ್ನು "ವೃತ್ತ್ಯನುಪ್ರಾಸ'' ಎನ್ನುವರು.
- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಎರಡು ಅಕ್ಷರಗಳಿಂದ ಕೂಡಿದ ಪದಗಳು ಪ್ರತಿ ಪಾದದಲ್ಲಿಯೂ ಪುನರಾವರ್ತನೆ ಆಗುವುದರಿಂದ ಹೆಚ್ಚಿದರೆ ಅದನ್ನು *"ಛೇಕಾನುಪ್ರಾಸ''* ಎನ್ನುವರು.
- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಮೂರು ಅಥವಾ ಅದಕ್ಕಿಂತ ಹೆಚ್ಚು ಅಕರ್ಷಗಳಿಂದ ಕೂಡಿದ ಪದಗಳು ಅಥವಾ ಪದಭಾಗ ಪ್ರತಿ ಪಾದದಲ್ಲಿಯೂ ಆದಿ / ಮಧ್ಯ / ಅಂತ್ಯದಲ್ಲಿ ನಿಯತವಾಗಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು "ಯಮಕಾಲಂಕಾರ'' ಎನ್ನುವರು.
- ✓ ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಅಥವಾ ಪದಗಳ ವಿಶಿಷ್ಟವಾದ ಬಳಕೆಯ ಮೂಲಕಹೆಚ್ಚಿದರೆ ಅದನ್ನು "ಚಿತ್ರ ಕವಿತ್ವ'' ಎನ್ನುವರು. ಇದರಲ್ಲಿ ನಿರೋಷ್ಟ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂದ ಇತ್ಯಾದಿ ಪ್ರಕಾರಗಳಿವೆ.

# "ಅರ್ಥಾಲಂಕಾರಗಳು"

- ✓ ಮಾತಿನ ಅಥವಾ ಕಾವ್ಯ ಸೌಂದರ್ಯವು ಪದಗಳ ಅರ್ಥ ಚಮತ್ಕಾರದಿಂದ ಹೆಚ್ಚಿದರೆಅದನ್ನು "ಅರ್ಥಾಲಂಕಾರ'' ಎನ್ನುವರು.
- ✓ ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಪರಸ್ಪರ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು 'ಉಪಮಾಲಂಕಾರ'' ಎನ್ನುವರು.
- ✓ ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದನ್ನು "ರೂಪಕಾಲಂಕಾರ'' ಎನ್ನುವರು.
- ✓ ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು "ದೃಷ್ಟಾಂತಾಲಂಕಾರ.'' ಎನ್ನುವರು.
- ✓ ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.
- ✓ ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ "ಶ್ಲೇಷ ಪದ'' ಎನ್ನುವರು. ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು "ಶ್ಲೇಷಾಲಂಕಾರ'' ಎನ್ನುವರು.
- ✓ ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

# ಉಪಮಾ ಅಲಂಕಾರ

*1. .ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ*

ಅಲಂಕಾರ :–ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ನೀಚರಿಗೆ ಮಾಡುವ ಉಪಕಾರ

ಉಪಮಾನ :–ಹಾವಿಗೆ ಎರೆದ ಹಾಲು

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)

ಸಮನ್ವಯ :–ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

*3. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.*

ಅಲಂಕಾರ :–ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ಭೀಮ ದುರ್ಯೋಧನರು

ಉಪಮಾನ :–ಮದಗಜಗಳು

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಹೋರಾಡುವುದು
ಸಮನ್ವಯ :–ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

3. ಸೀತೆಯ ಮುಖ ಕಮಲದಂತೆ ಅರಳಿತು.
ಅಲಂಕಾರ :–ಉಪಮಾಲಂಕಾರ.
ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ಸೀತೆಯ ಮುಖ
ಉಪಮಾನ :–ಕಮಲ
ಉಪಮಾ ವಾಚಕ :– ಅಂತೆ
ಸಮಾನ ಧರ್ಮ :– ಅರಳುವುದು

ಸಮನ್ವಯ :–ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು, ಉಪಮಾನವಾದ ಕಮಲಕ್ಕೆ ಹೋಲಿಸಿ ವರ್ಣಿಸಲಾಗಿದೆ.

*4. "ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"*
ಅಲಂಕಾರ :– ಉಪಮಾಲಂಕಾರ
ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
ಉಪಮೇಯ ಒಳಗಿನ ಮಂದಿ ಗುಂಡು ಹೊಡೆಯುವುದು
ಉಪಮಾನ :–ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು
ಉಪಮಾ ವಾಚಕ :–ಹಾಂಗ
ಸಮಾನ ಧರ್ಮ :– ಹೊಡೆಯುವುದು.
ಸಮನ್ವಯ :– ಇಲ್ಲಿ ಉಪಮೇಯವಾದಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

*5. "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"*
ಅಲಂಕಾರ :– ಉಪಮಾಲಂಕಾರ
ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
ಉಪಮೇಯ :–ಗುಂಡು ಸುರಿಯುವುದು
ಉಪಮಾನ :–ಸಿಡಿಲು ಸಿಡಿಯುವುದು
ಉಪಮಾ ವಾಚಕ :=ಹಾಂಗ
ಸಮಾನ ಧರ್ಮ :–ಸುರಿಯುವುದು
ಸಮನ್ವಯ :– ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

*6. ಮರನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯುತಲಿದೆ*
ಅಲಂಕಾರ :– ಉಪಮಾಲಂಕಾರ
ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನುಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ: ಲುಪ್ತವಾಗಿದೆ (ಮನುಷ್ಯನಚಂಚಲವಾದ ಮನಸ್ಸು)
ಉಪಮಾನ : ಮರನೇರಿದ ಮರ್ಕಟ (ಕೋತಿ)
ಉಪಮವಾಚಕ : ಅಂತೆ
ಸಮಾನಧರ್ಮ : ಲುಪ್ತವಾಗಿದೆ

ಸಮನ್ವಯ :–ಇಲ್ಲಿ ಉಪಮೇಯವಾದ ಮನುಷ್ಯನ ಚಂಚಲವಾದ ಮನಸ್ಸನ್ನು ಉಪಮಾನವಾದ ಮರನೇರಿದ ಮರ್ಕಟಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

*7. ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವಂತೆ'*
ಅಲಂಕಾರ :– ಉಪಮಾಲಂಕಾರ
ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ''.

ಉಪಮೇಯ :–ಲುಪ್ತವಾಗಿದೆ (ದುಷ್ಟಬದ್ಧಿಯು ತನ್ನ ತಂದೆಯನ್ನು ಪೊಟರೆಯ ಒಲ್ಲಿ ಅಡಗಿಸಿಡುವುದು)
ಉಪಮಾನ :– ಹರಕೆಯ ಕುರಿ (ಬಳಾರಿಯ ಮನೆ ಹರಕೆಯ ಕುರಿ)
ಉಪಮಾ ವಾಚಕ :ಅಂತೆ
ಸಮಾನ ಧರ್ಮ :– ಪುಗಿಸುವುದು (ಹೊಗಿಸುವುದು)

ಸಮನ್ವಯ :– ಇಲ್ಲಿ ಉಪಮೇಯವಾದ ದುಷ್ಟಬದ್ಧಿಯು ತಂದೆಯನ್ನು ಉಪಮಾನವಾದ ಹರಕೆಯ ಕುರಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

*8. " ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ"*
ಅಲಂಕಾರ :– ಉಪಮಾಲಂಕಾರ
ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ''.

ಉಪಮೇಯ :–ಲುಪ್ತವಾಗಿದೆ (ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ–ತಪಸ್ಸು)
ಉಪಮಾನ :– ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ
ಉಪಮಾ ವಾಚಕ :ಅಂತೆ
ಸಮಾನ ಧರ್ಮ :– ಲುಪ್ತವಾಗಿದೆ

ಸಮನ್ವಯ :– ಇಲ್ಲಿ ಉಪಮೇಯವಾದ ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ–ತಪಸ್ಸು ಇದನ್ನು ಉಪಮಾನವಾದ ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

## ರೂಪಕಾಲಂಕಾರ

*1. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ*
ಅಲಂಕಾರ :– ರೂಪಕಾಲಂಕಾರ
ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ಒಡಲಬೇಗೆ
ಉಪಮಾನ :– ಬೆಂಕಿಯುರಿ

ಸಮನ್ವಯ :– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

*2. "ಸೀತೆಯ ಮುಖಕಮಲ ಅರಳಿತು."*
ಅಲಂಕಾರ :– ರೂಪಕಾಲಂಕಾರ

ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ಸೀತೆಯ ಮುಖ

ಉಪಮಾನ :– ಕಮಲ

ಸಮನ್ವಯ :– ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

*3. "ಮಾರಿಗೌತಣವಾಯ್ತು ನಾಳಿನ ಭಾರತವು"*

ಅಲಂಕಾರ :– ರೂಪಕಾಲಂಕಾರ

ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ನಾಳಿನ ಭಾರತ ಯುದ್ಧ

ಉಪಮಾನ :– ಮಾರಿಯ ಔತಣ

ಸಮನ್ವಯ :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

*4. "ವದನಾರವಿಂದ"*

ಅಲಂಕಾರ :– ರೂಪಕಾಲಂಕಾರ

ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ವದನ

ಉಪಮಾನ :– ಅರವಿಂದ

ಸಮನ್ವಯ :–ಇಲ್ಲಿ ಉಪಮೇಯವಾದ ವದನವನ್ನು ಉಪಮಾನವಾದ ಅರವಿಂದಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

## ದೃಷ್ಟಾಂತಾಲಂಕಾರ

*1. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.*

ಅಲಂಕಾರ : ದೃಷ್ಟಾಂತಾಲಂಕಾರ ಲಕ್ಷಣ : ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು 'ದೃಷ್ಟಾಂತಾಲಂಕಾರ'.

ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ : ಇಲ್ಲಿ ಉಪಮೇಯವಾದ ಮಾತುಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ.ಆದ್ದರಿಂದ ಇದು ದೃಷ್ಟಾಂತಾಲಂಕಾರ.

## ಉತ್ಪ್ರೇಕ್ಷಾಲಂಕಾರ

*1. ಅಚ್ಚೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.*

ಅಲಂಕಾರ : ಉತ್ಪ್ರೇಕ್ಷಾಲಂಕಾರ

ಲಕ್ಷಣ : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.

ಉಪಮೇಯ : ಅಚ್ಚೋದ ಸರೋವರ

ಉಪಮಾನ : ರನ್ನಗನ್ನಡಿ

ಸಮನ್ವಯ : ಉಪಮೇಯವಾದ ಅಚ್ಚೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

## ಶ್ಲೇಷಾಲಂಕಾರ

*ಅತಿಶಯ ಪದಾರ್ಥ ನಿಕರ ।*
*ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ॥*
*ನುತಮಾಗದಲ್ತೆನಿರ್ದೋಷ ।*
*ಪತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥*

ಅಲಂಕಾರ : ಶ್ಲೇಷಾಲಂಕಾರ

ಲಕ್ಷಣ : ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದು 'ಶ್ಲೇಷಾಲಂಕಾರ'.

ಪದ ಕವಿಯ ಪರವಾಗಿ (ಉಪಮಾನ)

ರವಿಯ ಪರವಾಗಿ (ಉಪಮೇಯ) ಪದಾರ್ಥ

– ಪದದ ಅರ್ಥ (ಶಬ್ದಾರ್ಥ)

– ವಸ್ತು

ಪಾದ – ಪದ್ಯದ ಸಾಲು – ಕಿರಣ

ನಿರ್ದೋಷತೆ ದೋಷವಿಲ್ಲದಿರುವಿಕೆ

–ಕತ್ತಲಿಲ್ಲದಿರುವಿಕೆ (ಹಗಲು)

ಸಮನ್ವಯ : ಇಲ್ಲಿ ಕವಿ ಮತ್ತು ರವಿ ಒಂದೇ ಬಗೆಯ ಪದಗಳಿಂದ ವರ್ಣಿತರಾಗಿದ್ದಾರೆ.ಈ ವರ್ಣನೆಯಲ್ಲಿ ಪದಾರ್ಥ, ಪಾದ, ನಿರ್ದೋಷತೆ ಎಂಬ ಪದಗಳು ಶ್ಲೇಷಾರ್ಥದಿಂದ ಕೂಡಿವೆ. ಆದ್ದರಿಂದ ಇಲ್ಲಿ ಶ್ಲೇಷಾಲಂಕಾರವಿದೆ.

## ಅರ್ಥಾಂತರನ್ಯಾಸ ಅಲಂಕಾರ

*"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"*

ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.

ಲಕ್ಷಣ : ಒಂದು ವಿಶೇಷ ವಾಕ್ಯವನ್ನು (ಉಪಮೇಯ ೨) ಸಾಮಾನ್ಯ ವಾಕ್ಯದಿಂದ(ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

ಉಪಮೇಯ (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ ( ಸಾಮಾನ್ಯ ವಾಕ್ಯ) : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?
ಸಮನ್ವಯ : ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ ."ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು ಅರ್ಥಾಂತರನ್ಯಾಲಂಕಾರ.

*2. ಜಲನಿಧಿಜಲಮಂ ಜಲಭೃ ।*
*ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥*
*ರ್ಮಲ ಸಲಿಲಂ ದೊರೆದುದು ಗಡ ।*
*ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ॥*

ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.
ಲಕ್ಷಣ : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.
ಉಪಮೇಯ (ವಿಶೇಷ ವಾಕ್ಯ) : ಜಲನಿಧಿಜಲಮಂ ಜಲಭೃ । ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥ ರ್ಮಲ ಸಲಿಲಂ ದೊರೆದುದು
ಉಪಮಾನ ( ಸಾಮಾನ್ಯ ವಾಕ್ಯ) : ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ.
ಸಮನ್ವಯ : ಇಲ್ಲಿ ಉಪಮೇಯವಾದ "ಜಲನಿಧಿಜಲಮಂ ಜಲಭೃತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿರ್ಮಲ ಸಲಿಲಂ ದೊರೆದುದು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ ನೆಲದೊಳ್ ಕೊಟ್ಟಂಗೆ ಬಡತನಂಬಂದಪುದೇ" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ.ಆದ್ದರಿಂದ ಇದು ಅರ್ಥಾಂತರನ್ಯಾಸಾಲಂಕಾರ.

# ಛಂದಸ್ಸು

✓ ಪದ್ಯರಚನಾ ನಿಯಮವನ್ನು ತಿಳಿಸುವ ಶಾಸ್ತ್ರವನ್ನು ಛಂದಸ್ಸು ಎಂದು ಕರೆಯಲಾಗಿದೆ.

✓ ಸುಮಾರು ಕ್ರಿ.ಶ. 990ರಲ್ಲಿ ಇದ್ದ ಒಂದನೆಯ ನಾಗವರ್ಮ ಎಂಬವನು ಛಂದೋಂಬುಧಿ ಎಂಬ ಗ್ರಂಥದ ಮೂಲಕ ಈ ಶಾಸ್ತ್ರವನ್ನು ನೀಡಿದ್ದಾನೆ.

✓ ಛಂದಶ್ಶಾಸ್ತ್ರವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ ಅವುಗಳನ್ನು ಪ್ರಾಸ, ಯತಿ, ಗಣಗಳೆಂದು ಕರೆಯಲಾಗಿದೆ.

✓ ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು ಆದಿಪ್ರಾಸ ವೆಂತಲೂ ಪ್ರತಿ ಪಾದದ ಕೊನೆಯಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು ಅಂತ್ಯಪ್ರಾಸವೆಂತಲೂ ಕರೆಯುತ್ತಾರೆ. ಕೆಲವೊಮ್ಮೆ ಅಪರೂಪಕ್ಕೆ ಸಾಲಿನ ಮಧ್ಯದಲ್ಲಿ ಪ್ರಾಸಾಕ್ಷರಗಳು ಬರುವುದುಂಟು ಅದನ್ನು ಒಳಪ್ರಾಸ ಅಥವಾ ಮಧ್ಯಪ್ರಾಸ ಎಂದು ಕರೆಯಲಾಗಿದೆ.

✓ ಪ್ರಾಸ:ಪದ್ಯಗಳ ಪ್ರತಿಯೊಂದು ಸಾಲಿನ ಒಂದನೆ0ಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿ0ಯ ವ್ಯಂಜನಾಕ್ಷರಗಳು ಬರುವುದಕ್ಕೆ ಪ್ರಾಸವೆನ್ನುತ್ತಾರೆ. ಈ ಪ್ರಾಸವನ್ನು ಕೆಲವರು ಸಾಲುಗಳ (ಪಾದಗಳ) ಕೊನೆ0ಯಲ್ಲೂ ಬರುವಹಾಗೆ ಪದ್ಯ ರಚಿಸುತ್ತಾರೆ. ಪಾದಾಂತದಲ್ಲಿ ಬರುವ ಈ *ಪ್ರಾಸದ ನಿಯಮವು ಕೇವಲ ರಗಳೆಗಳಲ್ಲಿ ಮಾತ್ರ ಕಂಡು ಬರುತ್ತದೆ.*

1. ಆದಿ ಪ್ರಾಸ ಪದ್ಯದ ಪ್ರತಿ ಸಾಲಿನ ಎರಡನೇ ಅಕ್ಷರವು ಒಂದೇ ವಿಧವಾದ ವ್ಯಂಜನದಿಂದ ಕೂಡಿದ್ದರೆ ಅದನ್ನು ಆದಿ ಪ್ರಾಸವೆನ್ನುವರು.

ಉದಾಹರಣೆಗೆ :

1. ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು
ಒಳಗೆ ಬರಲಪ್ಪಣೆಯೇ ದೊರೆಯೇ
2. ಹಸನುಳ್ಳ ವಿಭೂತಿ ನೊಸಲೀಗಿ
ಹಚಗೊಂಡು ಬಸವಣ್ಣಗ ಮೇವು ಕೊರೆಯುವ –
ತಮ್ಮಗ ಬಸವೇಶ ವರವ ನೀಡ್ಯಾನ//

2. ಮಧ್ಯ ಪ್ರಾಸ:– ಪದ್ಯದ ಪ್ರತಿ ಸಾಲಿನ ಮಧ್ಯದ ಅಕ್ಷರವು ಒಂದೇ ವಿಧವಾದ ವ್ಯಂಜನದಿಂದ ಕೂಡಿದ್ದರೆ ಅದನ್ನು ಮಧ್ಯ ಪ್ರಾಸ ಎನ್ನುವರು

ಉದಾಹರಣೆ:–
ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ

ಹಾಡಿ ಹಾಡಿ ರಾಗ ಬಂತು
ಉಗುಳಿ ಉಗುಳಿ ರೋಗ ಬಂತು

3. ಅಂತ್ಯ ಪ್ರಾಸ:– *ಪದ್ಯದ ಪ್ರತಿ ಸಾಲಿನ ಕೊನೆಯ ಅಕ್ಷರವು ಒಂದೇ ವಿಧವಾದ ವ್ಯಂಜನದಿಂದ ಕೂಡಿದ್ದರೆ ಅದನ್ನು ಅಂತ್ಯ ಪ್ರಾಸ ಎನ್ನುವರು*

ಉದಾಹರಣೆ: *ಪಾತರಗಿತ್ತಿ ಪಕ್ಕಾ*
*ನೋಡಿರೇನ ಅಕ್ಕಾ*

1. **ಯತಿ:**ಯತಿ ಎಂದರೆ ವಿರಾಮ ಎಂದರ್ಥ ಪದ್ಯವನ್ನು ಓದುವಾಗ ಶೃತಿಯ ಸುಭಗತೆಗೆ ಭಂಗ ಬಾರದ ರೀತಿಯಲ್ಲಿ, ಅರ್ಥಕ್ಕೆ ಧಕ್ಕೆ ಬಾರದ ರೀತಿಯಲ್ಲಿ, ಚ್ಯುತಿ ಬಾರದ ರೀತಿಯಲ್ಲಿ ಉಸಿರೆಳದುಕೊಳ್ಳುವ ಸಲುವಾಗಿ ನಿಲ್ಲುವ ಸ್ಥಾನವನ್ನು ಯತಿ ಎನ್ನುವರು. ಉಸಿರೆಳದುಕೊಳ್ಳುವ ಸ್ಥಾನವೇ ಯತಿ.
2. ಮಾತ್ರೆ: ಛಂದಃಶಾಸ್ತ್ರದ ಪರಿಭಾಷೆಯಲ್ಲಿ ಒಂದು ಅಕ್ಷರವನ್ನು ಉಚ್ಚಾರಣೆ ಮಾಡಲು ತೆಗೆದುಕೊಳ್ಳುವ ಕಾಲವನ್ನು ನಿರ್ಧರಿಸುವುದಕ್ಕೆ ಮಾತ್ರೆ ಎನ್ನುತ್ತೇವೆ

*ಲಘು – ಒಂದು ಮಾತ್ರೆಯ ಕಾಲ*
*ಗುರು – ಎರಡು ಮಾತ್ರೆಯ ಕಾಲ*
ಪ್ಲುತ – ಮೂರು / ಅದಕ್ಕಿಂತಲೂ ಹೆಚ್ಚಿನ ಕಾಲ

3. ಗಣ : 'ಗಣ' ಎಂದರೆ 'ಗುಂಪು' ಅಥವಾ 'ಸಮೂಹ' ಎಂದರ್ಥ. ಛಂದಶ್ಶಾಸ್ತ್ರದಲ್ಲಿ 'ಗಣ' ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ ಮಾತ್ರೆ ಅಥವಾ ಅಕ್ಷರ ಅಥವಾ ಅಂಶಗಳ ಗುಂಪು ಎಂದರ್ಥ.

ಗಣಗಳ ವಿಧಗಳು

1. ಅಕ್ಷರ ಗಣ ಛಂದಸ್ಸು : ಖ್ಯಾತ ಕರ್ನಾಟಕ ವೃತ್ತಗಳು
2. ಮಾತ್ರಾ ಗಣ ಛಂದಸ್ಸು : ಕಂದ, ಷಟ್ಪದಿ, ರಗಳೆ. . .
3. ಅಂಶಗಣ ಛಂದಸ್ಸು : ತ್ರಿಪದಿ, ಸಾಂಗತ್ಯ . . . . .

✓ ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣವನ್ನು ಮಾತ್ರಾಗಣ ಎಂದು ಕರೆಯುತ್ತೇವೆ.

✓ ಅಕ್ಷರಗಳ ಲೆಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣವನ್ನು ಅಕ್ಷರಗಣ ಎಂತಲೂ ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು ಅಂಶಗಣ ಎಂತಲೂ ಕರೆಯಲಾಗಿದೆ.

✓ ಅಂಶಗಣದಲ್ಲಿ ಬ್ರಹ್ಮ, ವಿಷ್ಣು ಮತ್ತು ರುದ್ರ ಎಂಬ ಮೂರು ವಿಧದ ಗಣಗಳಿವೆ.

# ಮಾತ್ರಾಗಣ

ಮಾತ್ರಾ ವಂದಸ್ಸಿನಲ್ಲಿ ಕಂದ ಪದ್ಯ, ಷಟ್ಪದಿ, ರಗಳೆ ಮೊದಲಾದ ಛಂದೋರೂಪಗಳಿವೆ

## ಕಂದಪದ್ಯ

* ಕಂದ ಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ :64
* ಕಂದಪದ್ಯ ಹೊಂದಿರುವ ಸಾಲುಗಳು ನಾಲ್ಕು
*ಕಂದ ಪದ್ಯದಲ್ಲಿರುವ ಒಂದು ಗಣದಲ್ಲಿ ನಾಲ್ಕು ಮಾತ್ರೆಗಳಿರುತ್ತವೆ
* ಪರೀಕ್ಷೆಗೆ 4 ಸಾಲುಗಳ ಬದಲಾಗಿ 2 ಸಾಲನ್ನು ಮಾತ್ರ ನೀಡುತ್ತಾ ಬಂದಿದ್ದಾರೆ
* 2 ಸಾಲಿನ ಪದ್ಯಕ್ಕೆ ಕಂದಪದ್ಯ ಎಂದು ಬರೆಯುವುದರಿಂದ ಸುಲಭವಾಗಿ 1 ಅಂಕ ಪಡೆಯಬಹುದು
* ಲಘು ಗುರು ಹಾಕಿ 1 ಅಂಕ ಪಡೆಯಿರಿ
* 4 ಮಾತ್ರೆಗಳ 3 ಗಣ ಮೊದಲಸಾಲಿನಲ್ಲಿ 2 ನೇ ಸಾಲಿನಲ್ಲಿ 4 ಮಾತ್ರೆಯ 5 ಗಣವನ್ನು ವಿಭಾಗಮಾಡಿದರೆ 1 ಅಂಕ
* ಕಂದ ಪದ್ಯದ ಉದಾಹರಣೆಗಾಗಿ ವೃಕ್ಷಸಾಕ್ಷಿ ಗದ್ಯ, ಛಲಮನೆ ಮೆರೆವೆಂ ಮತ್ತು ಕೆಮ್ಮನೆ ಮೀಸೆವೊತ್ತನೇ ಪದ್ಯಗಳಲ್ಲಿನ ಕಂದಪದ್ಯಗಳನ್ನು ಅಭ್ಯಾಸ ಮಾಡುವುದು.

ಉದಾಹರಣೆ:

| 4 | 4 | 4 | | | 12 |
|---|---|---|---|---|---|
| ∪ ∪ ∪ ∪ | – – | ∪ ∪ ∪ ∪ | | | |
| ಒ ಡೆ 0ಮ ಲ | ಜಾಂ ಡಂ | ಕು ಲ ಗಿ ರಿ । | | | |
| 4 | 4 | 4 | 4 | 4 | 20 |
| ∪ ∪ – | ∪ ∪ – | ∪ – ∪ | ∪ ∪ – | ∪ ∪ – | |
| ಕ ಡೆ 0ಮ ಲ್ | ಪಿ ಳಿ 0ಮ | ಲ್ಕೆ ಧಾ ತ್ರಿ | ದಿ ವಿ ಜ ರ್ | ನ ಡು ಗ । | |
| 4 | 4 | 4 | | | 12 |
| ∪ ∪ ∪ ∪ | ∪ – ∪ | – ∪ ∪ | | | |
| ಲ್ಕೊ ಡ ರಿ ಸು | ವಿ ನಂ ಜ | ಟಾ ಸು ರ । | | | |
| 4 | 4 | 4 | 4 | 4 | 20 |
| ∪ – ∪ | ∪ ∪ – | ∪ – ∪ | – – | – – | |
| ಹಿ ಡಿಂ ಬ | ಬ ಕ ವೈ | ರಿ ಸಿಂ ಹ | ನಾ ದಂ | ಗೆ 0ದ್ದಂ ॥ | |

# ಷಟ್ಪದಿಗಳು

ಷಟ್ಪದಿಗಳ ಲಕ್ಷಣಗಳು:

- ✓ ಆರು ಪಾದಗಳುಳ್ಳ ಪದ್ಯವನ್ನು 'ಷಟ್ಪದಿ' ಎಂದು ಕರೆಯುತ್ತಾರೆ.
- ✓ ಇದರ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಒಂದಕ್ಕೊಂದು ಸಮಾನವಾಗಿರುತ್ತವೆ.
- ✓ ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿರುತ್ತವೆ. ಒಂದನೆಯ ಪಾದದಲ್ಲಿರುವ ಮಾತ್ರೆಗಳ ಒಂದೂವರೆಯಷ್ಟು ಮತ್ತು ಒಂದು ಗುರು ಮೂರನೆಯ ಮತ್ತು ಆರನೆಯ ಪಾದಗಳಲ್ಲಿರುತ್ತವೆ.
- ✓ ದ್ವಿತೀಯಾಕ್ಷರವು ಪ್ರಾಸಾಕ್ಷರವಾಗಿರುತ್ತದೆ.
- ✓ ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ ಎಂಬ ಆರು ವಿಧಗಳಿರುತ್ತವೆ.
- ✓

## ಭಾಮಿನಿ ಷಟ್ಪದಿ

ಅಭ್ಯಾಸಕ್ಕಾಗಿ ಕೌರವೇಂದ್ರನ ಕೊಂದೆ ನೀನು ಪದ್ಯಭಾಗದ ಎಲ್ಲಾ ಪದ್ಯಗಳನ್ನು ಅಭ್ಯಾಸ ಮಾಡಿಸುವುದು

ಭಾಮಿನಿ ಷಟ್ಪದಿಯ ಲಕ್ಷಣಗಳು :

- ➢ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಸಮಾನವಾಗಿದ್ದು ಪ್ರತಿಪಾದದಲ್ಲೂ ಮೂರು ನಾಲ್ಕು ಮತ್ತು ಮೂರು ನಾಲ್ಕು ಮಾತ್ರೆಗಳ ಎರಡೆರಡು ಗಣಗಳಿರುತ್ತವೆ.
- ➢ ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳು ಮತ್ತು ಕೊನೆಯಲ್ಲಿ ಒಂದು ಗುರು ಇರುತ್ತದೆ.
- ➢ ಹಾಗಾಗಿ ಒಂದು, ಎರಡು ಮತ್ತು ಮೂರನೆಯ ಪಾದಗಳು ಪೂರ್ವಾರ್ಧವೆಂತಲೂ ನಾಲ್ಕು, ಐದು, ಮತ್ತು ಆರನೆಯ ಪಾದಗಳು ಉತ್ತರಾರ್ಧವೆಂತಲೂ ಕರೆಯಲ್ಪಡುತ್ತವೆ.

3 4 3 4 14<br>
U U U | - U U | - U - | U U<br>
ಇ ನ ತ | ನೂ ಜ ನ | ಕೂ ಡೆ | ಮೈ ದು ನ

3 4 3 4 14<br>
U U U | U U U U | U U U | U U U U<br>
ತ ನ ದ | ಸ ರ ಸ ವ | ನೆ ಸ ಗಿ | ರ ಥ ದೊ ಳು

3 4 3 4 3 4 2 23<br>
U U U | U U U U | U U U | - U U | U U U | - U U | -<br>
ದ ನು ಜ | ರಿ ಪು ಬ ರ | ಸೆ ಳೆ ದು | ಕು ಳ್ಳಿ ರಿ | ಸಿ ದ ನು | ಪೀ ಠ ದ | ಲಿ

3 4 3 4 14<br>
U U U | - U U | U U U | U U -<br>
ಎ ನ ಗೆ | ನಿ ಮ್ಮ ಡಿ | ಗ ಳ ಲಿ | ಸ ಮ ಸೇ

3 4 3 4 14<br>
U U U | - U U | - U | - U U<br>
ವ ನೆ ಯ | ಹೇ ವ ಮು | ಕಾ ರಿ | ಯಂ ಜು ವೆ

3 4 3 4 3 4 2 23<br>
U U U | U U - | U U U | - U U | - U– | – – |<br>
ನೆ ನ ಲು | ತೊ ಡೆ ಸೋಂ | ಕಿ ನ ಲಿ | ಸಾ ರಿ ದು | ಶೌ ರಿ | ಯಿಂ ತೆಂ | ದ

## ವಾರ್ಧಕ ಷಟ್ಪದಿ

ಲಕ್ಷಣಗಳು :

- ✓ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾಸಂಖ್ಯೆಯಲ್ಲಿ ಸಮಾನವಾಗಿರುತ್ತವೆ
- ✓ ಐದು ಮಾತ್ರೆಗಳ ನಾಲ್ಕು ಗಣಗಳು ಪ್ರತಿಪಾದದಲ್ಲೂ ಇರುತ್ತವೆ.
- ✓ ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿದ್ದು ಐದು ಮಾತ್ರೆಗಳ ಆರಾರು ಗಣಗಳು ಪ್ರತಿಪಾದದಲ್ಲೂ ಇದ್ದು
- ✓ ಕೊನೆಯಲ್ಲಿ ಒಂದೊಂದು ಗುರು ಇರುತ್ತದೆ.
- ✓ ಆದಿ ಪ್ರಾಸವಿರುತ್ತದೆ

ಅಭ್ಯಾಸಕ್ಕಾಗಿ ವೀರಲವ ಪದ್ಯಭಾಗದ ಎಲ್ಲಾ ಪದ್ಯಗಳನ್ನು ಅಭ್ಯಾಸ ಮಾಡಿಸುವುದು

<u>ವಾರ್ಧಕ ಷಟ್ಪದಿ ಗಣವಿನ್ಯಾಸ</u>

**5/5/5/5 = 20**
**5/5/5/5 = 20**
**5/5/5/5/5/5/– = 30+2=75 ಮಾತ್ರೆಗಳು**

<u>ವೀರಲವ ಪದ್ಯದ ಉದಾಹರಣೆ</u>

5 | 5 | 5 | 520
_ U _ | _ _U | U U U U U __ | __ U
ಉರ್ವಿಯೊಳ್ | ಕೌಸಲ್ಯೆ | ಪ ಡೆ ದ ಕು ವ | ರಂ ರಾ ಮ

5 | 5 5 | 5 | | 20
_ U __ | _ U _ UU | _ U U U | U U |
ನೊರ್ವನೇ | ವೀ ರ ನಾ ಥ | ನ ಯಜ್ಞ ತು | ರಗಮಿದು |

5 | 5 | 5 | 5 | 5 | 5 | 2 32
_U U U | _ U _ | _U _UU | U _ _U | _ U U U | U _ _ | _
ನಿರ್ವಹಿಸ | ಲಾ ರ್ಪರಾ | ರಾದೊಡಂ | ತಡೆ ಯಲೆಂ | ಧಿರ್ದಲೇ | ಖ ನವ ನೋ | ದಿ

# ಅಕ್ಷರಗಣ ಛಂದಸ್ಸು:

## ಖ್ಯಾತ ಕರ್ನಾಟಕ ವೃತ್ತಗಳು

* ಖ್ಯಾತಕರ್ಣಾಟಕ ವೃತ್ತಗಳ ವಿಧಗಳು

1. ಚಂಪಕಮಾಲಾ ವೃತ್ತ : 21 ಅಕ್ಷರಗಳು ನ.ಜ.ಜ.ಭ.ಜ.ಜ.ಜ.ರ
2. ಉತ್ಪಲಮಾಲಾ ವೃತ್ತ : 20 ಅಕ್ಷರಗಳು ಭ.ರ.ನ.ಭ.ಭ.ರ. ಕೊನೆಯಲ್ಲಿ ಲಘು, ಗುರು
3. ಮತ್ತೇಭ ವಿಕ್ರೀಡಿತವೃತ್ತ : 20 ಅಕ್ಷರಗಳು ಸ.ಭ.ರ.ನ.ಮ.ಯ ಕೊನೆಯಲ್ಲಿ ಲಘು, ಗುರು
4. ಶಾರ್ದೂಲ ವಿಕ್ರೀಡಿತವೃತ್ತ : 20 ಅಕ್ಷರಗಳು
5. ಸ್ರಗ್ಧರಾವೃತ್ತ : 21 ಅಕ್ಷರಗಳು
6. ಮಹಾಸ್ರಗ್ಧರಾ ವೃತ್ತ : 22 ಅಕ್ಷರಗಳು

* ವೃತ್ತಗಳು ನಾಲ್ಕು ಸಾಲಿನ ಪದ್ಯವಾಗಿದ್ದು, ಪರೀಕ್ಷೆಯಲ್ಲಿ ಒಂದು ಸಾಲಿನ ಪದ್ಯವನ್ನು ಮಾತ್ರ ನೀಡುತ್ತಾರೆ ಆಗ ಅದು ಅಕ್ಷರ ಗಣಕ್ಕೆ ಸಂಬಂಧಿಸಿದ್ದೆಂದು ತಿಳಿಯುವುದು.

* ಮೂರು ಮೂರು ಅಕ್ಷರಗಳಿಗೆ ಗಣ ವಿಭಾಗಿಸುವುದರಿಂದ 1 ಅಂಕ ಪಡೆಯಬಹುದು

* ಲಘು ,ಗುರು ಹಾಕಿ ಗಣಗಳನ್ನು ಗುರ್ತಿಸಲು

* ಮನ, ಭಯ ಜರ, ಸತ ಎಂಬ ಎಂಟು ಅಕ್ಷರಗಣಗಳನ್ನು ನೆನಪಿನಲ್ಲಿಡಿ

1. ಗುರು ಮೂರಿರೆ ಮಗಣ
2. ಲಘು ಮೂರಿರೆ ನಗಣ

3. ಗುರು ಮೊಲಲ್ಲಿ ಬರಲು ಭಗಣ
4. ಲಘು ಮೊದಲಲ್ಲಿ ಬರಲು ಯಗಣ
5. ಗುರು ನುಡುವಿರೆ ಜಗಣ
6. ಲಘು ನಡುವಿರೆ ರಗಣ
7. ಗುರು ಕೊನೆಯಲ್ಲಿ ಬರಲು ಸಗಣ
8. ಲಘು ಕೊನೆಯಲ್ಲಿ ಬರಲು ತಗಣ

* ಮನ ಭಯ ಜರ ಸತ ಇದನ್ನು ಕಂಠ ಪಾಠ ಮಾಡಿ ಅಥವಾ
* ಮನದಲ್ಲಿ ಭಯಗೊಂಡು ಜರ (ಜ್ವರ ಬಂದು) ಸತ್ತು (ಸತ) ಹೋದನು ಈ ಸಾಲನ್ನು ಕಂಠ ಪಾಠ ಮಾಡಿ

<u>ಖ್ಯಾತ ಕರ್ಣಾಟಕಗಳು/ ಅಕ್ಷರ ವೃತ್ತಗಳ ಲಕ್ಷಣಗಳು</u>

1. ಗುರುವೊಂದಾದಿಯೊಳುತ್ಪಂ = ( _ U U)
   ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಸಾಲಿನ ಮೊದಲನೆಯ ಅಕ್ಷರವು ಗುರುವಾಗಿದ್ದರೆ ( _ U U) ಅದನ್ನು ಉತ್ಪಲಮಾಲಾವೃತ್ತ ಎಂದು ಬರೆಯಿರಿ
2. ಗುರುಮೊದಲ್ ಮೂರಾಗೆ ಶಾರ್ದೂಲಮ್ = (_ _ _)
   ಪದ್ಯದ ಸಾಲಿನ ಮೊದಲ ಮೂರು ಅಕ್ಷರಗಳು ಗುರುವಾಗಿದ್ದರೆ (_ _ _) ಅದನ್ನು ಶಾರ್ದೂಲ ವಿಕ್ರೀಡಿತ ವೃತ್ತ ಎಂದು ಬರೆಯಿರಿ
3. ಗುರು ನಾಲ್ಕಾಗಿರಲಂತು ಸ್ರಗ್ಧರೆ = (_ _ _/_) ಪದ್ಯದ ಸಾಲಿನ ಮೊದಲ ನಾಲ್ಕು ಅಕ್ಷರಗಳು ಗುರುವಾಗಿದ್ದರೆ ಅದನ್ನು ಸ್ರಗ್ಧರಾ ವೃತ್ತ ಎನ್ನುವರು
4. ಲಘು ದ್ವಂದ್ವಂ ಗುರುದ್ವಂದ್ವಮಾಗಿರೆ ಮತ್ತೇಭ = (U U_ /_ ) ಪದ್ಯದ ಸಾಲಿನ ಮೊದಲ ನಾಲ್ಕು ಅಕ್ಷರಗಳಲ್ಲಿ ಮೊದಲ 2 ಅಕ್ಷರಗಳು ಲಘು ನಂತರದ 2 ಅಕ್ಷರಗಳು ಗುರುವಾಗಿದ್ದರೆ (U U_ /_ ) ಅದನ್ನು ಮತ್ತೇಭ ವಿಕ್ರೀಡಿತ ವೃತ್ತ ಎನ್ನುವರು
5. ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ = (U U_ /_ ) ಪದ್ಯದ ಸಾಲಿನ ಮೊದಲ ಎರಡು ಅಕ್ಷರಗಳು ಲಘುವಾಗಿದ್ದು ನಂತರದ 3 ಅಕ್ಷರಗಳು ಗುರುವಾಗಿದ್ದರೆ ಅದನ್ನು ಮಹಸ್ರಗ್ಧರಾ ವೃತ್ತ ಎನ್ನುವರು
6. ಲಘು ನಾಲ್ಕು ಚಂಪಕಮ್ = (U U U/ U) ಪದ್ಯದ ಸಾಲಿನ ಮೊದಲ ನಾಲ್ಕು ಅಕ್ಷರಗಳು ಲಘುವಾಗಿದ್ದರೆ (U U U/ U) ಅದನ್ನು ಚಂಪಕ ಮಾಲಾವೃತ್ತ ಎನ್ನುವರು

ಅಭ್ಯಾಸಕ್ಕಾಗಿ ಕೆಮ್ಮನೆ ಮೀಸೆವೊತ್ತನೇ
ಪದ್ಯಭಾಗದ ಚಂಪಕ ಮಾಲೆಯ ಪದ್ಯಗಳನ್ನು ಅಭ್ಯಾಸ ಮಾಡಿಸುವುದು

1. ಚಂಪಕಮಾಲಾ ವೃತ್ತ (ನ ಜ ಭ ಜ ಜ ಜ ರ ಎಂಬ 7 ಗಣಗಳು)
   ಚಂಪಕಮಾಲಾ ವೃತ್ತ ಲಕ್ಷಣಗಳು :–

✓ ಪ್ರತಿಪಾದಿದಲ್ಲೂ ಇಪ್ಪತ್ತೊಂದು ಅಕ್ಷರಗಳಿವೆ.
✓ ಪ್ರತಿಪಾದವೂ ನ, ಜ, ಭ, ಜ, ಜ, ಜ, ರ ಎಂಬ ಗಣಗಳಿಂದ ಕೂಡಿದೆ. ಆದಿ ಪ್ರಾಸದಿಂದ ಕೂಡಿರುತ್ತದೆ.
✓ ಸೂತ್ರ :– ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕ ಮಾಲೆಯೆಂದಪರ್

ಉದಾ :

ನ | ಜ | ಭ | ಜ | ಜ | ಜ | ರ |
U U U | U – U – | U U U | – U U – | U U | – U – | U – | | |
ಎ ನೆ ನ ಸು ನ | ಕ್ಕು ಮಾರರಿ | ಪು ವಾ ತ ನ | ಧೈ ರ್ಯ ಮ | ಘಾ ತ ನೇ | ಳ್ಗೆ ವೆ | |

ತ್ತನುಗತ.....

2. ಉತ್ಪಲಮಾಲಾವೃತ್ತ (ಭ ರ ನ ಭ ಭ ರ ಎಂಬ 6 ಗಣಗಳು ಲಘು, ಗುರು)
   ಉತ್ಪಲಮಾಲಾವೃತ್ತ ಲಕ್ಷಣಗಳು :
   ✓ ಇದು ನಾಲ್ಕು ಪಾದಗಳುಳ್ಳ ಪದ್ಯ.
   ✓ ಪ್ರತಿ ಪಾದವೂ ಅಕ್ಷರಗಳ ಸಂಖ್ಯೆಯಲ್ಲಿ ಸಮಾನವಾಗಿದ್ದು ತಲಾ ಇಪ್ಪತ್ತು ಅಕ್ಷರಗಳು ಇರುತ್ತವೆ.
   ✓ ಕ್ರಮವಾಗಿ ಪ್ರತಿ ಪಾದದಲ್ಲೂ ಭ, ರ, ನ, ಭ, ಭ, ರ, ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಇರುತ್ತವೆ.
   ✓ ಸೂತ್ರ : ಉತ್ಪಲಮಾಲೆಯಪ್ಪುದು ಭರಂ ನಭಭಂರಲಗಂ ನೆಗಟ್ದಿರಲ್

ಉದಾ :

ಭ ರ | ನ ಭ ಭ | ರ | ಲ ಗು | |

– UU– U– UUU – UU –UU– U– U –

ಚಾಗದ ಭೋಗದ ಕ್ಕರದ ಗೇಯದ ಗೊಟ್ಟಿಯ ಲಂಪಿನಿಂ ಪು ಗ

ಅಭ್ಯಾಸಕ್ಕಾಗಿ ವೃಕ್ಷಸಾಕ್ಷಿ ಗದ್ಯ ಮತ್ತು **ಛಲಮನೆ ಮೆರೆಮೆಂ**ಪದ್ಯಭಾಗದ ಉತ್ಪಲ ಮಾಲೆಯ ಪದ್ಯಗಳನ್ನು ಅಭ್ಯಾಸ ಮಾಡಿಸುವುದು

ವೃಕ್ಷ ಸಾಕ್ಷಿ ಗದ್ಯದ ಸಾಲು

ಭ ರ ನ ಭ ಭ ರ ಲ ಗು

_ UU_ U_UU U _ U U _ U U_U _ U_

ಮೇದಿನಿ ಯಂ ಕ್ರಮ ಕ್ರ ಮ ದೆ ಪ ರ್ವಿ ದು ದಾ ತ್ತ ನ ಭೋ ಪಿ ಭಾಗ ಮಾ

# ವ್ಯಾಕರಣ ಮಾದರಿ ಪ್ರಶ್ನೆಗಳು

## ಗದ್ಯ ಪಾಠ–1, ಯುದ್ಧ

***ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:***

1. 'ಅವ್ವ' ಎಂಬ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
   ಎ] ವಿಜಾತಿ ಸಂಯುಕ್ತಾಕ್ಷರ ಬಿ] ವ್ಯಂಜನ
   ಸಿ] ಸಜಾತಿ ಸಂಯುಕ್ತಾಕ್ಷರ ಡಿ] ಅನುಸ್ವಾರ
2. ' ಙ ' ಎಂಬುದು ವ್ಯಾಕರಣದ ಈ ಅಂಶಕ್ಕೆ ಸೇರಿದೆ
   ಎ] ಸ್ವರಾಕ್ಷರ ಬಿ] ದೀರ್ಘಾಕ್ಷರ
   ಸಿ] ಗುಣಿತಾಕ್ಷರ ಡಿ] ಅನುನಾಸಿಕಾಕ್ಷರ
3. 'ಊ''ಎಂಬುದು ಈ ವ್ಯಾಕರಣಾಂಶವಾಗಿದೆ.
   ಎ] ಹ್ರಸ್ವಸ್ವರ ಬಿ] ದೀರ್ಘಸ್ವರ
   ಸಿ] ಪ್ಲುತಸ್ವರ ಡಿ] ಸಂಧ್ಯಕ್ಷರ
4. "ಕ" ಎಂಬುದು ಈ ಅಕ್ಷರವಾಗಿದೆ:
   ಎ] ದೀರ್ಘಸ್ವರ ಬಿ] ಹ್ರಸ್ವಸ್ವರ
   ಸಿ] ಮಹಾಪ್ರಾಣ ಡಿ] ಅಲ್ಪಪ್ರಾಣ
5. ' ಃ'ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
   ಎ] ಸ್ವರಾಕ್ಷರ ಬಿ] ದೀರ್ಘಾಕ್ಷರ
   ಸಿ] ಗುಣಿತಾಕ್ಷರ ಡಿ] ವಿಸರ್ಗ
6. ' ಸಂಯುಕ್ತಾಕ್ಷರ ' ಈ ಅಕ್ಷರಗಳನ್ನು ಒಳಗೊಂಡಿದೆ:
   ಎ] ಎರಡು ಸ್ವರಾಕ್ಷರ ಬಿ] ಎರಡು ವ್ಯಂಜನ ಒಂದು ಸ್ವರ
   ಸಿ] ಎರಡು ವ್ಯಂಜನ ಡಿ] ಸ್ವರ ಮತ್ತು ವ್ಯಂಜನ
7) ವರ್ಗದ ಮೊದಲನೆ ಮತ್ತು ಮೂರನೆ ಅಕ್ಷರಗಳನ್ನು ಹೀಗೆಂದು ಕರೆಯುತ್ತಾರೆ.
   ಎ] ದೀರ್ಘಸ್ವರ ಬಿ] ಹ್ರಸ್ವಸ್ವರ
   ಸಿ] ಮಹಾಪ್ರಾಣ ಡಿ] ಅಲ್ಪಪ್ರಾಣ
8) ವರ್ಗದ ಎರಡನೆ ಮತ್ತು ನಾಲ್ಕನೆ ಅಕ್ಷರಗಳನ್ನು ಹೀಗೆಂದು ಕರೆಯುತ್ತಾರೆ
   ಎ] ದೀರ್ಘಸ್ವರ ಬಿ] ಹ್ರಸ್ವಸ್ವರ
   ಸಿ] ಮಹಾಪ್ರಾಣ ಡಿ] ಅಲ್ಪಪ್ರಾಣ
9) ಕನ್ನಡ ವರ್ಣಮಾಲೆಯಲ್ಲಿ ಅನುನಾಸಿಕ ವರ್ಗದ ಗುಂಪಿಗೆ ಸೇರಿದ ಅಕ್ಷರಗಳಿವು
   ಎ] ಅ.ಎ.ಇ.ಉ ಬಿ] ಕ,ಚ.ಟ.ತ,ಪ
   ಸಿ] ,ಙ, ಞ,ಣ,ನ,ಮ ಡಿ] ಯ,ರ,ಲ,ವ
10) ವರ್ಗದ ಕೊನೆಯ ಅಕ್ಷರಗಳನ್ನು ಹೀಗೆನ್ನುವರು:
   ಎ] ಸ್ವರಾಕ್ಷರ ಬಿ] ದೀರ್ಘಾಕ್ಷರ
   ಸಿ] ಗುಣಿತಾಕ್ಷರ ಡಿ] ಅನುನಾಸಿಕ
11) ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳಿಗೆ ಹೀಗೆಂದು ಕರೆಯುತ್ತಾರೆ.
   ಎ] ಹ್ರಸ್ವ ಸ್ವರ ಬಿ] ವ್ಯಂಜನ
   ಸಿ] ದೀರ್ಘಸ್ವರ ಡಿ] ಯೋಗವಾಹ
12) ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳಿಗೆ ಹೀಗೆಂದು ಕರೆಯುತ್ತಾರೆ.
   ಎ] ಹ್ರಸ್ವ ಸ್ವರ ಬಿ] ವ್ಯಂಜನ
   ಸಿ] ದೀರ್ಘಸ್ವರ ಡಿ] ಯೋಗವಾಹ

***ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:***

1. ಸ್ವರಾಕ್ಷರಗಳು : 13 : : ವ್ಯಂಜನಾಕ್ಷರಗಳು : ______
2. .ಯೋಗವಾಗಳು : 02 : : ವರ್ಣಮಾಲೆಯ ಒಟ್ಟು ಅಕ್ಷರಗಳು :
3. ಅಲ್ಪ ಪ್ರಾಣಾಕ್ಷರಗಳು : 10 : : ಅನುನಾಸಿಕಗಳು :__

4 . ಹೃಸ್ವ ಸ್ವರಗಳು : 06 : : ದೀರ್ಘ ಸ್ವರಗಳು : _____

## ಗದ್ಯ ಪಾಠ-2 : ಶಬರಿ

1. 'ಬಲ್ಲೆನೆಂದು'' ಪದವು ಈ ಸಂಧಿಗೆ ಉದಾಹರಣೆಯಾಗಿದೆ:
ಎ] ಆಗಮ ಬಿ] ಆದೇಶ
ಸಿ] ಲೋಪ ಡಿ] ಗುಣ

2. 'ಕಡುವೆಳ್ಪು'' ಎಂಬುದು ಈ ಸಂಧಿಯಾಗಿದೆ:
ಎ] ಆಗಮ ಬಿ] ಆದೇಶ
ಸಿ] ಲೋಪ ಡಿ] ಗುಣ

3. 'ಯಣ್ ಸಂಧಿ''ಗೆ ಉದಾಹರಣೆಯಾದ ಪದವಿದು:
ಎ] ಗಿರೀಶ ಬಿ] ಮಹರ್ಷಿ
ಸಿ] ಜನೈಕ್ಯ ಡಿ] ಅತ್ಯವಸರ

4. 'ಜಶ್ತ್ವಸಂಧಿ''ಗೆ ಉದಾಹರಣೆಯಾದ ಪದ ಇದಾಗಿದೆ:
ಎ] ಅತ್ಯವಸರ ಬಿ] ಶರಚ್ಚಂದ್ರ
ಸಿ] ವಾಙ್ಮಯ ಡಿ] ವಾಗ್ದೇವಿ

5. 'ಶಾಲೆಯನ್ನು'ಪದವು ಈ ಸಂಧಿಗೆಉದಾಹರಣೆಯಾಗಿದೆ:
ಎ] ಆದೇಶ ಬಿ] ಆಗಮ
ಸಿ] ಸವರ್ಣದೀರ್ಘ ಡಿ] ಲೋಪ

6. 'ವಧೂಪೇತ'' ಎಂಬುದು ಈ ಸಂಧಿಯಾಗಿದೆ:
ಎ] ಸವರ್ಣದೀರ್ಘ ಬಿ] ಗುಣ
ಸಿ] ವೃದ್ಧಿ ಡಿ] ಯಣ್

7. 'ವೃದ್ಧಿಸಂಧಿ''ಗೆ ಉದಾಹರಣೆಯಾದ ಪದವಿದು:
ಎ] ಅಜಂತ ಬಿ] ದೇವೇಂದ್ರ
ಸಿ] ಕಡುವೆಳ್ಪು ಡಿ] ಏಕೈಕ

8. 'ಶ್ಚುತ್ವಸಂಧಿ''ಗೆ ಉದಾಹರಣೆಯಾದ ಪದ ಇದಾಗಿದೆ:
ಎ] ಸುರಾಸುರ ಬಿ] ಮಹೇಶ
ಸಿ] ಬೃಹಚ್ಛತ್ರ ಡಿ] ತನ್ಮಯ

9. 'ಬೆಂಬತ್ತು'' ಪದವು ಈ ಸಂಧಿಗೆ ಉದಾಹರಣೆಯಾಗಿದೆ:
ಎ] ಲೋಪ ಬಿ] ಆಗಮ
ಸಿ] ಆದೇಶ ಡಿ] ಅನುನಾಸಿಕ

10. 'ಷಣ್ಮುಖ'' ಎಂಬುದು ಈ ಸಂಧಿಯಾಗಿದೆ:
ಎ] ಗುಣ ಬಿ] ವೃದ್ಧಿ
ಸಿ] ಅನುನಾಸಿಕ ಡಿ] ಯಣ್

11. 'ಗುಣಸಂಧಿ''ಗೆ ಉದಾಹರಣೆಯಾದ ಪದವಿದು:
ಎ] ಷಡಾನನ ಬಿ] ಮೆಲ್ವಾತು
ಸಿ] ಸೂರ್ಯೋದಯ ಡಿ] ವನೌಷಧಿ

12. ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನು ಎರಡೆರಡು ಬಾರಿ ಪ್ರಯೋಗಿಸುವುದೇ:
ಎ] ಜೋಡುನುಡಿ ಬಿ] ಅನುಕರಣಾವ್ಯಯ
ಸಿ] ಪಡೆನುಡಿ ಡಿ] ದ್ವಿರುಕ್ತಿ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

.1. ನಮೋ ನಮೋ : ದ್ವಿರುಕ್ತಿ :: ಧೀರಶೂರ :_____
2. ಲೋಪಸಂಧಿ : ಸ್ವರಸಂಧಿ :: ಆದೇಶಸಂಧಿ :_____
3. ಕಟ್ಟಕಡೆಗೆ : ಕಡೆಗೆ ಕಡೆಗೆ :: ಮೊತ್ತಮೊದಲು :_____
4. ಶರಚ್ಛಂದ್ರ : ಶ್ಚುತ್ವಸಂಧಿ :: ದಿಗಂತ :_____
5. ಕೆನೆಮೊಸರು : ಜೋಡುನುಡಿ :: ಹೌದ್ಹೌದು :_____

6. ವಾಗ್ದೇವಿ : ಜಶ್ತ್ವಸಂಧಿ :: ಪಯಶ್ಶಯನ :_____

## ಗದ್ಯ ಪಾಠ-3: ಲಂಡನ್ ನಗರ

1. 'ಧಾತು''ಗಳಿಗೆ "ಉತ್ತ'' ಎಂಬ ಕಾಲಸೂಚಕ ಪ್ರತ್ಯಯ ಸೇರಿದಾಗ ಆಗುವ ರೂಪ...
ಎ] ಕಾಲಪಲ್ಲಟ ಬಿ] ಭೂತಕಾಲ
ಸಿ] ಭವಿಷತ್ ಕಾಲ ಡಿ] ವರ್ತಮಾನಕಾಲ

2. 'ಧಾತು'ಗಳಿಗೆ 'ದ'' ಎಂಬ ಕಾಲಸೂಚಕ ಪ್ರತ್ಯಯ ಸೇರಿದಾಗ ಆಗುವ ರೂಪ...
ಎ] ವರ್ತಮಾನಕಾಲ ಬಿ] ಭೂತಕಾಲ
ಸಿ] ಭವಿಷತ್ ಕಾಲ ಡಿ] ಕಾಲಪಲ್ಲಟ

3. 'ಧಾತುಗಳಿಗೆ "ವ''ಎಂಬ ಕಾಲಸೂಚಕ ಪ್ರತ್ಯಯ ಸೇರಿದಾಗ ಆಗುವ ರೂಪ...
ಎ] ವರ್ತಮಾನಕಾಲ ಬಿ] ಭೂತಕಾಲ
ಸಿ] ಭವಿಷತ್ ಕಾಲ ಡಿ] ಕಾಲಪಲ್ಲಟ

4. ಒಂದು ಕಾಲದ ಕ್ರಿಯೆಯನ್ನು ಇನ್ನೊಂದು ಕಾಲದ ಕ್ರಿಯಾರೂಪದಿಂದ ಹೇಳುವ ರೂಪ...
ಎ] ಕಾಲಸೂಚಕ ಬಿ] ವಿಭಕ್ತಿಪಲ್ಲಟ
ಸಿ] ಆಖ್ಯಾತಪ್ರತ್ಯಯ ಡಿ] ಕಾಲಪಲ್ಲಟ

5. ಭೂತಕಾಲದ ಕಾಲಸೂಚಕ ಪ್ರತ್ಯಯ ಇದು...
ಎ] ಉತ್ತ ಬಿ] ದ
ಸಿ] ಆನೆ ಡಿ] ವ

6. ಭವಿಷ್ಯತ್ ಕಾಲದ ಕಾಲಸೂಚಕ ಪ್ರತ್ಯಯ ಇದು...
ಎ] ಉತ್ತ ಬಿ] ದ
ಸಿ] ವ ಡಿ] ಉತ

7.ಧಾತುಗಳಿಗೆ"ಉತ್ತ', 'ದ', ' 'ವ'' ಎಂಬ ಪ್ರತ್ಯಯ ಸೇರಿದಾಗ ಇವುಗಳು ಉಂಟಾಗುತ್ತವೆ
ಎ] ಕೃದಂತಗಳು ಬಿ] ತದ್ದಿತಾಂತಗಳು
ಸಿ] ಕಾಲಸೂಚಕಗಳು ಡಿ] ವಿಭಕ್ತಿಗಳು

8. ಒಂದು ಕಾಲದ ಕಿ್ರಯೆಯನ್ನು ಇನ್ನೊಂದು ಕಾಲದ ಕಿ್ರಯಾರೂಪದಿಂದ ಹೇಳುವುದೇ
ಎ] ಕಾಲಪಲ್ಲಟ ಬಿ] ವಿಭಕ್ತಿಪಲ್ಲಟ
ಸಿ] ವಾಕ್ಯಪಲ್ಲಟ ಡಿ] ಪದಪಲ್ಲಟ

9. ''ಮಹಾಭಾರತ ಕಾವ್ಯವನ್ನು ನಾನು ಓದುತ್ತೇನೆ''.- ವಾಕ್ಯವು ಈ ಕಾಲದಲ್ಲಿದೆ
ಎ] ಭೂತ ಬಿ] ವರ್ತಮಾನ
ಸಿ] ಭವಿಷತ್ ಡಿ] ರಾಹು

ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:

1. ವರ್ತಮಾನಕಾಲದ ಕಾಲಸೂಚಕ : ಉತ್ತ :: ಭವಿಷತ್‌ಕಾಲದ ಕಾಲಸೂಚಕ:_____
2. ವಿಲಾಯಿತಿ : ವಿದೇಶ :: ಮರ್ತ್ಯತ್ವ :_____
3. ವರ್ತಮಾನ ಕಾಲ ಉತ್ತಮ ಪುರುಷ :ತಿನ್ನುತ್ತೇನೆ :: ಭವಿಷತ್ ಕಾಲ ಉತ್ತಮ ಪುರುಷ :_____
4. ಭೂತಕಾಲ ಮಧ್ಯಮ ಪುರುಷ :ತಿಂದೆ :: ಭೂತಕಾಲ ಪ್ರಥಮ ಪುರುಷ :_____
5. ಕಾರಕೂನ : ಗುಮಾಸ್ತ :: ಟೈಪಿಸ್ಟ :_____

## ಗದ್ಯ ಪಾಠ-4 ಭಾಗ್ಯಶಿಲ್ಪಿಗಳು

**1**. ಹರ್ಷ,ಆಶ್ಚರ್ಯ,ಸಂತೋಷ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಲೇಖನಚಿಹ್ನೆ ಬಳಸಲಾಗುವುದು.

ಎ] ಅಲ್ಪವಿರಾಮ ಬಿ] ಉದ್ಧರಣ

ಸಿ] ಭಾವಸೂಚಕ ಡಿ] ಅರ್ಧವಿರಾಮ

**2**. ಅಯ್ಯೋ ಹೀಗಾಗಬಾರದಿತ್ತು. ಈ ವಾಕ್ಯದಲ್ಲಿ ಬರಬೇಕಾದ ಲೇಖನ ಚಿಹ್ನೆ:

ಎ] ಪೂರ್ಣವಿರಾಮ ಬಿ] ಭಾವಸೂಚಕ

ಸಿ] ಪ್ರಶ್ನಾರ್ಥಕ ಡಿ] ಆವರಣ

**3**. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ಇದಾಗಿದೆ:

ಎ] ವಾಕ್ಯವೇಷ್ಟನ ಬಿ] ಅಲ್ಪವಿರಾಮ

ಸಿ] ಉದ್ಧರಣ ಡಿ] ಭಾವಸೂಚಕ

**4**. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯ

ಎ] ಆಧ್ಯಾಹಾರವಾಕ್ಯ ಬಿ] ಮಿಶ್ರವಾಕ್ಯ

ಸಿ] ಸಾಮಾನ್ಯವಾಕ್ಯ ಡಿ] ಸಂಯೋಜಿತವಾಕ್ಯ

**5**. . ಪಾರಿಭಾಷಿಕ ಪದಗಳನ್ನು ಬಳಸುವಾಗ ಈ ಲೇಖನ ಚಿಹ್ನೆ ಬಳಸುವರು:

ಎ] ವಾಕ್ಯವೇಷ್ಟನ ಬಿ] ಅಲ್ಪವಿರಾಮ

ಸಿ] ಉದ್ಧರಣ ಡಿ] ಭಾವಸೂಚಕ

**6**. ಪಾರಿಭಾಷಿಕ ಪದಗಳನ್ನು ಬಳಸುವಾಗ ಈ ಲೇಖನ ಚಿಹ್ನೆ ಬಳಸುವರು:

ಎ] ವಾಕ್ಯವೇಷ್ಟನ ಬಿ] ಅಲ್ಪವಿರಾಮ

ಸಿ] ಉದ್ಧರಣ ಡಿ] ಭಾವಸೂಚಕ

**7**. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣ ಅಭಿಪ್ರಾಯದ ವಾಕ್ಯವಾಗಿದ್ದರೆ ಹೀಗೆನ್ನುತ್ತಾರೆ.

ಎ] ಆಧ್ಯಾಹಾರವಾಕ್ಯ ಬಿ] ಮಿಶ್ರವಾಕ್ಯ

ಸಿ] ಸಾಮಾನ್ಯವಾಕ್ಯ ಡಿ] ಸಂಯೋಜಿತವಾಕ್ಯ

**8**. ಭೀಮನು ದುಷ್ಟನಾದ ಬಕನನ್ನು ಕೊಂದನು.ಈ ವಾಕ್ಯದಲ್ಲಿರುವ ಕರ್ಮಪದ

ಎ] ಭೀಮನು ಬಿ] ದುಷ್ಟನಾದ

ಸಿ] ಬಕನನ್ನು ಡಿ] ಕೊಂದನು

**9**. ನಿಮ್ಮ ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದ ಶೀರ್ಷಿಕೆಯ ಹೆಸರೇನು, ಈ ವಾಕ್ಯದಲ್ಲಿ ಬರಬೇಕಾದ ಲೇಖನ ಚಿಹ್ನೆ ಇದು.

ಎ] ಪೂರ್ಣವಿರಾಮ ಬಿ] ಭಾವಸೂಚಕ

ಸಿ] ಪ್ರಶ್ನಾರ್ಥಕ ಡಿ] ಆವರಣ

**10**) ಕರ್ತೃ, ಕರ್ಮ ಮತ್ತು ಕ್ರಿಯಾಪದಗಳಿಂದ ಕೂಡಿರುವ ಪದ ಸಮೂಹವನ್ನು ಹೀಗೆನ್ನುವರು

ಎ] ವಾಕ್ಯ ಬಿ] ಪದ

ಸಿ] ವಿಧ್ಯರ್ಥಕ ಡಿ] ಆವರಣ

**11**).ಒಂದು ಪದವನ್ನೋ, ವಾಕ್ಯವನ್ನು ಹೇಳಿ ಅದಕ್ಕೆ ಸಮಾನಾರ್ಥಕ ಪದನನ್ನೋ, ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಎ) ಭಾವಸೂಚಕ ಬಿ) ಆವರಣ ಚಿಹ್ನೆ

ಸಿ) ವಿವರಣಾತ್ಮಕ ಚಿಹ್ನೆ ಡಿ) ಉದ್ಧರಣ ಚಿಹ್ನೆ

**12**) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಎ) ಭಾವಸೂಚಕ ಬಿ) ಆವರಣ ಚಿಹ್ನೆ

ಸಿ) ವಿವರಣಾತ್ಮಕ ಚಿಹ್ನೆ ಡಿ) ಉದ್ಧರಣ ಚಿಹ್ನೆ

**13**)ಮಹಾಶಕ್ತನಾದ ದೇವರು ಸಮಸ್ತಲೋಕಗಳನ್ನು ಪ್ರೀತಿಯಿಂದ ಕಾಪಾಡುವನು. ಈ ವಾಕ್ಯದಲ್ಲಿರುವ ಕರ್ತೃಪದ

ಎ) ದೇವರು ಬಿ)ಸಮಸ್ತಲೋಕ

ಸಿ) ಕಾಪಾಡುವನು ಡಿ) ಮಹಾಶಕ್ತ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಸೋಪು : ಇಂಗ್ಲೀಷ್ ಪದ :: ಕಾರ್ಖಾನೆ :_______
2. ದೂಷಣೆ : ನಿಂದನೆ :: ಗೊಮ್ಮಟ ವ್ಯಕ್ತಿತ್ವ :_______
3. ಡಿಪ್ಲೋಮಾ : ಇಂಗ್ಲಿಷ್ :: ಅಜಮಾಯಿಷಿ :_____
4. ಕಾರ್ಯ : ಕಜ್ಜ :: ವಂಶ :_______________
5. ಹಂಬಲ : ಬಯಕೆ :: ಸ್ಥೈರ್ಯ :_______
6. ದಿವಾನ : ಪರ್ಷಿಯನ್ ಪದ :: ರೀಜೆಂಟ್:_____

## ಗದ್ಯ ಪಾಠ–5 ಎದೆಗೆ ಬಿದ್ದ ಅಕ್ಷರ

**1**. 'ಮೆಲ್ವಾತು' ಎಂಬುವುದು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ] ಕರ್ಮಧಾರೆಯ ಬಿ] ತತ್ಪುರುಷ

ಸಿ] ಗಮಕ ಡಿ] ಅಂಶಿ

**2**. 'ಸಪ್ತಸ್ವರಗಳು' ಎಂಬುವುದು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ] ಕ್ರಿಯಾ ಬಿ] ಬಹುವ್ರೀಹಿ

ಸಿ] ದ್ವಿಗು ಡಿ] ತತ್ಪುರುಷ

**3**. 'ಅಂಶಿ' ಸಮಾಸಕ್ಕೆ ಉದಾಹರಣೆಯಾದ ಪದವಿದು

ಎ] ಧನಹರಣ ಬಿ] ಕಡೆಗಣ್ಣು

ಸಿ] ಕಂಗೆಡು ಡಿ] ತಲೆನೋವು

**4**. 'ಕೆರೆಕಟ್ಟೆಬಾವಿಗಳು' ಪದವು ಈ ಸಮಾಸವಾಗಿದೆ

ಎ] ಬಹುವ್ರೀಹಿ ಬಿ] ದ್ವಂದ್ವ

ಸಿ] ಕ್ರಿಯಾ ಡಿ] ತತ್ಪುರುಷ

**5**. 'ಹಿಂದಲೆ ಎಂಬುವುದು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ] ಅಂಶಿ ಬಿ] ದ್ವಂದ್ವ

ಸಿ] ಗಮಕ ಡಿ] ಕರ್ಮಧಾರಯ

**6**. ' ಗಮಕ ಸಮಾಸಕ್ಕೆ ಉದಾಹರಣೆಯಿದು

ಎ] ಹೆಮ್ಮರ ಬಿ] ಮೈದೋರು

ಸಿ] ಕಾಲುಬಳೆ ಡಿ] ಆ ಕಲ್ಲು

**7**. 'ತತ್ಪುರುಷ ಸಮಾಸ''ಕ್ಕೆ ಉದಾಹರಣೆಯಾದ ಪದವಿದು

ಎ] ಮುಕ್ಕಣ್ಣು ಬಿ] ಕೆಂದಾವರೆ

ಸಿ] ಬೆಟ್ಟದಾವರೆ ಡಿ] ಇಮ್ಮಾವು

**8**. 'ಮೈಮುಚ್ಚು' ಎಂಬುವುದು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ] ಕ್ರಿಯಾ ಬಿ] ಅಂಶಿ

ಸಿ] ಗಮಕ ಡಿ] ಬಹುವ್ರೀಹಿ

**9**. 'ಮುರಾರಿ' ಪದವು ಈ ಸಮಾಸವಾಗಿದೆ

ಎ] ಕರ್ಮಧಾರಯ ಬಿ] ಬಹುವ್ರೀಹಿ
ಸಿ] ದ್ವಿಗು ಡಿ] ತತ್ಪುರುಷ

10. 'ನೇಯ್ದವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
ಎ] ಕ್ರಿಯಾ ಬಿ] ಅಂಶಿ
ಸಿ] ಗಮಕ ಡಿ] ಬಹುವ್ರೀಹಿ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಧರ್ಮ : ದಮ್ಮ : : ಪುಣ್ಯ :________
2. ಬೆಟ್ಟದಾವರೆ : ತತ್ಪುರುಷ :: ಕಣ್ದೆರೆ :_______
3 ಈ ಬೆಕ್ಕು: ಗಮಕ :: ಕರಿತುರಗರಥ :_________
4. ಹೊಸಗನ್ನಡ : ಕರ್ಮಧಾರೆಯ : : ಚಕ್ರಪಾಣಿ :______
5. ಸಾಕ್ಷಿಮಾಡಿ : ಕ್ರಿಯಾ : : ಗಿರಿವನದುರ್ಗ :________
6. ಅಂದಾಜಿಸು : ಊಹೆ ಮಾಡು : : ಕ್ಷೋಭೆ :_______

## ಗದ್ಯ ಪಾಠ–6: ವ್ಯಾಘ್ರಗೀತೆ

1. ತದ್ಧಿತಾಂತಗಳು ರಚನೆಯಾಗುವುದು ಹೀಗೆ :
ಎ] ಪ್ರಕೃತಿ + ವಿಭಕ್ತಿ ಪ್ರತ್ಯಯ
ಬಿ] ನಾಮಪದ + ತದ್ಧಿತ ಪ್ರತ್ಯಯ
ಸಿ] ನಾಮಪದ + ಕೃತ್ ಪ್ರತ್ಯಯ
ಡಿ] ಧಾತು + ತದ್ಧಿತ ಪ್ರತ್ಯಯ

2. ' 'ಪೆರ್ಮೆ'' ಪದವು ಈ ತದ್ಧಿತಾಂತ ರೂಪಕ್ಕೆ ಸೇರಿದೆ :
ಎ] ತದ್ಧಿತಾಂತ ಭಾವನಾಮ ಬಿ] ತದ್ಧಿತಾಂತ ಅವ್ಯಯ
ಸಿ] ತದ್ಧಿತಾಂತ ನಾಮ ಡಿ] ಕೃದಂತ ಭಾವನಾಮ

3. ತದ್ಧಿತಾಂತ ನಾಮಕ್ಕೆ ಉದಾಹರಣೆ ಇದು:
ಎ] ಕಪ್ಪು ಬಿ] ಸಿರಿವಂತ
ಸಿ] ಚಂದ್ರನಂತೆ ಡಿ] ಚೆಲುವಿಕೆ

4.'ಕಪ್ಪು ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
ಎ] ಕೃದಂತ ನಾಮ ಬಿ] ತದ್ಧಿತಾಂತಾವ್ಯಯ
ಸಿ] ತದ್ಧಿತಾಂತ ಭಾವನಾಮ ಡಿ] ತದ್ಧಿತಾಂತ ನಾಮ

5. ನಾಮಪದಗಳ ಮುಂದೆ ಅಂತೆ , ವೊಲ್, ವೋಲು, ತನಕ,ವರೆಗೆ ,ಇಂತ,ಆಗಿ,ಓಸುಗ , ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ತದ್ಧಿತಾಂತ :
ಎ] ಕೃದಂತ ಭಾವನಾಮ ಬಿ] ತದ್ಧಿತಾಂತ ಅವ್ಯಯ
ಸಿ] ತದ್ಧಿತಾಂತ ನಾಮ ಡಿ] ತದ್ಧಿತಾಂತ ಭಾವನಾಮ

6. ತದ್ಧಿತಾಂತ ನಾಮಕ್ಕೆ ಉದಾಹರಣೆ ಇದು:
ಎ] ಮದುವೆಗೋಸುಗ ಬಿ] ಚೆಲುವಿಕೆ
ಸಿ] ಚಂದ್ರನಂತೆ ಡಿ] ಗುಣವಂತ

7. ' ಕನ್ನಡತಿ ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
ಎ] ಕೃದಂತ ನಾಮ ಬಿ] ತದ್ಧಿತಾಂತ ಭಾವನಾಮ
ಸಿ] ತದ್ಧಿತಾಂತಾವ್ಯಯ ಡಿ] ತದ್ಧಿತಾಂತ ನಾಮ

8. ನಾಮಪದಗಳ ಮುಂದೆ ತನ ,ಇಕೆ ,ಪು ,ಮೇ ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ತದ್ಧಿತಾಂತ :
ಎ] ಕೃದಂತ ಭಾವನಾಮ ಬಿ] ತದ್ಧಿತಾಂತ ಅವ್ಯಯ
ಸಿ] ತದ್ಧಿತಾಂತ ನಾಮ ಡಿ) ತದ್ಧಿತಾಂತ ಭಾವನಾಮ

9. ತದ್ಧಿತಾಂತಾವ್ಯಯಕ್ಕೆ ಉದಾಹರಣೆ ಇದು:
ಎ] ಕೋಲುಕಾರ ಬಿ] ಬಳೆಗಾರ
ಸಿ] ಚಂದ್ರನಂತೆ ಡಿ] ಚೆಲುವಿಕೆ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಬಳೆಗಾರ : ಬಳೆಗಾರ್ತಿ : : ಸಿರಿವಂತ : ________
2. ಧಾತು+ಕೃತ್ ಪ್ರತ್ಯಯ : ಕೃದಂತ : : ನಾಮಪದ+ತದ್ಧಿತ ಪ್ರತ್ಯಯ : ______
3. ಕೋಲನ್ನು ಹಿಡಿಯುವವ : ಕೋಲುಕಾರ :: ಕುಂಬವನ್ನು ಮಾಡುವವನು : _____
4. ಚಲುವಿನ ಭಾವ : ಚೆಲುವಿಕೆ :: ಜಾಣನ ಭಾವ : ___
5. ಶಾಲೆಯತನಕ : ತದ್ಧಿತಾಂತಾವ್ಯಯ :: ಚೆಲುವಿಕೆ : ___
6. ನನಗೋಸ್ಕರ : ಓಸ್ಕರ :: ಬಳೆಗಾರ : ___________

## ಗದ್ಯ ಪಾಠ–7ವೃಕ್ಷಸಾಕ್ಷಿ

1.' ಬಹುವ್ರೀಹಿ''ಸಮಾಸಕ್ಕೆ ಉದಾಹರಣೆಯಾದ ಪದವಿದು.
ಎ] ಸ್ವಾಮಿದ್ರೋಹ ಬಿ] ಕಟ್ಟೇಕಾಂತ
ಸಿ] ಅಬ್ಜೋದರ ಡಿ] ಅತಿಕುಟಿಲ

2. ' ಬಂದಲ್ಲದೆ''ಪದವು ಈ ಸಂಧಿಯಾಗಿದೆ.
ಎ] ಸವರ್ಣದೀರ್ಘ ಬಿ] ಲೋಪ
ಸಿ] ಆಗಮ ಡಿ] ಆದೇಶ

3. 'ಲೋಪಸಂಧಿ''ಗೆ ಉದಾಹರಣೆಯಾದ ಪದವಿದು.
ಎ] ಪೋಗಲ್‌ವೇಟ್ಟುಂ ಬಿ] ಯಕ್ಷಾದಿ
ಸಿ] ಧೃತಿಗೆಟ್ಟು ಡಿ) ಪೂಟ್ಕಿಡೆ

4. ' ತತ್ಪುರುಷ''ಸಮಾಸಕ್ಕೆ ಉದಾಹರಣೆ ಇದಾಗಿದೆ
ಎ] ಸ್ವಾಮಿದ್ರೋಹ ಬಿ] ಕಟ್ಟೇಕಾಂತ
ಸಿ] ಅಬ್ಜೋದರ ಡಿ] ಅತಿಕುಟಿಲ

5. ' ಕಂದ''ಪದ್ಯದಲ್ಲಿ ಬರುವ ಒಟ್ಟು ಮಾತ್ರೆಗಳು
ಎ] 12 ಬಿ] 20
ಸಿ] 32 ಡಿ] 64

6. ' ಧೃತಿಗೆಟ್ಟು''ಪದವು ಈ ಸಂಧಿಯಾಗಿದೆ.
ಎ] ಲೋಪ ಬಿ] ಆಗಮ
ಸಿ] ಆದೇಶ ಡಿ] ಗುಣ

7. ' ಕೆಲದೊಳ್''ಪದದಲ್ಲಿರುವ ವಿಭಕ್ತಿ
ಎ] ಪ್ರಥಮ ಬಿ] ತೃತೀಯ
ಸಿ] ಸಪ್ತಮೀ ಡಿ) ಪಂಚಮೀ

8. ' ದೈವಭಕ್ತಿ''ಪದವು ಈ ಸಮಾಸವಾಗಿದೆ
ಎ] ತತ್ಪುರುಷ ಬಿ] ಕರ್ಮಧಾರಯ
ಸಿ] ದ್ವಂದ್ವ ಡಿ] ಗಮಕ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1.ಬೀಯ : ವ್ಯಯ :: ಸಂದೆಯ :________
2. ಕೂರ್ಮೆ : ಸ್ನೇಹ :: ಚೋದ್ಯ :________
3. ಕಬ್ಬ : ಕಾವ್ಯ :: ಬೇಹಾರಿ :________
4. ಬಳಾರಿ : ಮಾರಿ :: ಬವರ :_______
5. ವ್ಯಯ : ಬೀಯ :: ಕೋಕಿಲಾ :_______
6. ಅನೃತ : ಸುಳ್ಳು / ಅಸತ್ಯ :: ಕೃತ್ರಿಮ :_________

7. ನ,ಜ,ಭ,ಜ,ಜ,ಜ,ರ : ಚಂಪಕ ಮಾಲಾ ವೃತ್ತ ::
ಭ,ರ,ನ,ಭ,ಭ,ರ+ಲ+ಗು :____________

8. ನ,ಜ,ಭ,ಜ,ಜ,ಜ,ರ : ಚಂಪಕ ಮಾಲಾ ವೃತ್ತ ::
ಮ.ಸ.ಜ,ಸ,ತ,ತ,ಗ :__________

9.ಪೋಗಲ್ವೇಳ್ಕುಂ :ಆದೇಶಸಂಧಿ:: ತಕ್ಕನಿತು: ______

10.ಪೋಗಲ್ವೇಳ್ಕುಂ :ಆದೇಶಸಂಧಿ:: ಪೊಳ್ದಡೆ : _______

11. ಅತಿಕುಟಿಲ,ಕರ್ಮಧಾರಯ ಸಮಾಸ:ಕಟ್ಟೆಕಾಂತ: ____

12. ಧನ ಹರಣ: ತತ್ಪುರುಷ ಸಮಾಸ :: ಕೈಕೊಳ್ಳುವುದು: __

13.ಪರಧನ: ತತ್ಪುರುಷಸಮಾಸ :: ಸಾಕ್ಷಿಮಾಡಿ: ______

## ಗದ್ಯ ಪಾಠ-8 ಸುಕುಮಾರಸ್ವಾಮಿಯ ಕಥೆ

1. 'ಕನ್ನಡಿಗ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:
ಎ] ಕೃದಂತಭಾವನಾಮ ಬಿ] ತದ್ಧಿತಾಂತನಾಮ
ಸಿ] ಕೃದಂತಾವ್ಯಯ ಡಿ] ಕೃದಂತ

2. 'ಚೋದ್ಯಂಬಟ್ಟು' ಎಂಬುವುದು ಈ ಸಂಧಿಯಾಗಿದೆ:
ಎ] ಆಗಮ ಬಿ] ಜಶ್ತ್ವ
ಸಿ] ಶ್ಚುತ್ವ ಡಿ] ಆದೇಶ

3. 'ವಿಜ್ಞಾನಿ' ಎಂಬುದು ಈ ನಾಮಪದಕ್ಕೆ ಉದಾಹರಣೆಯಾಗಿದೆ.
ಎ] ಸರ್ವನಾಮ ಬಿ] ಅನ್ವರ್ಥಕನಾಮ
ಸಿ] ರೂಢನಾಮ ಡಿ] ಅಂಕಿತ

4. ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದವಿದು
ಎ] ತೊಡುಗೆ ಬಿ] ಬರೆಯುವ
ಸಿ] ಮಾಡಲಿಕ್ಕೆ ಡಿ] ಕನ್ನಡಿಗ

5. "ನೋಟ'' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
ಎ] ಸರ್ವನಾಮ ಬಿ] ಅನ್ವರ್ಥಕನಾಮ
ಸಿ] ರೂಢನಾಮ ಡಿ] ಅಂಕಿತ

6. 'ಹಲವು' ಎಂಬುದು ಈ ವ್ಯಾಕರಣಾಂಶವಾಗಿದೆ:
ಎ] ಪರಿಮಾಣವಾಚಕ ಬಿ] ಸಂಖ್ಯಾವಾಚಕ
ಸಿ] ಸಂಖ್ಯೇಯವಾಚಕ ಡಿ] ದಿಗ್ವಾಚಕ

7. ವರ್ತಮಾನ ಕೃದಂತನಮಕ್ಕೆ ಈ ಪದವು ಉದಾಹರಣೆಯಾಗಿದೆ.
ಎ] ಬರೆಯುವ ಬಿ] ಬರೆದ
ಸಿ] ಬರೆಯದ ಡಿ] ಬರೆಹ

8. 'ನೋಟ' ಎಂಬುದು ಈ ವ್ಯಾಕರಣಾಂಶವಾಗಿದೆ.
ಎ] ಕೃದಂತನಾಮ ಬಿ] ಕೃದಂತ ಭಾವನಾಮ
ಸಿ] ಕರದಂತವ್ಯಯಡಿ] ತದ್ಧಿತಾಂತ

9. ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ.
ಎ] ತೊಡುಗೆ ಬಿ] ತಿನ್ನುವಿಕೆ
ಸಿ] ನಡೆಯುವ ಡಿ] ಮಾಡಲಿಕ್ಕೆ

10. ಲೋಕದೊಳ್ ಎಂಬುದು ಈ ವಿಭಕ್ತಿಯಿದೆ.
ಎ] ಪ್ರಥಮಾ ಬಿ] ತೃತೀಯ
ಸಿ] ಪಂಚಮೀ ಡಿ] ಸಪ್ತಮಿ

11. 'ಮಾಡಲಿಕ್ಕೆ' ಪದವು ಇದಕ್ಕೆ ಉದಾಹರಣೆಯಾಗಿದೆ.
ಎ] ಕೃದಂತಾವ್ಯಯ ಬಿ] ಕೃದಂತ ಭಾವನಾಮ
ಸಿ] ನಿಷೇಧ ಕೃದಂತ ಡಿ] ಕೃದಂತನಾಮ

12. 'ಓಡದ' ಪದವು ಇದಕ್ಕೆ ಉದಾಹರಣೆಯಾಗಿದೆ.
ಎ] ಕೃದಂತಾವ್ಯಯ ಬಿ] ಕೃದಂತ ಭಾವನಾಮ
ಸಿ] ನಿಷೇಧ ಕೃದಂತ ಡಿ] ಕೃದಂತನಾಮ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಕಸವರ : ಚಿನ್ನ : : ನೈಮಿತ್ತಿಕಂ : ______
2. ನಾನು : ಪುರುಷಾರ್ಥಕ ಸರ್ವನಾಮ : : ಯಾರು? : _
3. ಯಾವುದು : ಪ್ರಶ್ನಾರ್ಥಕ : : ತನ್ನ : _______
4. ಮಾಡಿದ : ಕೃದಂತನಾಮ : : ನೆನಪು : __________
5. ಪರ್ವತ : ರೂಢನಾಮ : : ಕಮಲಾಕ್ಷ : ___________
6. ಹೋಗಲಿಕ್ಕೆ : ಕೃದಂತಾವ್ಯಯ : : ಬರೆಯದ : _____
7. ಈಶಾನ್ಯ: ದಿಗ್ವಾಚಕ :: ಹಲವು: ____________
8.ಸಹದೇವ: ಅಂಕಿತನಾಮ :: ದೊಡ್ಡದು : _____
9. ನಾಮಪದಗಳ ಮುಂದೆ ಅಂತೆ, ತನಕ: ತದ್ಧತಾಂತ ಅವ್ಯಯ :: ಧಾತುಗಳ ಮುಂದೆ ಉತ್ತ, ಅಲಿಕ್ಕೆ : ________

## ಪದ್ಯ ಪಾಠ :1ಸಂಕಲ್ಪಗೀತೆ

1. "ಅಂ'' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
ಎ] ದ್ವಿತೀಯಾ ಬಿ] ಚತುರ್ಥೀ
ಸಿ] ಪ್ರಥಮ ಡಿ] ಪಂಚಮೀ

2. ನಾಮಪದದ ಮೂಲ ರೂಪವೇ..
ಎ] ನಾಮಪ್ರಕೃತಿ ಬಿ] ಕೃದಂತ
ಸಿ] ಧಾತು ಡಿ] ತದ್ಧಿತ

3. 'ಮಾಡು' ಧಾತುವಿನ ವಿದ್ಯರ್ಥಕ ರೂಪವಿದು:
ಎ] ಮಾಡನು ಬಿ] ಮಾಡಿಯಾನು
ಸಿ] ಮಾಡಲಿ ಡಿ] ಮಾಡು

4. 'ಅತ್ತಣಿಂ' ಎಂಬುದು ಈ ವಿಭಕ್ತಿಯ ಪ್ರತ್ಯಯವಾಗಿದೆ :
ಎ] ದ್ವಿತೀಯಾ ಬಿ] ಚತುರ್ಥೀ
ಸಿ] ಪ್ರಥಮ ಡಿ] ಪಂಚಮೀ

5. ಕ್ರಿಯಾಪದದ ಮೂಲ ರೂಪವೇ:
ಎ] ನಾಮಪ್ರಕೃತಿ ಬಿ] ಕೃದಂತ
ಸಿ] ಧಾತು ಡಿ] ತದ್ಧಿತ

6. 'ಮಾಡು' ಧಾತುವಿನ ಸಂಭಾವನಾರ್ಥಕ ರೂಪವಿದು:
ಎ] ಮಾಡಲಿ ಬಿ] ಮಾಡಿಯಾನು
ಸಿ] ಮಾಡನು ಡಿ] ಮಾಡು

7. 'ಮ್' ಎಂಬುದು ಈ ವಿಭಕ್ತಿಯ ಪ್ರತ್ಯಯ :
ಎ] ದ್ವಿತೀಯಾ ಬಿ] ಚತುರ್ಥೀ
ಸಿ] ಪ್ರಥಮ ಡಿ] ಪಂಚಮೀ

8. 'ಮಾಡು' ಧಾತುವಿನ ನಿಷೇದಾರ್ಥಕ ರೂಪವಿದು:
ಎ] ಮಾಡನು ಬಿ] ಮಾಡಿಯಾನು
ಸಿ] ಮಾಡಲಿ ಡಿ] ಮಾಡು

9. ಇವುಗಳಲ್ಲಿ ಸಕರ್ಮಕ ಧಾತು
ಎ] ಮಲಗು ಬಿ] ಓಡು
ಸಿ] ಬದುಕು ಡಿ] ಕೊಡು

10. ಇವುಗಳಲ್ಲಿ ಅಕರ್ಮಕ ಧಾತು
ಎ] ಮಲಗು ಬಿ] ಉಜ್ಜು
ಸಿ] ಉಣ್ಣು ಡಿ] ಕೊಡು

11. 'ಕೌರವನಿಂದ ಕೇಡಾಯ್ತು' ಈ ವಾಕ್ಯದಲ್ಲಿರುವ ವಿಭಕ್ತಿ ಪ್ರತ್ಯಯ

ಎ] ಪ್ರಥಮ ಬಿ] ದ್ವಿತೀಯ
ಸಿ] ತೃತೀಯ ಡಿ] ಚತುರ್ಥಿ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಕ್ರಿಯಾಪದ ರೂಪಗಳು : 03 : : ಕಾರಕಾರ್ಥಗಳು : _
2.. ನಿಲ್ಲಿಸು: ನಿಲ್ಲು:: ಮುಟ್ಟೋಣ: ___________
3. ಕರ್ತರಿ ಪ್ರಯೋಗ : : ಭೀಮನು ಅನ್ನವನ್ನು ಉಂಡನು : : ಕರ್ಮಣಿ ಪ್ರಯೋಗದಲ್ಲಿ : _________
4. ಅಧಿಕರಣ : : ಒಳ್ : : ಅಪಾದಾನ : _________
5 ಸಾವಿತ್ರಿಯಿಂದ : ತೃತಿಯಾ : : ಸಾವಿತ್ರಿಯೊಳ್ : __
6. ಕತ್ರಾರ್ಥ : ಮ್ : : ಸಂಪ್ರಧಾನ : __________
7.ಭರವಸೆಗಳ: ಪ್ರಥಮ ವಿಭಕ್ತಿ:: ಜಲಕ್ಕೆ: __________
8. ಪ್ರಥಮಾ ವಿಭಕ್ತಿ: ಕತ್ರಾರ್ಥ :: ಪಂಚಮೀ : _____

## ಪದ್ಯ ಪಾಠ-2: ಹಕ್ಕಿ ಹಾರುತಿದೆ ನೋಡಿದಿರಾ

1. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯ :
ಎ] ಕ್ರಿಯಾರ್ಥಕ ಬಿ] ಅವಧಾರಣಾರ್ಥಕ ಸಿ] ಅನುಕರಣಾವ್ಯಯ ಡಿ] ಸಾಮಾನ್ಯಾವ್ಯಯ
2. 'ಧಗಧಗ' ಪದವು ಈ ವ್ಯಾಕರಣಾಂಶವಾಗಿದೆ :
ಎ] ಭಾವಸೂಚಕಾವ್ಯಯ ಬಿ] ಅನುಕರಣಾವ್ಯಯ ಸಿ] ಕೃದಂತಾವ್ಯಯ ಡಿ] ಸಾಮಾನ್ಯ
3. 'ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ಮುಂತಾದ ಭಾವಗಳನ್ನು ವ್ಯಕ್ತಪಡಿಸಲು ಬಳಸುವ ಅವ್ಯಯ:
ಎ] ಭಾವಸೂಚಕಾವ್ಯಯ ಬಿ] ಕೃದಂತಾವ್ಯಯ
ಸಿ] ಅನುಕರಣಾವ್ಯಯ ಡಿ] ಸಾಮಾನ್ಯ
4. 'ತಟ್ಟನೆ''ಪದದ ಅವ್ಯಯವಿದು :
ಎ] ಭಾವಸೂಚಕಾವ್ಯಯ ಬಿ] ಸಾಮಾನ್ಯಾವ್ಯಯ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕ
5. ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯ :
ಎ] ಭಾವಸೂಚಕಾವ್ಯಯ ಬಿ] ಕ್ರಿಯಾರ್ಥಕಾವ್ಯಯ
ಸಿ] ಅವಧಾರಣಾರ್ಥಕ ಡಿ) ಸಂಬಂಧ
6. 'ಆದ್ದರಿಂದ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ :
ಎ] ಸಂಬಂಧಾರ್ಥಕಾವ್ಯಯಬಿ] ಸಾಮಾನ್ಯಾರ್ಥಕಾವ್ಯಯ
ಸಿ] ಕ್ರಿಯಾರ್ಥಕ ಡಿ] ಸಾಮಾನ್ಯ
7. ಎರಡು ಪದಗಳನ್ನಾಗಲೀ ಅಥವಾ ವಾಕ್ಯಗಳನ್ನಾಗಲೀ ಸಂಬಂಧಗೊಳಿಸುವಂತಹ ಪದ
ಎ] ಸಾಮಾನ್ಯಾರ್ಥಕಾವ್ಯಯ ಬಿ] ಕ್ರಿಯಾರ್ಥಕಾವ್ಯಯ
ಸಿ] ಸಂಬಂಧಾರ್ಥಕಾವ್ಯಯ ಡಿ] ಸಾಮಾನ್ಯ
8.'ಅವನೇ''ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ :
ಎ] ಭಾವಸೂಚಕಾವ್ಯಯ ಬಿ] ಅವಧಾರಣಾರ್ಥಕ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕ
9. ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಹೀಗೆಂದು ಕರೆಯುತ್ತೇವೆ.
ಎ] ಭಾವಸೂಚಕಾವ್ಯಯ ಬಿ] ಅವಧಾರಣಾರ್ಥಕವ್ಯಯ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕ
10. ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ಹೀಗೆನ್ನುವರು
ಎ] ಭಾವಸೂಚಕಾವ್ಯಯ ಬಿ] ಅವಧಾರಣಾರ್ಥಕ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕ
11) ಮನಸ್ಸಿನಲ್ಲಿ ಉಂಟಾಗುವ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ ಅಂತಹ ಪದಗಳನ್ನು ಹೀಗೆಂದು ಕರೆಯುತ್ತೇವೆ.
ಎ] ಭಾವಸೂಚಕಾವ್ಯಯ ಬಿ] ಅವಧಾರಣಾರ್ಥಕ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕ
12) ಕ್ರಿಯಾ ಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು ಹೀಗೆನ್ನುವರು.
ಎ] ಭಾವಸೂಚಕಾವ್ಯಯ ಬಿ] ಅವಧಾರಣಾರ್ಥಕ
ಸಿ] ಅನುಕರಣಾವ್ಯಯ ಡಿ] ಕ್ರಿಯಾರ್ಥಕಾವ್ಯಯ
13) ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಹೀಗೆನ್ನುವರು.
ಎ) ಅವ್ಯಯ ಬಿ) ನಾಮಪದ
ಸಿ) ವಿಭಕ್ತಿ ಪ್ರತ್ಯಯ ಡಿ) ಅಲಂಕಾರ

## ಪದ್ಯ ಪಾಠ-3 ಹಲಗಲಿ ಬೇಡರು

1. ಉಪ್ಪು, ಹಾಲು, ಚಿಲಕ - ಎಂಬಿವುಗಳು ಈ ವ್ಯಾಕರಣಾಂಶಗಳಾಗಿವೆ
ಎ] ಧಾತುಗಳು ಬಿ] ಅಂಗಾಂಗಗಳು
ಸಿ] ಪ್ರಾಣಿಗಳು ಡಿ] ಪದಾರ್ಥಗಳು
2. ಒಂದರಿಂದ ಒಂಬೈನೂರತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳು.
ಎ] ಪರಿಮಾಣವಾಚಕ ಬಿ] ಸಂಖ್ಯಾವಾಚಗಳು
ಸಿ] ಸಂಬಂಧವಾಚಕ ಡಿ] ಸಂಖ್ಯೇಯವಾಚಕ
3. ಉಪ್ಪು, ಹಾಲು, ಚಿಲಕ- ಎಂಬಿವುಗಳು ಈ ವ್ಯಾಕರಣಾಂಶಗಳಾಗಿವೆ
ಎ] ಧಾತುಗಳು ಬಿ] ಅಂಗಾಂಗಗಳು
ಸಿ] ಪ್ರಾಣಿಗಳು ಡಿ] ಪದಾರ್ಥಗಳು
4. ಅಪ್ಪ-ಅಮ್ಮ, ಅಜ್ಜ-ಅಜ್ಜಿ, ಮಾವ-ಭಾವ,- ಈ ಪದಗಳು ವ್ಯಾಕರಣದ ಈ ಅಂಶಕ್ಕೆ ಸೇರಿವೆ
ಎ] ಸರ್ವನಾಮಗಳು ಬಿ] ಸಂಖ್ಯಾವಾಚಕಗಳು
ಸಿ] ಸಂಭಂದವಾಚಕಗಳು ಡಿ] ವಸ್ತುವಾಚಕಗಳು
5. ನಾನು-ನೀನು, ಅವನು-ಅವಳು, ಅದು-ಅವು ಇವುಗಳು ವ್ಯಾಕರಣದ ಈ ಅಂಶಕ್ಕೆ ಸೇರಿವೆ
ಎ] ಸಂಖ್ಯಾವಾಚಕ ಬಿ] ಸಂಭಂದವಾಚಕ
ಸಿ] ಸರ್ವನಾಮ ಡಿ] ನಾಮಪದ
6. ಒಂದರಿಂದ ಒಂಬೈನೂರತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳು.
ಎ] ಪರಿಮಾಣವಾಚಕ ಬಿ] ಸಂಖ್ಯಾವಾಚಗಳು
ಸಿ] ಸಂಬಂಧವಾಚಕ ಡಿ] ಸಂಖ್ಯೇಯವಾಚಕ
7. ತಿನ್ನು, ಹೋಗು,ಕೇಳು, ಬಿಡು-ವ್ಯಾಕರಣದ ಈ ಪ್ರಕಾರಕ್ಕೆ ಸೇರಿವೆ...

ಎ] ಧಾತುಗಳು ಬಿ] ಅಂಗಾಂಗಗಳು
ಸಿ] ಪ್ರಾಣಿಗಳು ಡಿ] ಪದಾರ್ಥಗಳು

8. ಸಂಬಂಧವಾಚಕ ಪದಗಳಿವು
ಎ] ಅವನು – ಅವಳು ಬಿ] ಹಾವು – ಇಲಿ
ಸಿ] ತಮ್ಮ– ತಂಗಿ ಡಿ] ಬಾಗಿಲು – ಚಿಲಕ

9. ಹತ್ತು, ಇಪ್ಪತ್ತು, ನಾಲ್ವತ್ತು ,ಐವತ್ತು, ವ್ಯಾಕರಣದ ಈ ಪ್ರಕಾರಕ್ಕೆ ಸೇರಿವೆ
ಎ] ಸಂಖ್ಯಾವಾಚಕ ಬಿ] ಸಂಬಂಧವಾಚಕ
ಸಿ] ಸರ್ವನಾಮ ಡಿ] ಅಂಗಾಂಗಗಳು

10. ಸರ್ವನಾಮಕ್ಕೆ ಉದಾಹರಣೆ ಇವು...
ಎ] ನಾನು– ನೀನು ಬಿ] ಹಾವು–ಇಲಿ
ಸಿ] ತಲೆ–ಕಾಲು ಡಿ] ಹೋಗು– ತಿನ್ನು

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ದಮ್ಮ–ಗದ್ಯಾಣ : ಗ್ರೀಕ್‌ಭಾಷೆ :: ಜಮೀನು–ದಲ್ಲಾಳಿ :–
2. ಅಸಲು–ನಕಲು : ಅರಬ್ಬೀಭಾಷೆ :: ಮೇಜು–ಇಸ್ತ್ರೀ :__3. ಬಂದೂಕು–ಶಾಮೀಲು : ಉರ್ದುಭಾಷೆ :: ದರ್ಬಾರು–ಹುಕುಂ
4. ಲೈಟು–ಪೆನ್ನು : ಇಂಗ್ಲೀಷ್‌ಭಾಷೆ::ಚೊಂಬು–ಚಾ :_____
5. ದಮ್ಮಡಿ–ದೀನಾರ : ಗ್ರೀಕ್‌ಭಾಷೆ :: ಅಬಕಾರಿ– ಆಮದು :________
6. ಅಮಾನತು–ತರಬೇತು : ಅರಬ್ಬೀಭಾಷೆ:: ತಂಬಾಕು–ಸಾಬೂನು :_____
7. ತಾರೀಕು– ತಾಲೂಕು : ಉರ್ದುಭಾಷೆ:: ಕಛೇರಿ– ಕಾಗದ :____
8. ಕಾಲೇಜು– ಕಾರು : ಇಂಗ್ಲೀಷ್ ಭಾಷೆ:: ರುಜು– ಶುರು

## ಪದ್ಯ ಪಾಠ–4 ಕೌರವೇಂದ್ರನ ಕೊಂದೆ ನೀನು

1. 'ಮಾರಿಗೌತಣವಾಯ್ತು ನಾಳಿನ ಭಾರತವು' ಎಂಬುದು ಈ ಅಲಂಕಾರಕ್ಕೆ ಉದಾಹರಣೆ
ಎ] ಉಪಮಾ ಬಿ] ರೂಪಕ
ಸಿ] ಉತ್ಪ್ರೇಕ್ಷೆ ಡಿ] ದೃಷ್ಟಾಂತ

2. ಬೇರೆ ಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ
ಎ] ಶರಭಪ್ರಾಸ ಬಿ] ಹಯಪ್ರಾಸ
ಸಿ]ವೃಷಭಪ್ರಾಸ ಡಿ] ಗಜಪ್ರಾಸ

3. "ರಾಜೀವ ಸಖ"ಪದದ ಅರ್ಥ:
ಎ] ಕಮಲ ಬಿ] ಕರ್ಣ
ಸಿ] ಸೂರ್ಯ ಡಿ] ರಾಜ

4. ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು ಹೀಗೆಂದು ಕರೆಯುತ್ತಾರೆ:
ಎ] ಮಧ್ಯಪ್ರಾಸ ಬಿ] ಶರಭಪ್ರಾಸ
ಸಿ] ಅಂತ್ಯಪ್ರಾಸ ಡಿ] ಆದಿಪ್ರಾಸ

5. ಅಂಶಗಣವಿದು:
ಎ] ನಗಣ ಬಿ] ವಿಷ್ಣುಗಣ
ಸಿ] ಜಗಣ ಡಿ] ರಗಣ

6. ಮೂರು–ನಾಲ್ಕು,ಮೂರು–ನಾಲ್ಕು ಮಾತ್ರೆಗಳು ಬರುವ ಷಟ್ಪದಿ
ಎ] ಶರ ಬಿ] ಕುಸುಮ
ಸಿ] ಭೋಗ ಡಿ] ವಾರ್ಧಕ

7. ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳ
ಎ] ಯತಿ ಬಿ] ಪ್ರಾಸ
ಸಿ] ಗಣ ಡಿ] ನಿಲುಗಡೆ

8. 'ಮೇದಿನೀಪತಿ' ಈ ಪದಕ್ಕೆ ಬರುವ ಪ್ರಸ್ತಾರ:
ಎ] U,—,—,U,U ಬಿ] —,—,U,U,U
ಸಿ] —,U,—,U,U ಡಿ] —,U,—

9. ಗುಂಪಿಗೆ ಸೇರದ ಪದವಿದು:
ಎ] ಕಂದ ಬಿ] ಷಟ್ಪದಿ
ಸಿ] ರಗಳೆ ಡಿ] ಸಾಂಗತ್ಯ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಯುದ್ಧ : ಜುದ್ಧ : : ಪ್ರಸಾದ : ______________
2. ಕಂದ : ನಾಲ್ಕುಸಾಲು : : ಷಟ್ಪದಿ :______________
3. ಗ್ಲಾನಿ : ತಲ್ಲಣ : : ಕೈವಾರ : ________
4. ಮುರಾರಿ : ಬಹುವ್ರೀಹಿ ಸಮಾಸ : : ಹೊಗೆದೋರು :_ 5. ತನುಜ : ಮಗ : : ಸಖ : ______________
6. ಪ್ರಾಸಾಕ್ಷರದ ಹಿಂದಿನ ಸ್ವರ ಹ್ರಸ್ವ :ಸಿಂಹಪ್ರಾಸ : : ಪ್ರಾಸಾಕ್ಷರದ ಹಿಂದಿನ ಸ್ವರ ದೀರ್ಘ:_______
7. ಕೈಯಾನು: ಕ್ರಿಯಾ ಸಮಾಸ: ಇನತನೂಜ: _____
8. ಧನುಜರಿಪು: ಬಹುವ್ರೀಹಿ:: ಮಾಧಮಾಗಧಯಾದವರು: __________

## ಪದ್ಯ ಪಾಠ–5 ಹಸುರು

1. ಪ್ರೌಢಪಾಂಡಿತ ಕವಿಗಳು ತಮ್ಮ ಬುದ್ಧಿಕೌಶಲದಿಂದ ವೈಚಿತ್ರವಾಗಿ ಅಕ್ಷಗಳನ್ನೂ, ಪದಗಳನ್ನೂ ಜೋಡಿಸಿ ಪದ್ಯ ರಚಿಸುತ್ತಾರೆ. ಇದಕ್ಕೆ ಹೀಗೆನ್ನುವರು.'
ಎ] ವೃತ್ತ್ಯನುಪ್ರಾಸ ಬಿ] ಚಿತ್ರಕವಿತ್ವ
ಸಿ] ಛೇಕಾನುಪ್ರಾಸ ಡಿ] ಯಮಕ

2. ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ ಒಂದು ಪದ್ಯದ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಅದು ಈ ಅಲಂಕಾರ.
ಎ] ವೃತ್ತ್ಯನುಪ್ರಾಸ ಬಿ] ಚಿತ್ರಕವಿತ್ವ
ಸಿ] ಛೇಕಾನುಪ್ರಾಸ ಡಿ] ಯಮಕ

3. "ಒಡಲಬೇಗೆಯ ಬೆಂಕಿಯುರಿ" – ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆ
ಎ] ಉಪಮಾ ಬಿ] ದೀಪಕ
ಸಿ] ಯಮಕ ಡಿ] ರೂಪಕ

4. ಪದ್ಯದ ಸಾಲುಗಳಲ್ಲಿ ಎರಡೆರಡು ವ್ಯಂಜನಗಳು ಪುನರಾವರ್ತನೆಗೊಂಡರೆ ಅದನ್ನು ಹೀಗೆನ್ನುವರು
ಎ] ವೃತ್ತ್ಯನುಪ್ರಾಸ ಬಿ] ಛೇಕಾನುಪ್ರಾಸ
ಸಿ] ಯಮಕ ಡಿ] ಚಿತ್ರಕವಿತ್ವ

5. ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅದು

ಎ] ವೃತ್ತ್ಯನುಪ್ರಾಸ ಬಿ] ಛೇಕಾನುಪ್ರಾಸ
ಸಿ] ಯಮಕ ಡಿ] ಚಿತ್ರಕವಿತ್ವ

6. "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"ವಾಕ್ಯವು ಈ ಅಲಂಕಾರವಾಗಿದೆ
ಎ] ರೂಪಕ ಬಿ] ದೀಪಕ
ಸಿ] ಯಮಕ ಡಿ] ಉಪಮಾ

7. ಇವುಗಳಲ್ಲಿ ಶಬ್ಧಲಾಂಕರ ಗುರುತಿಸಿ
ಎ] ವೃತ್ತ್ಯನುಪ್ರಾಸ ಬಿ] ಛೇಕಾನುಪ್ರಾಸ
ಸಿ] ಯಮಕ ಡಿ] ರೂಪಕ

8. ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳನ್ನೊಳಗೊಂಡ ಅಲಂಕಾರ.
ಎ] ವೃತ್ತ್ಯನುಪ್ರಾಸ ಬಿ] ಚಿತ್ರಕವಿತ್ವ
ಸಿ] ಛೇಕಾನುಪ್ರಾಸ ಡಿ] ಯಮಕ

9. "ಒಡಲಬೇಗೆಯ ಬೆಂಕಿಯುರಿ" ಈ ವಾಕ್ಯದಲ್ಲಿರುವ ಉಪಮಾನ ಪದವಿದು
ಎ] ಒಡಲು ಬಿ] ಬೇಗೆ
ಸಿ] ಬೇಗೆಯಬೆಂಕಿ ಡಿ] ಬೆಂಕಿಯುರಿ

10. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು." ಈ ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ.
ಎ) ಶ್ಲೇಷಾ ಬಿ) ಉಪಮಾ
ಸಿ) ರೂಪಕ ಡಿ) ದೃಷ್ಟಾಂತ

11. ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು
ಎ] ಉತ್ಪ್ರೇಕ್ಷೆ ಬಿ] ದೃಷ್ಟಾಂತ
ಸಿ] ತಾದ್ರೂಪ್ಯ ರೂಪಕ ಡಿ] ಶ್ಲೇಷ

12.ಮಾತು ಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ. ಎಂಬ ವಾಕ್ಯವು ಈ ಅಲಂಕಾರವಾಗಿದೆ.
ಎ] ಉತ್ಪ್ರೇಕ್ಷೆ ಬಿ] ದೃಷ್ಟಾಂತ
ಸಿ] ತಾದ್ರೂಪ್ಯ ರೂಪಕ ಡಿ] ಶ್ಲೇಷಾ

13.ಉಪಮೇಯವಾದ ವಸ್ತುವನ್ನು / ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಕಲ್ಪಿಸಿದರೆ ಅದು
ಎ] ಉತ್ಪ್ರೇಕ್ಷಾಲಂಕಾರ ಬಿ] ದೃಷ್ಟಾಂತ
ಸಿ] ತಾದ್ರೂಪ್ಯ ರೂಪಕ ಡಿ] ಶ್ಲೇಷ

14. "ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು". ಈ ವಾಕ್ಯದಲ್ಲಿರುವ ಅಲಂಕಾರ ಗುರುತಿಸಿ.
ಎ] ಉತ್ಪ್ರೇಕ್ಷಾಲಂಕಾರ ಬಿ] ದೃಷ್ಟಾಂತ
ಸಿ] ತಾದ್ರೂಪ್ಯ ರೂಪಕ ಡಿ] ಶ್ಲೇಷ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಎಲರ್ : ಗಾಳಿ : : ತಿರೆ :________
2. ಚಿತ್ರಕವಿತ್ವ : ಶಬ್ದಾಲಂಕಾರ : : ರೂಪಕ :____
3. ಉಪಮಾ : ಅರ್ಥಾಲಂಕಾರ : : ಯಮಕ :_______
4. ಅನುಪ್ರಾಸ : ಶಬ್ಧಾಲಂಕಾರ : : ಉತ್ಪ್ರೇಕ್ಷೆ :______
5. ಅಲರ್ : ಹೂವು : : ಎಲರ್ :________
6. ರೂಪಕ : ಅರ್ಥಾಲಂಕಾರ : : ಯಮಕ :__________
7. ವರ್ಣ : ಬಣ್ಣ : : ಕವಿ :__________

ಪದ್ಯ ಪಾಠ–6: ಛಲಮನೆ ಮೆಱೆವೆಂ

1. ಗುರುಲಘು ಮೂರಿರೆ :
ಎ] ಜರಗಣ ಬಿ] ಮನಗಣ
ಸಿ] ಸತಗಣ ಡಿ] ಭಯಗಣ

2. ಅಕ್ಷರಗಣಗಳ ಸಂಖ್ಯೆ :
ಎ] 03 ಬಿ] 05
ಸಿ] 07 ಡಿ] 08

3. ಗುರುಲಘು ನಡುವಿರೆ :
ಎ] ಮ–ನಗಣ ಬಿ] ಸ–ತಗಣ
ಸಿ] ಜ–ರಗಣ ಡಿ] ಭ–ಯಗಣ

4. ಅಕ್ಷರಗಣ ಎಂಬುದು :
ಎ] ಮಾತ್ರೆಗಳ ಗುಂಪು
ಬಿ] ಅಂಶಗಳ ಗುಂಪು
ಸಿ] ಮೂರು ಅಕ್ಷರಗಳ ಗುಂಪು
ಡಿ] ನಾಲ್ಕು ಅಕ್ಷರಗಳ ಗುಂಪು

5. ವೃತ್ತದಲ್ಲಿನ ಪಾದಗಳ ಸಂಖ್ಯೆ :
ಎ] 03 ಬಿ] 06
ಸಿ] 04 ಡಿ] 05

6. ಗುರು ಲಘು ಮೊದಲಿರೆ :
ಎ] ಮ–ನಗಣ ಬಿ] ಸ–ತಗಣ
ಸಿ] ಜ–ರಗಣ ಡಿ] ಭ–ಯಗಣ

7. ಗುರು ಲಘು ಕೊನೆಯಲಿ ಬರಲು :
ಎ] ಮ–ನಗಣ ಬಿ] ಸ–ತಗಣ
ಸಿ] ಜ–ರಗಣ ಡಿ] ಭ–ಯಗಣ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1.ಷಟ್ಪದಿ : ಮಾತ್ರಾಗಣ :: ವೃತ್ತಗಳು : _________
2. ತಗಣ :_ _ U:: ಸಗಣ : ___________
3. ಗುರುವೊಂದಾದಿಯಳ್ : ಉತ್ಪಲ :: ಲಘು ನಾಲ್ಕು : _
4. ಜಾನಕಿ : ಭಗಣ :: ನಯನ : ________
5. ಸಭರಂನಮಯಲಂಗಮುಂ ಬಗೆಗೊಳಲ್: ಮತ್ತೇಭ :: ನಜಭಜಜಂಜರಂ ಬಗೆಗೊಳುತ್ತಿರೆ :_______
6 ಗುರುನಾಲ್ಕಾಗಿರಲಂತು : ಸ್ರಗ್ಧರೆ :: ಗುರುಮೊದಲ್ ಮೂರಾಗೆ : ______________
7. ನ,ಜ,ಭ,ಜ,ಜ,ಜ,ರ : ಚಂಪಕ ಮಾಲಾ ವೃತ್ತ :: ಭ,ರ,ನ,ಭ,ಭ,ರ+ಲ+ಗು :__________
8. ನ,ಜ,ಭ,ಜ,ಜ,ಜ,ರ : ಚಂಪಕ ಮಾಲಾ ವೃತ್ತ :: ಮ.ಸ.ಜ,ಸ,ತ,ತ,ಗ :___________

ಪದ್ಯ ಪಾಠ – 7 : ವೀರಲವ

1.' ನಲ್ಗುದುರೆ' ಪದವು ಈ ಸಮಾಸವಾಗಿದೆ
ಎ] ತತ್ಪುರುಷ ಬಿ] ಕರ್ಮಧಾರಯ
ಸಿ] ಕ್ರಿಯಾ ಡಿ] ಗಮಕ

2. ' ತೆಗೆದುತ್ತರೀಯಮಂ''ಪದದಲ್ಲಿರುವ ವಿಭಕ್ತಿ

ಎ] ಪ್ರಥಮಾ ಬಿ] ದ್ವಿತೀಯಾ
ಸಿ] ತೃತೀಯಾ ಡಿ] ಪಂಚಮೀ

3. ' ನಿಜಾಶ್ರಮ''ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ] ಲೋಪ ಬಿ] ಆಗಮ
ಸಿ] ಆದೇಶ ಡಿ] ಸವರ್ಣದೀರ್ಘ

4.' ಬಿಲ್ಗೊಂಡು' ಪದವು ಈ ಸಮಾಸವಾಗಿದೆ
ಎ] ತತ್ಪುರುಷ ಬಿ] ಗಮಕ
ಸಿ] ಕರ್ಮಧಾರಯ ಡಿ] ಕ್ರಿಯಾ

5 ' ಪೂದೋಟಮಂ' ಪದದಲ್ಲಿರುವ ವಿಭಕ್ತಿ
ಎ] ಪಂಚಮೀ ಬಿ] ದ್ವಿತೀಯಾ
ಸಿ] ತೃತೀಯಾ ಡಿ] ಪ್ರಥಮಾ

6. ' ಲೇಖನವನೋದಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ] ಲೋಪ ಬಿ] ಆಗಮ
ಸಿ] ಆದೇಶ ಡಿ] ಸವರ್ಣದೀರ್ಘ

7.' ಉರ್ವಿಯೊಳ್''ಪದದಲ್ಲಿರುವ ವಿಭಕ್ತಿ
ಎ] ಪ್ರಥಮ ಬಿ] ತೃತೀಯ
ಸಿ] ಪಂಚಮೀ ಡಿ] ಸಪ್ತಮೀ

8. ' ನಲ್ನುದುರೆ''ಪದವು ಈ ಸಮಾಸವಾಗಿದೆ
ಎ] ತತ್ಪುರುಷ ಬಿ] ಕರ್ಮಧಾರಯ
ಸಿ] ದ್ವಂದ್ವ ಡಿ] ಗಮಕ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಬೀರ : ವೀರ :: ಜನ್ನ :__________
2. ತುರಂಗ : ಕುದುರೆ :: ನೃಪ :________
3. ಯಜ್ಞ: ಜನ್ನ :: ವಂಧ್ಯಾ :_________
4. ಉರ್ವಿ : ಭೂಮಿ :: ಅಗಡು :________
5. ವೃತ್ತ : ಅಕ್ಷರ ಗಣ :: ಷಟ್ಪದಿ :__________
6. ಝೋಂ : ಅನುಕರಣಾವ್ಯಯ :: ಬೇಡ ಬೇಡ :_______
7. ವೀರ : ಬೀರ :: ಯಜ್ಞ:____________________
8. ವಾಸಿ : ಪ್ರತಿಜ್ಞೆ:: ವಾಜಿ :____________________
9. ನಲ್ನುದುರೆ: ಕರ್ಮಧಾರೆಯ:: ಸೊಲ್ಗೇಳಿ: ___________
10. ಬಿಲ್ಗೊಂಡು: ಕ್ರಿಯಾ ಸಮಾಸ:: ಪೂದೋಟ:: _____

ಪದ್ಯ ಪಾಠ-8:ಕೆಮ್ಮನೆ ಮೀಸೆವೊತ್ತೆನೆ

1. ಚಂಪಕಮಾಲಾ ವೃತ್ತದ ಗಣ ಸಂಯೋಜನೆ
ಎ] ಮ,ರ,ನ,ಭ,ಯ,ಯ,ಯ
ಬಿ] ಭ,ರ,ನ,ಭ,ಭ,ರ+ಲ+ಗು
ಸಿ] ನ,ಜ,ಭ,ಜ,ಜ,ಜ,ರ
ಡಿ] ಸ,ತ,ತ,ನ,ಸ,ರ,ರ + ಗು

2. "ಕಳ್ನುಡಿದ'' ಎಂಬುದು ಈ ಸಮಾಸವಾಗಿದೆ:
ಎ] ತತ್ಪುರುಷ ಬಿ] ಕರ್ಮಧಾರಯ
ಸಿ] ಅಂಶೀ ಡಿ] ಕ್ರಿಯಾ

3 'ಮದೋನ್ಮತ್ತ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ
ಎ] ಗುಣಸಂಧಿ ಬಿ]'ವರ್ಣದೀರ್ಘಸಂಧಿ
ಸಿ] ಯಣ್ ಸಂಧಿ ಡಿ] ಅನುನಾಸಿಕ ಸಂಧಿ

4. ಕರ್ಮಧಾರೆಯ ಸಮಾಸ ಪದವಿದು
ಎ] ಮಹಿಪತಿ ಬಿ] ಕಳ್ನುಡಿದ
ಸಿ] ದಿವ್ಯಶರಾಳಿ ಡಿ] ನಾಣಿಲಿ

5. ಚಂಪಕಮಾಲಾ ವೃತ್ತದ ಪ್ರತಿ ಸಾಲಿನಲ್ಲಿರುವ ಅಕ್ಷರಗಳ ಸಂಖ್ಯೆ
ಎ] 20 ಬಿ] 21
ಸಿ] 22 ಡಿ] 19

6. ಪದ್ಯದ ಆದಿಯಲ್ಲಿ ಒಂದು ಗುರು ಇದ್ದರೆ ____
ಎ] ಉತ್ಪಲಮಾಲೆ ಬಿ] ಸ್ರಗ್ಧರೆ
ಸಿ] ಚಂಪಕಮಾಲೆ ಡಿ] ಮತ್ತೇಭವಿಕ್ರೀಡಿತ

7. ಸತತನಸರರಗಂ ಗಣಗಳು ಬರುವ ವೃತ್ತದಲ್ಲಿ ಬರುವ ವೃತ್ತ ಇದಾಗಿದೆ
ಎ] ಉತ್ಪಲಮಾಲೆ ಬಿ] ಸ್ರಗ್ಧರೆ
ಸಿ] ಮಹಾಸ್ರಗ್ಧರಾ ಡಿ] ಮತ್ತೇಭವಿಕ್ರೀಡಿತ

8. "ಕಳ್ನುಡಿ'' ಎಂಬುದು ಈ ಸಂಧಿಗೆ ಉದಾಹರಣೆಯಾಗಿದೆ.:
ಎ] ಗುಣಸಂಧಿ ಬಿ] ಸವರ್ಣದೀರ್ಘಸಂಧಿ
ಸಿ] ಯಣ್ ಸಂಧಿಡಿ] ಆದೇಶ ಸಂಧಿ

10. "ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟ ನಿನ್ನದೊಂದಳವು ?'' ಈ ವಾಕ್ಯದಲ್ಲಿರುವ ಅಲಂಕಾರ
ಎ) ಅರ್ಥಾಂತರನ್ಯಾಸಲಂಕಾರ ಬಿ) ಉಪಮಾ ಸಿ) ರೂಪಕ ಡಿ) ಶ್ಲೇಷಾ

11. ' ನಾಣಿಲಿ' ಈ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
ಎ) ಬಹುವ್ರೀಹಿ ಬ) ಕ್ರಿಯಾ
ಸಿ) ಗಮಕ ಡಿ) ದ್ವಂದ್ವ

*ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಉತ್ತರಿಸಿ:*

1. ಭರನಭಭರ : ಉತ್ಪಲಮಾಲೆ : : ಮರಭನಯಯಯ :
2. ಅನುಪ್ರಾಸ : ಶಬ್ದಾಲಂಕಾರ : : ಉತ್ಪ್ರೇಕ್ಷೆ : ______
3. ಅಳವು : ಪರಾಕ್ರಮ : : ಮದಿರಾ : ____________
4. ತೊಳಲ್ದು : ಅಲೆದಾಡಿ : : ಅಡಸು : ____________

# ಗಾದೆ ವಿಸ್ತರಣೆ

ಗಾದೆ ವಿಸ್ತರಣೆಯು ಪ್ರತ್ಯೇಕ ವಾಕ್ಯಖಂಡಗಳಲ್ಲಿ ಮೂರು ಹಂತಗಳನ್ನು ಹೊಂದಿರಬೇಕು.ಎಲ್ಲಾ ಗಾದೆಗಳಿಗೂ ಈ ಆರಂಭದ ಸಾಲುಗಳನ್ನು ಬರೆಯಬಹುದು.

1. ಗಾದೆಗಳ ಮಹತ್ವದ ಕುರಿತಾದ ಸಾಮಾನ್ಯ ಹೇಳಿಕೆಗಳು
2. ಗಾದೆಯು ಒಳಗೊಂಡಿರುವ ಆಶಯ
3. ಗಾದೆಯ ಆಶವನ್ನು ಸಮರ್ಥಿಸುವ ಇತರೆ ಗಾದೆ ಮಾತುಗಳು, ಪೂರಕ ಕಥೆಗಳು, ನಾಣ್ಣುಡಿಗಳಮೂಲಕ ವಿವರಿಸುವುದು.

[ ಒಂದೇ ರೀತಿ ಆಶಯದ ಗಾದೆಗಳಿಗೆ ಏಕರೂಪದ ಒಂದು ವಿಸ್ತರಣೆಯನ್ನು ಅಭ್ಯಾಸಮಾಡಬಹುದು ]

## ಉದಾಹರಣೆ: 1

✓ ಮಾತೇ ಮೃತ್ಯು; ಮಾತೇ ಮುತ್ತು.

✓ ಊಟಬಲ್ಲವನಿಗೆ ರೋಗವಿಲ್ಲ: ಮಾತು ಬಲ್ಲವನಿಗೆ ಜಗಳವಿಲ್ಲ.

✓ ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು.

✓ ಮಾತು ಬೆಳ್ಳಿ; ಮೌನ ಬಂಗಾರ.

✓ ಮಾತು ಮನೆ ಕೆಡಿಸಿತು; ತೂತು ಒಲೆ ಕೆಡಿಸಿತು.

*ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:*

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; ಮಾತು ಹೇಗಿರಬೇಕು ಹಾಗೂಅದರ ಮಹತ್ವವೇನು ಎಂಬುದನ್ನು ತಿಳಿಸುತ್ತದೆ.

* ಮಾನವನು ಮಾತನಾಡುವ ಮತ್ತು ಆಲೋಚನಾ ಶಕ್ತಿಯಿಂದಲೇ ಇತರೆ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅಂತಹ ಅಮೂಲ್ಯವಾದ ಮಾತನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ಹಾಗಲ್ಲದೆ ನಾಲಿಗೆ ಹರಿದ ಕಡೆಗೆಲ್ಲಾ ಬಿಟ್ಟರೆ 'ಬಾಯಿ ಬಿಟ್ಟರೆ ಬಣ್ಣಗೇಡು' ಎಂಬಂತಾಗುತ್ತದೆ.

ಬಸವಣ್ಣನವರು ಹೇಳಿರುವಂತೆ 'ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಶಲಾಕೆಯಂತೆ' ಇರಬೇಕು. ಅಂದರೆ ನಮ್ಮ ಮಾತು ಇತರರಿಗೆ ನೋವುಂಟು ಮಾಡದಂತೆ ಹಿತ–ಮಿತ–ಮೃದುವಾಗಿರಬೇಕು. ಇಲ್ಲದಿದ್ದರೆ ಅದು ಅನಾಹುತಕ್ಕೂ ಕಾರಣವಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

## ಉದಾಹರಣೆ: 2

✓ ದುಡಿಮೆಯೇ ದುಡ್ಡಿನ ತಾಯಿ

✓ ಕೈ ಕೆಸರಾದರೆ ಬಾಯಿ ಮೊಸರು

✓ ಕಾಯಕವೇ ಕೈಲಾಸ

✓ ಕೂತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು.

*ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:*

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; ದುಡಿಮೆ ಅಥವಾ ದೈಹಿಕ ಶ್ರಮ ಹಾಗೂ ಅದರ ಮಹತ್ವವೇನು ಎಂಬುದನ್ನು ತಿಳಿಸುತ್ತದೆ.

* ಹನ್ನೆರಡನೆಯ ಶತಮಾನದಲ್ಲೇ ಶಿವಶರಣರು ಕಾಯಕದ ಮಹತ್ವವನ್ನು ಸಾರಿದರು. ಕಾಯಕ ಎಂದರೆ 'ಪ್ರತಿಯೊಬ್ಬ ವ್ಯಕ್ತಿಯು ಏನಾದರೊಂದು ದೈಹಿಕ ಶ್ರಮದ ಮೂಲಕ ಸಂಪಾದನೆ ಮಾಡಿ ಜೀವನ ನಡೆಸಬೇಕು' ಸೋಮಾರಿಯಾಗಿ ಕಾಲಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ. ಕೂತು ಉಣ್ಣುವವನಿಗೆ ಕುಡುಕೆ ಹೊನ್ನೂ ಸಾಲದು ಎಂಬಂತೆ ಇರುವ ಆಸ್ತಿ ಕರಗಿದ ಮೇಲೆ ಕಷ್ಟ ಪಡಬೇಕಾಗುತ್ತದೆ. ಆದ್ದರಿಂದ ಕಷ್ಟಪಟ್ಟರೆ ಸುಖವಿದೆ ಎಂಬುದು ಈ ಗಾದೆಯ ಆಶಯವಾಗಿದೆ.

## ಉದಾಹರಣೆ: 3

✓ ಅರಮನೆಗಿಂತ ನೆರಮನೆ ಲೇಸು.

✓ ಹಾಸಿಗೆ ಇದ್ದಷ್ಟು ಕಾಲು ಚಾಚು

✓ ಅತಿ ಆಸೆ ಗತಿ ಕೆಡಿಸಿತು

*ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:*

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; ನಮ್ಮ ಆಸೆಗಳಿಗೆ ಇತಿ–ಮಿತಿಯಿರಬೇಕು ಎಂಬುದನ್ನು ತಿಳಿಸುತ್ತದೆ.

* 'ಆಸೆಯೇ ದುಃಖಕ್ಕೆ ಕಾರಣ' ಎಂದು ಬುದ್ಧ ಹೇಳಿದ್ದಾನೆ.

ಜೀವನದಲ್ಲಿ ಆಸೆಯೇ ಇರಬಾರದೆಂದಲ್ಲ ಆದರೆ ಅದು ಅತಿಯಾಗದೆ ಮಿತವಾಗಿರಬೇಕು. ಅರಮನೆಯ ಸುಖಕ್ಕಿಂತ ನಮ್ಮಲ್ಲಿ ಲಭ್ಯವಿರುವಷ್ಟರಲ್ಲಿ ಬದುಕುವುದರಲ್ಲಿ ನೆಮ್ಮದಿ ಇದೆ. ಆಸೆಗಳು ಅತಿಯಾಗಿ ಆದಾಯ ಕಡಿಮೆ ಇದ್ದಾಗ ಸಾಲ ಮಾಡಬೇಕಾಗುತ್ತದೆ. ಆದ್ದರಿಂದ ಹಾಸಿಗೆ ಇದ್ದಷ್ಟು ಕಾಲುಚಾಚಬೇಕು. ಉಚಿತವಾಗಿ ಸಿಗುತ್ತದೆಂದು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಣೆ ಮಾಡಲು ಪ್ರಯತ್ನಿಸಬಾರದು. ಹಾಗೆ ಮಾಡಿದರೆ 'ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆಯಂತೆ ಅತಿಯಾಸೆಯಿಂದಾಗಿ ಇದ್ದದ್ದನ್ನೂ ಕಳೆದುಕೊಳ್ಳಬೇಕಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

## ಉದಾಹರಣೆ: 4

✓ ತಾಳಿದವನು ಬಾಳಿಯಾನು.

✓ ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?

*ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:*

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ಕೋಪ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದನ್ನು ತಿಳಿಸುತ್ತದೆ.

* "ಕೋಪಂ ಅನರ್ಥ ಸಾಧನಂ" ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟುಮಾಡುತ್ತದೆ. ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದವರನ್ನೂ ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮ ಪಟ್ಟು ತಯಾರಿಸಿ ಮಡಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟುಮಾಡುತ್ತದೆ. ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ? ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯಶಾಲಿಗಳಾಗಲು ಸಾಧ್ಯ. ಎಂಬುದು ಈ ಗಾದೆಯ ನೀತಿಯಾಗಿದೆ.

# ಪ್ರಬಂಧಗಳು

ಪ್ರಬಂಧಗಳನ್ನು ವಿಷಯದ ಆಧಾರದ ಮೇಲೆ ಎರಡು ವಿಧಗಳಾಗಿ ವಿಂಗಡಿಸಬಹುದು:

*1) ಸಮಸ್ಯಾತ್ಮಕ ವಿಷಯದ ಪ್ರಬಂಧಗಳು*

*2) ಉಪಯುಕ್ತತಾ ವಿಷಯದ ಪ್ರಬಂಧಗಳು*

*1) ಸಮಸ್ಯಾತ್ಮಕ ವಿಷಯದ ಪ್ರಬಂಧಗಳು:*

* ಸಾಮಾಜಿಕ ಪಿಡುಗುಗಳು: ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ ಇತ್ಯಾದಿ
* ದೇಶ/ಪ್ರಕೃತಿಯ ಸಮಸ್ಯೆಗಳು: ಜನಸಂಖ್ಯಾ ಸ್ಫೋಟ, ವಿವಿಧ ಪರಿಸರ ಮಾಲಿನ್ಯಗಳು(ಜಲ, ವಾಯು, ಭೂ)
ಸಮಸ್ಯಾತ್ಮಕ ವಿಷಯದ ಪ್ರಬಂಧಗಳ ನಮೂನೆ
ಸಮಸ್ಯಾತ್ಮಕ ವಿಷಯದ ಪ್ರಬಂಧಗಳನ್ನು ಬರೆಯುವಾಗ ಈ ಕೆಳಗಿನ ಸಾಮಾನ್ಯ ಅಂಶಗಳನ್ನು ಪಾಲಿಸಬೇಕು.

ಪೀಠಿಕೆ: (ಅರ್ಥ ಅಥವಾ ವ್ಯಾಖ್ಯಾನ ಬರೆಯಬೇಕು)
ವಿಷಯಬೆಳವಣಿಗೆ: ಕಾರಣಗಳು, ಪರಿಣಾಮಗಳು, ಪರಿಹಾರಗಳನ್ನು ಹಂತಹಂತವಾಗಿ ಬರೆಯಬೇಕು
ಉಪಸಂಹಾರ: ಇದನ್ನು ತಡೆಗಟ್ಟಲು ವಿದ್ಯಾರ್ಥಿಗಳ ಪಾತ್ರವೇನೆಂಬುದನ್ನು ಬರೆಯಬೇಕು.
*2) ಉಪಯುಕ್ತತಾ ವಿಷಯದ ಪ್ರಬಂಧಗಳು:*
* *ಉಪಯೋಗಗಳು*: ಸಮೂಹಮಾಧ್ಯಮಗಳು (ಕಂಪ್ಯೂಟರ್, ದೂರದರ್ಶನ, ದಿನಪತ್ರಿಕೆ ಇತ್ಯಾದಿ)
* *ಮಹತ್ವಗಳು*:ಕ್ರೀಡೆ, ಮಳೆ ನೀರು ಕೊಯ್ಲು, ಸಾವಯವ ಬೇಸಾಯ, ಸ್ವಚ್ಛಭಾರತ ಅಭಿಯಾನ
ಉಪಯುಕ್ತತಾ ವಿಷಯದ ಪ್ರಬಂಧಗಳ ನಮೂನೆ
ಉಪಯುಕ್ತತಾ ವಿಷಯದ ಪ್ರಬಂಧಗಳನ್ನು ಬರೆಯುವಾಗ ಈ ಕೆಳಗಿನ ಸಾಮಾನ್ಯ ಅಂಶಗಳನ್ನು ಪಾಲಿಸಬೇಕು.
ಪೀಠಿಕೆ: (ಅರ್ಥ ಅಥವಾ ವ್ಯಾಖ್ಯಾನ ಬರೆಯಬೇಕು)
ವಿಷಯಬೆಳವಣಿಗೆ: ಮಹತ್ವ, ಉಪಯೋಗಗಳು, ಅನುಕೂಲಗಳು, ಬಳಕೆಯ ವಿಧಾನ, ಜನಪ್ರಿಯತೆ ಇತ್ಯಾದಿ
ವಿಷಯಗಳನ್ನು ವಿವರಿಸಬೇಕು. ಅನುಕೂಲಗಳ ಬಗ್ಗೆ ಇದ್ದಲ್ಲಿ ಅನನುಕೂಲಗಳನ್ನು ಬರೆಯಬೇಕು.
ಉಪಸಂಹಾರ: ಉಳಿಸುವಿಕೆ/ಬಳಕೆ/ಜಾರಿ ಮುಂತಾದವುಗಳಲ್ಲಿ ವಿದ್ಯಾರ್ಥಿಗಳ ಪಾತ್ರವೇನೆಂಬುದನ್ನು ಬರೆಯಬೇಕು.

### ಉದಾಹರಣೆ: 1

## ಬಾಲಕಾರ್ಮಿಕ ಪದ್ಧತಿ

(ಇತರ ಯಾವುದೇ ಸಾಮಾಜಿಕ ಪಿಡುಗು)

ಪೀಠಿಕೆ:
ಇದು ಒಂದು ಸಾಮಾಜಿಕ ಸಮಸ್ಯೆಯಾಗಿದೆ/ಪಿಡುಗಾಗಿದೆ. 5 ರಿಂದ 16 ವರ್ಷವಯಸ್ಸಿನ ಒಳಗೆ ದುಡಿಯುವ ಮಕ್ಕಳನ್ನು 'ಬಾಲಕಾರ್ಮಿಕರು' ಎನ್ನುವರು. ಇದು ಸಮಾಜದ, ಸಮುದಾಯದ ಹಾಗೂ ಒಂದು ದೇಶದ ಏಳಿಗೆಗೆ ಧಕ್ಕೆ ತರುವ ಅಂಶವಾಗಿದೆ.
ವಿಷಯಬೆಳವಣಿಗೆ:
ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದಕ್ಕೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಇತರೆ ಹಲವಾರು ಕಾರಣಗಳನ್ನು ಹೊಂದಿದ್ದು ಸಮಾಜದ ಮೇಲೆ ಹಲವಾರು ಪರಿಣಾಮಗಳನ್ನು ಉಂಟುಮಾಡುತ್ತದೆ.
ಕಾರಣಗಳು: ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದಕ್ಕೆ ಪ್ರಮುಖ ಕಾರಣಗಳೆಂದರೆ:
* ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿರುವುದು ಅಥವಾ ಅತಿಯಾದ ಬಡತನ, ನಿರುದ್ಯೋಗ.
* ಪೋಷಕರು ಅನಕ್ಷರಸ್ಥರಾಗಿದ್ದು ಶಿಕ್ಷಣದ ಬಗ್ಗೆ ಖಾಳಜಿ ಇಲ್ಲದಿರುವುದು.
* ಪೋಷಕರು ವೃದ್ಧರಾಗಿರುವುದು ಅಥವಾ ಅನಾರೋಗ್ಯ ಹೊಂದಿರುವುದು.
ಪರಿಣಾಮಗಳು: ಬಾಲಕಾರ್ಮಿಕ ಪದ್ಧತಿಯಿಂದ ಉಂಟಾಗಬಹುದಾದ ಪ್ರಮುಖ ಪರಿಣಾಮಗಳೆಂದರೆ:
* ಶಿಕ್ಷಣದಿಂದ ವಂಚಿತರಾಗುವುದು.
* ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ತುತ್ತಾಗುವುದು.
* ದೇಶಕ್ಕೆ ಉತ್ತಮ ನೈತಿಕ ಹಾಗೂ ಸದೃಢ ಪ್ರಜೆಗಳ ಕೊರತೆ ಉಂಟಾಗುವುದು.
* ಪರಿಣಾಮವಾಗಿ ಸಮಾಜದ, ದೇಶದ ಪ್ರಗತಿಯಲ್ಲಿ ಹಿನ್ನಡೆ ಉಂಟಾಗುವುದು.
ಪರಿಹಾರಗಳು: ಬಾಲಕಾರ್ಮಿಕ ಪದ್ಧತಿ ತಡೆಗಟ್ಟಲು ಪ್ರಮುಖ ಪರಿಹಾರೋಪಾಯಗಳೆಂದರೆ:
* ಇಂತಹ ಪಿಡುಗು/ಸಮಸ್ಯೆಗಳನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕಾನೂನು ಜಾರಿಗೊಳಿಸಬೇಕು.
* ಗಂಡು-ಹೆಣ್ಣು ಭೇದವಿಲ್ಲದೆ ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ಶಿಕ್ಷಣ ದೊರೆಯುವಂತಾಗಬೇಕು.
* ಆರ್ಥಿಕವಾಗಿ ಹಿಂದುಳಿದ ಕುಟುಂಬಗಳನ್ನು ಗುರುತಿಸಿ ಅವರನ್ನು ಆರ್ಥಿಕವಾಗಿ ಸಬಲಗೊಳಿಸಬೇಕು.
ಉಪಸಂಹಾರ: ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು ಬೀದಿನಾಟಕ, ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಜಾಥಾ ಮುಂತಾದವುಗಳ ಮೂಲಕ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು.

*****

[ಸೂಚನೆ: * ಮೇಲಿನ ಪ್ರಬಂಧವು ಯಾವುದೇ ಸಾಮಾಜಿಕ ಪಿಡುಗಿಗೆ ಅನ್ವಯವಾಗುತ್ತದೆ.
* ಇದು ಕಲಿಕೆಯಲ್ಲಿ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಮಾತ್ರ.
* ಇದೇ ಪ್ರಬಂಧವನ್ನು ಯಥಾವತ್ತಾಗಿ ಕಲಿಸಿದರೆ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.
* ಈ ಪ್ರಬಂಧದಲ್ಲಿ ಗೆರೆ ಎಳೆಯಲಾದ ಪದ/ವಾಕ್ಯವನ್ನು ಮಾತ್ರ ಬದಲಿಸಿದರೆ ಸಾಕು.
* ವಿಷಯವನ್ನಾಧರಿಸಿ ಇನ್ನೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುವರಿ ಅಂಶಗಳನ್ನು ಸೇರಿಸಿ ಉತ್ತಮ ವಿದ್ಯಾರ್ಥಿಗಳಿಗೂ ಕಲಿಸಬಹುದು.]

## ಉದಾಹರಣೆ: 2 ಪರಿಸರ ಮಾಲಿನ್ಯ

(ಯಾವುದೇ ವಿಧದ ಮಾಲಿನ್ಯ)

ಪೀಠಿಕೆ:
ಇಡೀ ಪ್ರಪಂಚದಲ್ಲಿ ಪರಿಸರ ಮಾಲಿನ್ಯ ಇಂದು ಒಂದು ದೊಡ್ಡ ಸಮಸ್ಯೆಯಾಗಿದೆ. ಪರಿಸರದಲ್ಲಿ ಉಂಟಾಗುವ ಯಾವುದೇ ಅನಪೇಕ್ಷಿತ ಬದಲಾವಣೆಗಳನ್ನು ಪರಿಸರಮಾಲಿನ್ಯ ಎನ್ನುವರು. ಇದು ಸಮಾಜದ, ಸಮುದಾಯದ ಹಾಗೂ ಒಂದು ದೇಶದ ಏಳಿಗೆಗೆ ಧಕ್ಕೆ ತರುವ ಅಂಶವಾಗಿದೆ.
ವಿಷಯಬೆಳವಣಿಗೆ:

ಪರಿಸರ ಮಾಲಿನ್ಯಕ್ಕೆ ಪ್ರಕೃತಿ ಹಾಗೂ ಮನುಷ್ಯನ ಹಲವಾರು ಚಟುವಟಿಕೆಗಳು ಕಾರಣವಾಗಿದ್ದು ಇಂದು ಇದರ ಪರಿಣಾಮವಾಗಿ ಅನೇಕ ಸಮಸ್ಯೆಗಳು ಎದುರಾಗುತ್ತಿವೆ.

ಕಾರಣಗಳು: ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣಗಳೆಂದರೆ:

* ಹೆಚ್ಚುತ್ತಿರುವ ಜನಸಂಖ್ಯೆ. ದಿನೇ ದಿನೇ ನಗರ–ಪಟ್ಟಣಗಳು ಬೆಳೆಯುತ್ತಿರುವುದು.
* ಹೆಚ್ಚುತ್ತಿರುವ ಕಾರ್ಖಾನೆಗಳು, ವಾಹನಗಳು.
* ಕೃಷಿಯಲ್ಲಿ ಹೆಚ್ಚು ಹೆಚ್ಚು ರಾಸಾಯನಿಕಗಳ ಬಳಕೆ.
* ಅರಣ್ಯನಾಶದಿಂದ ಮಳೆ ಹಾಗೂ ನೀರಿನ ಮೂಲಗಳು ಕಡಿಮೆಯಾಗುತ್ತಿರುವುದು.

ಪರಿಣಾಮಗಳು: ಪರಿಸರ ಮಾಲಿನ್ಯ ದಿಂದ ಉಂಟಾಗಬಹುದಾದ ಪ್ರಮುಖ ಪರಿಣಾಮಗಳೆಂದರೆ:

* ಮಾನವನಿಗೆ ಅನೇಕ ಮಾರಣಾಂತಿಕ ರೋಗಗಳು ಉಂಟಾಗುತ್ತವೆ.
* ವಾತಾವರಣದಲ್ಲಿ ಶುದ್ಧ ವಾಯು, ಜಲದ ಕೊರತೆ ಹಾಗೂ ಓಝೋನ್ ಪದರದ ನಾಶ.
* ಅರಣ್ಯನಾಶದಿಂದ ವನ್ಯಮೃಗಗಳ ನಾಶ. ಮಳೆಯ ಕೊರತೆಯಿಂದ ಬರಗಾಲ.
* ಪರಿಣಾಮವಾಗಿ ಸಮಾಜದ, ದೇಶದ ಪ್ರಗತಿಯಲ್ಲಿ ಹಿನ್ನಡೆ ಉಂಟಾಗುವುದು.

ಪರಿಹಾರಗಳು: ಪರಿಸರ ಮಾಲಿನ್ಯ ತಡೆಗಟ್ಟಲು ಪ್ರಮುಖ ಪರಿಹಾರೋಪಾಯಗಳೆಂದರೆ:

* ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟವುದು. ನಗರೀಕರಣಕ್ಕೆ ಸಾಧ್ಯವಾದಷ್ಟು ತಡೆಯೊಡ್ಡುವುದು.
* ಕಾರ್ಖಾನೆಗಳನ್ನು ಪರಿಸರ ಸ್ನೇಹಿಯಾಗಿಸುವುದು. ಇದಕ್ಕಾಗಿ ಕಾನೂನು ಜಾರಿಗೊಳಿಸುವುದು.
* ಅರಣ್ಯನಾಶವನ್ನು ತಡೆಗಟ್ಟಿ, ಗಿಡ–ಮರಗಳನ್ನು ನೆಟ್ಟು ಬೆಳೆಸಲು ಪ್ರೋತ್ಸಾಹಿಸುವುದು.
* ವಿವಿಧ ಮೂಲಗಳಲ್ಲಿ ನೀರಿನ ಪ್ರಮಾಣ ತಗ್ಗದಂತೆ ಹಾಗೂ ಮಿತವಾಗಿ ಬಳಸುವಂತೆ ಮಾಡುವುದು.

ಉಪಸಂಹಾರ: ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು ಬೀದಿನಾಟಕ, ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಜಾಥಾ ಮುಂತಾದವುಗಳ ಮೂಲಕ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು.

[ಸೂಚನೆ: * ಮೇಲಿನ ಪ್ರಬಂಧವು ಯಾವುದೇ ಪರಿಸರ ಮಾಲಿನ್ಯಕ್ಕೆ ಅನ್ವಯವಾಗುತ್ತದೆ.
* ಇದು ಕಲಿಕೆಯಲ್ಲಿ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಮಾತ್ರ.
* ಇದೇ ಪ್ರಬಂಧವನ್ನು ಯಥಾವತ್ತಾಗಿ ಕಲಿಸಿದರೆ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.
* ಈ ಪ್ರಬಂಧದಲ್ಲಿ ಗೆರೆ ಎಳೆಯಲಾದ ಪದ/ವಾಕ್ಯವನ್ನು ಮಾತ್ರ ಬದಲಿಸಿದರೆ ಸಾಕು.
* ವಿಷಯವನ್ನಾಧರಿಸಿ ಇನ್ನೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುವರಿ ಅಂಶಗಳನ್ನು ಸೇರಿಸಿ ಉತ್ತಮ ವಿದ್ಯಾರ್ಥಿಗಳಿಗೂ ಕಲಿಸಬಹುದು.]

## ಉದಾಹರಣೆ: 2

### ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ

(ಯಾವುದೇ ವಿಧದ ಉಪಯುಕ್ತತೆಯ ವಿಷಯದ ಪ್ರಬಂಧಗಳಿಗೆ)

ಪೀಠಿಕೆ:

ಇಂದು ವಿಜ್ಞಾನ ಮತ್ತು ತಂತ್ರಜ್ಞಾನವಿಲ್ಲದೆ ಜಗತ್ತು ನಿಶ್ಚಲ ಎನ್ನುವಷ್ಟು ನಾವು ಅವಲಂಬಿತರಾಗಿದ್ದೇವೆ. ವೃತ್ತಪತ್ರಿಕೆಗಳು, ದೂರದರ್ಶನ, ಕಂಪ್ಯೂಟರ್, ಅಂತರ್ಜಾಲ ಮುಂತಾದವು ಇಂದು ಬಹುಮುಖ್ಯ ಸಮೂಹ ಮಾಧ್ಯಮಗಳಾಗಿವೆ. ಈ ನಿಟ್ಟಿನಲ್ಲಿ ಇಂದು ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಅತ್ಯವಶ್ಯಕವಾಗಿದೆ.

ವಿಷಯಬೆಳವಣಿಗೆ: ಕಂಪ್ಯೂಟರ್ ಇಂದು ಎಲ್ಲೆಂದರಲ್ಲಿ ತನ್ನ ಪ್ರಭಾವವನ್ನು ಬೀರಿದ್ದು ಇಂದು ಬಹಳ ಅತ್ಯವಶ್ಯಕ ಮಾಧ್ಯಮವಾಗಿ ಪ್ರಸಿದ್ಧವಾಗಿದೆ. ಪರಿಣಾಮಕಾರಿಯಾದ ಶಿಕ್ಷಣ ಪಡೆಯುವಲ್ಲಿ ಕಂಪ್ಯೂಟರ್ ಹಲವಾರು ಅನುಕೂಲತೆಯನ್ನು ಕಲ್ಪಿಸಿದೆ.

ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಉಪಯೋಗಗಳೆಂದರೆ:

* ಕಂಪ್ಯೂಟರ್ ಪರಿಣಾಮಕಾರಿಯಾದ ಕಲಿಕೆಗೆ ಸಹಕಾರಿಯಾಗಿದೆ.
* ಅಮೂರ್ತವಾದ ಪರಿಕಲ್ಪನೆಗಳನ್ನು ಕಣ್ಣಿಗೆ ಕಟ್ಟಿದಂತೆ ನೋಡಿ, ಕೇಳಿ ಕಲಿಯಬಹುದು.
* ಅಂತರ್ಜಾಲ ಬಳಸಿ ಹೊಸ ವಿಷಯಗಳನ್ನು ಶೀಘ್ರವಾಗಿ ಪಡೆಯಲು, ಕಲಿಯಲು ಸಹಕಾರಿಯಾಗಿದೆ.
* ಓದಿದ ವಿಷಯಗಳನ್ನು ಟಿಪ್ಪಣಿ ಮಾಡಿ ಶಾಶ್ವತವಾಗಿ ಉಳಿಸಿಕೊಳ್ಳಲು ಸಹಕಾರಿಯಾಗಿದೆ.
* ಸ್ಪರ್ಧಾತ್ಮಕ ಯುಗದಲ್ಲಿ ಕಂಪ್ಯೂಟರ್ ಬಳಕೆ ಹೆಚ್ಚಿರುವುದರಿಂದ ಇದರ ಬಳಕೆ ಉಪಯುಕ್ತವಾಗಿದೆ.

*ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯ ಅನನುಕೂಲಗಳು*: ಇದರ ಪ್ರಮುಖ ಅನನುಕೂಲಗಳೆಂದರೆ:

* ಇದರಲ್ಲಿ ಅನಪೇಕ್ಷಿತ ವಿಷಯಗಳಿಗೆ ಅವಕಾಶವಿರುವುದರಿಂದ ನೈತಿಕತೆಗೆ ಧಕ್ಕೆ ಉಂಟಾಗಬಹುದು.
* ಇದು ಬಳಕೆಯ ಪೂರ್ವಜ್ಞಾನವನ್ನು ಬಯಸುವುದರಿಂದಲೆಲ್ಲರೂ ಬಳಸಲು ಸಾಧ್ಯವಿಲ್ಲ.
* ಪುಸ್ತಕಗಳನ್ನು ಓದುವ ಹವ್ಯಾಸ ತಪ್ಪುವ ಸಾಧ್ಯತೆ ಹೆಚ್ಚು.
* ಇದು ವಿದ್ಯುತ್ ಅಲ್ಲದೆ ಹಲವಾರು ಸಾಧನಗಳನ್ನು ಅಪೇಕ್ಷಿಸುತ್ತದೆ.

ಉಪಸಂಹಾರ: ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು ವಿಜ್ಞಾನ–ತಂತ್ರಜ್ಞಾನವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ನಮ್ಮ ಜೀವನ ಏಳ್ಗೆ ಆ ಮೂಲಕ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು.

*****

[ಸೂಚನೆ: * ಮೇಲಿನ ಪ್ರಬಂಧವು ಯಾವುದೇ ಉಪಯುಕ್ತತೆಯ ವಿಷಯಕ್ಕೆ ಅನ್ವಯವಾಗುತ್ತದೆ.
* ಇದು ಕಲಿಕೆಯಲ್ಲಿ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಮಾತ್ರ.

* ಇದೇ ಪ್ರಬಂಧದ ನಮೂನೆಯನ್ನು ಯಥಾವತ್ತಾಗಿ ಕಲಿಸಿದರೆ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.
* ಈ ಪ್ರಬಂಧದಲ್ಲಿ ಗೆರೆ ಎಳೆಯಲಾದ ಪದ/ವಾಕ್ಯವನ್ನು ಮಾತ್ರ ಬದಲಿಸಿದರೆ ಸಾಕು. * ವಿಷಯವನ್ನಾಧರಿಸಿ ಇನ್ನೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುವರಿ ಅಂಶಗಳನ್ನು ಸೇರಿಸಿ ಉತ್ತಮ ವಿದ್ಯಾರ್ಥಿಗಳಿಗೂ ಕಲಿಸಬಹುದು.]

# ಪರೀಕ್ಷೆಯಲ್ಲಿ ಕೇಳಬಹುದಾದ ಪ್ರಮುಖ ಪ್ರಬಂಧಗಳು

## 1. ರಾಷ್ಟ್ರೀಯ ಹಬ್ಬಗಳ ಮಹತ್ವ

ಪೀಠಿಕೆ : ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದರತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. "ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು." ನಮ್ಮ ದೇಶದಲ್ಲಿಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ 1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.

ವಿಷಯ ನಿರೂಪಣೆ :

1) ಸ್ವಾತಂತ್ರ್ಯ ದಿನಾಚರಣೆ: ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟೀಷರು ಭಾರತೀಯ ಅರಸರುಗಳ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು.ಭಾರತಿಯರಿಗೆ ಸ್ವಾತಂತ್ರ ಎನ್ನುವುದೇ ಇರಲಿಲ್ಲ.ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದರಣಕಹಳೆಯನ್ನು ಊದಿ ಕೊನೆಗೆ 1947 ನೇ ಆಗಸ್ಟ್ 15 ರಂದು ಸ್ವಾತಂತ್ರ್ಯವನ್ನು ಪಡೆದರು.ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ.ಅಂದು ಶಾಲಾ-ಕಾಲೇಜು-ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

2) ಗಣರಾಜ್ಯೋತ್ಸವ : ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರಆಡಳಿತದ ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು ಜನೇವರಿ 26,1950 ರಲ್ಲಿ ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

3) ಗಾಂಧಿ ಜಯಂತಿ : ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. "ನಾಯಕರಿಲ್ಲದ ನಾವೆ ದಡಸೇರಲಾರದು" ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವವಹಿಸಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ ಅಕ್ಟೋಬರ್ 2. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ.ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ,ಅವರನ್ನು ಸ್ಮರಿಸುತ್ತಾಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

ಉಪಸಂಹಾರ :ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

## 2. ಗ್ರಂಥಾಲಯಗಳ ಮಹತ್ವ

ಪೀಠಿಕೆ : "ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ನಾಣ್ಣುಡಿಯಂತೆ ಪ್ರತಿಯೊಬ್ಬರು ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನಭಿವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ.ಅದಕ್ಕೆಂದೇ ಶಾಲಾ-ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

ವಿಷಯ ನಿರೂಪಣೆ : ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ.ಮನುಷ್ಯನ ದೇಹಕ್ಕೆ ಅನ್ನ, ನೀರು, ಗಾಳಿ ಎಷ್ಟು ಮುಖ್ಯವೋ ಹಾಗೆಯೇ ಮಾನವನ ಮನಸ್ಸಿನ ವಿಕಾಸಕ್ಕೆಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯು ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳ ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ, ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಗ್ರಂಥಾಲಯಗಳು ಜ್ಞಾನದ ನಿಧಿಗಳಿದ್ದಂತೆ ಅಂತಹ ಜ್ಞಾನ ನಿಧಿಗೆ ಕೈ ಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಓದುವ ಹವ್ಯಾಸವುಳ್ಳವುಳ್ಳವರು ಗ್ರಂಥಾಲಯಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ

ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಬಹುದು.ಅದಕ್ಕೆಂದೇ ಇ–ಲೈಬ್ರೆರಿಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

ಉಪಸಂಹಾರ : ಒಟ್ಟಾರೆಯಾಗಿ ಜೀವನದ ನಿಜವಾದ ಮೌಲ್ಯ ಮತ್ತು ಸಾರ್ಥಕತೆಯನ್ನು ತಿಳಿಸಿಕೊಡುವಲ್ಲಿ, ಜೀವನದ ಬಗೆಗೆ ಭರವಸೆಯನ್ನು ತುಂಬುವಲ್ಲಿ ಮತ್ತು ಚಾರಿತ್ರ್ಯವನ್ನು ನಿರ್ವಹಿಸುವಲ್ಲಿ ಪುಸ್ತಕಗಳ ಪಾತ್ರ ಹಿರಿದು. ಇಂತಹ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯದ ಸದ್ಬಳಕೆಯಿಂದ ಸ್ವಯಂ ವ್ಯಕ್ತಿತ್ವ ವಿಕಾಸ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳ ಉತ್ತಮ ನಿರ್ವಹಣೆ ಸಾಧ್ಯವಾಗುತ್ತದೆ. ಆದ್ದರಿಂದ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಿ ಕಾಲಕಾಲಕ್ಕೆ ಅದನ್ನು ವಾಸ್ತವಿಕ ನೆಲೆಗಟ್ಟಿಗೆ ತಕ್ಕಂತೆ ವಿಸ್ತೃತಗೊಳಿಸುವುದು ನಮ್ಮ ಕರ್ತವ್ಯವಾಗಬೇಕು.

## 3. ಸಾಮಾಜಿಕ ಪಿಡುಗುಗಳು

ಪೀಠಿಕೆ: ಇಂದು ಮಾನವನಿಗೆ ಅತಿ ಅವಶ್ಯಕವಿರುವ ಪರಿಸರ ಹಾಳಾಗುತ್ತಿರುವುದಕ್ಕೆ ವಿವಿಧ ಕಾರಣಗಳಿದ್ದು ಅದರಲ್ಲಿ ಮುಖ್ಯವಾದ ಕಾರಣ ಮಿತಿಮೀರಿದ ಜನಸಂಖ್ಯೆ. ಇದನ್ನಾಧರಿಸಿ ಹುಟ್ಟುವ ಸಮಸ್ಯೆಗಳಲ್ಲಿ "ಸಾಮಾಜಿಕ ಪಿಡುಗುಗಳು" ಮುಖ್ಯವಾಗಿವೆ. " ಸಮಾಜದ ಪ್ರಗತಿಗೆ ಅಥವಾ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಡ್ಡಿಯನ್ನು ಉಂಟುಮಾಡುವ ಶಕ್ತಿಗಳನ್ನು "ಸಾಮಾಜಿಕ ಪಿಡುಗುಗಳು" ಎನ್ನುವರು.

ವಿಷಯ ನಿರೂಪಣೆ : ಸಾಮಾಜಿಕ ಪಿಡುಗುಗಳು: ಸಾಮಾಜಿಕ ಪಿಡುಗುಗಳಲ್ಲಿ ಮುಖ್ಯವಾದವುಗಳೆಂದರೆ –ಬಡತನ, ನಿರುದ್ಯೋಗ, ಅಜ್ಞಾನ,ಅನಕ್ಷರತೆ,ಜಾತೀಯತೆ, ಸ್ತ್ರೀಶೋಷಣೆ, ಮಾದಕವಸ್ತುಗಳ ಸೇವನೆ" ಮೊದಲಾದವುಗಳು. ಅಜ್ಞಾನಕ್ಕೆ ಅನಕ್ಷರತೆಯೇ ಮುಖ್ಯ ಕಾರಣ. ಅಜ್ಞಾನ ಮತ್ತು ಅನಕ್ಷರತೆಗಳು sಒಂದು ನಾಣ್ಯದ ಎರಡು ಮುಖಳಿದ್ದಂತೆ" ಅಜ್ಞಾನವು ಸಮಾಜವನ್ನು ಅಧ:ಪತನದತ್ತ ಕೊಂಡೊಯ್ಯುತ್ತದೆ. ಇವೆರಡು ಇದ್ದ ಕಡೆಗೆ– ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ತಲೆದೋರುತ್ತವೆ. ನಮ್ಮ ದೇಶವು ಪುರುಷ ಪ್ರಧಾನ ರಾಷ್ಟ್ರವಾಗಿರುವುದರಿಂದ ಸ್ತ್ರೀ ಭ್ರೂಣಹತ್ಯೆ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆ ಮುಂತಾದ ರೂಪದಲ್ಲಿಸ್ತ್ರೀ ಶೋಷಣೆ ಮಾಡುತ್ತಿದ್ದಾರೆ. ಇಂದು ಜಾತೀಯತೆಯ ಅಖಂಡವಾದ ಭಾರತಕ್ಕೆ ಧಕ್ಕೆಯನ್ನುಂಟುಮಾಡುತ್ತಿದೆ. ಇದರಿಂದ ಜನತೆಯಲ್ಲಿ ಅಶಾಂತಿ, ದ್ವೇಷ, ಅರಾಜಕತೆ ಉಂಟಾಗಿ ಐಕ್ಯತೆಗೆ ಧಕ್ಕೆ ಉಂಟಾಗುತ್ತಿದೆ. ಅಸ್ಪೃಶ್ಯತೆಯು ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ಘೋರ ಶಾಪವಾಗಿದೆ. ಜಾತಿಪದ್ಧತಿಯ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿರುವ ಇದು ಸುಲಭವಾಗಿ ನಿರ್ಮೂಲನೆ ಮಾಡಲಾಗದ ಅಂಟುರೋಗವಾಗಿದೆ.

ನಿವಾರಣೋಪಾಯಗಳು : ಯುವಕ–ಯುವತಿಯರು ಮಾದಕ ಪೇಯಗಳ ಹಾನಿಯನ್ನು ಜನರಿಗೆ ತಿಳಿಸುವುದು. ಅವುಗಳ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸುವುದು. ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟುವುದರಿಂದ ಬಡತನ ದಾರಿದ್ರ್ಯವನ್ನು ಕಡಿಮೆ ಮಾಡಬಹುದು. ಸ್ತ್ರೀಶೋಷಣೆಯನ್ನು ನಿಲ್ಲಿಸಬೇಕಾದರೆ , ಸ್ತ್ರೀಯರಿಗೆ ಯೋಗ್ಯ ಶಿಕ್ಷಣ ನೀಡಬೇಕು.ಸ್ತ್ರೀಯರಿಗೆ ಪುರುಷರಷ್ಟೆ ಸಮಾನ ಸ್ಥಾನ ಸಿಗುವಂತಾಗಬೇಕು. ಜಾತೀಯತೆಯನ್ನು ಹೋಗಲಾಡಿಸಲು ಶಿಕ್ಷಣ ಸಂಸ್ಥೆಗಳು ಧಾರ್ಮಿಕ ಸಂಘಗಳು ಮಾನವೀಯತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

ಉಪಸಂಹಾರ : "ಸಮಾಜದ ಹಿತವೇ ತನ್ನ ಹಿತ" ವೆಂದು ಬದುಕಬೇಕಾದ ಮಾನವನು ಇಂದು ಸಾಮಾಜಿಕ ಪಿಡುಗುಗಳ ಸಮಸ್ಯೆಯ ಸುಳಿಯಲ್ಲಿ ಸಿಕ್ಕು ನಲುಗಿ ಹೋಗುತ್ತಿದ್ದಾನೆ. ಇದರಿಂದ ದೇಶದ ಅಭಿವೃದ್ಧಿಗೆ ಮಾರಕಗಳಾಗುತ್ತಿವೆ.ಆದ್ದರಿಂದ ಸಮಾಜ , ಸರಕಾರ, ಮುಖ್ಯವಾಗಿ ಯುವ ಜನಾಂಗವು ಎಚ್ಚೆತ್ತುಕೊಳ್ಳಬೇಕು. ಈ ಪಿಡುಗುಗಳಿಂದ ಆಗುತ್ತಿರುವ ಕೆಡುಕುಗಳನ್ನು ಗ್ರಹಿಸಿ ನಿಗ್ರಹಿಸಲು ಉದ್ಯುಕ್ತರಾಗಬೇಕು. ಹಾಗಾದಾಗ ಮಾತ್ರ ಸ್ವಾಸ್ಥ್ಯ ಸಮಾಜವು ನಿರ್ಮಾಣವಾಗುತ್ತದೆ.

## 4. ಸ್ವಚ್ಛ ಭಾರತ ಅಭಿಯಾನ

ಪೀಠಿಕೆ : ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಇದು ನಮ್ಮ ಮನೆ ಪರಿಸರದಿಂದಲೇ ಪ್ರಾರಂಭಿಸಬೇಕು.

ವಿಷಯ ನಿರೂಪಣೆ : ಇದು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದೆ .ಮಾನ್ಯ ಪ್ರಧಾನಿಗಳಾದ ನರೇಂದ್ರ ಮೋದಿಯವರು ಗಂಧೀಜಿಯವರ 145 ನೇ ಜಯಂತಿಯಂದು 2014 ರ ಅಕ್ಟೋಬರ 2 ರಂದು ತಾವೇ ಕಸಗೂಡಿಸುವ ಮೂಲಕ ರಾಜ್ ಘಾಟ್‌ನಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು 2019 ಅಕ್ಟೋಬರ್ 2 ಒಳಗೆ ಭಾರತವನ್ನು ಕಸಮುಕ್ತಗೊಳಿಸಲು ನಿರ್ಧರಿಸಲಾಗಿದೆ. ನಮ್ಮ ಓಣಿ , ಶಾಲೆ,ಕಛೇರಿ ಕಟ್ಟಡ,ಊರು , ನಗರ ಮೊದಲಾದವುಗಳನ್ನು ಸ್ವಚ್ಛಗೊಳಿಸುದು ಬಯಲು ಶೌಚ ನಿರ್ಮೂಲನೆ,ಮಲ ಹೊರುವ ಪದ್ಧತಿಯ ನಿರ್ಮೂಲನೆ ,100% ತ್ಯಾಜ್ಯ ವಸ್ತುವಿನ ನಿರ್ವಹಣೆ,ಸಂಪೂರ್ಣ ಕೊಳಗೇರಿಗಳ ನಿರ್ಮೂಲನೆ ಜನರಲ್ಲಿ ನಿರ್ಮಲೀಕರಣಕ್ಕಗಿ ಮನಸಿಕ ಬದಲಾವಣೆ ಹೀಗೆಮೊದಲಾದ ಉದ್ದೇಶಗಳನ್ನು ಇಟ್ಟುಕೊಂಡು ಈ ಅಭಿಯಾನವನ್ನು ಜಾರಿಗೆ ತರಲಾಗಿದೆ.

ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳಲ್ಲಿ ಮೂರು ವಿಧ. ಘನತ್ಯಾಜ್ಯವಸ್ತುಗಳು, ದ್ರವತ್ಯಾಜ್ಯವಸ್ತುಗಳು ಮತ್ತು ಅನಿಲತ್ಯಾಜ್ಯ ವಸ್ತುಗಳು. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜ್ಞಾನಿಕ ರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.ಮರುಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಮರುಬಳಕೆಗೂ ಮರುಬಳಕೆ ಮಾಡಲಾಗದ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ದಹಿಸಿಬೇಕು ಅಥವಾ

ಭೂಮಿಯಲ್ಲಿ ಹೂಳಬೇಕು.ಅಮೆರಿಕದಲ್ಲಿ ಪ್ರತಿವರ್ಷ ರಿಸೈಕಲಿಂಗ್ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುತ್ತಾರೆ.ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುತ್ತಾರೆ.ವಿಯೆನ್ನಾದಲ್ಲಿ ದಹನಕ್ರಿಯಾ ಸ್ಥಾವರ ನಿರ್ಮಿಸಿರುತ್ತಾರೆ.

ಉಪಸಂಹಾರ : ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಾಂಪೋಸ್ಟ ತಯಾರಿಕೆ, ರಿಸೈಕಲಿಂಗ್ ಮಾಡುವುದನ್ನು ಹವ್ಯಾಸ ಮಾಡಿಕೊಂಡರೆ ಸ್ವಚ್ಚ ಭಾರತ ಅಭಿಯಾನಕ್ಕೆ ಚೊಚ್ಚಲು ಕಾಣಿಕೆ ನೀಡಿದಂತಾಗುತ್ತದೆ.ಈ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು.ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

## 5. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಪೀಠಿಕೆ : ಯಾವುದೇ ಒಂದು ದೇಶದ ಇತಿಹಾಸವನ್ನು ತಿಳಿಯಬೇಕಾದರೆ ಪ್ರಾಚ್ಯವಸ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದೇ ರೀತಿಯಾಗಿ ಭಾರತದ ಹಾಗೂ ಕರ್ನಾಟಕ ಇತಿಹಾಸದ ಮಹತ್ವದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಾಚ್ಯವಸ್ತುಗಳು ಬಹಳ ಮುಖ್ಯವಾಗಿರುತ್ತವೆ. ಅವುಗಳೆಂದರೆ ಶಾಸನಗಳು, ನಾಣ್ಯಗಳು, ಪ್ರಾಚೀನ ದೇವಾಲಯಗಳು, ತಾಮ್ರಪಟ, ತಾಳೆಗರಿ ಮುಂತಾದ ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ .

ವಿಷಯ ನಿರೂಪಣೆ : ಪ್ರಾಚ್ಯ ವಸ್ತುಗಳ ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳು – ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವ ಮಹತ್ವವನ್ನು ಪ್ರತಿಯೊಬ್ಬರಿಗೂ ತಿಳಿಸಿ ಕೊಡಬೇಕು.

- ಪ್ರಾಚ್ಯವಸ್ತುಗಳ ಸಂರಕ್ಷಣೆಗಾಗಿ ಇಲಾಖೆಯಿಂದ ವಿಶೇಷ ಕಾಳಜಿ ವಹಿಸುವುದು.
- ಪ್ರಾಚ್ಯವಸ್ತುಗಳ ಸಂರಕ್ಷಣೆಯ ಬಗ್ಗೆ ವಿದ್ಯಾರ್ಥಿಗಳಾದ ನಾವು ಕೂಡಾ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಐತಿಹಾಸಿಕ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ವಸ್ತುಸಂಗ್ರಹಾಲಯಗಳನ್ನು ನಿರ್ಮಿಸಿ ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು.
- ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದ ಜನರಿಗೆ ಪ್ರೋತ್ಸಾಹ ನೀಡುವುದು.
- ಪ್ರಾಚ್ಯವಸ್ತು ಸಂರಕ್ಷಣೆ ಮಾಡುವಲ್ಲಿ ವಿಶೇಷ ಕಾಳಜಿ ವಹಿಸಿದ ಇಲಾಖಾ ಅಧಿಕಾರಿಗಳಿಗೆ ಗೌರವ ಹಾಗೂ ಪ್ರೋತ್ಸಾಹ ನೀಡುವುದು.
- ಐತಿಹಾಸಿಕ ಸ್ಥಳಗಳಲ್ಲಿ ಜನವಸತಿಯನ್ನು ನಿಷೇಧಿಸುವುದು.
- ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರಾಚ್ಯ ವಸ್ತುಗಳ ಸಂರಕ್ಷಣೆ ಕುರಿತು ಮಾಧ್ಯಮಗಳ ಮೂಲಕ ಜಾಹಿರಾತು ನೀಡುವುದು.

ಉಪಸಂಹಾರ : ನಮ್ಮ ದೇಶ ಐತಿಹಾಸಿಕವಾಗಿ ತನ್ನದೆ ಆದ ಪ್ರಾಮುಖ್ಯತೆ ಪಡೆದರೂ ಕೂಡ ಬೇರೆ ದೇಶಗಳಿಗೆ ಹೋಲಿಸಿದರೆ ಪ್ರಾಚ್ಯವಸ್ತುಗಳ ಸಂರಕ್ಷಣೆಗೆ ನಾವು ನೀಡುವ ಪ್ರೋತ್ಸಾಹ ಹಾಗೂ ಸಂರಕ್ಷಣಾ ಕ್ರಮ ನೋಡಿದರೆ ಇನ್ನೂ ಕಡಿಮೆ ಎನಿಸುತ್ತದೆ.ಆದ್ದರಿಂದ ಪ್ರಾಚ್ಯವಸ್ತುಗಳು ಒಂದು ದೇಶದ ಆಸ್ತಿ ಇದ್ದ ಹಾಗೆ ಅವುಗಳ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಹೊಣೆ.

## 6. ರಾಷ್ಟ್ರೀಯ ಭಾವೈಕ್ಯ

ಪೀಠಿಕೆ: ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಧರ್ಮ, ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೊಂದಿರುವುದೇ "ರಾಷ್ಟ್ರೀಯ ಭಾವೈಕ್ಯತೆ". ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ,ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

ವಿಷಯ ನಿರೂಪಣೆ : ಭಾರತವು ವಿವಿಧ ಧರ್ಮ,ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊಂದಿದ್ದು,ದೇಶದ ಯಾವುದೇ ಮೂಲೆಗೆ ಹೋದರು ಅಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಚಲಿಸುತ್ತಿದೆ. ದೇಶದಎಲ್ಲ ಭಾಗಗಳಲ್ಲಿಯೂ,ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ,ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದೆ.ಆದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಬಲವಾದ ಬೇರೂರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ "ವಂದೇಮಾತರಂ, ಸಾರೇ ಜಹಾಸೇ ಅಚ್ಚಾ, ಜನಗಣಮನ ಅಧಿನಾಯಕ" ದಂತಹ ದೇಶ ಭಕ್ತಿಗೀತೆಗಳು ನಮ್ಮಲ್ಲಿ ದೇಶಪ್ರೇಮ, ದೇಶಾಭಿಮಾನವನ್ನು ಹುಟ್ಟಿಸುತ್ತವೆ. ಇಡೀ ದೇಶವೇ ವೈವಿಧ್ಯಮಯದ ಸಾಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

ಉಪಸಂಹಾರ : ಇತ್ತೀಚಿಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲಾವಣೆಯ ಹಂತದಲ್ಲಿದೆ. ವಿಜ್ಞಾನ ತಂತ್ರಜ್ಞಾನದ ಅಭಿವೃದ್ದಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

## 7. ತ್ಯಾಜ್ಯವಸ್ತು ನಿರ್ವಹಣೆ

ಪೀಠಿಕೆ : ಕಸದ ಸಂಗ್ರಹಣೆ, ಸಂಸ್ಕರಣೆ, ಪುನರ್ಬಳಕೆ ಇಂದು ಮಾನವನ ಭೌತಿಕ ಪರಿಸರ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಕೈಗಾರಿಕೀಕರಣ, ನಗರೀಕರಣ, ಸಂಸ್ಕೃತೀಕರಣ, ಜಾಗತೀಕರಣದ ಅಬ್ಬರದಲ್ಲಿ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಒಂದು ಸಮಸ್ಯೆಯಾಗುತ್ತಿದೆ.

ವಿಷಯ ನಿರೂಪಣೆ :ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳಲ್ಲಿ ಮೂರು ವಿಧ.ಘನತ್ಯಾಜ್ಯವಸ್ತುಗಳು, ದ್ರವತ್ಯಾಜ್ಯವಸ್ತುಗಳು ಮತ್ತು ಅನಿಲತ್ಯಾಜ್ಯ ವಸ್ತುಗಳು.ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜ್ಞಾನಿಕರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.ಮರುಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಮರುಬಳಕೆಗೂ ಮರುಬಳಕೆ ಮಾಡಲಾಗದ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ದಹಿಸಿಬೇಕು ಅಥವಾ ಭೂಮಿಯಲ್ಲಿ ಹೂಳಬೇಕು.ಅಮೇರಿಕದಲ್ಲಿ ಪ್ರತಿವರ್ಷ ರಿಸೈಕಲಿಂಗ್ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುತ್ತಾರೆ.ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುತ್ತಾರೆ.ವಿಯೆನ್ನಾದಲ್ಲಿ ದಹನಕ್ರಿಯಾ ಸ್ಥಾವರ ನಿರ್ಮಿಸಿರುತ್ತಾರೆ.

ಉಪಸಂಹಾರ : ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಾಂಪೋಸ್ಟ ತಯಾರಿಕೆ, ರಿಸೈಕಲಿಂಗ್ ಮಾಡುವುದನ್ನು ಹವ್ಯಾಸ ಮಾಡಿಕೊಂಡರೆ ಸ್ವಚ್ಚ ಭಾರತ ಅಭಿಯಾನಕ್ಕೆ ಚೊಚ್ಚಲು ಕಾಣಿಕೆ ನೀಡಿದಂತಾಗುತ್ತದೆ.ಈ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು.ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

## 8. ಲಲಿತ ಕಲೆಗಳು

ಪೀಠಿಕೆ : ಮಾನವನು ಸಮಾಜ ಜೀವಿ. ಸಮಾಜ , ಸಂಗ , ಅನುಕರಣೆಯಿಂದ ಮಾನವ ಸಂಸ್ಕೃತಿ ಸಂಸ್ಕಾರಗಳನ್ನು ಕಲಿಯುತ್ತಾನೆ. ಇದರ ಜೊತೆಗೆ ಮಾನವ ಸಂಸ್ಕಾರವಂತನಾಗಲು, ಸಂಪ್ರದಾಯ ಅರಿಯಲು ಇದಕ್ಕೂ ಹೆಚ್ಚಾಗಿ ಮನುಷ್ಯನಾಗಲು ಲಲಿತ ಕಲೆಗಳು ನೆರವಾಗುತ್ತವೆ.

ವಿಷಯ ನಿರೂಪಣೆ : ಸಾಹಿತ್ಯ , ನೃತ್ಯ , ಸಂಗೀತ, ನಾಟಕ, ಯಕ್ಷಗಾನ, ಬಯಲಾಟ ಮುಂತಾದ ಲಲಿತ ಕಲೆಗಳು ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿಸುವದರ ಜೊತೆಗೆ ಮನೋವಿಕಾಸಕ್ಕೆ ಸಹಕಾರಿಯಾಗುತ್ತವೆ. ಲಲಿತ ಕಲೆಗಳು ಮಾನವನ ಜೀವನ ಕ್ರಮವನ್ನು ಭವ್ಯತೆಗೊಯ್ಯುವ ಶಕ್ತಿ ಪಡೆದಿವೆ. ಇದರ ಜೊತೆಗೆ ಲಲಿತ ವಿಶ್ವಮಾನವತೆಯ ಪ್ರತಿಬಿಂಬವಾಗಿವೆ. ಲಲಿತ ಕಲೆಗಳು : ಲಲಿತ ಕಲೆಗಳನ್ನು ಜನಪದ ಕಲೆಗಳು ಮತ್ತು ಶಿಷ್ಟ ಕಲೆಗಳೆಂದು ಕರೆಯುತ್ತೇವೆ. ಅವುಗಳೆಂದರೆ ಸಂಗೀತ, ನೃತ್ಯ, ಶಿಲ್ಪ, ಚಿತ್ರ , ಸಾಹಿತ್ಯ ಕಲೆಗಳೆಂದು ಕರೆಯಲಾಗಿದೆ. ಇದರಂತೆ ಅನುಕ್ರಮವಾಗಿ ಸ್ವರ ( ನಾದ ) ಅಭಿನಯ, ಶಿಲೆ, ಬಣ್ಣ, ಹಾಗೂ ಶಬ್ದ ಆಯಾ ಕಲೆಗಳ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಪ್ರತಿಭೆ, ಸ್ವಯಂಕಲ್ಪನೆ, ಸತತ ಅಭ್ಯಾಸ, ಇವುಗಳಿಂದಲೇ ಲಲಿತ ಕಲೆಗಳು ಅರಳಲುಸಾಧ್ಯವಾಗಿದೆ. ಈ ಲಲಿತ ಕಲೆಗಳು ಪಾರಂಪರಿಕವಾಗಿ ನಮ್ಮಲ್ಲಿ ಬೆರೆತುಹೋಗಿರುವುದರ ಜೊತೆಗೆ ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣವಾಗಿವೆ. ಮಾನವನ ಮಾನಸಿಕ ಹಸಿವನ್ನು ಹಿಂಗಿಸುವ ಕೆಲಸವನ್ನು ಮಾಡಿವೆ. ಪರಂಪರಾಗತವಾಗಿ ನಮ್ಮನ್ನು ತಣಿಸಿದ ಈಲಲಿತ ಕಲೆಗಳು ಇಂದು ಜೀವಂತವಾಗಿ ಉಳಿಯುತ್ತಿವೆಯಾ? ಎಂದು ನಾವೇ ಕೇಳಿಕೊಳ್ಳಬೇಕಾದ ಅನಿವಾರ್ಯತೆಗಳು ಅನುಮಾನಗಳು ಬರುತ್ತಿವೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು ಒಂದು ಅವ್ಯಾಹತವಾಗಿ ಬೆಳೆಯುತ್ತಿರುವ ವೈಜ್ಞಾನಿಕತೆ ಇನ್ನೊಂದು ಮಾಹಿತಿ ಮತ್ತು ತಂತ್ರಜ್ಞಾನ ಅದರೊಂದಿಗೆ ತಳಕು ಹಾಕಿಕೊಂಡು ಬೆಳೆಯುತ್ತಿರುವ ಆಧುನಿಕತೆ.

ಉಪಸಂಹಾರ : ಒಟ್ಟಿನಲ್ಲಿ ಲಲಿತ ಕಲೆಗಳ ಅಳಿವು ಹಾಗೂ ಉಳಿವು ನಮಗೆ ಸೇರಿದ ವಿಷಯವಾಗಿದೆ. ಮಾನವನ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣವಾಗಿರುವ ಲಲಿತ ಕಲೆಗಳನ್ನು ಉಳಿಸಿ ಬೆಳೆಸಬೇಕಾದರೆ ನಾವು ನಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆ ಇದೆ.ಇದರ ಜೊತೆಗೆ ಸರ್ಕಾರ ಹಾಗೂ ಸಂಘ–ಸಂಸ್ಥೆಗಳು ಅವುಗಳ ಉಳಿವಿಗೆ ಕಂಕಣ ಕಟ್ಟಿ ಪ್ರೋತ್ಸಾಹ ನೀಡುವುದು ಅವಶ್ಯಕವಾಗಿದೆ.

## 9. ಮಹಿಳಾ ಸಬಲೀಕರಣ

ಪೀಠಿಕೆ : ಭಾರತ ದೇಶ ಸಂಸ್ಕೃತಿ, ಸಂಸ್ಕಾರಕ್ಕೆ ಹೆಸರುವಾಸಿಯಾದ ದೇಶ. ಇದರ ಜೊತೆಗೆ ಭಾರತ ದೇಶ ಉಪಖಂಡವೆಂತಲೂ ಕರೆಯಲಾಗಿದೆ. ಬಹುಶಃ ಪ್ರಪಂಚದಲ್ಲಿ ಮಹಿಳೆಯರಿಗೆ ಪೌರಾಣಿಕವಾಗಿ, ಸಂಸ್ಕೃತಿಕವಾಗಿ, ಐತಿಹಾಸಿಕವಾಗಿ ಮಹತ್ವದ ಸ್ಥಾನ ನೀಡಿದ ದೇಶ ಭಾರತ.ದೇಶದ ಅಭಿವೃದ್ದಿಯೆಂದರೆ ಮಹಿಳರಯರ ಅಭಿವೃದ್ದಿ ಎಂದರ್ಥ. ಅಂದರೆ ಅಬಲೆಯೆಂದು ಕರೆಯಲ್ಪಡುವ ಮಹಿಳೆ ಸಬಲೆಯಾಗಬೇಕು.

ವಿಷಯ ನಿರೂಪಣೆ : ಮಹಿಳೆಯರಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದನ್ನು ಮಹಿಳಾ ಸಬಲೀಕರಣ ಎಂದು ಕರೆಯುತ್ತಾರೆ.ಭಾರತದಲ್ಲಿ 1970 ರಿಂದ ಸ್ತ್ರೀ ವಾದವು ಪ್ರಾರಂಭವಾಯಿತು.2001 ನೆಯ ವರ್ಷವನ್ನು ಭಾರತ ಸರಕಾರವು ಮಹಿಳಾ ಸಬಲೀಕರಣ ವರ್ಷವೆಂದು ಘೋಷಿಸಿತು. ರಾಷ್ಟ್ರೀಯ ಮಹಿಳಾ ಸಬಲೀಕರಣ ರಾಜ್ಯ ನೀತಿಯೂ 2001ರಲ್ಲಿ ಜಾರಿಗೆ ಬಂದಿತು. ಮಹಿಳಾ ಸಬಲೀಕರಣ ಎಂದರೆ– ಮಹಿಳೆಯರು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವಂತೆ ಮಾಡುವುದು. ಮಹಿಳೆಯರ ಇಚ್ಚೆಗೆ ಅನುಸಾರ ಆಯ್ಕೆ ಮಾಡುವ ಅವಕಾಶಗಳನ್ನು ನೀಡುವುದು.ಪ್ರಜಾಪ್ರಭುತ್ವದ ಮಾರ್ಗದಲ್ಲಿ ಇತರರ ಗ್ರಹಿಕಾಶಕ್ತಿಯನ್ನು ಬದಲಾಯಿಸುವಂತೆ ಮಾಡುವುದು.ಆತ್ಮಾಭಿಮಾನ ಹೆಚ್ಚು ಮಾಡುವುದರಲ್ಲಿ ಹಾಗೂ ಕಳಂಕದಿಂದ ಪಾರಾಗುವುದರಲ್ಲಿ ತೊಡಗಿಕೊಳ್ಳುವುದು. "ಯತ್ರನಾರ್ಯಸ್ತು ಪೂಜ್ಯಂತೆ ರಮಂತೇ ತತ್ರದೇವತಾ" ಹೀಗೆ ಭಾರತ ದೇಶವು ಮಹಿಳೆಯರನ್ನು ಪೂಜ್ಯ ಸ್ಥಾನದಲ್ಲಿಟ್ಟು ಕಾಣುತ್ತದೆ. ಭಾರತೀಯ ಸಂವಿಧಾನವು ಮಹಿಳೆಯರೆಲ್ಲರಿಗೂ ಸಮಾನತೆ, ಸಮಾನ ಅವಕಾಶ ಇತ್ಯಾದಿಗಳನ್ನು ನೀಡಿದೆ.ಮಹಿಳೆಯರಿಗೆ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣ ಮತ್ತು ಮಾತೃತ್ವದ ಸವಲತ್ತುಗಳನ್ನು ಭದ್ರತೆ ನೀಡುವಂತಹ ಅವಕಾಶಗಳನ್ನು ಕಲ್ಪಿಸಿದೆ.

ಉಪಸಂಹಾರ : ಒಟ್ಟಾರೆಯಾಗಿ ಮಹಿಳಾ ಸಬಲೀಕರಣದಲ್ಲಿ ಸರಕಾರ , ಸಮಾಜ, ಸಂಘ-ಸಂಸ್ಥೆಗಳಷ್ಟೇ ತೊಡಗಿಕೊಂಡರೆ ಸಾಲದು. ಸ್ವತಃ ಮಹಿಳೆಯರು ಸಬಲರಾಗಬೇಕೆಂದು ಸ್ವ ಇಚ್ಚೆಯಿಂದ ಕಾರ್ಯಪ್ರವೃತ್ತರಾಗಬೇಕು.ಸಮಾಜದಲ್ಲಿ ಶಿಕ್ಷಣವನ್ನು ಪಡೆದುಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಲು ಮಹಿಳೆ ಪ್ರಯತ್ನಿಸಬೇಕು. ಅಂದಾಗ ಮಹಿಳಾ ಸಬಲೀಕರಣ ಸಾಧ್ಯವಾಗುತ್ತದೆ.

# ಪ್ರಚಲಿತ ಘಟನೆಗಳನ್ನಾಧರಿಸಿದ ಪ್ರಬಂಧಗಳು

## 1. ಪ್ರೌಢಶಾಲಾ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ದೊರಕುವ ಅವಕಾಶಗಳು

ಪೀಠಿಕೆ

ಸೃಜನಶೀಲ ಚೈತನ್ಯ' ಮತ್ತು 'ಧಾರಾಳ ಸಂತಸ' ಇವೆರಡೂ ಬಾಲ್ಯದ ಕೀಲಿಕೈಗಳಾಗಿವೆ. ಇಂದು ಮಕ್ಕಳು ಅನುಭವಿಸುತ್ತಿರುವ ಒತ್ತಡವನ್ನು ಕಡಿಮೆ ಮಾಡಲು ಮತ್ತು ಶಿಕ್ಷಣವನ್ನು ಇಂದಿನ ಮತ್ತು ಭವಿಷ್ಯದ ಅಗತ್ಯತೆಗಳಿಗೆ ಸೂಕ್ತವಾಗಿ ರೂಪಿಸಲು ಶಾಲಾ ಪಠ್ಯಕ್ರಮದಲ್ಲಿರುವ ಎಲ್ಲ ವಿಷಯಗಳ ಪರಿಣಾಮಕಾರಿ ಬೋಧನೆಯ ಜೊತೆಗೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು ಅಗತ್ಯವಾಗಿದೆ. "ವಿಜ್ಞಾನವೇ ಶಿಕ್ಷಣ, ಶಿಕ್ಷಣವೇ ವಿಜ್ಞಾನ" ಎಂಬ ಮಾತಿನಂತೆ ಪ್ರೌಢಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ವೈಜ್ಞಾನಿಕ ಮನೋಭಾವ ಬೆಳೆಸುವ ಸಾಕಷ್ಟು ಅವಕಾಶಗಳು ದೊರೆಯುತ್ತವೆ.

ವಿಷಯ ನಿರೂಪಣೆ

ಒಳ್ಳೆಯ ವಿಜ್ಞಾನ ಶಿಕ್ಷಣ ಮಗುವಿನ ಬದುಕಿಗೆ ಅಗತ್ಯ ವೈಜ್ಞಾನಿಕ ಮನೋಭಾವ ಬೆಳೆಸುವುದರ ಜೊತೆಗೆ ಆತನ ಭೌದ್ಧಿಕ ಮಟ್ಟವನ್ನು ಹೆಚ್ಚಿಸುತ್ತದೆ. ವಿಜ್ಞಾನದ ಶಿಕ್ಷಣವು ಮಗುವಿನ ಸಹಜ ಕುತೂಹಲ ಮತ್ತು ಸೃಜನಶೀಲತೆಯನ್ನೂ ಓರೆಗೆ ಹಚ್ಚುವುದಲ್ಲದೆ ವಿಜ್ಞಾನವನ್ನು ಸಾಮಾಜಿಕ ಸಾಹಸವಾಗಿ ನೋಡುವಂತೆ ಮತ್ತು ವಿಜ್ಞಾನದ ಬೆಳವಣಿಗೆಯಲ್ಲಿ ಸಾಮಾಜಿಕ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ವಿಜ್ಞಾನವನ್ನು ಬೋಧಿಸುವ ಶಿಕ್ಷಕರು ವಿದ್ಯಾರ್ಥಿಗಳಿಗೆ ತಮ್ಮ ಪಾಠದಲ್ಲಿ ಬಂದಿರುವ ರಾಸಾಯನಿಕಶಾಸ್ತ್ರ, ಭೌತಶಾಸ್ತ್ರ ಮತ್ತು ಜೀವಶಾಸ್ತ್ರಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ತರಗತಿ ಮತ್ತು ಪ್ರಯೋಗಾಲಯಗಳಲ್ಲಿ ಮಾಡುತ್ತಾರೆ. ವಿಜ್ಞಾನ ದಿನಾಚರಣೆಗಳನ್ನು ಆಚರಿಸುವ ಸಂದರ್ಭದಲ್ಲಿ ಶ್ರೇಷ್ಠ ವಿಜ್ಞಾನಿಗಳು ಅವರ ಸಂಶೋಧನೆಗಳನ್ನು ಪರಿಚಯಸುತ್ತಾರೆ. ಮಕ್ಕಳಿಂದಲೇ ವಿಜ್ಞಾನ ಮಾದರಿಗಳನ್ನು ಮಾಡಿಸಿ, ಅವುಗಳನ್ನು ವಿಜ್ಞಾನ ವಸ್ತು ಪ್ರದರ್ಶನಗಳಲ್ಲಿ ಪ್ರದರ್ಶಿಸುತ್ತಾರೆ. ರಾಸಾಯನಿಕ ಮತ್ತು ಭೌತಶಾಸ್ತ್ರಗಳಲ್ಲಿನ ಪ್ರಯೋಗಗಳಲ್ಲಿ ಉಂಟಾಗುವ ವಿವಿಧ ಬಗೆಯ ಭೌತಿಕ ಹಾಗೂ ರಾಸಾಯನಿಕ ಬದಲಾವಣೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಹೇಳಿ, ಅವರಲ್ಲಿರುವ ಸೃಜನಶೀಲತೆಯನ್ನು ಹೊರಹೊಮ್ಮಿಸುತ್ತಾರೆ. ವಿಜ್ಞಾನ ನಿಘಂಟು, ವಿಜ್ಞಾನ ಸಂಬಂಧಿಸಿದ ಚಿತ್ರಪಟಗಳು, ವಿಡಿಯೋಗಳ ಮೂಲಕ ಮೂಲಕ ವಿದ್ಯಾರ್ಥಿಗಳನ್ನು ವಿಜ್ಞಾನ ಕೂತೂಹಲಿಗಳನ್ನಾಗಿ ಮಾಡುತ್ತಾರೆ. ನಮ್ಮ ಸುತ್ತಮುತ್ತಲ ಪರಿಸರದಲ್ಲಿನ ಸನ್ನಿವೇಶಗಳು ವೈಜ್ಞಾನಿಕ ಸಂಶೋಧನೆಗೆ ಹೇಗೆ ಪೂರಕವಾಗಿವೆ ಎಂಬುದರ ಅರಿವು ಮೂಡಿಸುತ್ತಾರೆ. ಅದೇರೀತಿ ಸಮಾಜ ವಿಜ್ಞಾನ ವಿಷಯದಲ್ಲಿ ಬರುವ ಸೌರವ್ಯೂಹದ ರಚನೆ, ವಿವಿಧ ಆಕಾಶಕಾಯಗಳ ರಚನೆ ಮತ್ತ ಚಲನೆ, ಭೂಮಿಯ ರಚನೆ, ರೇಖಾಂಶ ಮತ್ತು ಅಕ್ಷಾಂಶಗಳ ತಿಳುವಳಿಕೆ, ವಿಶ್ವದ ವಿವಿಧ ಖಂಡಗಳ ಆಕಾರ, ಸ್ಥಳಗಳನ್ನು ಗುರುತಿಸಲು ಸಹಾಯಕವಾಗುವ ಗ್ಲೋಬ್‌ಗಳು ಮತ್ತು ನಕ್ಷೆಗಳು, ಜ್ವಾಲಾಮುಖಿ ಮತ್ತು ಭೂಕಂಪಗಳು ಉಂಟಾಗಲು ಕಾರಣಗಳು, ಡಾರ್ವಿನ್ ವಿಕಾಸವಾದದ ಸಿದ್ಧಾಂತ ಇವುಗಳು ವಿದ್ಯಾರ್ಥಿಗಳನ್ನು ಸೃಜನಶೀಲರನ್ನಾಗಿ ಮಾಡಿ, ವಿಜ್ಞಾನದ ಮೇಲೆ ಅವರಿಗೆ ಆಸಕ್ತಿ ಮೂಡುವಂತೆ ಮಾಡುತ್ತವೆ. ಹಾಗೆಯೇ ಗಣಿತ ವಿಷಯದಲ್ಲಿ ಬರುವ ಸೂತ್ರಗಳು, ರೇಖಾಗಣಿತದ ಸಿದ್ಧಾಂತಗಳು, ಭಾಷಾ ವಿಷಯಗಳಲ್ಲಿ ಬರುವ ಅಬ್ದುಲ್ ಕಲಾಮ್, ಸಿ.ವಿ.ರಾಮನ್, ಜಗದೀಶ ಚಂದ್ರಬೋಸ್, ಐನ್‌ಸ್ಟೀನ್, ನ್ಯೂಟನ್‌ರಂತಹ ಶ್ರೇಷ್ಠ ವಿಜ್ಞಾನಿಗಳ ಚರಿತ್ರೆಗಳನ್ನು ಮಕ್ಕಳು ತಿಳಿದುಕೊಂಡಾಗ ಅವರಂತೆ ತಾವಾಗಬೇಕೆಂಬ ಸ್ಫೂರ್ತಿ ಬೆಳೆಯುತ್ತದೆ.

ಉಪಸಂಹಾರ

'ವಿದ್ಯಾರ್ಥಿಗಳೆಲ್ಲ ವಿಜ್ಞಾನವಾದರೆ ಅಜ್ಞಾನವೆಲ್ಲ ಅಳಿದೀತು' ಎಂಬ ಸೂಕ್ತಿಯಂತೆ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಅಗತ್ಯವಾದ ಸಾಕಷ್ಟು ವಿಷಯಗಳು ಪ್ರೌಢಶಾಲಾ ಶಿಕ್ಷಣದಲ್ಲಿ ಅಡಕವಾಗಿವೆ ಎಂದು ಹೇಳುತ್ತಾ, ಪ್ರತಿಯೊಬ್ಬ ವಿದ್ಯಾರ್ಥಿಯು ಅವುಗಳಲ್ಲಿ ಅಡಗಿರುವ ಸತ್ಯವನ್ನು ಅರಿತು ನಿತ್ಯ ಜೀವನದಲ್ಲಿ ಆಚರಣೆಗೆ ತಂದರೆ ವ್ಯಕ್ತಿಗತವಾಗಿ ಪ್ರಗತಿ ಸಾಧಿಸುವುದಲ್ಲೆ ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ.

## 2. ಇಸ್ರೋ ಚಂದ್ರಯಾನ-2

ಪೀಠಿಕೆ:

ಬಾಹ್ಯಾಕಾಶ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಯನ್ನು ಸಾಧಿಸುತ್ತಿರುವ ಭಾರತವು ಇನ್ನೊಂದು ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ಇಸ್ರೋ) 2008ರಲ್ಲಿ ಯು.ಎಸ್.ಎ, ರಷ್ಯಾ, ಚೀನ ನಂತರ (ಮೊದಲ ಚಂದ್ರಯಾನ ಕೈಗೊಂಡಿತ್ತು. ಅದರ ಯಶಸ್ಸಿನ ಹುಮ್ಮಸ್ಸಿನೊಂದಿಗೆ ಚಂದ್ರ ಮೇಲ್ಮೈ ಅಧ್ಯಯನಕ್ಕೆ ದ್ವಿತೀಯ ಬಾರಿಗೆ ಚಂದ್ರಯಾನ – 2 ಕೈಗೊಳುವ ಮೂಲಕ ಪ್ರಪಂಚವನ್ನೇ ನಿಬ್ಬೆರಗಾಗಿಸುವ ಮೂಲಕ ಭಾರತೀಯರ ಹೆಗ್ಗಳಿಕೆಯನ್ನು ಹೆಚ್ಚಿಸಿದೆ. ಈ ಯೋಜನೆಯು ಶೇ 95ರಷ್ಟು ಗಳಿಸಿದೆ.

ವಿಷಯ ನಿರೂಪಣೆ:

ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ಇಸ್ರೋ) ಸಂಪೂರ್ಣ ಸ್ವತಂತ್ರವಾಗಿ ಅಭಿವೃದ್ಧಿಪಡಿಸಿದ MK-III(GSLV) ಮೂಲಕ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಮೂಲಕ ಚಂದ್ರಯಾನ – 2ರ ನೌಕೆಯನ್ನು 22 ಜುಲೈ 2019ರಂದು ಚಂದ್ರನ ದಕ್ಷಿಣ ದ್ರುವಕ್ಕೆ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಈ ನೌಕೆಯು 3850 ಕಿ.ಗ್ರಾ ತೂಕದ ಈ ನೌಕೆಯು ವಿಕ್ರಂಲ್ಯಾಂಡರ್ 9 ಸೆಪ್ಟೆಂಬರ್2019ರಂದು ಚಂದ್ರನ ದಕ್ಷಿಣ ದ್ರುವಕ್ಕೆ ತಲುಪಿತು. ಪ್ರಜ್ಞಾನ್ ರೋವರ್ ಹೊತ್ತ ಈ ವಿಕ್ರಂ ಲ್ಯಾಂಡರ್ ನಿಯಮಿತ ಸ್ಥಳದಲ್ಲಿ ಇಳಿಯದೇ ಹೋಗಿದ್ದು

ನಮ್ಮ ವಿಜ್ಞಾನಿಗಳನ್ನು ನಿರಾಸೆಗೊಳಿಸಿದರೂ ಈ ಯೋಜನೆ ಶೇ 95ರಷ್ಟು ಸಫಲವಾಗಿದೆ.

ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಚಂದ್ರನ ಮೇಲ್ಮೈನ ವಿಶ್ಲೇಷಣೆ, ಸ್ಥಳಾಕೃತಿಯ ವಿವರಣೆ, ವಾತಾವರಣ, ಖನಿಜ ಸಂಪತ್ತಿನ, ನೈಸರ್ಗಿಕ ಸಂಪನ್ಮೂಲಗಳು, ನೀರು / ಮಂಜಿನ ಪ್ರಮಾಣದ ಕುರಿತು ಅಧ್ಯಯನ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಚಂದ್ರನ ಸುತ್ತ ಸುತ್ತುತ್ತಿರುವ ಆರ್ಬಿಟರ್ ಮುಂದಿನ ಏಳು ವರ್ಷಗಳವರೆಗೆ ಚಂದ್ರನ ಕುರಿತ ಚಿತ್ರಗಳನ್ನು ಕಳುಹಿಸಿಕೊಡಲಿದೆ.

ಯು.ಎಸ್.ಎ, ರಷ್ಯಾ, ಚೀನ ಈ ದೇಶಗಳು ಚಂದ್ರನ ದಕ್ಷಿಣ ದ್ರುವಕ್ಕೆ ಇದುವರೆಗೂ ನೌಕೆಗಳನ್ನು ಉಡಾವಣೆ ಮಾಡದೇಇರುವ ಈ ಸಂದರ್ಭದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ಇಸ್ರೋ)ದ ಈ ಸಾಧನೆ ಭಾರತದ ಘನತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಉಪಸಂಹಾರ:

ಇಸ್ರೋದ ಈ ಯೋಜನೆ ವಿಫಲವಾದರೂ ಈ ಸಂದರ್ಭದಲ್ಲಿ ನಮ್ಮ ದೇಶದ ಪ್ರಧಾನಿಗಳು ಹಾಗೂ ಇಡೀ ದೇಶ ನಮ್ಮ ವಿಜ್ಞಾನಿಗಳ ಬೆನ್ನಿಗೆನಿಂತು ಅವರ ಭವಿಷ್ಯದ ಯೋಜನೆಗಳಿಗೆ ಹುರಿದುಂಬಿಸಿದ ರೀತಿ ಅವಿಸ್ಮರಣೀಯ.

## 3. ಜಲಪ್ರವಾಹ / ನೆರೆಹಾವಳಿ

ಪೀಠಿಕೆ:

ಕೆರೆ-ಕಟ್ಟೆ ನದಿ ಅಣೆಕಟ್ಟೆ ಸರೋವರ ಮುಂತಾದ ಕಡೆ ಶೇಖರಣೆಯಾಗಿರುವ ನೀರು ರಭಸವಾಗಿ ಹರಿದು ವಿಶಾಲವಾದ ಭೂ ಪ್ರದೇಶವನ್ನು ಮುಳುಗಿಸುವುದು ನೆರೆಹಾವಳಿ ಅಥವಾ ಜಲಪ್ರವಾಹ. ನದಿ ಸರೋವರ ಗಳಂತಹ ನೀರಿನ ಸಂಗ್ರಹಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಜಾಸ್ತಿಯಾಗಿ ಅದು ಉಕ್ಕಿ ಹರಿದಾಗ ಪ್ರವಾಹಗಳು ಉಂಟಾಗಬಹುದು ಹೀಗೆ ಹರಿಯುವ ನೀರು ಅಣೆಕಟ್ಟುಗಳನ್ನು ಹೊಡೆದುಹಾಕಿ ರಬಸವಾಗಿ ನುಗ್ಗುತ್ತವೆ ಈ ಸಂದರ್ಭದಲ್ಲಿ ಸಾಮಾನ್ಯ ಮಟ್ಟಕ್ಕಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರ ನುಗ್ಗುತ್ತದೆ ಇದನ್ನೇ ಜಲಪ್ರವಾಹ ಅಥವಾ ನೆರೆಹಾವಳಿ ಎಂದು ಕರೆಯುತ್ತಾರೆ. ಇತ್ತೀಚಿನ ಉತ್ತರ ಕರ್ನಾಟಕದ ದಕ್ಷಿಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನೆರೆಹಾವಳಿ ಸಂಭವಿಸಿ ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಈ ನಿಟ್ಟಿನಲ್ಲಿ ನಾವು ನೆರೆ ಹಾವಳಿಯನ್ನು ತಡೆಗಟ್ಟುವ ವಿಧಾನವನ್ನು ಕಂಡುಕೊಳ್ಳಬೇಕಾಗಿದೆ.

ವಿಷಯ ನಿರೂಪಣೆ:

ಪುರಾತನ ಕಾಲದಿಂದಲೂ ನಮ್ಮ ಜನರು ಜೀವನೋಪಾಯ ಮತ್ತು ಹಣ ಗಳಿಕೆಯ ಮಾರ್ಗ ಕಂಡುಕೊಳ್ಳಲು ನೀರಿನೊಡನೆ ಬದುಕಿದ್ದಾರೆ ನೀರಿನಿಂದಲೇ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ ಇಷ್ಟೇ ಅಲ್ಲದೆ ನೀರಿನ ಸಮೀಪವಾದ ರೊಂದಿಗೆ ಸರಳ ಮತ್ತು ಅಗ್ಗದ ಸಂಚಾರ ಹಾಗೂ ವ್ಯಾಪಾರ ವಹಿವಾಟಿನ ಲಾಭ ಗಳಿಸಿದ್ದಾರೆ. ಮಳೆಯಿಂದಹರಿಯುವ ನೀರು ನದಿ ಕಾಲುವೆಯ ಸಂಗ್ರಹ ಸಾಮರ್ಥ್ಯವನ್ನು ನೀಡುತ್ತವೆ ಇದಕ್ಕೆ ಕಾರಣಗಳೆಂದರೆ ಭಾರತದ ಮೇಲೆ ಪರಿಣಾಮ ಬೀರುವ ಹೊರಗಿನ ಗಾಳಿ ಮತ್ತು ಆಶ್ಚರ್ಯಕರವಾಗಿ ಹರಿಯುವ ನೀರಿನ ಅಡಚಣೆಗಳು ಎಂದರೆ ಭೂಕುಸಿತಗಳು ಅಥವಾ ಅಡಚಣೆ ಉಂಟು ಮಾಡುವ ವಿಧಾನ ಎದುರು ಪ್ರವಾಹವನ್ನು ಸೃಷ್ಟಿಸುವ ವಿಶೇಷ ಕಸಕಡ್ಡಿಗಳು.

### ಜಲಪ್ರವಾಹದಿಂದ ಉಂಟಾಗುವ ಪರಿಣಾಮಗಳು

ಭೌತಿಕ ಹಾನಿ :-ಇದುಸೇತುವೆಗಳು ಕಟ್ಟಡಗಳು ಒಳ ಚರಂಡಿ ವ್ಯವಸೆ, ಥ ರಸ್ತೆ ಮಾರ್ಗಗಳು, ಮನೆಗಳು ಹೀಗೆ ಯಾವುದೇ ರೀತಿಯ ಭೌತಿಕ ವಸ್ತುಗಳಿಗೆ ಹಾನಿಯನ್ನು ತಂದೊಡ್ಡಬಹುದು, ಸಾವು-ನೋವುಗಳು ಉಂಟಾಗಬಹುದು. ಜನ ಜಾನುವಾರುಗಳು ಸಾಯುತ್ತವೆ ಅಲ್ಲದೆ ಇದರಿಂದ ಸಾಂಕ್ರಾಮಿಕ ರೋಗಗಳು ಮತ್ತು ಜಲಜನ್ಯ ಕಾಯಿಲೆಗಳು ಹರಡುತ್ತವೆ . ನೀರು ಮಲಿನಗೊಳ್ಳುತ್ತದೆ-ಹೀಗಾಗಿ ಶುದ್ಧ ಕುಡಿಯುವ ನೀರು ದುರ್ಲಭ ವಾಗುತ್ತದೆ.

ಬೆಳೆಹಾನಿ:- ರೈತರು ಬೆಳೆದ ಬೆಳೆಗಳು ಸಹ ಸಂಪೂರ್ಣವಾಗಿ ಹಾಳಾಗುವುದರಿಂದ, ಆಹಾರದ ಕೊರತೆ ಉಂಟಾಗುವ ಸಾಧ್ಯತೆ ಇರುತ್ತದೆ. ಕೆಲವು ಸಸ್ಯ ಪ್ರಬೇಧಗಳು ಸಹ ನೀರಿನ ತುಂಬಿಕೊಂಡಾಗ ಉಸಿರುಗಟ್ಟಿ ಸಾಯುತ್ತವೆ.

### ಪ್ರವಾಹದ ಅನುಕೂಲಗಳು:

ಇಷ್ಟೆಲ್ಲ ತೊಂದರೆಗಳು ಇದ್ದರೂ ಸಹ ಪ್ರವಾಹ ಅನುಕೂಲಗಳನ್ನು ತರುತ್ತವೆ ಪ್ರವಾಹ ಬತ್ತಿಹೋದ ಅಂತರ್ಜಲವನ್ನು ಮರುಪೂರ್ಣ ಮಾಡುತ್ತದೆ. ಮಣ್ಣನ್ನು ಮತ್ತಷ್ಟು ಫಲವತ್ತಾಗಿಸುತ್ತದೆ ಅಗತ್ಯವಾದ ಖನಿಜಾಂಶಗಳನ್ನು ಒದಗಿಸುತ್ತದೆ ಪ್ರವಾಹದ ನೀರು ಅತ್ಯಗತ್ಯವಾಗಿ ಬೇಕಾದ ಸಂಪನ್ಮೂಲವನ್ನು ಒದಗಿಸುತ್ತದೆ.

ಕಳೆದ ವರ್ಷ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರವಾಹವು ಹೆಚ್ಚಿನ ದುಷ್ಪರಿಣಾಮಗಳನ್ನು ಉಂಟು ಮಾಡಿದ್ದು ನಮ್ಮ ಕಣ್ಣಮುಂದೆ ಇದ್ದರೂ ಸಹ ನಾವು ಪ್ರವಾಹವನ್ನು ಎದುರಿಸುವ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕಾಗಿದೆ. ಪ್ರಸಕ್ತ ವರ್ಷದಲ್ಲಿ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಉದಾಹರಣೆಗೆ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ರಾಯಚೂರು ಜಿಲ್ಲೆಗಳಲ್ಲಿ ಪ್ರವಾಹ ಸಂಭವಿಸಿ ಅಪಾರ ಪ್ರಮಾಣದ ನಷ್ಟವನ್ನುಂಟು ಮಾಡಿದೆ

ಉಪಸಂಹಾರ

ಮಾನವ ವಸತಿ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರವಾಹ ಹೆಚ್ಚಿನ ಪರಿಣಾಮವನ್ನು ಉಂಟುಮಾಡುತ್ತವೆ. ಸಾಮಾನ್ಯವಾಗಿ ಪ್ರವಾಹ ಸ್ಥಳಗಳಲ್ಲಿ ಜನರು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವ ಮೂಲಕ ಅದರಿಂದ ಆಗುವ ನಷ್ಟವನ್ನು ಸ್ವಲ್ಪವಾದರೂ ಕಡಿಮೆಗೊಳಿಸಬಹುದು. ಪ್ರವಾಹ ಪೀಡಿತ ಪ್ರದೇಶಗಳ ಜನರ ಸಂಕಷ್ಟಗಳನ್ನು ಜನಪ್ರಿಯ ಸರ್ಕಾರಗಳು ಸೂಕ್ತ ಸಮಯದಲ್ಲಿ ಸಮರ್ಪಕವಾದ ಪರಿಹಾರ ಕಾರ್ಯಗಳನ್ನು ಕೈಗೊಂಡು ಜನರಿಗೆ ಸೂಕ್ತ ರೀತಿಯಲ್ಲಿ ಸಹಾಯ ಮಾಡುವ ಅವಶ್ಯಕತೆ ಇದೆ.

## 4. ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

ಪೀಠಿಕೆ

ನಮ್ಮ ಸುತ್ತಲಿನ ಜೈವಿಕ ಹಾಗೂ ಅಜೈವಿಕ ವಸ್ತುಗಳಾದ ಗಿಡ, ಮರ, ಪ್ರಾಣಿ, ಪಕ್ಷಿ, ಮಣ್ಣು ಕ್ರಿಮಿಕೀಟಗಳು ಎಲ್ಲವನ್ನೂ ಒಟ್ಟಾಗಿ ಸೇರಿಸಿ ಎಂದು ಕರೆಯುತ್ತೇವೆ. ಮಾನವನ ಅನಪೇಕ್ಷಿತ ಚಟುವಟಿಕೆಗಳಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿದೆ ಎಂಬುದು ಎಲ್ಲರೂ ತಿಳಿದಿರುವ ವಿಷಯವಾಗಿದೆ. ನಾವು ನಿತ್ಯವೂ ಬೆಳೆಸುತ್ತಿರುವ ಸರ್ವಾಂತರ್ಯಾಮಿ ಪ್ಲಾಸ್ಟಿಕ್ ಮೆದುವಾದ ಮತ್ತು ವಿವಿಧ ಆಕಾರಗಳ ಘಟಕಗಳನ್ನು ಹೊಂದಿರುವ ಒಂದು ಸಿಂಥೆಟಿಕ್ ವಸ್ತುವಾಗಿದೆ ಪ್ರಪಂಚದಾದ್ಯಂತ ಪ್ಲಾಸ್ಟಿಕ್ ವಸ್ತುವಿನ ಬಳಕೆಯ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ ನಗರಗಳು ತ್ಯಾಜ್ಯವಸ್ತುಗಳ ಹೆಚ್ಚಳಕ್ಕೆ ಕಾರಣವಾದ ಅಂಶಗಳಾಗಿವೆ ಇಂತಹ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಹೆಚ್ಚಿನ ಗಮನವನ್ನು ಹರಿಸಬೇಕಾದ ಅವಶ್ಯಕತೆ ಇದೆ ಪ್ರಗತಿಪರ ರಾಷ್ಟ್ರಗಳಿಗೆ ಇಂದು ಭರಿಸಲಾಗದ ಸಮಸ್ಯೆಯಾಗಿ ಪರಿಣಮಿಸಿದೆ ವಸ್ತುಗಳಲ್ಲಿ ಪ್ರಮುಖವಾಗಿ ಪ್ಲಾಸ್ಟಿಕನ್ನು ಸಿಕ್ಕಸಿಕ್ಕಲ್ಲಿ ಇದರಿಂದ ವಿಲೇವಾರಿ ಸಮರ್ಪಕವಾಗಿಲ್ಲ ಇರುವುದರಿಂದ ಇದರ ಪರಿಣಾಮ ಭೀಕರವಾಗಿದೆ.

### ವಿಷಯದ ಬೆಳವಣಿಗೆ:

ಜಗತ್ತಿನ ಯಾವ ಪ್ರದೇಶದಲ್ಲಿ ಯಾವ ರೂಪದಲ್ಲೂ ಕಾಣಸಿಗುವ ಬಹುದಾದ ಒಂದೇ ಒಂದು ವಸ್ತು ಎಂದರೆ ಪ್ಲಾಸ್ಟಿಕ್ ನೀನು ದಿನಸಿ ಹೋಟೆಲ್ ಬೇಕರಿ ವಸ್ತುಗಳ ವ್ಯಾಪಾರದಿಂದ ಹಿಡಿದು ಔಷಧ ಕ್ಷೇತ್ರ ಎಲೆಕ್ಟ್ರಾನಿಕ್ ವಸ್ತುಗಳ ಬಳಕೆ ಪ್ಲಾಸ್ಟಿಕ್ ಬಳಕೆ ಸರ್ವೇಸಾಮಾನ್ಯವಾಗಿದೆ ಉಪಕಾರವು ಅಷ್ಟೇ ಹಾನಿಕರವಾಗಿದ್ದು ವಿಶ್ವಕ್ಕೆ ದೊಡ್ಡ ಸಮಸ್ಯೆಯಾಗಿದೆ ಅದರ ದುಷ್ಪರಿಣಾಮಗಳು ಈ ರೀತಿಯಾಗಿವೆ.

1.ಪ್ಲಾಸ್ಟಿಕ್ ದಹನದಿಂದ ಬಿಡುಗಡೆಯಾಗುವ ಕಾರ್ಬನ್ ಡೈಆಕ್ಸೈಡ್ ವಿಷಾನಿಲಗಳು ವಾತಾವರಣವನ್ನು ಸೇರಿ ಜಾಗತಿಕ ತಾಪಮಾನವನ್ನು ಹೆಚ್ಚಿಸುತ್ತವೆ.

2. ಪ್ಲಾಸ್ಟಿಕ್ ಬಹುಕಾಲ ವಿಘಟನೆಗೆ ಒಳಗಾಗದೆ ಇರುವುದರಿಂದ ಅದುಭೂಮಿಯಲ್ಲಿ ಹಾಗೆ ಉಳಿದು ಭೂಮಿಯ ಫಲವತ್ತತೆಯನ್ನು ಕಡಿಮೆ ಮಾಡುತ್ತದೆ.

3. ಗೋವು ನಾಯಿ ಮೊದಲಾದ ಪ್ರಾಣಿಗಳು ಆಹಾರವನ್ನು ಹುಡುಕಿ ತಿನ್ನುವ ಸಮಯದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ದಲ್ಲಿರುವ ವಸ್ತುಗಳಿಂದ ಅವುಗಳಿಗೆ ಗಂಭೀರವಾದ ಕಾಯಿಲೆಗಳು ಬರುತ್ತವೆ.

4. ಅಂತರ್ಜಲ ಮಾಲಿನ್ಯವನ್ನು ಮಾಡುತ್ತದೆ.

5. ಪ್ಲಾಸ್ಟಿಕ್ ದಹನದಿಂದ ಉತ್ಪತ್ತಿಯಾಗುವ ವಿಷಾನಿಲ ಇಡೀ ಪರಿಸರವನ್ನು ಹಾಳು ಮಾಡಿ ಆ ವಿಷ ಗಾಳಿಯನ್ನು ಪ್ರಾಣಿಗಳು ಮತ್ತು ಮಾನವರು ಸೇವಿಸಿದಾಗ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ ಶ್ವಾಸಕೋಶದ ಕಾಯಿಲೆಗಳು ಉಂಟಾಗಲು ಕಾರಣವಾಗುತ್ತದೆ.

ಉಪಸಂಹಾರ

ಇಂದಿನ ಆಧುನಿಕ ಜಗತ್ತಿನಲ್ಲಿ ಎಲ್ಲವನ್ನೂ ಸಮುದ್ರದ ನೀರಿನ ವರೆಗೂ ಪ್ಲಾಸ್ಟಿಕ್ ಬಳಸುವ ನನಗರಿವಿಲ್ಲದಂತೆ ನಾವು ಪರಿಸರ ಮಾಲಿನ್ಯಕ್ಕೆ ಕಾರಣವಾಗಿವೆ ಆದ್ದರಿಂದ ನಿಯಂತ್ರಿಸಬೇಕಾದರೆ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕಾಗಿದೆ ಆದ್ದರಿಂದ ಪರಿಸರಕ್ಕಾಗಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು ಅತ್ಯವಶ್ಯವಾಗಿದೆ ಆದ್ದರಿಂದ ಮುಂದಿನ ಪೀಳಿಗೆಗೆ ಶುದ್ಧ ಪರಿಸರವನ್ನು ನಾವು ನೀಡಬೇಕೆಂದರೆ ಇಂದಿನಿಂದಲೇ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸುವುದು ಅತ್ಯಂತ ಅವಶ್ಯಕ. ಆದ್ದರಿಂದ ಯಾವುದೇ ಅಥವಾ ಯಾವುದೇ ವಸ್ತುವನ್ನು ಖರೀದಿಸಲು ಮಾರುಕಟ್ಟೆಗೆ ತೆರಳುವಾಗ ಮನೆಯಿಂದಲೇ ಬಟ್ಟೆಯ ಚೀಲಗಳನ್ನು ತೆಗೆದುಕೊಂಡು ಹೋಗಬೇಕು. ಆ ಮೂಲಕ ಪ್ಲಾಸ್ಟಿಕ್ ನಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಪ್ಪಿಸಬಹುದು. ನಮ್ಮಿಂದಲೇ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸೋಣ.

## 5. ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು

### ಪೀಠಿಕೆ

ನಮಗೆ ಪ್ರಕೃತಿಯು ನೀಡಿರುವ ಅತ್ಯಮೂಲ್ಯ ಕೊಡುಗೆಗಳಿಂದ ಶುದ್ಧಗಾಳಿ ಶುದ್ಧ ನೀರು ಹಾಗೂ ಶುದ್ಧ ಆಹಾರ. ಇವುಗಳಲ್ಲಿ ನಮಗೆ ಪ್ರಕೃತಿಯು ನೀಡಿರುವ ಅತ್ಯಮೂಲ್ಯ ವಸ್ತುವೆಂದರೆ ನೀರು. ನೀರು ಭೂಮಿಯ ಮೇಲ್ಭಾಗದಲ್ಲಿ ಸರೋವರ ನದಿ ಸಮುದ್ರಗಳಲ್ಲಿ ಹಾಗೂ ಭೂಮಿಯ ಅಂತರಾಳದಲ್ಲಿ ಅಂತರ್ಜಲ ರೂಪದಲ್ಲಿ ಸಿಗುತ್ತದೆ. ಭೂಮಿಯ ಮೇಲೆ ನೀರು ಇರುವುದರಿಂದಲೇ ಸೌರವ್ಯೂಹದ ವಿಶಿಷ್ಟ ಕಾಯಗಳಲ್ಲಿ ಒಂದಾಗಿದೆ ಹಾಗಾಗಿ ಭೂಮಿಯನ್ನು ನೀಲಿ ಗ್ರಹ ಎಂದು ಕೂಡ ಕರೆಯುತ್ತಾರೆ. ನೀರು ಭೂಮಿಯ ಮೇಲಿನ ಸಕಲ ಜೀವರಾಶಿಗಳಿಗೆ ಚೈತನ್ಯದಾಯಕ ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಯಥೇಚ್ಛವಾಗಿ ನಾವು ಬಳಸುತ್ತಿದ್ದೇವೆ ಆದರೆ ನೀರನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳದೆ ಅಪವ್ಯಯ ಮಾಡುತ್ತಿದ್ದೇವೆ ಹಾಗಾಗಿ ಅಂತರ್ಜಲದ ಪ್ರಮಾಣ ಕಡಿಮೆಯಾಗುತ್ತಿದೆ.

## ವಿಷಯ ನಿರೂಪಣೆ

ಮಳೆಯ ಅಂತರ್ಜಲದ ಪ್ರಾಥಮಿಕ ಮೂಲ. ಈ ಮಳೆಯ ಸಹಾಯದಿಂದ ಮಾನವನು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಉದ್ದೇಶಪೂರ್ವಕವಾಗಿ ಅಂತರ್ಜಲದ ಮರುಪೂರ್ಣ ವನ್ನು ಅಧಿಕಗೊಳಿಸಬಹುದು, "ಅಂತರ್ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ"ಯಾಗಿದ್ದು ಅಂತರ್ಜಲ ಮರುಪೂರಣ ಮಾಡುವ ಕಾರ್ಯಕ್ರಮಗಳನ್ನು ನಾವು ಈ ಕೆಳಗಿನಂತೆ ಕೈಗೊಳ್ಳಬಹುದು.

### ಅಂತರ್ಜಲ ಮರುಪೂರ್ಣ ಕಾರ್ಯಕ್ರಮಗಳೆಂದರೆ:

1. ಮಳೆ ನೀರು ಕೊಯ್ಲು ಪದ್ಧತಿಯನ್ನು ಅನುಸರಿಸುವುದು.
2. ವೈಜ್ಞಾನಿಕ ಕೃಷಿ ಹೊಂಡಗಳನ್ನು ನಿರ್ಮಿಸುವುದು ಮತ್ತು ಸಾವಯವ ಗೊಬ್ಬರವನ್ನು ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದರ ಮೂಲಕವೂ ನೀರಿನ ಪ್ರಮಾಣವನ್ನು ಹೆಚ್ಚಿಸಬಹುದು
3. ಹಿಂಗು ಕೊಳಗಳನ್ನು ನಿರ್ಮಿಸುವುದರಿಂದ ಹೆಚ್ಚು ನೀರು ಹಿಂಗಲು ಅವಕಾಶ ಮಾಡಿಕೊಡುವುದು
4. ಕೊಳವೆಬಾವಿಗಳಿಗೆ ಮರುಪೂರಣ ಮಾಡುವುದು.
5. ಕಡಿಮೆ ನೀರನ್ನು ಅಪೇಕ್ಷಿಸುವ ಬೆಳೆಗಳನ್ನು ಬೆಳೆಯುವುದು.
6. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ನೀರನ್ನು ರಕ್ಷಿಸುವ ಕಾರ್ಯ ಕ್ರಮಗಳನ್ನು ಅನುಸರಿಸುವುದು

## ಉಪಸಂಹಾರ

ಮೇಲೆ ವಿವರಿಸಲಾದ ಕಾರ್ಯಕ್ರಮಗಳ ಮೂಲಕ ಅಂತರ್ಜಲವನ್ನು ಮರುಪೂರಣ ಮಾಡಬಹುದು. ಅಂತರ್ಜಲದ ಮರುಪೂರಣೆ ಮಾಡುವುದೇ ಮಾನವನ ಏಕಮೇವ ಉದ್ದೇಶ ಅಥವಾ ಗುರಿಯಾಗಿರಬೇಕು. ತನ್ನ ಜಾಣತನದಿಂದ ಅಮೃತ ರೂಪದಲ್ಲಿರುವ ಅಂತರ್ಜಲದ ಸರಿಯಾದ ಬಳಕೆಯನ್ನು ಮಾಡಿಕೊಳ್ಳಬೇಕು. ಸಕಲ ಜೀವಿಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ.

ಸ್ಥಳ : ಕೊಟ್ಟೂರು ಇತಿ ತಮ್ಮ ಪ್ರೀತಿಯ ಮಗ
ದಿನಾಂಕ : 25–09–2019 ಶ್ರೀತನ್ ಜಿ ಎಸ್

ಹೊರವಿಳಾಸ

ಇವರಿಗೆ,

ಶ್ರೀಮತಿ ಲತಾ
ಬಸವೇಶ್ವರ ನಗರ
ಬೆಂಗಳೂರು ರಸ್ತೆ
ಕೊಟ್ಟೂರು, ಬಳ್ಳಾರಿ ಜಿಲ್ಲೆ.

**ಪತ್ರಲೇಖನ ಅಂಕ ವಿಂಗಡಣೆ**

ಇಂದ, ಗೆ, ವಿಳಾಸ –2 ಅಂಕ
ಪತ್ರದ ಒಡಲು – 2 ಅಂಕ
ಮುಕ್ತಾಯ –1 ಅಂಕ

### ಪತ್ರಲೇಖನ

### ಪತ್ರಲೇಖನ– ವೈಯಕ್ತಿಕ ಪತ್ರ

*1. ನಿಮ್ಮ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬೇರೆ ಊರಿನಲ್ಲಿರುವ ನಿಮ್ಮ ತಂದೆ/ತಾಯಿ/ ಸಹೋದರ/ ಸಹೋದರಿ/ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.*

ತೀರ್ಥರೂಪ ತಾಯಿಯವರಿಗೆ,

ನಿಮ್ಮ ಮಗನಾದ ಶ್ರೀತನ್ ಜಿ ಎನ್ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.ನಾನು ಆರೋಗ್ಯದಿಂದ ಇದ್ದೇನೆ.ನೀವೂ ಆರೋಗ್ಯದಿಂದ ಇದ್ದೀರಿ ಎಂದು ಭಾವಿಸುತ್ತೇನೆ. ನಾನು ತಿಳಿಸುವುದೇನೆಂದರೆ ಮಾರ್ಚ 2020 ರಲ್ಲಿ ಜರುಗುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಾಕಷ್ಟು ಅಭ್ಯಾಸ ಮಾಡಿ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ.ನಮ್ಮ ಶಾಲೆಯಲ್ಲಿ ಶಿಕ್ಷಕರು ನೂತನ ಪರೀಕ್ಷಾ ಪದ್ಧತಿ ಕುರಿತು ಮಾಹಿತಿಯನ್ನು ಒದಗಿಸುತ್ತಿದ್ದಾರೆ.ಈ ಪರೀಕ್ಷೆಯಲ್ಲಿ ಶೇ.99 ಅಂಕಗಳನ್ನು ಗಳಿಸಲು ಸಾಕಷ್ಟು ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ. ಹಾಗೆಯೇ ಮಾತೃಶ್ರೀಯವರಿಗೆ ಅನಂತ ನಮಸ್ಕಾರಗಳನ್ನು ತಿಳಿಸಿ. ಈ ಪತ್ರ ಮುಟ್ಟಿದ ಕೂಡಲೇ ತಮ್ಮ ಕ್ಷೇಮ ಸಮಾಚಾರ ಕುರಿತು ಪತ್ರವನ್ನು ಬರೆಯಿರಿ.

ನಮಸ್ಕಾರಗಳೊಂದಿಗೆ,

### ಪತ್ರ ಲೇಖನ– ವ್ಯಾವಹಾರಿಕ ಪತ್ರ

*2. ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 10ನೆಯ ತರಗತಿ ವಿದ್ಯಾರ್ಥಿ ಅಭಿಲಾಷ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಜನಪ್ರಿಯ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವನ್ನು ಬರೆಯಿರಿ.*

ಇಂದ, ಸ್ಥಳ : ರಾಮನಗರ
ಅಭಿಲಾಷ, ದಿನಾಂಕ : 02–11–2016
10 ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ರಾಮನಗರ.

ಇವರಿಗೆ,

ಮಾನ್ಯ ಸಂಪಾದಕರು,
"ಕನ್ನಡ ಪ್ರಭ" ದಿನಪತ್ರಿಕೆ,
ರಾಮನಗರ

ಮಾನ್ಯರೇ,

ವಿಷಯ :ನಮ್ಮ ಶಾಲೆಯ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವ ಕುರಿತು.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ : **01–11–2016** ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಮ್ಮ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಕನ್ನಡತನವನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು , ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಯಿಸಿಕೊಟ್ಟರು. ಪೋಷಕರು ಕಾರ್ಯಕ್ರಮದಬಗ್ಗೆ ಮೆಚ್ಚುಗೆಯನ್ನು ವ್ಯಕ್ತಡಿಸಿದರು. ಮುಖ್ಯಶಿಕ್ಷಕರು ಹಾಗೂ ಶಿಕ್ಷಕ ವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಈ ಕಾರ್ಯಕ್ರಮದಸವಿವರದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ದಯಮಾಡಿ ಕಾರ್ಯಕ್ರಮದ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ನನ್ನ ಕೋರಿಕೆಯು ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ,

ತಮ್ಮ ನಂಬುಗೆಯ

ಹೊರವಿಳಾಸ

ಇವರಿಗೆ,
ಮಾನ್ಯ ಸಂಪಾದಕರು,
ಕನ್ನಡ ಪ್ರಭ ದಿನಪತ್ರಿಕೆ,
ರಾಮನಗರ.

ಪತ್ರಲೇಖನ ವ್ಯವಹಾರಿಕ ಪತ್ರಗಳನ್ನು ಮಾತ್ರ ರೂಢಿ ಮಾಡಿಸುವುದು. (ಯಾವುದಾದರು ಒಂದನ್ನು) (5 ಅಂಕಗಳು)

ಇಂದ,

________________

________________

ಇವರಿಗೆ,

________________

________________

ಮಾನ್ಯರೇ,

ವಿಷಯ:____________________________

____________________________

________________________________________

________________________________________

________________________________________

________________________________________

ವಂದನೆಗಳೊಡನೆ

ಸ್ಥಳ : ತಮ್ಮ ನಂಬುಗೆಯ
ದಿನಾಂಕ :

ಹೊರವಿಳಾಸ

ಇವರಿಗೆ,

______________________

______________________

______________________

## ಮಾದರಿ ಕೌಟುಂಬಿಕ / ವೈಯಕ್ತಿಕ ಪತ್ರಗಳು

ಕ್ಷೇಮ ದಿನಾಂಕ: __________
ಹೆಸರು: __________
ಸ್ಥಳ: __________

____________ ರವರಿಗೆ ನಿಮ್ಮ ಪ್ರೀತಿಯ ________ ಮಾಡುವ ____________ ____________ ಇಲ್ಲಿ ನಾನು ಕ್ಷೇಮದಿಂದ ಇದ್ದೇನೆ. ನೀವೂ ಕೂಡ ಕ್ಷೇಮದಿಂದ ಇರುವಿರೆಂದು ಭಾವಿಸಿದ್ದೇನೆ.

________________________________________

________________________________________

________________________________________

________________________________________

________________________________________

________________________________________

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿರಿ. ಈ ಪತ್ರ ತಲುಪಿದ ಕೂಡಲೇ ಮರುಪತ್ರವನ್ನು ಬರೆಯಿರಿ.

ನಮಸ್ಕಾರಗಳೊಂದಿಗೆ.

ನಿಮ್ಮ ಪ್ರೀತಿಯ

ಹೊರವಿಳಾಸ

ಇವರಿಗೆ,

______________________

**ಪತ್ರಲೇಖನ ಅಂಕ ವಿಂಗಡಣೆ**

ಇಂದ, ಗೆ, ವಿಳಾಸ –2 ಅಂಕ

ಪತ್ರದ ಒಡಲು – 2 ಅಂಕ

ಮುಕ್ತಾಯ –1 ಅಂಕ

## ...ದೊಡನೆ ಸ್ವಾರಸ್ಯವನ್ನು ವಿವರಿಸಿ

ಈ ... ಮಾಡಿಸಿದಲ್ಲಿ 18 ಅಂಕಗಳನ್ನು ಸುಲಭವಾಗಿ ಪಡೆಯಬಹುದು.

| ಗದ್ಯ | | ಯಾರು?ಯಾರಿಗೆ? | ಸಂದರ್ಭ |
|---|---|---|---|
| 'ಯುದ್ಧ' | 1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ?" | ರಾಹಿಲನು ಮನೆಯವರಿಗೆ | ಮಳೆಯಿಂದ ರಕ್ಷಣೆ ಪಡೆಯುವಾಗ |
| | 2. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ." | ರಾಹಿಲನು ಮುದುಕಿಗೆ | ಸೊಸೆಯು ಹೆರಿಗೆ ನೋವಿನಲ್ಲಿದ್ದಾಗ |
| | 3. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?" | ಮುದುಕಿಯು ಹೇಳುವಳು | ಶತ್ರು ಸೈನಿಕರು ಬಾಗಿಲ ಬಡಿದಾಗ |
| | 4. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!" | ಮುದುಕಿಯು ಸೈನಿಕರಿಗೆ | ಶತ್ರುಗಳಿಗಾಗಿ ಹುಡುಕುತ್ತಾ ಬಂದಾಗ |
| 'ಶಬರಿ' ಪು.ತಿ.ನ | 1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು." | ರಾಮನು ಲಕ್ಷ್ಮಣನಿಗೆ | ಆಶ್ರಮದ ಸಮೀಪಕ್ಕೆ ಬಂದಾಗ |
| | 2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ." | ರಾಮನು ಲಕ್ಷ್ಮಣನಿಗೆ | ಶಬರಿಯ ಭಕ್ತಿಭಾವ ಕಂಡಾಗ |
| | 3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?" | ರಾಮನು ಶಬರಿಗೆ | ಆಶ್ರಮದಲ್ಲಿ ಆಶ್ರಯ ಬಯಸಿದಾಗ |
| | 4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!" | ಶಬರಿ ರಾಮನನ್ನುದ್ದೇಶಿಸಿ | ರಾಮನು ಶಬರಿಯ ಬಗ್ಗೆ ಹೇಳಿದಾಗ |
| ಲಂಡನ್ ನಗರ – ವಿ.ಕೃ.ಗೋ | 1. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" | ಲೇಖಕರ ಅನುಭವದ ಮಾತು | ಲಂಡನ್ನಿನ ಸಾಧಕರ ಪ್ರತಿಮೆಗಳ ಕಂಡಾಗ |
| | 2. "ಹೊತ್ತು ! ಹೊತ್ತು ! ಹೊತ್ತೇ ಹಣ." | ಲೇಖಕರು ಓದುಗರಿಗೆ | ಲಕ್ಷಾನುಲಕ್ಷ ಜನರ ಓಡಾಟ ಕಂಡಾಗ |
| | 3. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!" | ಲೇಖಕರ ಅನುಭವದ ಮಾತು | ಪೊಯೆಟ್ಸ ಕಾರ್ನರಲ್ಲಿದ್ದ ಕಲ್ಲು ಕಂಡಾಗ |
| | 4. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ." | ಲೇಖಕರು ಓದುಗರಿಗೆ | ಪ್ರವಾಸದನುಭವ ವಿವರಿಸುವಾಗ |
| ಭಾಗ್ಯಶಿಲ್ಪಿಗಳು – ಡಿ.ವಿ.ಜಿ | 1. "ಸಾಮಾಜಿಕ ಕಾನೂನುಗಳ ಹರಿಕಾರ." | ಲೇಖಕರು ಓದುಗರಿಗೆ | ನಾ ಕೃಷ್ಣರಾಜರ ಕಾರ್ಯ ಸಾಧನೆ ತಿಳಿಸಿದಾಗ |
| | 2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು." | ಲೇಖಕರು ಓದುಗರಿಗೆ | ವಿಶ್ವೇಶ್ವರಯ್ಯನವರ ಸಾಧನೆ ವರ್ಣಿಸುವಾಗ |
| | 3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು | ಲೇಖಕರು ಓದುಗರಿಗೆ | ವಿಶ್ವೇಶ್ವರಯ್ಯನವರು ದಿವಾನರಾದಾಗ |

| | | | |
|---|---|---|---|
| | ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ.” | | |
| | 4. “ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು.” | ಲೇಖಕರು ಓದುಗರಿಗೆ | ಒಡೆಯರ ಸ್ತ್ರೀಪರ ಕಾಳಜಿ ತಿಳಿಸುವಾಗ |
| [illegible] | 1. “ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ.” | ಮನೆ ಮಂಚಮ್ಮ ಗ್ರಾಮದವರಿಗೆ | ಸಿದ್ಧಲಿಂಗಯ್ಯನವರ ಕತೆ ಹೇಳುವಾಗ |
| | 2. “ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ.” | ಲೇಖಕರು ಓದುಗರಿಗೆ | ಪೈ ಅವರ ಸಂಶೋಧನ ಸತ್ಯ ತಿಳಿಸಿವಾಗ |
| | 3. “ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು” | ಲೇಖಕರು ಓದುಗರಿಗೆ | ವಚನಕಾರರ ದೇವರ ಬಗ್ಗೆ |
| | 4. “ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ.” | ಲೇಖಕರು ಓದುಗರಿಗೆ | ಬುದ್ಧನಲ್ಲಿದ್ದ ಅನಿಕಂಪ ವಿವರಿಸುವಾಗ |
| [illegible] | 1. “ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ.” | ಲೇಖಕರು ಓದುಗರಿಗೆ | ಪುಣ್ಯಕೋಟಿಯನ್ನು ಪರಿಚಯಿಸುವಾಗ |
| | 2. “ಸ್ವಧರ್ಮೇ ನಿಧನಂ ಶ್ರೇಯಃ.” | ಹುಲಿಯ ಮನದ ಮಾತು | ಭಗವದ್ಗೀತೆಯ ಸಂದರ್ಭ ನೆನೆಯುವಾಗ |
| | 3. “ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು.” | ಶಾನುಭೋಗರ ಮನಸ್ಸಿನಲ್ಲಿ | ಹುಲಿಯಿಂದ ರಕ್ಷಿಸಿಕೊಳ್ಳುವಾಗ |
| | 4. “ನಾನು ಮುಖ ಮೇಲಾಗಿ ಬಿದ್ದಿದ್ದನೆ?” | ಶಾನುಭೋಗರು ರೈತರಿಗೆ | ಧರ್ಮಕ್ಕನುಸಾರ ಹುಲಿ ತಿನ್ನದೆ ಹೋದಾಗ |
| [illegible] | 1. “ಪೊನ್ನನೆಲ್ಲಮಂ ನೀನೆ ಕೊಂಡೆ” | ದುಷ್ಟಬುದ್ಧಿ ಧರ್ಮಬುದ್ಧಿಗೆ | ಕಳ್ಳತನ ಮರೆಮಾಚಿಸುವಾಗ |
| | 2. “ಈತನ ಮಾತು ಅಶ್ರುತಪೂರ್ವಮ್” | ಧರ್ಮಾಧಿಕರಣ ವ್ಯಾಪಾರಿಗಳಿಗೆ | ವೃಕ್ಷವೇ ಸಾಕ್ಷಿ ಬಗ್ಗೆ ಆಶ್ಚರ್ಯಗೊಂಡಾಗ |
| | 3. “ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ” | ಪ್ರೇಮಮತಿ ದುಷ್ಟಬುದ್ಧಿಗೆ | ಧರ್ಮಬುದ್ಧಿಯನ್ನು ಆರೋಪಿಸುವಾಗ |
| | 4. “ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ” | ಪ್ರೇಮಮತಿ ಸಭಿಕರಿಗೆ | ಪ್ರಕೃತಿ ವಿರುದ್ಧದ ಸ್ಥಿತಿಯನ್ನು ತಿಳಿಸುವಾಗ |
| | 5. “ಹುಸಿಯದ ಬೇಹಾರಿಯೇ ಇಲ್ಲ.” | ಧರ್ಮಬುದ್ಧಿ ಸಭಿಕರಿಗೆ | ಪೊಟರೆಯ ರಹಸ್ಯವನ್ನು ಭೇಧಿಸುವಾಗ |
| [illegible] | 1. “ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್” | ಜೋಯಿಸರು ಯಶೋಭದ್ರೆಗೆ | ಸುಕುಮಾರಸ್ವಾಮಿಯ ಭವಿಷ್ಯ ನುಡಿದಾಗ |
| | 2. “ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು” | ಸುಕುಮಾರನುಯಶೋಭದ್ರೆಗೆ | ಸುಕುಮಾರನು ರಾಜನ ಬಗ್ಗೆ ಗೊತ್ತಿರದಾಗ |
| | 3. “ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ” | ರಾಜನು ಗ್ರಹಿಸಿಕೊಂಡಾಗ | ಸುಕುಮಾರಸ್ವಾಮಿಯ ನಡೆ ನೋಡಿದಾಗ |
| | 4. “ಅವಂತಿ ಸುಕುಮಾರನೆಂದು ಪೆಸರನಿಟ್ಟಂ” | ರಾಜನು ಯಶೋಭದ್ರೆಗೆ | ಸುಕುಮಾರಸ್ವಾಮಿಯ ವೈಭವ ಕಂಡಾಗ |
| ಹಲಗಲಿ ಬೇಡರು | 1. “ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ” | ಬ್ರಿಟಿಷಾಧಿಕಾರಿಗಳು | ನಿಶ್ಯಸ್ತ್ರೀಕರಣದ ನಿಯಮದನುಸಾರ |
| | 2. “ಜೀವ ಸತ್ತು ಹೋಗುವುದು ಗೊತ್ತ” | ನಾಯಕರು ಜನರಿಗೆ | ಜೀವಕ್ಕಿಂತ ಆಯುಧ್ಧವೇ ಮುಖ್ಯವಾಗಿದೆ |
| | 3. “ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ” | ಲಾವಣಿಕಾರರು | ಬ್ರಿಟಿಷ ಸೈನಿಕರ ದೌರ್ಜನ್ಯ ಕುರಿತ ಮಾತು |
| | 4. “ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು” | ಲಾವಣಿಕಾರರು ಕೇಳುಗರಿಗೆ | ದಂಗೆಯ ಪರಿಣಾಮ ವಿವರಿಸುವಾಗ |
| [illegible] | 1. “ಹಸುರಾದುದು ಕವಿಯಾತ್ಮಂ” | ಕವಿಯ ಮನದಾತ್ಮದಲ್ಲಿ | ಪ್ರಕೃತಿಯ ಹಸಿರರನಿಂದ ಕವಿಯಾತ್ಮದ ಬಗ್ಗೆ |

| | | | |
|---|---|---|---|
| | 2. “ಬೇರೆ ಬಣ್ಣವನೆ ಕಾಣೆ” | ಕವಿಯು ಸಹೃದಯರಿಗೆ | ಮಲೆನಾಡಿನ ಪ್ರಕೃತಿಯ ವರ್ಣನೆಯ ಭಾಗ |
| | 3. “ಹಸುರು ಹಸುರಿಳೆಯುಸಿರೂ” | ಕವಿಯು ಸಹೃದಯರಿಗೆ | ಹಸಿರುನ ರಸಸ್ವಾಧನೆಗೈಯುತ್ತಾ ಉಸಿರು |
| | 4. “ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್” | ಕವಿಯು ಸಹೃದಯರಿಗೆ | ಕಣ್ಣಿಗೆ ಕಾಣುವ ನೈಜ ಹಸಿರನ್ನು ಬಣ್ಣಿಸುತ್ತಾ |
| ವೀರಲವ – ಲಕ್ಷ್ಮೀಶ | 1. “ರಘೂದ್ವಹನ ಸೊಲ್ಗೇಳಿ ನಮಿಸಲ್” | ಕವಿಯು ಸಹೃದಯರಿಗೆ | ಶ್ರೀರಾಮನ ಬಗೆಗಿನ ಭಕ್ತಿ ಗೌರವವನ್ನು |
| | 2. “ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ” | ಲವನು ಪತ್ರದೊಂದಿಗೆ | ಶ್ರೀರಾಮನ ಗರ್ವ ಮುರಿಯಲು ನಿರ್ಧರಿಸಿದಾಗ |
| | 3. “ಅರಸುಗಳ ವಾಜಿಯಂ ಬಿಡು” | ಮುನಿಸುತರು ಲವನಿಗೆ | ಕಟ್ಟಿದ ಕುದುರೆಯಿಂದಾಗುವ ಪರಿಣಾಮವನ್ನು |
| | 4. “ಜಾನಕಿಯ ಮಗನಿದಕೆ ಬೆದರುವನೆ” | ಲವನ್ನು ಮುನಿಸುತರಿಗೆ | ತನ್ನ ಶೌರ್ಯದ ಕುರಿತಾಗಿಯಾರಿಗೂ ಹೆದರೆನೆಂದು |
| ಕೆಮ್ಮನೆ ಮೀಸೆವೊತ್ತನೇ – ಪಂಪ | 1) ‘ಈಗಳೊಂದಡಕೆಯುಮಿಲ್ಲ ಕೈಯೊಳ್ ‘ | ಪರಶುರಾಮ ದ್ರೋಣನಿಗೆ | ದ್ರೋಣನು ಸಹಾಯ ಕೇಳಲು ಬಂದಾಗ |
| | 2) ‘ವಿದ್ಯಾಧನಮೆ ಧನಮಪ್ಪುದು’ | ದ್ರೋಣನು ಪರಶುರಾಮಗೆ | ಉಳಿದಿರುವುಗಳಲ್ಲಿನ ದಿವ್ಯಾಸ್ತ್ರಗಳನ್ನೇಬೇಡುವಾಗ |
| | 3) ‘ಎಂತು ನಾಣಿಲಿಗರಪ್ಪರೆ ಮಾನಸರ್’ | ದ್ರುಪದನು ದ್ರೋಣನಿಗೆ | ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟರೆ |
| | 4) ‘ಜಲಕ್ಕನೀಗಳರಜೆದೆಂ ಸಿರಿ ಕಳ್ನೊಡಟ್ಟಿತೆಂಬುದಂ’ | ದ್ರುಪದನು ದ್ರೋಣನಿಗೆ | ಸಿರಿಮದಗೊಂಡವನಿಗೆ ಸಂಬಂಧದರಿವಿಲ್ಲ |
| | 5) ‘ನೊಳವಿಂಗೆ ತಪ್ಪೆ ವರಂ’ | ದ್ರೋಣನು ದ್ರುಪದನಿಗೆ | ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? |

# ಹೆಚ್ಚುವರಿ ಸಂದರ್ಭಗಳು

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು ? ಯಾರಿಗೆ ? | ಸಂದರ್ಭ |
|---|---|---|---|
| ಯುದ್ಧ | “ ಇದು ನಮ್ಮ ಪ್ರದೇಶವೇ, ಶತ್ರುಗಳ ಪ್ರದೇಶವೇ “ | ರಾಹಿಲನ್ನು ಪೈಲಟ್‌ಗೆ | ಬ್ಲಾಕ್ ಔಟ್ ನಿಯಮದ ಕಾಲದಲ್ಲಿ |
| | “ಯಾರಮ್ಮ ಅದು? ಏನಾಗಿದೆ? “ | ರಾಹಿಲನ್ನು ಮುದುಕಿಗೆ | ಸೊಸೆಯ ಹೆರಿಗೆಯ ಆರ್ತನಾದ ಮಾಡುತ್ತಿದ್ದಾಗ |
| | “ ಅಮ್ಮ ನಾನೊರ್ವ ಡಾಕ್ಟರ್. ನಾನಾಕೆಯನ್ನು ಪರೀಕ್ಷಿಸಲೇ? | ರಾಹಿಲನ್ನು ಮುದುಕಿಗೆ | ಸೊಸೆಯ ಹೆರಿಗೆಯ ಆರ್ತನಾದ ಮಾಡುತ್ತಿದ್ದಾಗ |
| | “ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ “ | ಮುದುಕಿಯು ತನ್ನಷ್ಟಕ್ಕೆ | ಹೆರಿಗೆಯಲ್ಲಿ ಮಗು ಸತ್ತಾಗ |
| | “ ಅಮ್ಮ ನಾನು ಬರುವುದು ಸ್ವಲ್ಪ ತಡವಾಗಿದ್ದರೂ ನಿಮ್ಮ ಸೊಸೆಯೂ ಉಳಿಯುತ್ತಿರಲಿಲ್ಲ“ | ರಾಹಿಲನ್ನು ಮುದುಕಿಗೆ | ಹೆರಿಗೆಯಲ್ಲಿ ಮಗು ಸತ್ತಿತ್ತು, ಪ್ರಯಾಸದಿಂದ ಸೊಸೆಯನ್ನು ಬದುಕಿದಳು |
| | “ ಡಾಕ್ಟರ್ ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ“ | ಪೈಲಟ್ ರಾಹಿಲನಿಗೆ | ಬ್ಲಾಕ್ ಔಟ್ ನಿಯಮದ ಕಾಲದಲ್ಲಿ |
| | “ ಏನು ಮಗಳೇ ? ಈ ಮಳೆಯಲ್ಲಿ ಈ ಕತ್ತಲಲ್ಲಿ ನನು ಯಾರನ್ನು ಕರೆಯಲಿ “ | ಮುದುಕಿಯು ತನ್ನ ಸೊಸೆಗೆ | ಸೊಸೆಯು ತೀವ್ರವಾದ ಹೆರಿಗೆ ನೋವಿನಿಂದ ಬಳಲುತ್ತಿದ್ದಾಗ |

| | | | |
|---|---|---|---|
| | " ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ?" | ಮುದುಕಿಯು ರಾಹಿಲನಿಗೆ | ಯುದ್ಧ ಕಾಲದಿಂದಾಗಿ ಅನುಭವಿಸಿದ ತೊಂದರೆ ಹೇಳುವಾಗ |
| ಶಬರಿ | " ದೊರೆವಳೇ ಸೀತೆ ! ಭೂಮಿಜಾತೆ ಆತ್ಮ ಕಾಮಕಲ್ಪಲತೆ" | ರಾಮನು ಗಿರಿವನಗಳ ಬಳಿ ತನ್ನ ಅಳಲನ್ನು | ಸೀತಾಪಹರಣದ ಅನಂತರ ಶೋಕತಪ್ತರಾದ ರಾಮ-ಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ಶಬರಿ ಆಶ್ರಮಕ್ಕೆ ಬರುವಾಗ |
| | "ಎನ್ನಹಂಕೃತಿಗೆ ಮನ್ನಣೆಯ ಕೊಟ್ಟೆ" | ಲಕ್ಷ್ಮಣನ್ನು ರಾಮನಿಗೆ | ಶಬರಿ ಆಶ್ರಮಕ್ಕೆ ಬರುವಾಗ |
| | "ಎಂದು ಕಾಂಬೆ ನಾ ರಾಮನ ನೆಂದು ಕಾಂಬೆ ನಾ" | ಶಬರಿ ಸ್ವಗತವಾಗಿ | ರಾಮನ ಬರುವಿಕೆಗಾಗಿ ಕಾದಿರುವಾಗ |
| | "ನಮ್ಮಯೋಧೆಯರಮನೆಯೊಳು ಇದಕು ಲೇಸು ಇಲ್ಲ" | ರಾಮನು ಶಬರಿಗೆ | ಶಬರಿಯ ಆತಿಥ್ಯವನ್ನು ಕುರಿತು |
| | "ರೂಪಕ್ಕೂ ನಾಮ ಮಿಗಿಲಾತ್ಮ ಸುರಭಿಯದು" | ಲಕ್ಷ್ಮಣನು ರಾಮನಿಗೆ | ರಾಮನ ಬರುವಿಕೆಗಾಗಿ ಕಾದಿದ್ದು ತವಕಿಸುತ್ತಿದ್ದ ಶಬರಿಯನ್ನು ಕಂಡು |
| ಲಂಡನ್ ನಗರ | " ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ " | ವಿಲಿಯಂ ಶೇಕ್ಸ್ಪಿಯರ್ | ಲೋಕಾನುಭವ ಪಡೆಯುವ ಬಗೆ ಕುರಿತು ಹೇಳುವಾಗ |
| | ' ಇಲ್ಲಿ ಸರ್ಕಾರಿ ಡಾಕ್ಟರ್ ರಂತೆ, ಸರ್ಕಾರಿ ವೈದಿಕರೂ ಇರುತ್ತಾರೆ." | ಲೇಖಕರು ಓದುಗರಿಗೆ | ವೆಸ್ಟ್ ಮಿನಿಸ್ಟರ್ ಅಬೆಯ ಪ್ರಾರ್ಥನೆ ಕಂಡು |
| | "ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ, ಒಂದೊಂದು ಕಲ್ಲನ್ನು ಕೊಟ್ಟಿದ್ದಾರೆ" | ಲೇಖಕರು ಓದುಗರಿಗೆ | ವೆಸ್ಟ್ ಮಿನಿಸ್ಟರ್ ಅಬೆಯ ಪ್ರಾರ್ಥನೆ ಕಂಡು |
| ಲಂಡನ್ನಗರ | "ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ | ಲೇಖಕರು ಓದುಗರಿಗೆ | ವೊಲ್‌ವರ್ಥ ಸ್ಟೇಷನರಿ ಅಂಗಡಿಯನ್ನು ಕಂಡು |
| | "ಮರ್ತ್ಯತ್ವವೇ ಎಷ್ಟು ಗೋರಿ ಗುಂಪುಗಳು ಇಲ್ಲಿವೆ ನೋಡಿ ಅಂಜು " | ಬ್ಯೂಮಾಂಟ್ ಎಂಬ ಕವಿ ಹೇಳಿದ | ಬ್ಯೂಮಾಂಟ್ ಎಂಬ ಕವಿ ಹೇಳಿದ ಮಾತನ್ನು ನೆನಪಿಸಿಕೊಳ್ಳುತ್ತಾರೆ. ವೆಸ್ಟ್ ಮಿನಿಸ್ಟರ್ ಅಬೆಯ ಮಹತ್ವವನ್ನು ಕುರಿತು |
| ದೇವರು | "ನಿಲ್ಲಿ ನನ್ನ ಮಕ್ಕಳ" | ಮನೆ ಮಂಚಮ್ಮ ಗುಡಿ ಕಟ್ಟುವವರಿಗೆ | ಜನರು ಮಂಚಮ್ಮನಿಗೆ ಗುಡಿ ಕಟ್ಟುವಾಗ |
| | " ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು " | ಲೇಖಕರು ಓದುಗರಿಗೆ | ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯ ಉದಾಹರಣೆ ನೀಡುತ್ತಾ |
| | "ತಮ್ಮ ಪ್ರಜ್ಞೇ ಮುಂದೆ ಸುಳ್ಳು ಹೇಳಕ್ಕಾಗಲ್ಲ " | ಲೇಖಕರು ಓದುಗರಿಗೆ | ವಚನಕಾರರ ಪ್ರಕಾರ ದೇವರೆಂದರೆ ಏನು ಎಂದು ಹೇಳುವ ಸಂದರ್ಭದಲ್ಲಿ |
| ವ್ಯಾಘ್ರಗೀತೆ | " ಮಡಿಯ ಬೇಕಾದರೆ ಮಾಡಿಯೇ ಮಾಡಿಯೇ ಮಡಿಯುತ್ತೇನೆ " | ಶ್ಯಾನುಭೋಗರು ತನ್ನಷ್ಟಕ್ಕೆ ತಾನೇ | ಹುಲಿಯು ಆಕ್ರಮಣ ಮಾಡಿದಾಗ |
| | "ಕುಡಿಯುವ ನೀರು ಅಲುಗದ ಹಾಗೆ" | ಶ್ಯಾನುಭೋಗರು ತನ್ನಷ್ಟಕ್ಕೆ ತಾನೇ | ಹುಲಿಯು ಆಕ್ರಮಣದಿಂದ ಬದುಕಿ ಮನೆಗೆ ಬಂದು ಊಟಕ್ಕೆ ಕುಳಿತಾಗ |
| | "ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ, ಹುಲಿಯಲ್ಲಿ ಅದೊಂದು ಅಪರಾಧವೇ" | ಲೇಖಕರು ಓದುಗರಿಗೆ | ಹುಲಿಯ ಆಹಾರ ಧರ್ಮವನ್ನು ಕುರಿತು |
| | " ಆ ಭರತ ಭೂಮಿಯಲ್ಲಿ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೆ?" | ಲೇಖಕರು ಓದುಗರಿಗೆ | ಹುಲಿಯ ಆಹಾರ ಪದ್ಧತಿಯನ್ನು ಕುರಿತು |
| | " ತಿಂದರೆ ಇಂಥಹವನನ್ನೆ ತಿನ್ನಬೇಕು.' | ಹುಲಿಯು ಸ್ವಗತವಾಗಿ | ಹುಲಿ ಮತ್ತು ಶ್ಯಾನುಭೋಗರ ನಡುವೆ ನಡೆದ ಹೋರಾಟದಲ್ಲಿ |

| | | | |
|---|---|---|---|
| | “ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು. | ಶ್ಯಾನುಭೋಗರು ತನ್ನಷ್ಟಕ್ಕೆ ತಧಾನೇ | ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದ ಶಾನುಭೋಗರು ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ |
| ವೃಕ್ಷಸಾಕ್ಷಿ | “ ನಾವೀ ಪೊನ್ನಂ ಪಚ್ಚುಕೊಂಡು ಮನೆಯೊಳ್ ಸ್ವೇಚ್ಛೆಯಿಂದರ್ಪವರಲ್ಲಂ’ | ದುಷ್ಟಬುದ್ಧಿ ಧರ್ಮಬುಧ್ಧಿಗೆ | ವ್ಯಾಪಾರಿಗಳಿಬ್ಬರು ಸಂಪಾದಿಸಿದ ಹಣವನ್ನು ಹಂಚಿಕೊಳ್ಳುವಾಗ |
| | “ಪೊನ್ನಿಲ್ಲವಿನ್ನುಂ ಕಿರಿದು ಪೊನ್ನಂ ತೆಗೆದುಕೊಳ್ವಂ“ | ದುಷ್ಟಬುದ್ಧಿ ಧರ್ಮಬುಧ್ಧಿಗೆ | ಹೂತಿಟ್ಟದ್ದ ಹೊನ್ನಿನಲ್ಲಿ ಇನ್ನಷ್ಟು ಹೊನ್ನನ್ನು ತೆಗೆದುಕೊಳ್ಳೋಣ |
| | “ಧರ್ಮಬುದ್ಧಿಯೇ ಧನಮಂ ತೆಗೆದುಕೊಂಡನ್“ | ದುಷ್ಟಬುದ್ಧಿ | ದುಷ್ಟಬುದ್ಧಿ ಧರ್ಮಬುಧ್ಧಿಯ ಮೇಲೆ ಆರೋಪ ಹೊರಿಸುವಾಗ |
| | “ ಹಾ! ಹಾ! ಕೆಟ್ಟೆನ್ “ | ದುಷ್ಟಬುದ್ಧಿ | ದುಷ್ಟಬುದ್ಧಿ ಧರ್ಮಬುಧ್ಧಿಯ ಮೇಲೆ ಆರೋಪ ಹೊರಿಸುವಾಗ |
| | “ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸ್ಸುವಂತೆ“ | ಕವಿಯು ಓದುಗರಿಗೆ | ದುಷ್ಟಬುದ್ಧಿಯು ಪ್ರೇಮಮತಿಯನ್ನು ಮರದ ಪೊಟರೆಯಲ್ಲಿ ಬಚ್ಚಿಡುವಾಗ |
| | “ ಪ್ರತ್ಯರ್ಥಿ ಬಂದನಿಲ್ಲ್ ಪಿರಿದು ಪೊಳ್ತು ಪೋದುದು ಎನಗೆ“ | ದುಷ್ಟಬುದ್ಧಿಯು ನ್ಯಾಯಾಧೀಕರಣರಿಗೆ | ಧರ್ಮಬುದ್ಧಿಯು ಬರಲು ತಡವಾದಾಗ |
| ಸಂಕಲ್ಪ ಗೀತೆ | “ನಾಳಿನ ಕನಸನು ಬಿತ್ತೋಣ“ | ಕವಿಯು ಓದುಗರಿಗೆ | “ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು” |
| | “ಕೆಡವುತ ಸೇತುವೆಯಾಗೋಣ“ | ಕವಿಯು ಓದುಗರಿಗೆ | ಜಾತಿ ಮತ ಪಂಥಗಳಿಂದ ಅಡ್ಡವಾಗಿರುವ ಗೋಡೆಯನ್ನು ಕೆಡವಬೇಕೆಂದು |
| | “ವಸಂತವಾಗುತ ಮುಟ್ಟೋಣ“ | ಕವಿಯು ಓದುಗರಿಗೆ | ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ |
| | “ಎಚ್ಚರದಲಿ ಮುನ್ನಡೆಸೋಣ“ | ಕವಿಯು ಓದುಗರಿಗೆ | ಕತ್ತಲೆಯನ್ನು ಜ್ಞಾನದ ಹಣತೆಯನ್ನು ಹಚ್ಚಿ ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರಿಕೆಯಿಂದ ಮುನ್ನಡೆಸಿ ದಡವನ್ನು ಸೇರೋಣ ಎಂದು ಹೇಳುವಾಗ |
| ಹಕ್ಕಿ ಹಾರುತಿದೆ ನೋಡಿದಿರಾ | “ಎವೆ ತೆರೆದಿಕ್ಕುವ ಹೊತ್ತಿನ ಒಳಗೆ” | ಕವಿಯು ಓದುಗರಿಗೆ | ಕಾಲದ ಚಲನಶೀಲ ಗುಣ ವಿಸ್ತಾರ ವೇಗ ಗುಣವನ್ನು ವರ್ಣಿಸಿರುವುದು |
| ಹಲಗಲಿ ಬೇಡರು | “ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ” | ಹಲಗಲಿಯ ಬೇಡರ ನಾಯಕರು | ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು” ಎಂಬ ಆದೇಶವನ್ನು ವಿರೋಧಿಸುವಾಗ |
| | “ಕೊಡುತಿವಿ ಕಬುಲ ಕೇಳಿರಿ ಮಾತ, ಹೋಗಬ್ಯಾಡಿರಿ ಸತ್ತ” | ಹೆಬಲಕ್ ಸಾಹೇಬ ಹಲಗಲಿ ಬೇಡರಿಗೆ | ಹೆಬಲಕ್ ಸಾಹೇಬನು ಊರ ಹೆಬ್ಬಾಗಿಲಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿಮಾತು ಹೇಳುವ ಸಂದರ್ಭದಲ್ಲಿ |
| | “ಮೋಸ ಮಾಡಿ ನಮ್ಮ ದೇಶ ಗೆದಿತಾರ ಮುಂದೆ ನಮಗ ಘೋರಾ” | ಜಡಗನು ತನ್ನ ಜನರಿಗೆ | ಹಲಗಲಿ ಬೇಡರ ನಾಯಕ ಜಡಗನು ಬ್ರಿಟಿಷರ ವಂಚಕ ಬುದ್ಧಿಯನ್ನು ಕುರಿತು |
| ಕೌರವೇಂದ್ರನ ಕೋಂದೇ ನೀನು | “ಎನಗೆ ನಿಮ್ಮಡಿಗಳಲಿ ಸಮ ಸೇವನೆಯೆ ದೇವ” | ಕರ್ಣನು ಕೃಷ್ಣನಿಗೆ | ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ |
| | “ಹರಿಯ ಹಗೆ ಹೊಗೆದೋರದುರುದೆ” | ಕುರುಪತಿಗೆ ಕೇಡಾಯಿತಲ್ಲ ಎಂದು ತನ್ನ ಮನಸ್ಸಿನಲ್ಲೇ | ಅಯ್ಯೋ ಕುರುಪತಿಗೆ ಕೇಡಾಯಿತಲ್ಲ ಎಂದು ತನ್ನ ಮನಸ್ಸಿನಲ್ಲೇ ಈ ಮೇಲಿನಂತೆ ಹೇಳಿಕೊಳ್ಳುತ್ತಾನೆ. |

| | | | |
|---|---|---|---|
| | “ಕೌರವೇಂದ್ರನ ಕೊಂದೆ ನೀನು” | ಕರ್ಣನು ಕೃಷ್ಣನಿಗೆ | ಕೃಷ್ಣನು ಒಡ್ಡಿದ ರಾಜ್ಯದ ಸಿರಿಸಂಪತ್ತಿಗೆ ಮರುಳಾಗದೇ ಕೃಷ್ಣನನ್ನೇ ಮರುಳನೆಂದು ಜರೆಯುತ್ತಾ, |
| | “ನಾಳೆ ಸಮರದ ಸಾರದಲ್ಲಿ ತೋರುವೆನು ನಿಜ ಭುಜ” | ಕರ್ಣನು ಕೃಷ್ಣನಿಗೆ | |
| | “ನಿನ್ನಯ ವೀರರೈವರ ನೋಯಿಸೆನು ರಾಜೀವಸಖನಾಣೆ” | ಕರ್ಣನು ಕೃಷ್ಣನಿಗೆ | |
| ಹಸುರು | “ಅಶ್ವೀಜದ ಶಾಲಿವನದ ಗಿಳಿಯೆದೆ ಬಣ್ಣದ ನೋಟ” | ಕವಿ ಓದುಗರಿಗೆ | ಪ್ರಕೃತಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ವರ್ಣಿಸುತ್ತಾ |
| | ಹಸುರಾಗಸ; ಹಸುರು ಮುಗಿಲು” | ಕವಿ ಓದುಗರಿಗೆ | ಆಕಾಶ, ಮುಗಿಲು ಸಹ ಹಚ್ಚಹಸಿರನ್ನು ಹೊದ್ದಿತ್ತು ಎಂದು ವರ್ಣಿಸುತ್ತಾ |
| | “ಅದೊ ಹುಲ್ಲಿನ ಮಕಮಲ್ಲಿನ ಪೊಸಪಚ್ಚೆಯ ಜಮಖಾನೆ” | ಕವಿ ಓದುಗರಿಗೆ | ಭೂತಾಯಿಯು ನಯವಾದ ಬಟ್ಟೆಯಂತಿರುವ ಹುಲ್ಲಿನ ಹೊದಿಕೆಯನ್ನು ಹೊದ್ದಿದ್ದಾಳೆ ಎಂದು ವರ್ಣಿಸಿತ್ತಾ. |
| ಛಲಮನೆ ಮೆಱೆವೆಂ | 7. “ನಿಮಗೆ ಪೊಡೆಮಟ್ಟು ಪೋಪೀ” | ದುರ್ಯೋಧನನು ಭೀಷ್ಮಾಚಾರರಿಗೆ | ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. |
| | 8.“ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವೆನೇ” | ದುರ್ಯೋಧನನು ಭೀಷ್ಮಾಚಾರರಿಗೆ | ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನನು ಸಂಧಿಗೆ ಒಪ್ಪಿಕೊಳ್ಳದೇ ಮೇಲಿನ ಮಾತನ್ನು ಹೇಳುತ್ತಾನೆ. |
| | 9.“ಪುಟ್ಟಿದ ನೂರ್ವರುಮೆನ್ನೊಡವುಟ್ಟಿದ ನೂರ್ವರು” | ದುರ್ಯೋಧನನು ಭೀಷ್ಮಾಚಾರರಿಗೆ | ಪಾಂಡವರೊಂದಿಗೆ ಸಂಧಿಗೆ ಒಪ್ಪಿಕೊಳ್ಳದೇ ಅವನತನ್ನವರಿಗೆ ಆದ ಅನ್ಯಾಯದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬುದು |
| ವೀರಲವ | 3. “ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ತೊತ್ತಳದುಳಿದುದು” | ಲವನು ಪೂದೋಟ ಒಕ್ಕ್ ಕುದುರೆಯನ್ನು ಕಂಡು | ಲವನು ಆ ಯಜ್ಞಾಶ್ವವನ್ನು ನೋಡುತ್ತಾ ಈ ಮೇಲಿನಂತೆ ಹೇಳುತ್ತಾನೆ. |
| | 4. “ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನೊರ್ವನೇ ವೀರ” | ಕುದುರೆಯ ಹಣೆಯ ಮೇಲಿನ ಪಟ್ಟಿಯನ್ನು ಓದುತ್ತಾ | ಬಾಲಕನಾದ ಲವನಿಗೆ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟದ ಲಿಖಿತವನ್ನು ಕುತೂಹಲದಿಂದ ಓದುವ ಸಂದರ್ಭವೇ |
| ಕೆಮ್ಮನೆ ಮೀಸೆವೊತ್ತನೆ | “ನಾಣಿಲಿ ಪಾರ್ವನನೆಟೆದು ಕಳೆಯಿಮೆಂಬುದುಂ” | ದ್ರುಪದನು ದ್ರೋಣನಿಗೆ | ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? “ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ಹಾಕಿರಿ” ಎಂದು ದ್ರುಪದನು ಹೇಳುವಾಗ |

# ಸಾಹಿತಿಗಳ / ಕವಿಗಳ ಪರಿಚಯ

**ಈ ಪಟ್ಟಿಯನ್ನು ಚೆನ್ನಾಗಿ ಅಭ್ಯಾಸ ಮಾಡಿಸಿದಲ್ಲಿ 6 ಅಂಕಗಳನ್ನು ಸುಲಭವಾಗಿ ಪಡೆಯಬಹುದು.**

| ಕ್ರ.ಸಂ. | ಕವಿ / ಸಾಹಿತಿಯ ಹೆಸರು | ಕಾಲ | ಜನ್ಮ ಸ್ಥಳ | ಕೃತಿಗಳು | ಪ್ರಶಸ್ತಿಗಳು | ವಿಶೇಷತೆಗಳು |
|---|---|---|---|---|---|---|
| | | | | | | |

| ಗದ್ಯ ಭಾಗ | | | | | | |
|---|---|---|---|---|---|---|
| 1 | ಸಾರಾಅಬೂಬಕರ್ | 1936 | ಕಾಸರಗೋಡು | ಸಹನ, ಚಂದ್ರಗಿರಿಯತೀರದಲ್ಲಿ, ಕದನ ವಿರಾಮ, ವಜ್ರಗಳು, ಚಪ್ಪಲಿಗಳು, ಇತರೆ | ನಾಡೋಜ ಪ್ರಶಸ್ತಿ, ನೃಪತುಂಗ ಪ್ರಶಸ್ತಿ | ಖ್ಯಾತಕತೆಗಾತಿ |
| 2 | ಪು.ತಿ. ನರಸಿಂಹಾಚಾರ್ | 1905 | ಮೇಲುಕೋಟೆ | ಶಬರಿ, ಅಹಲ್ಯೆ,, ಶ್ರೀಹರಿಚರಿತೆ, ರಥಸಪ್ತಮಿ, ಹಂಸದಮಯಂತಿ ಮತ್ತುಇತರ ರೂಪಕಗಳು | ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ | ಪು.ತಿ.ನೆಕಾವ್ಯನಾಮ |
| 3 | ವಿ.ಕೃ .ಗೋಕಾಕ್ | 1909 | ಸವಣೂರು | ಭಾರತ ಸಿಂಧುರಶ್ಮಿ, ಸಮುದ್ರಾಚೆಯಿಂದ, ಸಮರಸವೇಜೀವನ, ಇಜ್ಜೋಡು, ಉಗಮ | ಭಾರತೀಯಜ್ಞಾನ ಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರ | ವಿನಾಯಕ ಕಾವ್ಯನಾಮ |
| 4 | ಡಿ.ಎಸ್..ಜಯಪ್ಪಗೌಡ | 1947 | ದಾರದಹಳ್ಳಿ | ದಿವಾನ್ ಸರ್ ಎಂ ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಮೈಸೂರುಒಡೆಯರು, ಜನಪದ ಆಟಗಳು | ಕರ್ನಾಟಕ ಸಾಹಿತ್ಯಅಕಾಡೆಮಿ ಪ್ರಶಸ್ತಿ | ------- |
| 5 | ದೇವನೂರು ಮಹಾದೇವ | 1948 | ದೇವನೂರು | ಎದೆಗೆ ಬಿದ್ದಅಕ್ಷರ, ಕುಸುಮಬಾಲೆ, ಒಡಲಾಳ | ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ | ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ |
| 6 | ಎ.ಎನ್. ಮೂರ್ತಿರಾವ್ | 1900 | ಅಕ್ಕಿಹೆಬ್ಬಾಳು | ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನಅಮೆರಿಕಯಾತ್ರೆ ಚಿತ್ರಗಳು ಪತ್ರಗಳು | ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ | ಪ್ರಮುಖಗದ್ಯ ಬರಹಗಾರರು |
| 7 | ದುರ್ಗಸಿಂಹ | 1031 | ಸಯ್ಯಡಿ | ಕರ್ಣಾಟಕ ಪಂಚತಂತ್ರ | -- | ಒಂದನೆಯಜಗದೇಕ ಮಲ್ಲನ ಸಂಧಿ ವಿಗ್ರಹಿ |
| 8 | ಶಿವಕೋಟ್ಯಾಚಾರ್ಯ | 10ನೆಂಋ ಶತಮಾನ | ಕೋಗಳಿ | ವಡ್ಡಾರಾಧನೆ | ------ | ಕನ್ನಡದ ಮೊದಲ ಗದ್ಯಕೃತಿ |
| 1 | ಜಿ ಎಸ್ ಶಿವರುದ್ರಪ್ಪ | 1926 | ಶಿಕಾರಿಪುರ | ಎದೆತುಂಬಿ ಹಾಡಿದೆನು, ಸಮಗಾನ, ಚೆಲುವು ಒಲವು, ದೇವ ಶಿಲ್ಪ, ಅನಾವರಣ, ಸೌಂದರ್ಯ ಸಮೀಕ್ಷೆ | ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸಿ | ಕನ್ನಡದ ಮೂರನೆಯರಾಷ್ಟ್ರಕವಿ |
| 2 | ದ.ರಾ. ಬೇಂದ್ರೆ | 1896 | ಧಾರವಾಡ | ನಾಕುತಂತಿ, ಕೃಷ್ಣಕುಮಾರಿ, ನಾದಲೀಲೆ, ಸಖೀಗೀತ, ಗರಿ, ಉಯ್ಯಾಲೆ, ಮೇಘದೂತ | ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರ | ಅಂಬಿಕಾತನಯ ದತ್ತಕಾವ್ಯನಾಮ |

| | | | | | | |
|---|---|---|---|---|---|---|
| 3 | ಜನಪದ | | | | | |
| 4 | ಕುಮಾರವ್ಯಾಸ | 1430 | ಕೋಳಿವಾಡ | ಕರ್ಣಾಟ ಭಾರತಕಥಾಮಂಜರಿ | ಕುಮಾರವ್ಯಾಸವಿಂಬುದುಕಾವ್ಯನಾಮ | ರೂಪಕ ಸಾಮ್ರಾಜ್ಯಚಕ್ರವರ್ತಿ ಬಿರುದು |
| 5 | ಕುವೆಂಪು | 1904 | ಕುಪ್ಪಳಿ | ಶ್ರೀ ರಾಮಯಣದರ್ಶನಂ, ಕೊಳಲು, ನವಿಲು, ಪಕ್ಷಿಕಾಶಿ, ಪಾಂಚಜನ್ಯ, ಮಲೆಗಳಲ್ಲಿ ಮದುಮಗಳು, | ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ ಪುರಸ್ಕಾರ, ಕರ್ನಾಟಕರತ್ನ | ಕನ್ನಡದ ಮೊದಲ ರಾಷ್ಟ್ರಕವಿ |
| 6 | ರನ್ನ | 949 | ಮುದುವೊಳಲು | ಸಾಹಸಭೀಮ ವಿಜಯ, ಅಜಿತ ಪುರಾಣ | ಕವಿ ಚಕ್ರವರ್ತಿ | ರತ್ನತ್ರಯರಲ್ಲಿಬ್ಬ |
| 7 | ಲಕ್ಷ್ಮೀಶ | 1550 | ದೇವನೂರು | ಜೈಮಿನಿ ಭಾರತ | ಉಪಮಾಲೋಲ | ಕರ್ನಾಟಕವಿ ಚೂತವನಚೈತ್ರ |
| 8 | ಪಂಪ | 902 | ವೆಂಗಿಮಂಡಲದ ವೆಂಗಿಪಳು | ವಿಕ್ರಮಾರ್ಜುನ ವಿಜಯ ಆದಿಪುರಾಣ | ಕವಿತಾಗುಣಾರ್ಣವ | ಕನ್ನಡದ ಆದಿಕವಿ |

## (ಮಾದರಿಯಂತೆ ಎಲ್ಲ ಕವಿ/ಸಾಹಿತಿಗಳನ್ನು ಅಭ್ಯಾಸ ಮಾಡಿಸುವುದು)

ಕನ್ನಡದ ಪ್ರಸಿದ್ಧ ಕವಿ / ಸಾಹಿತಿಗಳಾದ ____________________ ರವರುಕ್ರಿ.ಶ. ________________ ರಲ್ಲಿ __________ ಸ್ಥಳದಲ್ಲಿ ಜನಿಸಿದರು. ಇವರು ______________________________________________ ______________________________________________ ಎಂಬ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ___________________________ ಪ್ರಶಸ್ತಿಗಳು ಲಭಿಸಿವೆ. ಇವರಿಗೆ ___________________ ಎಂಬ ಬಿರುದುಗಳಿವೆ.

ಉತ್ತರ:

ಕನ್ನಡದ ಪ್ರಸಿದ್ಧ ಕವಿ / ಸಾಹಿತಿಗಳಾದ ಸಾರಾಅಬೂಬಕರ್ರವರುಕ್ರಿ.ಶ. 1936 ರಲ್ಲಿಕಾಸರಗೋಡು ಎಂಬ ಸ್ಥಳದಲ್ಲಿ ಜನಿಸಿದರು. ಇವರುಸಹನ, ಚಂದ್ರಗಿರಿಯತೀರದಲ್ಲಿ, ಕದನ ವಿರಾಮ, ವಜ್ರಗಳು, ಚಪ್ಪಲಿಗಳು,ಇತರೆಎಂಬ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆನಾಡೋಜ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಪ್ರಶಸ್ತಿಗಳು ಲಭಿಸಿವೆ.

# ಮಾದರಿ ಪ್ರಶ್ನೆ ಪತ್ರಿಕೆ –1

**10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ**

**ಸಮಯ : 3.00 ಗಂಟೆಗಳು ಗರಿಷ್ಠ ಅಂಕಗಳು :100**

* ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
* ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6

1. ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ದನಪುರಕ್ಕೆ ನಡೆದೇ ಹೋದರು. – ಈ ವಾಕ್ಯದಲ್ಲಿರುವ ಅನ್ವರ್ಥನಾಮ ಪದ;

ಎ) ವ್ಯಾಪಾರಿ ಬಿ) ಅನಂತಮೂರ್ತಿ
ಸಿ) ತಮ್ಮ ಡಿ) ಸಿದ್ದನಪುರ

2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ಇದಾಗಿದೆ:

ಎ] ವಾಕ್ಯವೇಷ್ಟನ ಬಿ] ಅಲ್ಪವಿರಾಮ
ಸಿ] ಉದ್ಧರಣ ಡಿ] ಭಾವಸೂಚಕ

3. 'ಎಣ್ದೆಸೆ ' ಪದವು ಈ ಸಮಾಸದ್ದಾಗಿದೆ :

ಎ) ಕ್ರಿಯಾ ಬಿ) ಗಮಕ ಸಿ) ದ್ವಿಗು ಡಿ) ಅಂಶಿ

4. ವೃದ್ಧಿಸಂಧಿಯ ಉದಾಹರಣೆಯಿದು:

ಎ) ಉನ್ಮಾದ ಬಿ) ಅಷ್ಟೈಶ್ವರ್ಯ
ಸಿ) ಬೃಹಚ್ಛತ್ರ ಡಿ) ಅತ್ಯವಸರ

5. ಹಳೆಗನ್ನಡದಲ್ಲಿ ಸಂಪ್ರದಾನ ಕಾರಕದ ವಿಭಕ್ತಿ ಪ್ರತ್ಯಯ:

ಎ) ಇಂದಂ ಬಿ) ಅತ್ತಣಿಂದಂ
ಸಿ) ಅಂ ಡಿ) ಕೆ

6. ಉರ್ದು ಭಾಷೆಯಿಂದ ಕನ್ನಡಕ್ಕೆ ಬಂದ ಪದವಿದು :

ಎ) ದಲ್ಲಾಳಿ ಬಿ) ಕಿಮ್ಮತ್ತು
ಸಿ) ಸಲಾಮು ಡಿ) ತಕರಾರು

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4

7. ಮೊಟ್ಟಮೊದಲು : ದ್ವಿರುಕ್ತಿ : : ಬಿಳಿಹೊಳೆ : __
8. ತಿನ್ನುತ್ತ : ಕೃದಂತಾವ್ಯಯ : : ವಾಚಾಳಿ : _____
9. ಗ್ಲಾನಿ : ತಲ್ಲಣ : : ಕಡು : _____________
10. ಪಾದುಕಾ : ಹಾವುಗೆ : : ತಟ : ___________

**III.** ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7*1=7

11. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?
12. ದೇವನೂರು ಮಹಾದೇವ ಅವರಿಗೆ ಕವಿ ಸಿದ್ಧಲಿಂಗಯ್ಯರವರು ಹೇಳಿದ ಕಥೆ ಯಾವುದು?.
13. ಶಬರಿ ರಾಮನಿಗಾಗಿ ಪ್ರತಿದಿನ ಸಂಗ್ರಹಿಸುತ್ತಿದು ಏನನ್ನು?
14. ಹುಲಿಗೆ ಪರಮಾನಂದವಾಗಲು ಕಾರಣವೇನು?
15. ದಿನಪಸುತ ಎಂದರೆ ಯಾರು?
16. ಕುಂಭಸಂಭವನು ದ್ರುಪದನಿಗೆ ನೊಣಕ್ಕೆ ಯಾವುದು ಶ್ರೇಷ್ಠ ಎಂದ ?
17. ಪುಟ್ಟಿ ಬಾಲರವಿಯನ್ನು ಕಂಡು ಏಕೆ ಮೂಕವಿಸ್ಮಿತಳಾಗಿದ್ದಾಳೆ?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20

18. ಲಂಡನ್ ನಗರದಲ್ಲಿರುವ ಚೇರಿಂಗ್ ಕ್ರಾಸ್ ಹೇಗೆ ಇದೆ ತಿಳಿಸಿ.
19. "ರಾಯಲ್ ಚಪೇಲ್" (**Royal Chapel**)ಇದರ ವಿಶೇಷತೆಯನ್ನು ತಿಳಿಸಿ.
20. ಅರಸನು ಸುಕುಮಾರಸ್ವಾಮಿಯ ಮನೆಗೆ ಬಂದಾಗ ವ್ಯಾದಿಯಿದೆ ಎಂದುಕೊಳ್ಳಲು ಕಾರಣವಾದ ವಿಷಯಗಳು ಯಾವು?
21. ಹುಲಿಗಳು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?.
22. ಹೆಬಲಕ ಸಾಹೆಬನ ಬುದ್ಧಿಮಾತಿಗೆ ವಿರೋಧವಾಗಿ ಜಡಗ ಏನು ಹೇಳುತ್ತಾನೆ?
23. ಬ್ರಿಟೀಷರ ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
24. ಧಾರ್ಮಿಕ ಮೂಲಭೂತವಾದಿಯಾಗದಿರಲು ವಿವೇಕಾಂದರಿಗೆ ಕಾರಣವಾದ ಅಂಶಗಳಾವುವು?
25. ಜಲಿಯನ್ ವಾಲಾಭಾಗನಲ್ಲಿ ಅಂತರ್ಮುಖಿಯಾಗಿ ನಿಂತ ಭಗತ್‌ಸಿಂಗ್‌ನ ಮನಸ್ಸಿನ ಭಾವನೆ ಹೇಗೆ ಯೋಚಿಸುತ್ತಿತ್ತು?
26. ವರ್ತಕನ ಮೂರು ಜನ ಮಕ್ಕಳ ನಡವಳಿಕೆಗಳು ಹೇಗಿತ್ತು?
27. ಬೀಸುವಕಲ್ಲಿನ ವಿಶೇಷತೆ ಜನಪದರ ಒಗಟಿನಲ್ಲಿ ಹೇಗೆ ಮೂಡಿ ಬಂದಿದೆ?

**V.** ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

28. ದೇವನೂರು ಮಹಾದೇವ 29. ರನ್ನ

**VI.** ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1*3=3**

**30.** ಮತಿಗೆಟ್ಟು ತಸ್ಕರಸ್ತ್ಯಾ
ನೃತಂ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. **1*3=3**

**31.** ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. **1*3=3**

**32.** ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?

ಅಥವಾ

ಕೂತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು.

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. **6*3=18**

**33.** "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

**34.** "ಅವುದೀ ಮರುಳು? ನಮ್ಮೆಡೆಗೆ ಬರುತಿಹುದು"

**35.** "ನೀನಾದರೋ ಯಕ್ಷಾದಿ ದಿವ್ಯ ದೇವತೆ ಸಾಕ್ಷಿಯನ್ನು ನುಡಿ"

**36.** "ಬಲ್ಲರು ಯಾರಾ ಹಾಕಿದ ಹೊಂಚ"

**37.** " ಕವಿಯಾತ್ಮಂ ರಸಪಾನ ಸ್ನಾನದಲ್ಲಿ"

**38.** "ನುಡಿ ತಡವಪ್ಪುದೊಂದು ಮೊಗದೊಳ್ ಮರುಕಂ ದೊರೆಕೊಳ್ವುದು"

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. **1*4=4**

**39.** ಕಲುಷಿತವಾದೀ ____________
______________________________
______________________________
________________ ಮುಟ್ಟೋಣ॥

ಅಥವಾ

ಮತಗಳೆಲ್ಲವೂ ____________
______________________________ ।
______________________________
__________________ ಬಿತ್ತೋಣ. ॥

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. **1*4=4**

**40.** ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವಿರರೈವರ ನೋಯಿಸೆನು ರಾಜೀವಸಖನಾಣೆ||

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

**41.** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

**42.** ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

ಅಥವಾ

ಲವನ ನಡೆವಳಿಕೆ ಮೆಚ್ಚಿಗೆಯಾಯಿತೇ? ಏಕೆ?

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1*4=4[2+2]**

**43.** ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು 'ಚಿಪ್ಕೋ ಚಳವಳಿ' ಜನರಿಗೆ, ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು; ಪರಿಸರಕ್ಕೆ ಪೂರಕವಾಗಿರಬೇಕು. ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು – ಇದು ಚಿಪ್ಕೋ ಚಳವಳಿಯ ಮೂಲಮಂತ್ರ ಅರಣ್ಯಗಳು ಮರಮಟ್ಟುಗಳನ್ನೂ, ರಾಳವನ್ನೂ ಒದಗಿಸುವ ಬೃಹತ್ ಆಗರ – ಇದು ಸರ್ಕಾರದ ವಾಣಿಜ್ಯ ದೃಷ್ಟಿ ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ ಕೂಡ. ಇದು ಜನಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ. ಸಮಸ್ತ ರೀತಿಯ ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತ ಪತ್ರಿಕೆಗಳು, ಸಿನಿಮಾ, ರೇಡಿಯೋ, ದೂರದರ್ಶನ ಮಂತಾದ ಮಾಧ್ಯಮಗಳು ಸಾಧಿಸಲಾಗದ ಕೆಲಸವನ್ನು ಚಿಪ್ಕೋ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ. ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು: ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು: ಆಹಾರ ಮೇವು ಸೌದೆ ಗೊಬ್ಬರ ಮತ್ತು ನಾರು ಈ ಐದು ಅವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ. ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟೆಂದರೆ ಅದು ಜನರಿಂದ, ಜನರ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ. ವೈಯಕ್ತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆ ಬೆಳೆದಾಗ ಮಾತ್ರ ನಮ್ಮನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಂದ ನಮಗೆ ಮುಕ್ತಿ ಸಾಧ್ಯ.

ಪ್ರಶ್ನೆಗಳು :

**43.** ಅ) ಯಾವ ಎರಡು ದೃಷ್ಟಿಕೋನಗಳ ಸಮ್ಮಿಳನಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ?

**43.** ಬ) ಹಿಮಾಲಯ ಪರ್ವತ ಪ್ರದೇಶದ ಹಳ್ಳಿಗಳಲ್ಲಿ ಚಿಪ್ಕೋ ಚಳವಳಿ ಜನಪ್ರಿಯಗೊಳಿಸಿದ ಎರಡು ಕಾರ್ಯಕ್ರಮಗಳು ಯಾವುವು?

**XIV.** ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

44. ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ನಂದಿನಿ'ಎಂದು ಭಾವಿಸಿಕೊಂಡು ಶಕ್ತಿನಗರದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ವ್ಯವಸ್ಥಾಪಕರಿಗೆ ಮಾಹಿತಿ ಸಂದರ್ಶನಕ್ಕಾಗಿ ವೇಳೆಯನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬಳ್ಳಾರಿಯ ಕಸ್ತೂರಿಬಾಯಿ ವಸತಿ ಶಾಲೆಯ 'ನಿವೇದಿತ' ಎಂದು ಭಾವಿಸಿಕೊಂಡು ಹೊಸಪೇಟೆ ಕೋಟೆ ಬೀದಿಯ ನಿವಾಸಿ ಚೌಡೇಶ್ವರಿ ಎಂಬ ಹೆಸರಿನ ತಾಯಿಗೆ ಕ್ಷೇಮ ಸಮಾಚಾರ ತಿಳಿಸಿ ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5

45. ಜಲಸಂರಕ್ಷಣೆಯ ಮಹತ್ವ

ಅಥವಾ

ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಸಾಮಾಜಿಕ ಜಾಲತಾಣಗಳ ಪಾತ್ರ.

# ಮಾದರಿ ಪ್ರಶ್ನೆ ಪತ್ರಿಕೆ –2

**10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ**

**ಸಮಯ : 3.00 ಗಂಟೆಗಳು ಗರಿಷ್ಠ ಅಂಕಗಳು :100**

* ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
* ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

**I.** ಕೊಟ್ಟಿರುವ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿ ಉತ್ತರವನ್ನು ಆರಿಸಿ ಬರೆಯಿರಿ. **6x1=6**

1. 'ಪೆರ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
ಎ) ತತ್ಪುರುಷ ಬಿ) ಕರ್ಮಧಾರಯ
ಸಿ) ದ್ವಿಗು ಡಿ) ದ್ವಂದ್ವ

2. ಇವುಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳಿಂದ ಕೂಡಿದ ಪದ
ಎ) ಹವಳ ಬಿ) ಕಥನ
ಸಿ) ಜನಕ ಡಿ) ಗಮನ

3. 'ಹೊಸಗಾಲ' ಪದದಲ್ಲ ಆಗಿರುವ ಸಂಧಿ
ಎ) ಲೋಪ ಬಿ) ಆದೇಶ
ಸಿ) ಆಗಮ ಡಿ) ಪ್ರಕೃತಿಭಾವ

4. ಇವುಗಳಲ್ಲಿ ಜೋಡುನುಡಿಗೆ ಉದಾಹರಣೆಯ ಪದ ಇದಾಗಿದೆ.
ಎ) ಕೆನೆಮೊಸರು ಬಿ) ಬಟ್ಟಬಯಲು
ಸಿ) ಅಬ್ಬಬ್ಬಾ ಡಿ) ತುತ್ತತುದಿ

5. ' ಸಾಮಾಜಿಕ ಕಾನೂನುಗಳ ಹರಿಕಾರ ' ವಾಕ್ಯದಲ್ಲರುವ ಲೇಖನ ಚಿಹ್ನೆ.
ಎ) ಪ್ರಶ್ನಾರ್ಥಕ ಬಿ) ಆವರಣ
ಸಿ) ವಾಕ್ಯವೇಷ್ಟನ ಡಿ) ಭಾವಸೂಚಕ

6. ಹಿಂದೂಸ್ಥಾನಿ ಪದಕ್ಕೆ ಉದಾಹರಣೆಯಾಗಿದೆ ಈ ಪದ.
ಎ) ಬಸ್ಸು ಬಿ) ತಾರೀಕು
ಸಿ) ಅಮಾನತು ಡಿ) ಕಾರ್ಖಾನೆ

**II.** ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. **4x1=4**

7. ಚಂದ್ರ : ಚಂದಿರ : : ಬ್ರಹ್ಮ :__________
8. ಅರಸುಗಳ್ಗೆ : ಚತುರ್ಥಿ ವಿಭಕ್ತಿ : : ಅರ್ಥಶಾಸ್ತ್ರದೊಳ್ :___
9. ನೆರವು : ಸಹಾಯ : : ತೃಷೆ : ______
10. ಹೀಂಗ : ಹೀಗೆ : : ಮ್ಯಾಗ : _____

**III.** ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ **1x7=7**

11. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
12. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
13. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?
14. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ಧರಾದರು?
15. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?
16. ಹಕ್ಕಿಯು ಯಾವುದರ ಸಂಕೇತವಾಗಿದೆ?
17. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?

**IV.** ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **2x10=20**

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಭಾವನೆಗಳೇನು?
19. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
21. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
22. ಕವಿ ಬೇಂದ್ರೆಯವರು ಹಕ್ಕಿ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
25. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
26. ವಸಂತ ಯಾರ್‍ಯಾರಿಗೆ ಮುಖ ತೋರಲಿಲ್ಲ?
27. "ವಸಂತ ಮುಖ ತೋರಲಿಲ್ಲ" ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V.** ಕವಿ ಕೃತಿ ಪರಿಚಯ **2x3=6**

28. ವಿ ಕೃ ಗೋಕಾಕ್29. ಕುಮಾರವ್ಯಾಸ

**VI.** ಈ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಂಗಡಿಸಿ ಛಂದಸ್ಸಿನ ಹೆಸರು ತಿಳಿಸಿ. **1x3=3**

30. ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ

VII.ಈ ವಾಕ್ಯದಲ್ಲಿರುವ ಅಲಂಕಾರವನ್ನು ಸಮನ್ವಯಗೊಳಿಸಿ ಅಲಂಕಾರ ಹೆಸರಿಸಿ **1x3=3**

31. ಸೀತೆಯ ಮುಖಕಮಲ ಅರಳಿತು

VIII.ಈ ಕೆಳಗಿನ ಯಾವುದಾದರು ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. **1x3=3**

32. ಅ) ತಾಳಿದವನು ಬಾಳಿಯಾನು

ಅಥವಾ

ಆ) ಮನಸ್ಸಿದ್ದರೆ ಮಾರ್ಗ

IX. ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭಸಹಿತ ವಿವರಿಸಿ **6x3=18**

33. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"

34. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"

35. "ಹೊತ್ತು ! ಹೊತ್ತು ! ಹೊತ್ತೇ ಹಣ"

36. "ಜೀವ ಸತ್ತುಹೋಗುವುದು ಗೊತ್ತ"

37. "ಸಾರ್ವಭೌಮರಾ ನೆತ್ತಿಯ ಕುಕ್ಕಿ"

38. "ಮಾರಿಗೌತಣವಾಯ್ತು ನಾಳಿನ ಭಾರತವು"

x. ಈ ಕೆಳಗಿನ ಪದ್ಯಭಾಗವನ್ನು ಪೂರ್ತಿ ಮಾಡಿ ಬರೆಯಿರಿ. **1x4=4**

39. ನೀಲ ಮೇಘ________________________

________________________________

________________________________

________________________ ನೋಡಿದಿರಾ?

ಅಥವಾ

ಯುಗ–ಯುಗಗಳ ____________________

________________________________

________________________________

________________________ ನೋಡಿದಿರಾ?

XI.ಈ ಕೆಳಗಿನ ಪದ್ಯ ಭಾಗವನ್ನು ಓದಿಕೊಂಡು ಮೌಲ್ಯಾಧರಿತ ಭಾವಾರ್ಥವನ್ನು ಬರೆಯಿರಿ. **1x4=4**

40. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

XII. ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯದಲ್ಲಿ ಉತ್ತರಿಸಿ **2x4=8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ?

ಅಥವಾ

"ನಂಬಿ ಕೆಟ್ಟವರಿಲ್ಲ" ಎಂಬ ಮಾತು ಶಬರಿಯ ವಿಷಯದಲ್ಲಿ ಹೇಗೆ ನಿಜವಾಗಿದೆ?

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಅಥವಾ

ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಉತ್ತರಿಸಿ. **2x2=4**

43. ವಿಶ್ವವಿಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್ ರವರು "ರಕ್ತ ಮಾಂಸಗಳಿಂದ ತುಂಬಿದ ಇಂಥ ವ್ಯಕ್ತಿಯೊಬ್ಬ ಎಂದಾದರೂ ಈ ಭೂಮಿಯ ಮೇಲೆ ನಡದಾಡಿದ್ದ ಎನ್ನುವುದು ಮುಂದಿನ ಪೀಳಿಗೆಗಳು ನಂಬುವುದೂ ಕಷ್ಟ" –ಎಂದು ಮಹಾತ್ಮ ಗಾಂಧೀಜಿಯವರ ಬದುಕನ್ನು ನೋಡಿದ, ಓದಿದ ಅವರ ಸಂದೇಹವಿದು. ಅಹಿಂಸೆಯನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡ ಮಹಾತ್ಮ ಗಾಧೀಜಿಯವರು ಹೇಳುವಂತೆ "ಯುದ್ಧದ ವಿಜ್ಞಾನವು ಒಬ್ಬನನ್ನು ಸ್ಪಷ್ಟವಾಗಿ, ಸರಳವಾಗಿ ಸರ್ವಾಧಿಕಾರದತ್ತ ಒಯ್ಯುತ್ತದೆ. ಅಹಿಂಸೆಯ ವಿಜ್ಞಾನವೊಂದೇ ಒಬ್ಬನನ್ನು ಶುದ್ಧ ಪ್ರಜಾಭುತ್ವದತ್ತ ಒಯ್ಯಬಲ್ಲದು. ಶಿಕ್ಷೆಯ ಭೀತಿಯಿಂದ ಹುಟ್ಟುವ ಅಧಿಕಾರಕ್ಕಿಂತಲೂ ಪ್ರೇಮದ ಆಧಾರದ ಮೇಲಿರುವ ಅಧಿಕಾರವು ಸಾವಿರಪಟ್ಟು ಪರಿಣಾಮಕಾರಿಯಾಗಿದೆ." ಎಂದಿದ್ದಾರೆ.

ಅಹಿಂಸೆಯ ವಿಚಾರದಲ್ಲಿ, ಅವರಿಗೆ ಅಹಿಂಸೆಗಿಂತಲೂ ಹೆಚ್ಚು ಶಕ್ತಿಯುಳ್ಳದ್ದು ಎದುರಾಗಿ ಆ ಶಕ್ತಿಯ ಬಳಕೆಯಲ್ಲಿ ಹೆಚ್ಚು ಪರಿಣಿತರಾಗಿದ್ದಲ್ಲಿ, ಅವರು ಅಹಿಂಸೆಯನ್ನು ತ್ಯಜಿಸಿ ಮುಂಚೆ ಕೈಯಲ್ಲಿದ್ದ ಶಸ್ತ್ರಗಳನ್ನು ಪುನಃ ಎತ್ತಿಕೊಳ್ಳಬಹುದು ಎಂದು ಪ್ರತಿಯೊಂದು ಸಭೆಯಲ್ಲಿಯೂ ಗಾಂಧೀಜಿಯವರು ಹೇಳುತ್ತಿದ್ದರು.

ಪ್ರಶ್ನೆಗಳು:

43 (ಅ) ಗಾಂಧೀಜಿಯವರ ಅಹಿಂಸಾ ತತ್ತ್ವವನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?

43 (ಬ) ಅಲ್ಬರ್ಟ್ ಐನ್‌ಸ್ಟೀನ್ ರವರು ಗಾಂಧೀಜಿಯವರ ಬದುಕನ್ನು ಕುರಿತು ಹೇಳಿದ ಮಾತುಗಳನ್ನು ವಿವರಿಸಿ.

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. **1x5=5**

44. ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 'ತೇಜಸ್ವಿ' ಎಂದು ಭಾವಿಸಿಕೊಂಡು

ನಿಮ್ಮ ಊರಿನಲ್ಲಿ ಮಳೆಯಿಂದ ಉಂಟಾಗಿರುವ ಹಾನಿಯನ್ನು ವಿವರಿಸುತ್ತಾ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕೋರಿ ನಿಮ್ಮ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಹೊಸಪೇಟೆಯ ವಿಜಯನಗರ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗಮಾಡುತ್ತಿರುವ 'ತೇಜಸ್ವಿನಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ "ಶಿಕ್ಷಕರ

ದಿನಾಚರಣೆ ' ಕುರಿತು ನಿಮ್ಮ ಗೆಳೆಯಗೆ ವಿವರಿಸುತ್ತಾ ಪತ್ರ ಬರೆಯಿರಿ.**1x5=5**

**XV.** ಕೆಳಗಿನ ಯಾವುದಾದರು ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1x5=5**

45. ಜಲಮೂಲಗಳ ಸಂರಕ್ಷಣೆಯ ಮಹತ್ವ

ಅಥವಾ

ಇಸ್ರೋ ಚಂದ್ರಯಾನ – 2